ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಎಂಟುನೂರು ಕೆರೆಗಳಿಗೆ ಜೀವತುಂಬಿದೆ ನಮ್ಮೂರು ನಮ್ಮ ಕೆರೆ ಯೋಜನೆ



ಕಾವೇರಿ ನದಿ ದಾಟಿ ಮಾದಪ್ಪನ ಸನ್ನಿಧಿಗೆ ಭಕ್ತರು 7
ಸುರಂಗದಲ್ಲಿ ಸಿಲುಕಿರುವ 8 ಮಂದಿ 8
ನರೇಗಾ: ₹ 669.92 ಕೋಟಿ ದುರ್ಬಳಕೆ 4
ಬಿಜೆಪಿ ವಿರುದ್ಧ ಕಾಂಗ್ರೆಸ್ ವಾಗ್ದಾಳಿ 8

ವನ್ಯಜೀವಿಧಾಮದ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಕಬ್ಬಿಣ ಅದಿರಿನ ಗಣಿಗೆ ಅರಣ್ಯ ಇಲಾಖೆಯ ಶಿಫಾರಸು

ಚಿಂಕಾರದಲ್ಲೂ ಗಣಿಗಾರಿಕೆ ಪ್ರಹಾರ


• ಮಂಜುನಾಥ ಹೆಬ್ಬಾರ್

ನವದೆಹಲಿ: ಅರಣ್ಯ ನಾಶದ ನೆಪವೊಡ್ಡಿ ಬಳ್ಳಾರಿ ಜಿಲ್ಲೆಯ ಸಂಡೂರಿನ ದೇವದಾರಿಯಲ್ಲಿ ಕುದುರೆಮುಖ ಅದಿರು ಕಂಪನಿಯ ಕಾರ್ಯಾಚರಣೆಗೆ ತಡೆ ಒಡ್ಡಿದ್ದ ಅರಣ್ಯ ಇಲಾಖೆಯು ತುಮಕೂರು ಜಿಲ್ಲೆಯ ಚಿಂಕಾರ ಧಾಮದ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಗಣಿಗಾರಿಕೆಗೆ ರತ್ನಗಂಬಳಿ ಹಾಸಲು ಮುಂದಾಗಿದೆ.

ರಾಜ್ಯದ ಅರಣ್ಯ ಪ್ರದೇಶದ ಗಣಿಗಳಲ್ಲಿ ದಿನದ 24 ಗಂಟೆಯೂ ಗಣಿಗಾರಿಕೆ ನಡೆಸುವುದರ ಸಾಧಕ ಬಾಧಕಗಳ ಬಗ್ಗೆ ಚರ್ಚೆ ನಡೆಯುತ್ತಿರುವ ಹೊತ್ತಿನಲ್ಲಿ ಅರಣ್ಯ ಇಲಾಖೆಯು ಈ ಶಿಫಾರಸು ಮಾಡಿರುವುದು ಚರ್ಚೆಗೆ ಗ್ರಾಸವಾಗಿದೆ. ಮಾನವ–ವನ್ಯಜೀವಿ ಸಂಘರ್ಷಕ್ಕೆ ಅನುವು ಮಾಡಿಕೊಡುವ ಗಣಿಗಾರಿಕೆಗೆ ಅವಕಾಶ ನೀಡಬಾರದು ಎಂದು ಪರಿಸರ ತಜ್ಞರು, ಸಾಮಾಜಿಕ ಹೋರಾಟಗಾರರು ಆಗ್ರಹಿಸಿದ್ದಾರೆ.

ತುಮಕೂರು ಜಿಲ್ಲೆಯ ಬುಕ್ಕಾಪಟ್ಟಣ ಚಿಂಕಾರ ವನ್ಯಜೀವಿಧಾಮದ ಪರಿಸರ ಸೂಕ್ಷ್ಮ ಪ್ರದೇಶದ 120 ಎಕರೆ ಭೂಮಿಯಲ್ಲಿ ಗಣಿಗಾರಿಕೆ ನಡೆಸಲು ಸಿದ್ಧತೆ ನಡೆದಿದೆ. ಕಬ್ಬಿಣದ ಅದಿರು ಗಣಿಗಾರಿಕೆಗಾಗಿ 17,200 ಮರಗಳನ್ನು ಕತ್ತರಿಸಬೇಕಾಗುತ್ತದೆ. ತುಮಕೂರು ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ, ಹಾಸನ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಈ ಶಿಫಾರಸು ಮಾಡಿದ್ದಾರೆ. ಜತೆಗೆ, ವನ್ಯಜೀವಿ ಸಂರಕ್ಷಣಾ ಕಾಯ್ದೆ ಅಡಿಯಲ್ಲಿ ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯಕ್ಕೆ ಪ್ರಸ್ತಾವ ಸಲ್ಲಿಕೆಯಾಗಿದೆ. ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ ಸಭೆಯಲ್ಲಿ ಈ ಪ್ರಸ್ತಾವ ಇನ್ನಷ್ಟೇ ಚರ್ಚೆಗೆ ಬರಬೇಕಿದೆ. ಈ ಬಗ್ಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರ ಪ್ರತಿಕ್ರಿಯೆ ಪಡೆಯಲು ಯತ್ನಿಸಿದರೂ ಸಂಪರ್ಕಕ್ಕೆ ಸಿಗಲಿಲ್ಲ.

4ನೇ ಪುಟ ನೋಡಿ



37,000 ಎಕರೆ
ವನ್ಯಜೀವಿಧಾಮದ ವಿಸ್ತೀರ್ಣ

48.20 ಹೆಕ್ಟೇರ್
ಕೇಳಿರುವ ಅರಣ್ಯ ಪ್ರದೇಶ

37.45 ಹೆಕ್ಟೇರ್
ಗಣಿಗಾರಿಕೆಗೆ

10.74 ಹೆಕ್ಟೇರ್
ಸಂಪರ್ಕ ರಸ್ತೆಗೆ

106 ಎಕರೆ
ಪರಿಹಾರಾತ್ಮಕ ಅರಣ್ಯೀಕರಣಕ್ಕೆ ಗುರುತಿಸಿದ ಜಾಗ

ವಿರೋಧವೇಕೆ?

ಈ ಅರಣ್ಯ ಪ್ರದೇಶವು ಚಿರತೆ, ಕರಡಿ, ತೋಳ, ಕತ್ತೆ ಕಿರುಬ, ಕೊಂಡುಕುರಿಯಂತಹ ಕಾಡು ಪ್ರಾಣಿಗಳು ಮತ್ತು ವಿವಿಧ ಪಕ್ಷಿಗಳ ಆವಾಸಸ್ಥಾನವಾಗಿದ್ದು, ಗಣಿಗಾರಿಕೆ ಆರಂಭಿಸಿದರೆ ಆವಾಸಸ್ಥಾನ ನಾಶಗೊಂಡು ಮಾನವ– ವನ್ಯಜೀವಿ ಸಂಘರ್ಷ ಹೆಚ್ಚಾಗುವ ಸಾಧ್ಯತೆ ಇದೆ ಎಂದು ವನ್ಯಜೀವಿ ತಜ್ಞರು ಎಚ್ಚರಿಸಿದ್ದಾರೆ.

ಪ್ರಸ್ತಾವ ತಿರಸ್ಕಾರಕ್ಕೆ ಸಚಿವರಿಗೆ ಪತ್ರ

ಗಣಿಗಾರಿಕೆ ಪ್ರಸ್ತಾವ ತಿರಸ್ಕರಿಸುವಂತೆ ಒತ್ತಾಯಿಸಿ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೆ ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ ಕುಲಕರ್ಣಿ ಪತ್ರ ಬರೆದಿದ್ದಾರೆ.

ತುಮಕೂರು ಜಿಲ್ಲೆಯಲ್ಲಿ ಚಿರತೆ ಮತ್ತು ಕರಡಿ ಸಂಘರ್ಷ ಈಗಾಗಲೇ ವಿಪರೀತವಾಗಿದ್ದು ಗಣಿಗಾರಿಕೆ ಅನುವು ಮಾಡಿಕೊಟ್ಟರೆ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುವ ಸಾಧ್ಯತೆ ಇದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

‘ಅರಣ್ಯ ಪ್ರದೇಶಗಳ ಒಳಗೆ ಮತ್ತು ಹೊರಗೆ ಖನಿಜ ಸಂಪನ್ಮೂಲವನ್ನು ಮ್ಯಾಪಿಂಗ್ ಮಾಡಲು ಕ್ರಮ ಕೈಗೊಳ್ಳುವ ತನಕ ಮತ್ತು ಅರಣ್ಯದ ಹೊರಗಿನ ಖನಿಜಗಳ ಅನ್ವೇಷಣೆಗೆ ಆದ್ಯತೆ ನೀಡಲು ನಿರ್ಧರಿಸುವವರೆಗೆ ಯಾವುದೇ ಅರಣ್ಯ ಪ್ರದೇಶಗಳನ್ನು ಗಣಿಗಾರಿಕೆ ಚಟುವಟಿಕೆಗೆ ಪರಿಗಣಿಸಬಾರದು ಎಂದು ಅರಣ್ಯ ಇಲಾಖೆ 2019ರಲ್ಲಿ ತೀರ್ಮಾನಿಸಿತ್ತು. ಅಲ್ಲದೇ, ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆಗೆ ಅವಕಾಶ ನೀಡಬಾರದು ಎಂದು ಅರಣ್ಯ ಸಚಿವರು ತಾಕೀತು ಮಾಡಿದ್ದರು. ಆದರೂ, ಅರಣ್ಯ ಅಧಿಕಾರಿಗಳು ಶಿಫಾರಸು ಮಾಡಿ ಸಚಿವರ ನಿರ್ದೇಶನವನ್ನು ಗಾಳಿಗೆ ತೂರಿದ್ದಾರೆ’ ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ಸಚಿವರು ಮಧ್ಯಪ್ರವೇಶಿಸಲಿ’

ಪರಿಸರ ನಾಶವಾಗುವ ಹಲವು ಯೋಜನೆಗಳಿಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ತಡೆ ಒಡ್ಡಿರುವುದು ಶ್ಲಾಘನೀಯ. ಆದರೆ, ಅರಣ್ಯ ಇಲಾಖೆಯ ಅಧಿಕಾರಿಗಳು ಅರಣ್ಯ ನಾಶಕ್ಕೆ ಪರೋಕ್ಷವಾಗಿ ಕುಮ್ಮಕ್ಕು ನೀಡುತ್ತಿದ್ದಾರೆ. ಸಚಿವರ ಗಮನಕ್ಕೆ ತಾರದೇ ಅನೇಕ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ತುಮಕೂರಿನಲ್ಲಿ ಗಣಿಗಾರಿಕೆಗೆ ಶಿಫಾರಸು ಮಾಡುವ ಮೂಲಕ ದ್ವಂದ್ವ ನಿಲುವು ತಳೆದಿದ್ದಾರೆ. ರಾಜ್ಯದಲ್ಲಿ ಅರಣ್ಯ ವಿಸ್ತೀರ್ಣ ಕ್ಷೀಣಿಸುತ್ತಿರುವ ಹೊತ್ತಿನಲ್ಲಿ ಇಂತಹ ಯೋಜನೆಗಳಿಗೆ ಒಪ್ಪಿಗೆ ನೀಡುವುದು ಸೂಕ್ತವಲ್ಲ. ಈ ವಿಷಯದಲ್ಲಿ ಅರಣ್ಯ ಸಚಿವರು ಮಧ್ಯಪ್ರವೇಶಿಸಬೇಕು ಹಾಗೂ ಗಣಿಗಾರಿಕೆಗೆ ಅವಕಾಶ ನೀಡಕೂಡದು. ಇಲ್ಲದಿದ್ದರೆ ಹೋರಾಟ ನಡೆಸುತ್ತೇವೆ.

ಎಸ್.ಆರ್.ಹಿರೇಮಠ, ಸಾಮಾಜಿಕ ಹೋರಾಟಗಾರ

ರೈತರ ಜತೆ ಮಾರ್ಚ್ 19ಕ್ಕೆ ಮತ್ತೆ ಚರ್ಚೆ

ಚಂಡೀಗಢ (ಪಿಟಿಐ): ರೈತ ಮುಖಂಡರ ಜೊತೆ ಸೌಹಾರ್ದಯುತ ವಾತಾವರಣದಲ್ಲಿ ಸಭೆ ನಡೆದಿದೆ, ಮುಂದಿನ ಸಭೆಯು ಚಂಡೀಗಢದಲ್ಲಿ ಮಾರ್ಚ್ 19ರಂದು ನಡೆಯಲಿದೆ ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಶನಿವಾರ ಹೇಳಿದ್ದಾರೆ.

ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಖಾತರಿ ಒದಗಿಸಬೇಕು ಎಂಬುದು ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಧರಣಿ ನಡೆಸುತ್ತಿರುವ ರೈತರ ಪ್ರತಿನಿಧಿಗಳ ಜೊತೆ ಚೌಹಾಣ್ ನೇತೃತ್ವದ ಕೇಂದ್ರದ ತಂಡವು ಶನಿವಾರ ಮಾತುಕತೆ ನಡೆಸಿತು.

ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ ಮತ್ತು ಪಿಯೂಷ್ ಗೋಯಲ್ ಅವರೂ ಸಭೆಯಲ್ಲಿ ಇದ್ದರು. ‘ನಾವು ರೈತ ಮುಖಂಡರಾದ ಜಗಜೀತ್ ಸಿಂಗ್ ಡಲ್ಲೇವಾಲ್ ಮತ್ತು ಸರವಣ್ ಸಿಂಗ್ ಪಂಡೇರ್ ಅವರ ಮಾತು ಆಲಿಸಿದೆವು. ಒಳ್ಳೆಯ ಚರ್ಚೆ ನಡೆಯಿತು’ ಎಂದು ಚೌಹಾಣ್ ತಿಳಿಸಿದರು.

ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಮತ್ತು ಕಿಸಾನ್ ಮಜ್ದೂರ್ ಮೋರ್ಚಾ (ಕೆಎಂಎಂ) ನೇತೃತ್ವದಲ್ಲಿ ರೈತರು ಹೋರಾಟ ನಡೆಸುತ್ತಿದ್ದಾರೆ.

ದುಬೈನಲ್ಲಿ ಇಂದು ಭಾರತ–ಪಾಕಿಸ್ತಾನ ಹಣಾಹಣಿ



ರೋಹಿತ್ ರಿಜ್ವಾನ್

ಐಸಿಸಿ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್



ಸ್ಥಳ
ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣ
ಆರಂಭ
ಮಧ್ಯಾಹ್ನ 2.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್. ಜಿಯೋ ಹಾಟ್‌ಸ್ಟಾರ್

ಕರ್ನಾಟಕ, ಮಹಾರಾಷ್ಟ್ರ ಬಸ್ ಸಂಚಾರ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ಸಣ್ಣ ಬಾಳೇಕುಂದ್ರಿ ಗ್ರಾಮದಲ್ಲಿ ಶುಕ್ರವಾರ ವಾಯವ್ಯ ಸಾರಿಗೆ ಸಂಸ್ಥೆಯ ಬಸ್ ನಿರ್ವಾಹಕ ಮತ್ತು ಚಾಲಕ ಮೇಲಿನ ಹಲ್ಲೆ ಪ್ರಕರಣದಿಂದಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರ ನಡುವೆ ಬಸ್‌ಗಳ ಸಂಚಾರ ವ್ಯತ್ಯಯವಾಗಿದೆ. ಶನಿವಾರ ಸಂಜೆ 7ರ ಬಳಿಕ ಎರಡೂ ಕಡೆಯ ಬಸ್‌ಗಳ ಸಂಚಾರ ಗಡಿಯವರೆಗೆ ಮಾತ್ರ ಸೀಮಿತಗೊಂಡಿದೆ.

ಬೆಳಗಾವಿಯಿಂದ ಮಹಾರಾಷ್ಟ್ರದ ವಿವಿಧ ನಗರಗಳಿಗೆ ನಿತ್ಯ 90 ಬಸ್ ಸಂಚರಿಸುತ್ತಿದ್ದವು. ಆದರೆ, ಪೊಲೀಸರ ಸೂಚನೆ ಮೇರೆಗೆ ವಾಯವ್ಯ ಸಾರಿಗೆ ಸಂಸ್ಥೆಯವರು ಸಂಜೆ 7ಕ್ಕೆ ಮಹಾರಾಷ್ಟ್ರಕ್ಕೆ ಬಸ್ ಸಂಚಾರ ಸ್ಥಗಿತಗೊಳಿಸಿದರು. ನಿಪ್ಪಾಣಿ ತಾಲ್ಲೂಕಿನ ಕೊಗನೊಳ್ಳಿಯವರೆಗೆ (ಕರ್ನಾಟಕ–ಮಹಾರಾಷ್ಟ್ರ ಗಡಿಯವರೆಗೆ) ಮಾತ್ರ ಬಸ್ ಹೋಗುತ್ತಿವೆ.

8ನೇ ಪುಟ ನೋಡಿ

‘ಮಹಾ’ ಬಸ್ ಚಾಲಕನಿಗೆ ಮಸಿ: 8 ಜನರ ಬಂಧನ

ಚಿತ್ರದುರ್ಗ: ಮರಾಠಿ ಮಾತನಾಡಲು ಬರುವುದಿಲ್ಲ ಎಂದು ಹೇಳಿದ್ದಕ್ಕೆ ಬೆಳಗಾವಿಯಲ್ಲಿ ಬಸ್ ನಿರ್ವಾಹಕನ ಮೇಲೆ ಹಲ್ಲೆ ನಡೆಸಿರುವುದನ್ನು ಖಂಡಿಸಿ ನವ ನಿರ್ಮಾಣ ಸೇನೆ ಕಾರ್ಯಕರ್ತರು ಶುಕ್ರವಾರ ರಾತ್ರಿ ಹಿರಿಯೂರಿನ ರಾಷ್ಟ್ರೀಯ ಹೆದ್ದಾರಿ– 48ರ ಗುಯಿಲಾಳ ಟೋಲ್ ಬಳಿ ಪ್ರತಿಭಟನೆ ನಡೆಸಿದರು.

ಮಹಾರಾಷ್ಟ್ರ ಸಾರಿಗೆ ಸಂಸ್ಥೆಯ ವಾಹನ ತಡೆದು, ಚಾಲಕ ಹರಿ ಜಾಧವ್ ಅವರ ಮುಖಕ್ಕೆ ಮಸಿ ಬಳಿದು ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೆ ಇಡೀ ಬಸ್‌ಗೆ ಕಪ್ಪುಬಣ್ಣ ಸ್ಪ್ರೇ ಮಾಡಿದರು. ‘ಜೈ ಕರ್ನಾಟಕ, ಜೈ ಕನ್ನಡ, ಬೆಳಗಾವಿ ನಮ್ಮದು, ಮರಾಠಿಗರು ಪುಂಡಾಟಿಕೆ ನಿಲ್ಲಿಸಬೇಕು’ ಎಂದು ಬಸ್ ಮೇಲೆ ಬರೆದು ಪ್ರತಿಭಟಿಸಿದರು. ಈ ಸಂಬಂಧ ಚಾಲಕ ಹರಿ ಜಾಧವ್ ಅವರು, ಐಮಂಗಲ ಠಾಣೆಗೆ ದೂರು ನೀಡಿದ್ದರಿಂದ ಸೇನೆಯ ಜಿಲ್ಲಾ ಘಟಕದ ಅಧ್ಯಕ್ಷ ತಿಪ್ಪೇಸ್ವಾಮಿ ಹಾಗೂ ಮುಖಂಡ ಲಕ್ಷ್ಮಿಕಾಂತ್ ಸೇರಿ ಎಂಟು ಮಂದಿಯನ್ನು ಬಂಧಿಸಿದರು.



ರಾಷ್ಟ್ರೀಯ ಹೆದ್ದಾರಿ–48ರ ಗುಯಿಲಾಳ ಟೋಲ್‌ನಲ್ಲಿ ಮಹಾರಾಷ್ಟ್ರದ ಬಸ್ ತಡೆದು ನವ ನಿರ್ಮಾಣ ಸೇನೆ ಸದಸ್ಯರು ಚಾಲಕನಿಗೆ ಮಸಿ ಬಳಿದರು

ಬಿವೈವಿ ಕೆಳಗಿಳಿಸುವುದು ಶತಸಿದ್ಧ: ಯತ್ನಾಳ ಬಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಹುದ್ದೆಯಿಂದ ಬಿ.ವೈ.ವಿಜಯೇಂದ್ರ ಅವರನ್ನು ಕೆಳಗಿಳಿಸುವುದು ಶತಸಿದ್ಧ. ಈ ವಿಚಾರದಲ್ಲಿ ಹಿಂದೆ ಸರಿಯುವ ಮಾತೇ ಇಲ್ಲ’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಣವು ಪುನರುಚ್ಚರಿಸಿದೆ. ಈ ಮಧ್ಯೆ ಶಾಸಕ ಶಿವರಾಂ ಹೆಬ್ಬಾರ್ ಸಹ ಬಿಜೆಪಿಯಲ್ಲಿ ಏನೂ ಸರಿಯಿಲ್ಲ ಎಂದಿದ್ದಾರೆ.

ಶನಿವಾರ ಸುದ್ದಿಗೋಷ್ಠಿ ನಡೆಸಿದ ಮಾಜಿ ಸಚಿವ ಕುಮಾರ್ ಬಂಗಾರಪ್ಪ, ‘ರಾಜ್ಯಾಧ್ಯಕ್ಷ ಸ್ಥಾನಕ್ಕೆ ನಮ್ಮ ಬಣದಿಂದ (ಯತ್ನಾಳ ಬಣ) ಸ್ಪರ್ಧೆ ಮಾಡುತ್ತೇವೆ’ ಎಂದು ಸ್ಪಷ್ಟಪಡಿಸಿದರು.

8ನೇ ಪುಟ ನೋಡಿ

‘ಡಿಕೆಶಿಗೆ ವಿಜಯೇಂದ್ರ ಬೆಂಬಲ’



‘ಬಿ.ವೈ.ವಿಜಯೇಂದ್ರ ಅವರು ಕಾಂಗ್ರೆಸ್ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್‌ಗೆ ಬೆಂಬಲ ಸೂಚಿಸುತ್ತಿದ್ದಾರೆ’ ಎಂದು ಕುಮಾರ್ ಬಂಗಾರಪ್ಪ ಟೀಕಿಸಿದರು. ಸುದ್ದಿಗೋಷ್ಠಿಯ ಉದ್ದಕ್ಕೂ ವಿಜಯೇಂದ್ರ ವಿರುದ್ಧ ಹರಿಹಾಯ್ದ ಪರಿ ಇಂತಿದೆ.

- ಬಿಜೆಪಿ ಪತ್ರಿಕಾಗೋಷ್ಠಿಯಲ್ಲಿ ವಿಜಯೇಂದ್ರ ಅವರು ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಮಾತನಾಡುವ ಔಚಿತ್ಯವೇನಿದೆ?
- ನಿಮ್ಮನ್ನೇ ಬದಲಾವಣೆ ಮಾಡಬೇಕೆಂದು ನಾವು ಹೊರಟಿದ್ದೇವೆ. ನೀವು ಬೇರೊಂದು ಪಕ್ಷದ ಅಧ್ಯಕ್ಷರ ಬದಲಾವಣೆ ಬಗ್ಗೆ ಏಕೆ ಮಾತನಾಡುತ್ತೀರಿ?
- ಆಂದೋಲನ ಮಾಡುತ್ತೀವಿ ಎಂದಿದ್ದೀರಿ. ರಾಜ್ಯ ಸರ್ಕಾರದ ವಿರುದ್ಧ ಆಂದೋಲನ, ಹೋರಾಟ ನಡೆಸಲು ಹಲವು ಅವಕಾಶಗಳಿದ್ದವು. ಅವುಗಳನ್ನು ಕೈಚೆಲ್ಲಿ ಈಗ ಯಾವ ಆಂದೋಲನ ಮಾಡುತ್ತೀರಿ?

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಒಳನೋಟ



‘ಉದ್ಯಮಿ’ಯಾದ ತೋಟಗಾರಿಕೆ ಬೆಳೆಗಾರ 6

ದ್ರಾಕ್ಷಿ, ಕಲ್ಲಂಗಡಿ ಹಣ್ಣುಗಳ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಪ್‌ಕಾಮ್ಸ್ ವತಿಯಿಂದ ಫೆಬ್ರುವರಿ 24ರಂದು ದ್ರಾಕ್ಷಿ, ಕಲ್ಲಂಗಡಿ ಹಣ್ಣುಗಳ ಮೇಳವನ್ನು ಲಾಲ್‌ಬಾಗ್‌ನಲ್ಲಿರುವ ಕಚೇರಿ ಆವರಣದಲ್ಲಿ ಆಯೋಜಿಸಲಾಗಿದೆ.

ವಿವಿಧ ತಳಿಗಳ ದ್ರಾಕ್ಷಿ, ಕಲ್ಲಂಗಡಿ ಹಣ್ಣುಗಳ ಪ್ರದರ್ಶನ, ಮಾರಾಟ ಇರಲಿದೆ. ರಿಯಾಯಿತಿ ದರದಲ್ಲಿ ಮಾರಾಟ ನಡೆಯಲಿದೆ ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ಹೇಳಿದ್ದಾರೆ.

ಪ್ರತಾಪ ಸಿಂಹ ವಿರುದ್ಧ ಪ್ರಕರಣ ದಾಖಲು

ಮೈಸೂರು: 'ಮುಸ್ಲಿಂ ಸಮುದಾಯದ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ' ಎಂದು ಆರೋಪಿಸಿ ಮಾಜಿ ಸಂಸದ ಪ್ರತಾಪ ಸಿಂಹ ವಿರುದ್ಧ ನಗರ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಸೈಯದ್ ಅಬ್ರಾರ್ ಉದಯಗಿರಿ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ. 'ಸಮುದಾಯದ ಜನರನ್ನು ನಿಂದಿಸುವ ರೀತಿಯಲ್ಲಿ ಪ್ರಚೋದನಾಕಾರಿಯಾಗಿ ಅವರು ಮಾತನಾಡಿದ್ದಾರೆ' ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

'ಪುಸ್ತಕ ರೂಪದಲ್ಲಿ ಕೆಎಸ್‌ಎನ್ ಅನುವಾದಿತ ಕವನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿವಿಧ ಭಾಷೆಗಳಿಗೆ ಅನುವಾದಗೊಂಡಿರುವ ಕೆ.ಎಸ್. ನರಸಿಂಹಸ್ವಾಮಿ ಅವರ ಕವನಗಳ ಸಂಕಲನವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲಾಗುವುದು' ಎಂದು ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ ಅಧ್ಯಕ್ಷ ಕಿಕ್ಕೇರಿ ಕೃಷ್ಣಮೂರ್ತಿ ತಿಳಿಸಿದರು.

ಟ್ರಸ್ಟ್ ಸಹಯೋಗದಲ್ಲಿ ಜೈನ್ ಡೀಮ್ಡ್ ವಿಶ್ವವಿದ್ಯಾಲಯದ ದೂರ ಮತ್ತು ಆನ್‌ಲೈನ್ ಕಲಿಕಾ ಶಿಕ್ಷಣ ಕೇಂದ್ರವು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಮಾತೃಭಾಷಾ ದಿವಸ್ ಆಚರಣೆ ಮತ್ತು ಅನುವಾದ ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿದರು.

'ನರಸಿಂಹಸ್ವಾಮಿಯವರ 110ನೇ ಜನ್ಮದಿನಕ್ಕೆ 110 ಅನುವಾದಿತ ಕವನಗಳ ಪುಸ್ತಕವನ್ನು ಹೊರತರಲಾಗುವುದು. ಇಂಗ್ಲಿಷ್, ತಮಿಳು, ತೆಲುಗು, ಹಿಂದಿ, ಮರಾಠಿ, ಮಲಯಾಳ, ಉರ್ದು ಹಾಗೂ ಬಂಗಾಳಿ ಭಾಷೆಯಲ್ಲಿ ಪುಸ್ತಕ ಪ್ರಕಟವಾಗಲಿದೆ' ಎಂದರು.

ಕಾರ್ಯಾಗಾರದಲ್ಲಿ 50ಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಅವರು ಕೆ.ಎಸ್. ನರಸಿಂಹಸ್ವಾಮಿ ಅವರ ಆಯ್ದ ಕನ್ನಡ ಕವನಗಳನ್ನು ವಿವಿಧ ಭಾಷೆಗಳಿಗೆ ಅನುವಾದಿಸಿದರು.




ನಗರದಲ್ಲಿ ಇಂದು

ವಿರಳ ಕಾಯಿಲೆ ಜಾಗೃತಿ ಓಟ: ಆಯೋಜನೆ: ಭಾರತೀಯ ವಿರಳ ಕಾಯಿಲೆ ಸಂಸ್ಥೆ, ಸ್ಥಳ: ಸೇಂಟ್ ಜೋಸೆಫ್ ಹೈಸ್ಕೂಲ್, ಯು.ಬಿ. ಸಿಟಿ, ಬೆಳಿಗ್ಗೆ 6

ವಿಶ್ವ ಕನ್ನಡ ಆರನೇ ರಾಜ್ಯಮಟ್ಟದ ಕವಿಗೋಷ್ಠಿ, ಸಮ್ಮೇಳನದ ಉದ್ಘಾಟನೆ: ಎಸ್. ಮುನಿರಾಜು, ಪ್ರಾಸ್ತಾವಿಕ ನುಡಿ: ಈ.ರವೀಶ, ಸಾನ್ನಿಧ್ಯ: ಬಸವ ಕುಮಾರ ಸ್ವಾಮೀಜಿ, ಸಮ್ಮೇಳನದ ಸರ್ವಾಧ್ಯಕ್ಷ: ವೈ.ಬಿ.ಎಚ್. ಜಯದೇವ್, ಆಯೋಜನೆ: ವಿಶ್ವ ಕನ್ನಡ ಕಲಾ ಸಂಸ್ಥೆ, ಸ್ಥಳ: ಅಸೆಂಟ್ ಪದವಿ ಪೂರ್ವ ಕಾಲೇಜು, ಹೆಸರಘಟ್ಟ ಮುಖ್ಯರಸ್ತೆ, ಬೆಳಿಗ್ಗೆ 8.30

'ಮಿತ್ರಾವರಣ' ಪ್ರೊ.ಅ.ರಾ. ಮಿತ್ರರ ಕೃತಿ ಅವಲೋಕನ, ಅನಾವರಣ, ಅಭಿನಂದನಾ ಸಮಾರಂಭದ ಉದ್ಘಾಟನೆ: ಚಂದ್ರಶೇಖರ ಕಂಬಾರ, 'ಮಿತ್ರಾರ್ಜಿತ' ಅಭಿನಂದನೆ ಗ್ರಂಥದ ಬಿಡುಗಡೆ: ಟಿ.ವಿ. ವೆಂಕಟಾಚಲಶಾಸ್ತ್ರಿ, 'ಮೇಘದೂತ', 'ಛಂದೋಮಿತ್ರ'ದ ಕುರಿತು: ಶತಾವಧಾನಿ ರಾ. ಗಣೇಶ್, 'ಮಹಾಭಾರತದ ಪಾತ್ರ ಸಂಗತಿಗಳು' ಕರಿತು: ಸೂರ್ಯಪ್ರಕಾಶ ಪಂಡಿತ್, ಕಲಾಗಂಗೋತ್ರಿಯ ಸ್ಕಿಟ್, 'ವಚನಕಾರರು ಮತ್ತು ಶಬ್ದಕಲ್ಪ'ದ ಕುರಿತು: ಸಿ. ಸೋಮಶೇಖರ್, 'ಸ್ಮರಣೀಯರು, ಟಿ.ಪಿ. ಕೈಲಾಸಂ' ಕುರಿತು: ವೈ.ವಿ. ಗುಂಡೂರಾವ್, 'ಲಲಿತ ಪ್ರಬಂಧಗಳು, ಪ್ರೇಮನದಿಯ ದಡಗಳಲ್ಲಿ' ಕುರಿತು: ಎಂ.ಎಸ್. ನರಸಿಂಹಮೂರ್ತಿ, 'ರಾಮಾಯಣ ಮಿತ್ರ' ಕುರಿತು: ಅರ್ಚನಾ, ಅಭಿನಂದನಾ ಸಮಾರಂಭ: ಎಸ್.ಆರ್. ಲೀಲಾ, ಅಭಿನಂದನಾ ಭಾಷಣ: ಸ್ವಾಮಿ ಮುಕ್ತಿದಾನಂದ ಜೀ ಮಹಾರಾಜ್, ಕೃತಜ್ಞತಾ ನುಡಿ: ಅ.ರಾ. ಮಿತ್ರ, ಆಯೋಜನೆ: ಭಾರತೀಯ ವಿದ್ಯಾಭವನ, ರಮಣಶ್ರೀ ಸಮೂಹ ಸಂಸ್ಥೆಗಳು, ಮಿತ್ರವೃಂದ, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 9.30ರಿಂದ




ಚಂದ್ರಶೇಖರ ಕಂಬಾರ

ಉಚಿತ ಆರೋಗ್ಯ ಶಿಬಿರ: ಆಯೋಜನೆ: ಇಂಟರ್‌ನ್ಯಾಷನಲ್ ಏಜೆನ್ಸಿ ಫಾರ್ ರಿಹಾಬಿಲಿಟೇಷನ್ ಇಂಡಿಯಾ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣ, ಪಂತರಪಾಳ್ಯ, ಮೈಸೂರು ರಸ್ತೆ, ಬೆಳಿಗ್ಗೆ 9.30

ಶಿವರಾತ್ರಿಯ ಪ್ರಯುಕ್ತ ನೃತ್ಯಸೇವೆ: ಶಾಂತಲಾ ನೃತ್ಯ ತಂಡ, ಅಕಾಡೆಮಿ ಆಫ್ ಭರತನಾಟ್ಯಂ, ನಾಟ್ಯ ದೇಗುಲ ಪಬ್ಲಿಕ್ ಚಾರಿಟೇಬಲ್ ಟ್ರಸ್ಟ್, ನಾಟ್ಯಶ್ರೀ ಸ್ಕೂಲ್ ಆಫ್ ಭರತನಾಟ್ಯಂ, ಅತಿಥಿ: ಸರಸ್ವತಿ ರಜತೇಶ್, ಆಯೋಜನೆ: ಶಾಂತಲಾ ಆರ್ಟ್ಸ್ ಟ್ರಸ್ಟ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 10

ಕರ್ನಾಟಕ ರಾಜ್ಯ ನ್ಯಾಯಾಂಗ ಇಲಾಖಾ ನೌಕರರ ಸಂಘದ 50ನೇ ವರ್ಷದ ಸುವರ್ಣ ಮಹೋತ್ಸವ, ರಾಜ್ಯಮಟ್ಟದ ಸಮ್ಮೇಳನದ ಉದ್ಘಾಟನೆ: ಅರವಿಂದ ಕುಮಾರ್, ಅಧ್ಯಕ್ಷತೆ: ಎನ್.ವಿ. ಅಂಜಾರಿಯ, 'ಉಸಿರು ಗಂಧ ಸೋಕಿ' ಪುಸ್ತಕ ಬಿಡುಗಡೆ: ವಿ. ಕಾಮೇಶ್ವರ್ ರಾವ್, 'ಬಂಧನದಿಂದ ಬಯಲಿಗೆ ಮತ್ತು ಕಣ್ಣ ಹಿಗ್ಗಿನ ತ್ವಾಟ' ಪುಸ್ತಕ ಬಿಡುಗಡೆ: ಕೆ.ಎಸ್. ಮುದಗಲ್, 'ಸುವರ್ಣ ದೀಪಿಕೆ' ಸ್ಮರಣ ಸಂಚಿಕೆ ಬಿಡುಗಡೆ: ಎಚ್.ಕೆ. ಪಾಟೀಲ, ಅತಿಥಿ: ಸಿ.ಎಸ್. ಷಡಾಕ್ಷರಿ, ಆಯೋಜನೆ: ಕರ್ನಾಟಕ ರಾಜ್ಯ ನ್ಯಾಯಾಂಗ ಇಲಾಖಾ ನೌಕರರ ಸಂಘ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10.30



ಎನ್.ವಿ. ಅಂಜಾರಿಯ

26ನೇ ವರ್ಷದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ: ಸಾನ್ನಿಧ್ಯ: ಸಾಲುಮರದ ತಿಮ್ಮಕ್ಕ, ಕುಮಾರಸ್ವಾಮಿ ಸ್ವಾಮೀಜಿ, ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಆರ್. ಅಶೋಕ, ಪ್ರಮಾಣ ಪತ್ರ ವಿತರಣೆ: ತೇಜಸ್ವಿ ಸೂರ್ಯ, ಆಯೋಜನೆ: ಶ್ರೀಬನಶಂಕರಿ ಸಾಮೂಹಿಕ ವಿವಾಹ ವೇದಿಕೆ, ಸ್ಥಳ: ಬನಶಂಕರಿ ದೇವಸ್ಥಾನದ ಆವರಣ, ಬೆಳಿಗ್ಗೆ 10.30

'ಜಿ.ಎಸ್. ಶಿವರುದ್ರಪ್ಪ, ಕೆ.ಎಸ್. ನಿಸಾರ್ ಅಹಮದ್, ಎಂ. ಗೋಪಾಲಕೃಷ್ಣ ಅಡಿಗ, ಸಿದ್ಧಲಿಂಗಯ್ಯ' ಮರೆಯಲಾಗದ ಮಹನೀಯರು ಗೀತ ಗೌರವ ಕಾರ್ಯಕ್ರಮದ ಉದ್ಘಾಟನೆ: ಆರ್. ಅಶೋಕ, ಭಾಗವಹಿಸುವವರು: ಮುನಿಕೃಷ್ಣ, ಶ್ರೀನಿವಾಸ ಜಿ. ಕಪ್ಪಣ್ಣ, ಮಾನಸ, ರುಮಾನ್ ನವೀದ್, ಜಿ.ಎಸ್. ಸಿದ್ಧಲಿಂಗಯ್ಯ, ದೊಡ್ಡರಂಗೇಗೌಡ, ಎಚ್.ಎಸ್. ವೆಂಕಟೇಶಮೂರ್ತಿ, ಬಿ.ಆರ್. ಲಕ್ಷ್ಮಣರಾವ್, ಡುಂಡಿರಾಜ್, ನಾ. ದಾಮೋದರ ಶೆಟ್ಟಿ, ಗಾಯನ: ವೈ.ಕೆ. ಮುದ್ದುಕೃಷ್ಣ, ಸುನೀತಾ, ಅಪ್ಪಗೆರೆ ತಿಮ್ಮರಾಜು, ಸುಪ್ರಿಯಾ ರಘುನಂದನ್, ನಗರ ಶ್ರೀನಿವಾಸ ಉಡುಪ, ಡೇವಿಡ್ ಮಂಡ್ಯ, ಕಿಕ್ಕೇರಿ ಕೃಷ್ಣಮೂರ್ತಿ, ಪ್ರವೀಣ್ ಬಿ.ವಿ., ಸಿ.ಎನ್. ನರಸಿಂಹಮೂರ್ತಿ, ಪೂಜ್ಯ ಮೋಹನ್, ಆಯೋಜನೆ: ಕರ್ನಾಟಕ ಸುಗಮ ಸಂಗೀತ ಪರಿಷತ್ತು, ಸ್ಥಳ: ಆರ್. ಅಶೋಕ ಶಾಸಕರ ಕಚೇರಿಯ ಆವರಣ, ವಿಹಾರ ಕೇಂದ್ರದ ಹತ್ತಿರ, ಬಿ.ಎಸ್.ಕೆ. ಎರಡನೇ ಹಂತ, ಬೆಳಿಗ್ಗೆ 10.30

ಲಕ್ಷ್ಮೀನಾರಾಯಣ ನಾಗವಾರ, ಕೆ.ಎಂ. ಕೊಮ್ಮಣ್ಣ ಸ್ಮರಣೆ: ಚಾಲನೆ: ಎಚ್.ಸಿ. ಮಹದೇವಪ್ಪ ಅಧ್ಯಕ್ಷತೆ: ಗುರುಪ್ರಸಾದ್ ಕೆರೆಗೋಡು, ಪ್ರಾಸ್ತಾವಿಕ ನುಡಿ: ಜೀವನಹಳ್ಳಿ ವೆಂಕಟೇಶ್, ಅತಿಥಿಗಳು: ಪಿ.ಎಂ. ನರೇಂದ್ರಸ್ವಾಮಿ, ಮಾವಳ್ಳಿ ಶಂಕರ್, ಎಸ್.ಜಿ. ಸಿದ್ಧರಾಮಯ್ಯ, ಇಂದೂಧರ ಹೊನ್ನಾಪುರ, ಇಂದಿರಾ ಕೃಷ್ಣಪ್ಪ, ವಿ. ನಾಗರಾಜ್, ಅಗ್ರಹಾರ ಕೃಷ್ಣಮೂರ್ತಿ, ಎನ್. ವೆಂಕಟೇಶ್, ಜನಾರ್ದನ, ಎನ್. ಮುನಿಸ್ವಾಮಿ, ಜಾನಕಮ್ಮ ಲಕ್ಷ್ಮೀನಾರಾಯಣ ನಾಗವಾರ, ರಮಾ ಸಿದ್ಧಲಿಂಗಯ್ಯ, ತಮಿಳ್ ಸೆಲ್ವಿ, ಆಯೋಜನೆ: ದಲಿತ ಸಂಘರ್ಷ ಸಮಿತಿಗಳ ಒಕ್ಕೂಟ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

'ಮೆಟ್ರೊ ಪ್ರಯಾಣ ದರ ಏರಿಕೆಯ ವಿರುದ್ಧದ ಸಮಾವೇಶ': ಭಾಷಣಕಾರರು: ಎಂ.ಎನ್. ಶ್ರೀಹರಿ, ಅಶಿಶ್ ವರ್ಮಾ, ನಾಗೇಶ ಹೆಗಡೆ, ಮೇಘನಾ ವರ್ಮಾ, ವಿ.ಎನ್. ರಾಜಶೇಖರ್, ಎನ್. ರವಿ, ಅಧ್ಯಕ್ಷತೆ: ರಾಜೇಶ್ ಭಟ್, ಆಯೋಜನೆ: ಬೆಂಗಳೂರು ಮೆಟ್ರೊ ಪ್ರಯಾಣಿಕರ ಸಂಘಟನೆ, ಸ್ಥಳ: ಸ್ಕೌಟ್ಸ್ ಮತ್ತು ಗೈಡ್ಸ್ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 11

ಹಳೇ ವಿದ್ಯಾರ್ಥಿಗಳ ಬಳಗ ಕೂಟ-2024, ಪ್ರತಿಭಾ ಪುರಸ್ಕಾರ ಕಾರ್ಯಕ್ರಮ: ಅತಿಥಿಗಳು: ಅಜಿತ್ ಹನುಮಕ್ಕನವರ್, ಉದ್ಧರಣ ಸ್ಮರಣ ಸಂಚಿಕೆ ಬಿಡುಗಡೆ: ಎ.ವಿ. ಪ್ರಸನ್ನ, ಅಧ್ಯಕ್ಷತೆ: ಎನ್. ಸತ್ಯಪ್ರಕಾಶ್, ಆಯೋಜನೆ: ಹಳೇ ವಿದ್ಯಾರ್ಥಿಗಳ ಸಂಘ, ಸ್ಥಳ: ಬಬ್ಬೂರುಕಮ್ಮೆ ಸೇವಾ ಸಮಿತಿ ಸಭಾಂಗಣ, ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಳಿಗ್ಗೆ 11

ಎಂ.ಮಹಾದೇವ ಅವರ 'ಇಂಡಿಯಾಸ್ ಅರ್ಬನ್ ಹೌಸಿಂಗ್ ಆ್ಯಂಡ್ ಪಾವರ್ಟಿ', 'ರೂರಲ್ ಸೋಷಿಯಲ್ ಇನ್ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಇನ್ ಇಂಡಿಯಾ-ಆ್ಯನ್ ಇನ್‌ಕ್ಲ್ಯೂಸಿವ್ ಅಪ್ರೋಚ್' ಪುಸ್ತಕಗಳ ಬಿಡುಗಡೆ: ಪುಸ್ತಕಗಳ ಕುರಿತು: ಆರ್. ಎಸ್. ದೇಶಪಾಂಡೆ, ಸಿ.ಕೆ. ರೇಣುಕಾರ್ಯ, ಅಧ್ಯಕ್ಷತೆ: ಮದನ್ ಗೋಪಾಲ್, ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11.30

ನವ ಭಾವ ಜೀವ 'ಅಮ್ಮ ನೀ ಅಮೃತಧಾರೆ' ಭಾವಗೀತೆಗಳ ಧ್ವನಿಸಾಂದ್ರಿಕೆ ಬಿಡುಗಡೆ: ದೊಡ್ಡರಂಗೇಗೌಡ, ಅತಿಥಿಗಳು: ಚಂದ್ರಹಾಸ್ ಕೋಟೆಕಾರ್, ಉಮಾದೇವಿ ಚಿಪಳೂನಕರ್, ಸಂಗೀತ ನಿರ್ದೇಶನ: ಮೃತ್ಯುಂಜಯ ದೊಡ್ಡವಾಡ, ಆಯೋಜನೆ: ವಿಜಯಚಂದ್ರಿಕಾ ಸಂಗೀತ್ ಚಂದನ-ಬೆಂಗಳೂರು, ಸಂಗೀತ ಧಾಮ ಮ್ಯೂಸಿಕ್ ಅಕಾಡೆಮಿ, ಸ್ಥಳ: ಬಿ.ಎಂ. ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 4

ರಂಗಉದ್ಬೋಧ-3, ಉಪನ್ಯಾಸ-ಯಕ್ಷಗಾನ ಒಂದು ನೋಟ: ಸಂಪನ್ಮೂಲ ವ್ಯಕ್ತಿ: ಆನಂದರಾಮ ಉಪಾಧ್ಯ, ಆಯೋಜನೆ ಮತ್ತು ಸ್ಥಳ: ಕಲಾ ಕದಂಬ ಆರ್ಟ್ ಸೆಂಟರ್, ವಿಶ್ವೇಶ್ವರಯ್ಯ ಬಡಾವಣೆ, ನಾಲ್ಕನೇ ವಿಭಾಗ, ಉಲ್ಲಾಳ ಉಪನಗರ, ಸಂಜೆ 4ರಿಂದ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಪ್ರೇರಣಾ ಬಾಲಾಜಿ, ಅತಿಥಿಗಳು: ಉಷಾ ದಾತರ್, ದಿವ್ಯಶ್ರೀ ಎಸ್. ವಟಿ, ರೂಪಶ್ರೀ ಮಧುಸೂದನ್, ಶ್ರೀನಿವಾಸ್ ಜಿ. ಕಪ್ಪಣ್ಣ, ವೈ.ಕೆ. ಸಂಧ್ಯಾ ಶರ್ಮಾ, ಮೀನಾಕ್ಷಿ ಕೃಷ್ಣ ಬೈರೇಗೌಡ, ಉಮಾ ಮಹೇಶ್ ಸತ್ಯನಾರಾಯಣ್, ಸ್ನೇಹಾ ಕಪ್ಪಣ್ಣ, ಆಯೋಜನೆ: ನೃತ್ಯೋದಯ ಅಕಾಡೆಮಿ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ಯಲಹಂಕ ಉಪನಗರ, ಯಲಹಂಕ, ಸಂಜೆ 4

ಸ್ನೇಹ ಸೇತು ಕಾರ್ಯಕ್ರಮ-2025, 'ಭಕ್ತ ಸುಧನ್ವ' ಯಕ್ಷಗಾನ ಪ್ರದರ್ಶನ: ಗೀತಾ ಹೆಗಡೆ ಸಾಲ್ಕಣೆ, ಅರ್ಪಿತಾ ಹೆಗಡೆ, ನಾಗಶ್ರೀ ಗೀಜಗಾರ್, ನಿಹಾರಿಕಾ ಭಟ್, ಆಯೋಜನೆ: ಉತ್ತರ ಕನ್ನಡ ಸಂಘ, ಸ್ಥಳ: ಸ್ಥಳ: ಉತ್ತರ ಕನ್ನಡ ಭವನ, ನಂದಿನಿ ಬಡಾವಣೆ, ಸಂಜೆ 4.30

'ಭಾರತ್ ಗಂಧರ್ವ ಯಾತ್ರ' 16ನೇ ಭಾರತೀಯ ಶಾಸ್ತ್ರೀಯ ಸಂಗೀತೋತ್ಸವ: '13ನೇ ಸಮಗಾನ ಮಾತಂಗ ರಾಷ್ಟ್ರೀಯ ಪ್ರಶಸ್ತಿ' ಸ್ವೀಕರಿಸುವವರು: ಶಶಾಂಕ್ ಸುಬ್ರಹ್ಮಣ್ಯಂ, ಅತಿಥಿಗಳು: ಎಸ್.ವಿ. ರಂಗನಾಥ್, ನಾಗೇಶ್ ವಿ. ಬೆಟ್ಟಕೋಟೆ, ಎಚ್.ಎನ್. ಸುರೇಶ್, ಯುಗಳ ಗಾಯನ: ರಂಜನಿ ಗಾಯತ್ರಿ, ಪಿಟೀಲು: ಎಲ್. ರಾಮಕೃಷ್ಣನ್, ಮೃದಂಗ: ದೆಹಲಿ ಸಾಯಿರಾಮ್, ಘಟ: ಓಂಕಾರ್ ರಾವ್, ಆಯೋಜನೆ: ಭಾರತೀಯ ಸಾಮಗಾನ ಸಭಾ, ಸ್ಥಳ: ಚೌಡಯ್ಯ ಸ್ಮಾರಕ ಭವನ, ಸಂಜೆ 5.15ರಿಂದ

ವಾದ್ಯಗೋಷ್ಠಿ ವೈಭವದ ಆ ದಿನಗಳು 'ಚಿರನೂತನ ಗೀತ ಗಾಯನ': ಉದ್ಘಾಟನೆ: ರೇಣುಕುಮಾರ್, ಅಧ್ಯಕ್ಷತೆ: ಶಿವಾನಂದ ಶೆಟ್ಟಿ, ಕಲಾವಿದರು, ಕಲಾಪೋಷಕರನ್ನು ಅಭಿನಂದಿಸುವವರು: ಎಚ್.ಎಸ್. ರಾಘವೇಂದ್ರ ಶೆಟ್ಟಿ, 'ಸಂಗೀತ ಕಲಾರತ್ನ' ಪ್ರಶಸ್ತಿ ಸ್ವೀಕರಿಸುವವರು: ಮೋಹನ್ ಕೃಷ್ಣ, ಶಂಕರ್, ಕೃಷ್ಣ ಬಲಭದ್ರಿ, ಲಕ್ಷ್ಮಣ್, ಶೀಬಾ, ಶೇಖರ್, ಆಯೋಜನೆ: ಸಂಸ್ಕೃತಿ ಸೌರಭ ಟ್ರಸ್ಟ್, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ವಿವೇಕ್ ಸದಾಶಿವಂ, ಪಿಟೀಲು: ಕೇಶವ್ ಮೋಹನ್ ಕುಮಾರ್, ಮೃದಂಗ: ತುಮಕೂರು ಬಿ. ರವಿಶಂಕರ್, ಘಟ: ರಂಗನಾಥ್ ಚಕ್ರವರ್ತಿ, ಆಯೋಜನೆ, ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.30

ಕೀರ್ತನ ಕೇಸರಿ ಬಿ. ಶಿವಮೂರ್ತಿಶಾಸ್ತ್ರಿ ಅವರಿಗೆ ನುಡಿನಮನ: ಭಾಗವಹಿಸುವವರು: ರುದ್ರೇಶ ಅದರಂಗಿ, ಲೀಲಾದೇವಿ ಆರ್. ಪ್ರಸಾದ್, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘದ ಸಭಾಂಗಣ, ಕೆಂಪೇಗೌಡನಗರ, ಸಂಜೆ 6

ರಜತ ಸಂಭ್ರಮ-2025, ಬೇಂದ್ರೆ ನೆನಪು 'ನಾಕು ತಂತಿ' ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರೆತ 50ನೇ ವರ್ಷದ ಸಂಭ್ರಮ: ಕಾವ್ಯ ವಾಚನ: ಬಿ.ಎನ್. ರಮ್ಯಾ, ಜ್ಯೋತಿ ಪ್ರಸಾದ, ನುಡಿ ನಮನ: ಭ.ರಾ. ವಿಜಯಕುಮಾರ್, ಆಯೋಜನೆ, ಸ್ಥಳ: ಪಂಚಾಮೃತ ಸುಗಮ ಸಂಗೀತ ಅಕಾಡೆಮಿ, ವೇಮಣ್ಣ ಬಡಾವಣೆ, ದೊಡ್ಡಬೊಮ್ಮಸಂದ್ರ, ಸಂಜೆ 6.05



ದಲಿತ ಸಂಘಟನೆಗಳ ಒಕ್ಕೂಟ ಏರ್ಪಡಿಸಿದ್ದ ದುಂಡುಮೇಜಿನ ಸಭೆಯಲ್ಲಿ ವಿವಿಧ ಸಂಘಟನೆಗಳು ಮುಖಂಡರು ಭಾಗಿಯಾಗಿದ್ದರು —ಪ್ರಜಾವಾಣಿ ಚಿತ್ರ

‘ಪರಿಶಿಷ್ಟರ ಹಣ ದುರ್ಬಳಕೆ ನಿಲ್ಲಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಲಿತ ಸಮುದಾಯದ ಸಬಲೀಕರಣಕ್ಕಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಉಪಯೋಜನೆಯಡಿ ತೆಗೆದಿರಿಸುವ ಅನುದಾನವನ್ನು ಅನ್ಯ ಉದ್ದೇಶಗಳಿಗೆ ಬಳಸುವುದನ್ನು ರಾಜ್ಯ ಸರ್ಕಾರ ನಿಲ್ಲಿಸಬೇಕು’ ಎಂದು ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಂ. ವೆಂಕಟಸ್ವಾಮಿ ಒತ್ತಾಯಿಸಿದರು.

ಉಪ ಯೋಜನೆಗಳ ಅಡಿಯಲ್ಲಿ (ಎಸ್‌ಸಿಎಸ್‌ಪಿ/ಟಿಎಸ್‌ಪಿ) ಸರ್ಕಾರವು ಬಜೆಟ್‌ನಲ್ಲಿ ತೆಗೆದಿರಿಸಿದ ಅನುದಾನ ಮತ್ತು ಗ್ಯಾರಂಟಿ ಯೋಜನೆಗಳಿಗೆ ಅದರಲ್ಲಿ ಬಳಕೆ ಮಾಡಿಕೊಂಡ ಅನುದಾನದ ಮಾಹಿತಿಯನ್ನು, ಒಕ್ಕೂಟದ ವತಿಯಿಂದ ನಗರದಲ್ಲಿ ಶನಿವಾರ ಆಯೋಜಿಸಲಾಗಿದ್ದ ದುಂಡು ಮೇಜಿನ ಸಭೆಯ ಮುಂದೆ ಇರಿಸಿದರು.

‘ದಲಿತ ಸಂಘಟನೆಗಳ ಜತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಡೆಸಿದ ಬಜೆಟ್ ಪೂರ್ವಭಾವಿ ಸಭೆಯಲ್ಲಿ ವೈಯಕ್ತಿಕ ಸಮಸ್ಯೆಗಳ ಕುರಿತ ಮನವಿಗಳನ್ನೇ ಮುಂದಿಡಲಾಯಿತು. ಸಿದ್ದರಾಮಯ್ಯ ಸಹ ಇತರ ವಿಚಾರಗಳನ್ನು ಪ್ರಸ್ತಾಪಿಸಲಿಲ್ಲ. ಸಭೆ ಸಂಪೂರ್ಣ ವಿಫಲವಾಗಿದೆ’ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು.

‘ಸರ್ಕಾರ ಒಂದು ಕೈಯಲ್ಲಿ ಕೊಟ್ಟು, ಇನ್ನೊಂದೆಡೆ ಕಸಿದುಕೊಳ್ಳುತ್ತಿದೆ. ದಲಿತರಿಗೆ ಅನ್ಯಾಯ ಮಾಡುತ್ತಿದೆ. ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನವನ್ನು ಗ್ಯಾರಂಟಿಗಳಿಗೆ ಬಳಕೆ ಮಾಡಿಕೊಳ್ಳುವುದಿಲ್ಲ ಎಂದು ಬಜೆಟ್‌ನಲ್ಲಿ ಖಾತರಿ ಕೊಡಬೇಕು ಎಂದು ಮುಖ್ಯಮಂತ್ರಿ ಅವರನ್ನು ಒತ್ತಾಯಿಸಬೇಕು’ ಎಂದು ಸಭೆಯಲ್ಲಿ ನಿರ್ಣಯ ಅಂಗೀಕರಿಸಲಾಯಿತು.

ಆರ್‌ಪಿಐ, ಶೋಷಿತ ಸಮುದಾಯಗಳ ವೇದಿಕೆ, ಹಿಂದ ಸಂಘಟನೆಗಳ ಒಕ್ಕೂಟ, ಛಲವಾದಿ ಯುವ ಬ್ರಿಗೇಡ್, ದಲಿತ ಸಂರಕ್ಷ ಸೇನೆ, ಭೀಮ್ ಆರ್ಮಿ ಸೇರಿ ಹಲವು ಸಂಘಟನೆಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗಿಯಾಗಿದ್ದರು.

ಮಾಸಿಕ ₹10 ಸಾವಿರ ‘ತಸ್ತೀಕ್’ ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಜರಾಯಿ ದೇಗುಲಗಳಿಗೆ ನೀಡುವ ತಸ್ತೀಕ್ ಮೊತ್ತವನ್ನು ತಿಂಗಳಿಗೆ ₹10 ಸಾವಿರಕ್ಕೆ ಹೆಚ್ಚಿಸಬೇಕು ಎಂದು ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರು, ಆಗಮಿಕರು ಮತ್ತು ಉಪಾದಿವಂತರ ಒಕ್ಕೂಟ ಶನಿವಾರ ಆಗ್ರಹಪಡಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಕೆ.ಈ. ರಾಧಾಕೃಷ್ಣ, ಮಹಾಪ್ರಧಾನ ಕಾರ್ಯದರ್ಶಿ ಕೆ.ಎಸ್. ಎನ್. ದೀಕ್ಷಿತ್, ‘10 ವರ್ಷಗಳಿಂದ ಮಾಸಿಕ ₹5 ಸಾವಿರ ತಸ್ತೀಕ್ ನೀಡಲಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಮುಜರಾಯಿ ದೇಗುಲಗಳಲ್ಲಿ ನಿತ್ಯದ ಪೂಜೆ ವೆಚ್ಚದ ಜತೆ ಅರ್ಚಕರು ಜೀವನ ನಿರ್ವಹಣೆ ಮಾಡಬೇಕಿದ್ದು ಮೊತ್ತ ಹೆಚ್ಚಿಸಬೇಕು’ ಎಂದು ಕೋರಿದರು.

‘ಅರ್ಚಕರ ಗೌರವ ನಿಧಿ ಸ್ಥಾಪಿಸಿ, 60 ವರ್ಷ ಮೀರಿದವರಿಗೆ ಗೌರವ ವೇತನ ನೀಡಬೇಕು. ಅರ್ಚಕರಿಗೆ ವಸತಿ ಯೋಜನೆ ರೂಪಿಸಬೇಕು. ‘ಸಿ’ ದರ್ಜೆಯ ದೇವಸ್ಥಾನಗಳನ್ನು ಸಿಎಸ್‌ಆರ್ ನಿಧಿ ಬಳಸಿಕೊಂಡು ಅಭಿವೃದ್ಧಿಗೊಳಿಸಬೇಕು. ದೇಗುಲಗಳ ಒತ್ತುವರಿ ಆಗಿರುವ ಆಸ್ತಿಯನ್ನು ಕಾಲಮಿತಿಯಲ್ಲಿ ತೆರವುಗೊಳಿಸಬೇಕು’ ಎಂದು ಕೋರಿದರು.

‘ಮುಜರಾಯಿ ಇಲಾಖೆಗೆ ಆರ್ಥಿಕ ಶಕ್ತಿ ನೀಡಲು ಸರ್ಕಾರ ರೂಪಿಸಿರುವ ಕರ್ನಾಟಕ ರಾಜ್ಯ ಮುಜರಾಯಿ ಕಾಯ್ದೆ ತಿದ್ದುಪಡಿ ಮಸೂದೆಗೆ ರಾಜ್ಯಪಾಲರು ಒಪ್ಪಿಗೆ ನೀಡಬೇಕು’ ಎಂದು ಕೋರಿದರು.

ನಿಧನ ವಾರ್ತೆ

ಸುಶೀಲಮ್ಮ

ಬೆಂಗಳೂರು: ನಗರದ ಮಲ್ಲೇಶ್ವರದ ನಿವಾಸಿ ಸುಶೀಲಮ್ಮ (88) ಶನಿವಾರ ನಿಧನರಾದರು.



ಮೃತರಿಗೆ ಕೆಎಂಎಫ್‌ನ ಮಾಜಿ ವ್ಯವಸ್ಥಾಪಕ ನಿರ್ದೇಶಕ ಪ್ರೇಮ್‌ನಾಥ್ ಸೇರಿ ಮೂವರು ಪುತ್ರರು ಮತ್ತು ಇಬ್ಬರು ಪುತ್ರಿಯರು ಇದ್ದಾರೆ.

ಭಾನುವಾರ ಬೆಳಿಗ್ಗೆ 10ಕ್ಕೆ ಚಾಮರಾಜಪೇಟೆ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹಿಳೆ ಆತ್ಮಹತ್ಯೆ

ಕುಣಿಗಲ್: ಮೈಕ್ರೊ ಫೈನಾನ್ಸ್ ಕಿರುಕುಳದಿಂದ ಬೇಸತ್ತ ಮಹಿಳೆ ಅಜೀಜ್ ಉನ್ನಿಸಾ (50) ತಾಲ್ಲೂಕಿನ ಕೊತ್ತಿಪುರದಲ್ಲಿ ಶುಕ್ರವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಬಗ್ಗೆ ಐದು ಮೈಕ್ರೊ ಫೈನಾನ್ಸ್ ಕಂಪನಿಗಳ ವಿರುದ್ಧ ಪ್ರಕರಣ ದಾಖಲಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331



ಬಿಡಿಎ ಸೂಚನೆ ಮೇರೆಗೆ ಬೆಟ್ಟಹಲಸೂರು ಗ್ರಾಮ ಪಂಚಾಯಿತಿ ಕ್ರಮ

80 ವಿಲ್ಲಾ ಸ್ವಾಧೀನಾನುಭವ ಪತ್ರ ರದ್ದು

• ಕೆ.ಎಸ್.ಸುನಿಲ್

ಬೆಂಗಳೂರು: ನಿರ್ಮಾಣ ಹಂತದಲ್ಲಿರುವ ಐಷಾರಾಮಿ ವಿಲ್ಲಾಗಳಿಗೆ ಕಾನೂನು ಬಾಹಿರವಾಗಿ ನೀಡಿದ್ದ ಸ್ವಾಧೀನಾನುಭವ ಪತ್ರ (ಒ.ಸಿ.)ವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಸೂಚನೆ ಮೇರೆಗೆ ಬೆಟ್ಟಹಲಸೂರು ಗ್ರಾಮ ಪಂಚಾಯಿತಿ ರದ್ದುಗೊಳಿಸಿದೆ.

ಯಲಹಂಕ ತಾಲ್ಲೂಕಿನ ಜಾಲ ಹೋಬಳಿ ವ್ಯಾಪ್ತಿಯಲ್ಲಿ ನಿರ್ಮಾಣ ಹಂತದಲ್ಲಿರುವ 80 ವಿಲ್ಲಾಗಳಿಗೆ 2024ರ ಜನವರಿ 21ರಂದು ಬೆಟ್ಟಹಲಸೂರು ಗ್ರಾಮ ಪಂಚಾಯಿತಿ ಒ.ಸಿ. ನೀಡಿತ್ತು. ನಿಯಮದ ಪ್ರಕಾರ ಬಿಡಿಎ ಸ್ಥಳ ಪರಿಶೀಲನೆ ಮಾಡದೇ ಯಾವುದೇ ವಿಲ್ಲಾ ಅಥವಾ ಅಪಾರ್ಟ್‌ಮೆಂಟ್ ಸಮುಚ್ಚಯಗಳಿಗೆ ಒ.ಸಿ. ಕೊಡಲು ಅವಕಾಶವಿಲ್ಲ.

ಟೋಟಲ್ ಎನ್ವಿರಾನ್ಮೆಂಟ್ ಬಿಲ್ಡಿಂಗ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ (ಟಿಎ-ಬಿಎಸ್‌ಪಿಎಲ್) 240 ವಿಲ್ಲಾಗಳನ್ನು ನಿರ್ಮಿಸುತ್ತಿದೆ. 2019ರ ಜೂನ್ 30ರೊಳಗೆ ಖರೀದಿದಾರರಿಗೆ ಹಸ್ತಾಂತರಿಸಬೇಕಿತ್ತು. ವಿಲ್ಲಾ ಪೂರ್ಣಗೊಳಿಸಲು ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ರೇರಾ)ದಿಂದ ಸಂಸ್ಥೆ ಎರಡು ಬಾರಿ ಅವಧಿ ವಿಸ್ತರಣೆ ಆಗಿದ್ದರೂ, ಪೂರ್ಣಗೊಳಿಸಿರಲಿಲ್ಲ.

ಬಿಡಿಎಯಿಂದ ಒ.ಸಿ. ಪಡೆಯಲು ಸಂಸ್ಥೆಯು ಎರಡು ಬಾರಿ ಪ್ರಯತ್ನಿಸಿ, ವಿಫಲವಾಗಿತ್ತು. ಕೊನೆಗೆ ಬೆಟ್ಟಹಲಸೂರು ಗ್ರಾಮ ಪಂಚಾಯಿತಿಯಿಂದ ಪಡೆಯಲು ಯಶಸ್ವಿಯಾಯಿತು.

‘ಬಿಲ್ಡರ್‌ನಿಂದ ವಿಲ್ಲಾಗಳನ್ನು ಸುಪರ್ದಿಗೆ ಪಡೆಯಲು ಪ್ರಯತ್ನಿಸಿದರೂ ಫಲ ನೀಡಲಿಲ್ಲ. ಈ ಬಗ್ಗೆ ರೇರಾಗೆ ದೂರು ನೀಡಲಾಯಿತು. ಆದರೆ, ಬಿಲ್ಡರ್ ಬೆಟ್ಟಹಲಸೂರು ಗ್ರಾಮ ಪಂಚಾಯಿತಿಯಿಂದ ನಕಲಿ ಸ್ವಾಧೀನಾನುಭವ ಪತ್ರವನ್ನು ಪಡೆದು-ಕೊಂಡಿರುವುದು ಗಮನಕ್ಕೆ ಬಂತು. ಈ ಬಗ್ಗೆ ಬಿಡಿಎಗೆ ದೂರು ನೀಡಲಾಯಿತು’ ಎಂದು ವಿಲ್ಲಾ ಖರೀದಿದಾರರೊಬ್ಬರು ತಿಳಿಸಿದರು.

ದೂರಿನ ಆಧಾರದ ಮೇರೆಗೆ ಬೆಟ್ಟಹಲಸೂರು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಜನವರಿ 20ರಂದು ಬಿಡಿಎ ನೋಟಿಸ್ ಜಾರಿ ಮಾಡಿತು.

‘ಟಿಎಬಿಎಸ್‌ಪಿಎಲ್ ಸಂಸ್ಥೆಯು ಬೆಟ್ಟಹಲಸೂರು ಗ್ರಾಮದ ಸರ್ವೆ ನಂ. 226/2, 227/1, 227/2, 228/1,2,3, 229, 230/1,2,3,4, 5,6, 231/2, 239/2ಬಿ, 240/1, 240/2, 241, 242/1, 242/1, 245/1, 245/2, 246 (ಪಿ), 353, 354/1ಎ ಮತ್ತು 355(ಪಿ)ರಲ್ಲಿ ನಿರ್ಮಿಸುತ್ತಿರುವ ವಸತಿ ಕಟ್ಟಡಕ್ಕೆ ಕಾನೂನುಬಾಹಿರವಾಗಿ ಸ್ವಾಧೀನಾನುಭವ ಪತ್ರ ನೀಡಲಾಗಿದೆ ಎಂಬ ದೂರು ಬಂದಿದೆ. ಈ ಸರ್ವೆ ವ್ಯಾಪ್ತಿ-ಯಲ್ಲಿರುವ ಕಟ್ಟಡಗಳಿಗೆ ಅಭಿವೃದ್ಧಿ ನಕ್ಷೆ, ನಕ್ಷೆ ಮಂಜೂರಾತಿ ಪತ್ರ, ಪ್ರಾರಂಭಿಕ ಪ್ರಮಾಣಪತ್ರ ಹಾಗೂ ಸ್ವಾಧೀನಾನುಭವ ಪತ್ರಗಳನ್ನು ಬಿಡಿಎ ನೀಡಲಿದೆ. ಹಾಗಾಗಿ ಟಿಎಬಿಎಸ್‌ಪಿಎಲ್ ಸಂಸ್ಥೆಯ ಕಟ್ಟಡಗಳಿಗೆ ನೀಡಿರುವ ಒ.ಸಿಗಳನ್ನು ಹಿಂಪಡೆದು, ಪ್ರತಿಯನ್ನು ಕಚೇರಿಗೆ ಕಳುಹಿಸಬೇಕು’ ಎಂದು ಬಿಡಿಎ ಎಂಜಿನಿಯರ್ ನೋಟಿಸ್‌ನಲ್ಲಿ ತಿಳಿಸಿದ್ದಾರೆ. ನೋಟಿಸ್‌ಗೆ ಫೆ. 14ರಂದು ಪ್ರತಿಕ್ರಿಯಿಸಿರುವ ಬೆಟ್ಟಹಲಸೂರು ಗ್ರಾಮ ಪಂಚಾಯಿತಿ, ‘ಕಟ್ಟಡಗಳಿಗೆ ನೀಡಿದ್ದ ಒ.ಸಿಯನ್ನು ಹಿಂಪಡೆಯಲಾಗಿದೆ. ಇದಕ್ಕೆ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆದುಕೊಳ್ಳಲಾಗಿದೆ’ ಎಂದು ತಿಳಿಸಿದೆ.

ಬಿಡಿಎ ಹಾಗೂ ಬೆಟ್ಟಹಲಸೂರು ಗ್ರಾಮ ಪಂಚಾಯಿತಿ ನಡೆಸಿರುವ ಪತ್ರ ವ್ಯವಹಾರದ ಪ್ರತಿಗಳು ‘ಪ್ರಜಾವಾಣಿ’ಗೆ ಲಭ್ಯವಾಗಿವೆ. ‘ಪಂಚಾಯಿತಿಯು ವಿಲ್ಲಾಗಳ ಒ.ಸಿ. ರದ್ದು ಮಾಡಿರುವ ವಿಚಾರ ಗಮನಕ್ಕೆ ಬಂದಿಲ್ಲ’ ಎಂದು ಟಿಎಬಿಎಸ್‌ಪಿಎಲ್ ಸಂಸ್ಥೆ ತಿಳಿಸಿದೆ.

ಒ.ಸಿ. ನೀಡುವ ಅಧಿಕಾರ ಇಲ್ಲ: ಪಿಡಿಒ

‘ಬಿಡಿಎ ನೋಟಿಸ್‌ಗೆ ಫೆಬ್ರುವರಿ 14ರಂದು ಉತ್ತರ ಕಳುಹಿಸಲಾಗಿದೆ. ಹಿಂದಿನ ಪಿಡಿಒ ಅವರು ಕಟ್ಟಡಗಳಿಗೆ ಒ.ಸಿ. ನೀಡಿದ್ದರು. ಬಿಡಿಎ ಅನುಮತಿ ಇಲ್ಲದೆ ಒ.ಸಿ. ನೀಡುವ ಅಧಿಕಾರ ಪಂಚಾಯಿತಿಗೆ ಇಲ್ಲ. ಹಾಗಾಗಿ 80 ವಿಲ್ಲಾಗಳ ಒಸಿಯನ್ನು ರದ್ದುಗೊಳಿಸಲಾಗಿದೆ. ಟಿಎಬಿಎಸ್‌ಪಿಎಲ್ ಸಂಸ್ಥೆಯು ಒ.ಸಿ. ಪಡೆಯಬೇಕಾದರೆ ಬಿಡಿಎ ಸಂಪರ್ಕಿಸಬೇಕು’ ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಲೋಕನಾಥ್ ಶ್ರೀನಿವಾಸ್ ‘ಪ್ರಜಾವಾಣಿ’ಗೆ ತಿಳಿಸಿದರು.

ರಾತ್ರಿ ಗಸ್ತು: ಪಿಎಸ್‌ಐ ನಿಯೋಜನೆ

ಬೆಂಗಳೂರು: ನಗರದಲ್ಲಿ ರಾತ್ರಿ ವೇಳೆ ನಡೆಯುತ್ತಿರುವ ಅಪರಾಧ ಕೃತ್ಯಗಳನ್ನು ನಿಯಂತ್ರಿಸಲು ಪೊಲೀಸ್ ಇಲಾಖೆಯು ರಾತ್ರಿ ಗಸ್ತು ಜವಾಬ್ದಾರಿಯಲ್ಲಿ ಬದಲಾವಣೆ ಮಾಡಿದೆ.

ಕೆಲ ತಿಂಗಳಿಂದ ರಾತ್ರಿ ವೇಳೆ ಕಳ್ಳತನ, ಹಲ್ಲೆ, ಸುಲಿಗೆ ಸೇರಿದಂತೆ ವಿವಿಧ ಅಪರಾಧ ಕೃತ್ಯಗಳು ವರದಿ ಆಗುತ್ತಿದ್ದವು. ಸಾರ್ವಜನಿಕರಿಂದ ದೂರು ಬಂದ ಬೆನ್ನಲ್ಲೇ ರಾತ್ರಿ ಗಸ್ತಿನಲ್ಲಿ ಬದಲಾವಣೆ ಮಾಡಿದೆ.

ರಾತ್ರಿ ಗಸ್ತಿನ ಉಸ್ತುವಾರಿಯಾಗಿ ಆಯಾ ಪೊಲೀಸ್ ಠಾಣೆಗಳಲ್ಲಿ ಎಎಸ್‌ಐ ಅವರನ್ನು ನೇಮಿಸಲಾಗುತ್ತಿತ್ತು. ಇನ್ನು ಪಿಎಸ್‌ಐಗಳಿಗೆ ಆ ಹೊಣೆ ನೀಡಲು ಪೊಲೀಸ್ ಇಲಾಖೆ ಮುಂದಾಗಿದೆ.

ಈ ಬಗ್ಗೆ ಎಸಿಪಿ, ಇನ್‌ಸ್ಪೆಕ್ಟರ್‌ಗಳಿಗೆ ನಗರ ಪಶ್ಚಿಮ ವಿಭಾಗದ ಹೆಚ್ಚುವರಿ ಪೊಲೀಸ್ ಕಮಿಷನರ್ ವಿಕಾಸ್ ಕುಮಾರ್ ಸೂಚಿಸಿದ್ದಾರೆ.

ಗಸ್ತು ಬಲಪಡಿಸಲು ಪಿಎಸ್‌ಐಗಳನ್ನು ಉಸ್ತುವಾರಿ ಅಧಿಕಾರಿಯಾಗಿ ನೇಮಿಸಬೇಕು. ಠಾಣೆಯಲ್ಲಿ ಕಡಿಮೆ ಪಿಎಸ್‌ಐಗಳಿದ್ದರೆ, ಹೆಚ್ಚು ಪಿಎಸ್‌ಐಗಳು ಕೆಲಸ ಮಾಡುತ್ತಿರುವ ಠಾಣೆಗಳಿಂದ ನೇಮಿಸಬೇಕು ಎಂದು ಸೂಚಿಸಿದ್ದಾರೆ.



ಸೈಲೆನ್ಸರ್‌ನ ಮಫ್ಲರ್ ತೆಗೆದು ಬೆಂಕಿ ಉಗುಳುವಂತೆ ಮಾರ್ಪಡಿಸಿದ್ದ ಕಾರನ್ನು ಚರ್ಚ್‌ಸ್ಟ್ರೀಟ್‌ನಲ್ಲಿ ನಿಲ್ಲಿಸಿಕೊಂಡು, ಕರ್ಕಶ ಶಬ್ದ ಮೊಳಗಿಸುತ್ತಿದ್ದುದು ಶನಿವಾರ ಸಂಜೆ ಕಂಡುಬಂತು. ಪಾದಚಾರಿಗಳು, ಅಂಗಡಿ– ಕಚೇರಿಗಳ ಸಿಬ್ಬಂದಿ ಈ ಶಬ್ದಕ್ಕೆ ಬೆಚ್ಚಿಬಿದ್ದರು. ಶನಿವಾರ ಮತ್ತು ಭಾನುವಾರ ಈ ಪ್ರದೇಶದಲ್ಲಿ, ಮಾರ್ಪಾಡು ಮಾಡಿದ ಇಂತಹ ಕಾರುಗಳ ಹಾವಳಿ ಸಾಮಾನ್ಯ ಎಂಬಂತಾಗಿದೆ. ಕಾರು ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ

ಅತ್ಯಾಚಾರ ಆರೋಪ: ಆರೋಪಿ ವಶಕ್ಕೆ

ಬೆಂಗಳೂರು: ಯುವತಿ ಮೇಲೆ ಅತ್ಯಾಚಾರ ನಡೆಸಿದ ಆರೋಪದ ಅಡಿ ಯುವಕನ ವಿರುದ್ಧ ಮೈಕೋ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಆರೋಪಿ ಪ್ರತಿಷ್ಠಿತ ಕಾಲೇಜೊಂದರ ವಿದ್ಯಾರ್ಥಿ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಸಂತ್ರಸ್ತೆ ಮತ್ತು ಆರೋಪಿ ಸ್ನೇಹಿತರು. ಮದುವೆ ಆಗುವುದಾಗಿ ನಂಬಿಸಿ ಆರೋಪಿ ಅತ್ಯಾಚಾರ ಎಸಗಿದ್ದಾನೆ ಎಂದು ದೂರು ನೀಡಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಕಾರಿನ ಚಕ್ರ ಕಳವು: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾತ್ರಿ ವೇಳೆ ರಸ್ತೆಬದಿ ನಿಲುಗಡೆ ಮಾಡಿರುತ್ತಿದ್ದ ಕಾರಿನ ಚಕ್ರಗಳನ್ನು ಬಿಚ್ಚಿ ಕಳವು ಮಾಡುತ್ತಿದ್ದ ಮೂವರು ಆರೋಪಿಗಳನ್ನು ಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪ್ರೇಮ್‌ಕುಮಾರ್, ಪ್ರೀತಂ, ಸೈಯದ್ ಸಲ್ಮಾನ್ ಬಂಧಿತರು. ಇವರಿಂದ ಮ್ಯಾಗ್‌ವ್ಹೀಲ್ ಸಹಿತ 18 ಟೈಯರ್ ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹3 ಲಕ್ಷ ಎಂದು ಅಂದಾಜಿಸಲಾಗಿದೆ.

ಬೈರಸಂದ್ರದ ಒಂದನೇ ಬ್ಲಾಕ್‌ನ ನಿವಾಸಿಯೊಬ್ಬರು ನೀಡಿದ್ದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

‘ದೂರುದಾರರು ಫೆಬ್ರುವರಿ 12ರಂದು ಜಯನಗರ ಬಿಡಿಎ ಕಾಂಪ್ಲೆಕ್ಸ್ ಬಳಿ ಕಾರು ನಿಲುಗಡೆ ಮಾಡಿದ್ದರು. ಅಂದೇ ಸಂಜೆ ನೋಡಿದ್ದಾಗ ನಾಲ್ಕೂ ಚಕ್ರಗಳು ಕಳುವಾಗಿದ್ದುದು ಗೊತ್ತಾಗಿ ದೂರು ನೀಡಿದ್ದರು’ ಎಂದು ಪೊಲೀಸರು ಹೇಳಿದರು.



ಪ್ರೀತಂ



ಪ್ರೇಮ್ ಕುಮಾರ್



ಸೈಯದ್

‘ಕೊತ್ತನೂರಿನ ಟ್ಯಾಂಕರ್ ಬಳಿ ಆರೋಪಿಗಳನ್ನು ವಶಕ್ಕೆ ಪಡೆಯಲಾಯಿತು. ಕಳವು ಮಾಡಿದ್ದ ಟೈಯರ್‌ಗಳನ್ನು ಜೆ.ಸಿ. ರಸ್ತೆ, ಕೊತ್ತನೂರು, ಬನಶಂಕರಿ ಭಾಗದ ಅಂಗಡಿಗಳಿಗೆ ಮಾರಿದ್ದರು. ಅವುಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಮುಂಬೈ ರೇಸ್

‘ಪ್ರೊಕೊಫಿವ್’ ಗೆಲ್ಲುವ ನಿರೀಕ್ಷೆ

ಪೂನಾವಾಲ ಬ್ರೀಡರ್ಸ್ ಮಲ್ಟಿ ಮಿಲಿಯನ್ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪ್ರೊಕೊಫಿವ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಸಂಜೆ 4:30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಬಷೀರ್ 1, ಷಗಾಲ್ 3
2ನೇ ರೇಸ್: ಬ್ಲ್ಯಾಕ್ ಥಂಡರ್ 4, ಗಾರ್ಡನ್ 2, ಅಲೆಕ್ಸಾಂಡ್ರಸ್ 1
3ನೇ ರೇಸ್: ಗಿಯೊಕೊಮೊ 5, ಹೆಜಲ್ 11, ಈಸ್ಟರ್ನ್ ಮೊನಾರ್ಕ್ 3
4ನೇ ರೇಸ್: ಪ್ರೊಕೊಫಿವ್ 7, ಮಿರಾಕಲ್ ಸ್ಟಾರ್ 15, ಬಿಗ್ ಬೇ 1
5ನೇ ರೇಸ್: ಮಿಸ್ಟಿ 4, ಟೈಮ್‌ಲೆಸ್ ವಿಷನ್ 1, ಫಾಂಟಾನ 2
6ನೇ ರೇಸ್: ಮೇಸಾರ 7, ಎಸ್ಕೇಪ್ ವೆಲಾಸಿಟಿ 2, ಮೊಜೊ 6
7ನೇ ರೇಸ್: ಸ್ವಾರ್ಮ್ 1, ಎಕ್ಲಾ ಚೊಲೊ 2, ರೆಮಿ ರೆಡ್ 5

ಉತ್ತಮ ಬೆಟ್: ಸ್ವಾರ್ಮ್

ಜಾಕ್‌ಪಾಟ್	ಟ್ರಿಬಲ್
3,4,5,6,7	4,5,6

ನೆರವಿನ ನೆಪ: ವೃದ್ಧರಿಗೆ ವಂಚನೆ

ಪ್ರಜಾವಾಣಿ ವಾರ್ತೆ



ನಯಾಜ್



ಸುಧಾಂಶು



ರಜೀಬ್

ಬೆಂಗಳೂರು: ಎಟಿಎಂಗಳಲ್ಲಿ ಸಹಾಯ ಕೇಳುತ್ತಿದ್ದ ವೃದ್ಧರನ್ನು ಗುರಿಯಾಗಿಸಿ ವಂಚಿಸುತ್ತಿದ್ದ ಮೂವರು ಆರೋಪಿಗಳನ್ನು ಪುಲಿಕೇಶಿ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಉತ್ತರ ಭಾರತದ ನಯಾಜ್, ಸುಧಾಂಶು ಹಾಗೂ ರಜೀಬ್ ಬಂಧಿತರು. ಇವರನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಪರಾಧ ಸುದ್ದಿ

‘ಜನಸಂದಣಿ ಕಡಿಮೆ ಇರುವ ಅಥವಾ ನಿರ್ಜನ ಪ್ರದೇಶಗಳಲ್ಲಿರುವ ಎಟಿಎಂಗಳ ಬಳಿ ಆರೋಪಿಗಳು ಇರುತ್ತಿದ್ದರು. ನೆರವು ಕೇಳುವ ವೃದ್ಧರಿಂದ ಡೆಬಿಟ್ ಕಾರ್ಡ್ ಹಾಗೂ ಪಿನ್ ಸಂಖ್ಯೆ ಪಡೆದುಕೊ-ಳ್ಳುತ್ತಿದ್ದರು. ತಾವು ಮೊದಲೇ ಸಿದ್ಧ-ವಿಟ್ಟುಕೊಂಡ ನಕಲಿ ಡೆಬಿಟ್ ಕಾರ್ಡ್ ಅನ್ನು ಎಟಿಎಂ ಯಂತ್ರದಲ್ಲಿ ಬಳಸುತ್ತಿದ್ದರು. ಹಣ ಬರದಿದ್ದಾಗ ತಾಂತ್ರಿಕ ಸಮಸ್ಯೆಯ ನೆಪ ಹೇಳಿ ಕಳುಹಿಸುತ್ತಿದ್ದರು’ ಎಂದರು.

‘ಬಳಿಕ ಅಸಲಿ ಡೆಬಿಟ್ ಕಾರ್ಡ್ ಬಳಸಿ ಹಣ ಪಡೆದು ಹೋಗುತ್ತಿದ್ದರು. ವಂಚನೆಯ ಹಣದಲ್ಲಿ ಸುಧಾಂಶು ಮತ್ತು ರಜೀಬ್ ವಿಲಾಸಿ ಜೀವನ ನಡೆಸುತ್ತಿದ್ದರು’ ಎಂದರು.

ಸಂಕ್ಷಿಪ್ತ ಸುದ್ದಿ

ಪತ್ನಿಯೊಂದಿಗೆ ಸಲುಗೆ: ಸ್ನೇಹಿತನ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿಯ ಜತೆಗೆ ಸಲುಗೆ ಹೊಂದಿದ್ದ ಎಂಬ ಅನುಮಾನ ಮೇಲೆ ಸ್ನೇಹಿತನನ್ನು ವ್ಯಕ್ತಿಯೊಬ್ಬ ಕೊಲೆ ಮಾಡಿದ ಘಟನೆ ವರ್ತೂರು ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಶಿರಾದ ಕಿಶೋರ್ ಕುಮಾರ್ (34) ಕೊಲೆಯಾದ ಚಾಲಕ. ಕೃತ್ಯ ಎಸಗಿದ ಆರೋಪಿ ಸತೀಶ್ ರೆಡ್ಡಿ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಕೆಜಿಎಫ್‌ನ ಸತೀಶ್ ರೆಡ್ಡಿ, ಹೆಬ್ಬಗೋಡಿ ಮೂಲದ ಮಹಿಳೆಯನ್ನು ಮದುವೆಯಾಗಿದ್ದ. ದಂಪತಿಗೆ ಇಬ್ಬರು ಮಕ್ಕಳು ಇದ್ದಾರೆ. ಮಾರತ್ತಹಳ್ಳಿಯಲ್ಲಿ ವಾಸವಿದ್ದರು. ಆರೋಪಿ ಎಲೆಕ್ಟ್ರಿಷಿಯನ್ ಆಗಿ ಕೆಲಸ ಮಾಡುತ್ತಿದ್ದ. ಕಿಶೋರ್ ಕುಮಾರ್ ಕ್ಯಾಬ್ ಚಾಲಕನಾಗಿದ್ದ.

‘ಕಿಶೋರ್ ಮತ್ತು ಸತೀಶ್ ಸ್ನೇಹಿತ-ರಾಗಿದ್ದರು. ಇತ್ತ ಕೌಟುಂಬಿಕ ವಿಚಾರಕ್ಕೆ ಸತೀಶ್ ರೆಡ್ಡಿ, ಪತ್ನಿ, ಮಕ್ಕಳಿಂದ ದೂರವಾಗಿದ್ದ. ಆಗ ಕಿಶೋರ್‌ಗೆ ಸತೀಶ್ ಪತ್ನಿ ಜೊತೆ ಸ್ನೇಹ ಬೆಳೆದಿತ್ತು. ಅನುಮಾನಗೊಂಡಿದ್ದ ಸತೀಶ್, ಚಾಕುವಿನಿಂದ ಕಿಶೋರ್ ಎದೆ ಹಾಗೂ ದೇಹದ ಇತರೆ ಭಾಗಗಳಿಗೆ ಇರಿದು ಕೊಲೆ ಮಾಡಿದ್ದ’ ಎಂದು ಪೊಲೀಸರು ಹೇಳಿದರು.

ಅರ್ಚಕರಿಗೆ ₹1.60 ಲಕ್ಷ ವಂಚನೆ

ಬೆಂಗಳೂರು: ಫೇಸ್‌ಬುಕ್ ಜಾಹೀರಾತು ನಂಬಿ ಮಹಾಕುಂಭಮೇಳಕ್ಕೆ ತೆರಳಲು ಟಿಕೆಟ್ ಬುಕ್ ಮಾಡಿದ್ದ ಅರ್ಚಕರೊಬ್ಬರು ₹ 1.60 ಲಕ್ಷ ಕಳೆದುಕೊಂಡಿದ್ದಾರೆ.

ವೈಯಾಲಿಕಾವಲ್ ನಿವಾಸಿಯಾದ 42 ವರ್ಷ ವಯಸ್ಸಿನ ಅರ್ಚಕರ ದೂರು ನೀಡಿದ್ದು, ಕೇಂದ್ರ ವಿಭಾಗದ ಸಿಇಎನ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಕುಂಭಮೇಳದಲ್ಲಿ ಭಾಗಿಯಾಗಲು ಫೇಸ್‌ಬುಕ್‌ನಲ್ಲಿ ಕಾರ್ತಿಕೇಯನ್ ಟೂರ್ಸ್ ಆ್ಯಂಡ್ ಟ್ರಾವೆಲ್ಸ್ ಹೆಸರಿನ ಜಾಹೀರಾತು ಗಮನಿಸಿ ಸಂಪರ್ಕಿಸಲಾಗಿತ್ತು. ಮೊಬೈಲ್‌ನಲ್ಲಿ ಮಾತನಾಡಿದ್ದ ವ್ಯಕ್ತಿ, ಟಿಕೆಟ್ ಬುಕ್ ಮಾಡುವುದಾಗಿ ಹಂತ ಹಂತವಾಗಿ ₹1.60 ಲಕ್ಷವನ್ನು ಆನ್‌ಲೈನ್ ಮೂಲಕ ಸ್ವೀಕರಿಸಿದ್ದ. ಹಣ ಕೈ ಸೇರಿದ ಬಳಿಕ ಟಿಕೆಟ್ ಬುಕ್ ಮಾಡಿಕೊಡದೇ ವಂಚಿಸಿದ್ದಾನೆ’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ಬೇಕರಿಗಳಿಗೆ ಸಿಸಿಟಿವಿ ಕಡ್ಡಾಯ’

ಬೆಂಗಳೂರು: ‘ನಗರದ ಎಲ್ಲಾ ಬೇಕರಿಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕು’ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

ಜ್ಞಾನಭಾರತಿ ಆವರಣದ ಎಚ್.ಎನ್.ಸಭಾಂಗಣದಲ್ಲಿ ಶನಿವಾರ ನಡೆದ ತಿಂಗಳ ಜನ ಸಂಪರ್ಕ ಸಭೆಯಲ್ಲಿ ಅವರು ಮಾತನಾಡಿದರು.

‘ಬೇಕರಿ ಮುಂದೆ ಯುವಕರು ಗುಂಪುಗೂಡಿ ಗಲಾಟೆ ಮಾಡುವ ಘಟನೆಗಳು ನಡೆದಿವೆ. ಸ್ಥಳೀಯ ಠಾಣೆಯ ಇನ್‌ಸ್ಪೆಕ್ಟರ್ ಗಮನಿಸಬೇಕು. ಮಾಲೀಕರು ಸಿ.ಸಿ. ಟಿ.ವಿ ಕ್ಯಾಮೆರಾ ಅಳವಡಿಸದಿದ್ದರೆ ಬೇಕರಿಗಳನ್ನು ಮುಚ್ಚಿಸಲಾಗುವುದು’ ಎಂದು ಎಚ್ಚರಿಸಿದರು.

ಬಾಡಿಗೆದಾರರಿಗೆ ವಂಚನೆ: ಬಂಧನ

ಬೆಂಗಳೂರು: ಮನೆ, ಫ್ಲ್ಯಾಟ್‌ಗಳನ್ನು ಭೋಗ್ಯ, ಬಾಡಿಗೆಗೆ ಕೊಡುವುದಾಗಿ ಹೇಳಿ ವಂಚಿಸುತ್ತಿದ್ದ ಆರೋಪಿಯನ್ನು ಸಿಸಿಬಿ ಆರ್ಥಿಕ ಅಪರಾಧ ದಳದ ಪೊಲೀಸರು ಬಂಧಿಸಿದ್ದಾರೆ.

ಖಲೀಲ್ ಷರೀಫ್ ಬಂಧಿತ ಆರೋಪಿ. ಮತ್ತೊಬ್ಬ ಆರೋಪಿ ಸೈಯದ್ ಅಹಮದ್ ಹುಸೇನ್ ತಲೆಮರೆಸಿಕೊಂಡಿದ್ದಾನೆ ಎಂದು ಪೊಲೀಸರು ಹೇಳಿದರು.

ಇಬ್ಬರ ವಿರುದ್ಧ ವಿರುದ್ಧ ರಾಜಾನುಕುಂಟೆ, ದೇವನಹಳ್ಳಿ, ರಾಮಮೂರ್ತಿನಗರ, ಸಿಟಿ ಮಾರುಕಟ್ಟೆ, ಸುದ್ದಗುಂಟೆಪಾಳ್ಯ ಠಾಣೆಗಳಲ್ಲಿ ಎಫ್‌ಐಆರ್ ದಾಖಲಾಗಿತ್ತು. ಇವುಗಳ ತನಿಖೆಯನ್ನು ಸಿಸಿಬಿಗೆ ವರ್ಗಾವಣೆ ಮಾಡಲಾಗಿತ್ತು. ಆರೋಪಿಗಳು ಟಾಂಜನೈಟ್ ರಿಯಾಲಿಟಿ ಇಂಡಿಯಾ ಕಂಪನಿ ಸ್ಥಾಪಿಸಿಕೊಂಡು, ಅದರ ಹೆಸರಿನಲ್ಲಿ ವಂಚನೆ ಮಾಡುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ.

‘ಖಾಲಿ ಮನೆ, ಫ್ಲ್ಯಾಟ್‌ಗಳ ವಿವರ ಪಡೆಯುತ್ತಿದ್ದ ಆರೋಪಿಗಳು, ಜಾಲತಾಣ ಸೇರಿ ವಿವಿಧೆಡೆ ಜಾಹೀರಾತು ನೀಡುತ್ತಿದ್ದರು. ಸಂಪರ್ಕಿಸುವವರಿಗೆ ಮನೆ ಅಥವಾ ಫ್ಲ್ಯಾಟ್ ಒಪ್ಪಿಗೆ ಆದಲ್ಲಿ ಕರಾರು ಪತ್ರ ಮಾಡಿಕೊಂಡು ಹಣ ಪಡೆಯುತ್ತಿದ್ದರು. ಮಾಲೀಕರ ಬಳಿ ತಾವೇ ಬಾಡಿಗೆ ಪಾವತಿಸುವುದಾಗಿ ಒಪ್ಪಂದ ಮಾಡಿಕೊಳ್ಳುತ್ತಿದ್ದರು. ಆರಂಭದ ಎರಡು ತಿಂಗಳು ಆರೋಪಿಗಳು, ಬಾಡಿಗೆ ಪಾವತಿಸುತ್ತಿದ್ದರು. ನಂತರ ಪಾವತಿಸುತ್ತಿರಲಿಲ್ಲ. ಮಾಲೀಕರು ಬಾಡಿಗೆದಾರರನ್ನು ಸಂಪರ್ಕಿಸುತ್ತಿದ್ದರು. ‘ನಾವು ಬಾಡಿಗೆದಾರರು ಅಲ್ಲ. ಭೋಗ್ಯದ ಹಣವನ್ನು ಖಲೀಲ್ ಷರೀಫ್, ಸೈಯದ್ ಅಹಮದ್ ಹುಸೇನ್‌ಗೆ ನೀಡಿದ್ದೇವೆ ಎಂದು ತಿಳಿಸಿದಾಗ ವಂಚನೆ ಆಗಿರುವುದು ಗೊತ್ತಾಗಿತ್ತು’ ಎಂದು ಮೂಲಗಳು ತಿಳಿಸಿವೆ.

ಸತ್ತವರ ಹೆಸರಿನಲ್ಲಿ ₹ 2.89 ಕೋಟಿ ಪಾವತಿ ● ಸಾಮಾಜಿಕ ಲೆಕ್ಕ ಪರಿಶೀಲನೆಯಲ್ಲಿ ಪತ್ತೆ ● ದೂರು ದಾಖಲು

ನರೇಗಾ: ₹ 669.92 ಕೋಟಿ ದುರ್ಬಳಕೆ

● ಸಂತೋಷ ಜಿಗಳಿಕೊಪ್ಪ

ಹಾವೇರಿ: ಕೇಂದ್ರ ಸರ್ಕಾರದ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ (ಮನರೇಗಾ) ರಾಜ್ಯದಲ್ಲಿ ಒಂದೇ ವರ್ಷದಲ್ಲಿ ₹669.92 ಕೋಟಿ ದುರ್ಬಳಕೆ ಆಗಿರುವುದು ಸಾಮಾಜಿಕ ಲೆಕ್ಕ ಪರಿಶೋಧನಾ ವರದಿಯಿಂದ ಪತ್ತೆಯಾಗಿದೆ.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮೃತಪಟ್ಟವರ ಹೆಸರಿನಲ್ಲಿ ₹2.89 ಕೋಟಿ ಕೂಲಿ ಪಾವತಿ ಮಾಡಲಾಗಿದ್ದು, ಇಂಥ 6,050 ಪ್ರಕರಣಗಳ ವಿವರವನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮನರೇಗಾ ಯೋಜನೆಯಡಿ ಕೈಗೊಂಡ ಕಾಮಗಾರಿಗಳ ಲೆಕ್ಕ ಪರಿಶೋಧನೆಗಾಗಿ ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಸಾಮಾಜಿಕ ಲೆಕ್ಕ ಪರಿಶೋಧಕರು ಕೆಲಸ ಮಾಡುತ್ತಿದ್ದಾರೆ. ಪ್ರತಿ ತಿಂಗಳು ಸಭೆ ನಡೆಸಿ, ಲೆಕ್ಕಗಳ ತಪಾಸಣೆ ನಡೆಸುತ್ತಿದ್ದಾರೆ.



ರಾಜ್ಯದ 31 ಜಿಲ್ಲೆಗಳ ಗ್ರಾಮ ಪಂಚಾಯಿತಿ ಹಾಗೂ ಅನುಷ್ಠಾನ ಇಲಾಖೆಗಳಲ್ಲಿ 2022–23ನೇ ಸಾಲಿನ ಲೆಕ್ಕ ಪರಿಶೀಲನೆ ನಡೆಸಿದ್ದ ಪರಿಶೋಧಕರು, ₹ 669.92 ಕೋಟಿ ದುರುಪಯೋಗ ಆಗಿರುವುದನ್ನು ದಾಖಲೆ ಸಮೇತ ಪತ್ತೆ ಮಾಡಿದ್ದಾರೆ.

'ಕಾಮಗಾರಿ ಮಾಡದೇ ಕೂಲಿ ಹಣ ಪಾವತಿ ಮಾಡಲಾಗಿದೆ. ಯೋಜನೆಗೆ ಮೀಸಲಿಟ್ಟ ಹಣವನ್ನು ಮೀರಿ ಹೆಚ್ಚುವರಿ ಹಣ ಪಾವತಿಸಲಾಗಿದೆ. ಬೇರೆ ಯೋಜನೆಗಳಿಗೆ ನರೇಗಾ ಹಣ ನೀಡಲಾಗಿದೆ. ಸತ್ತವರ ಹೆಸರಿನಲ್ಲೂ ಕೂಲಿ ನೀಡಲಾಗಿದೆ. ವಿವಿಧ ದೋಷಗಳು ಕಂಡುಬಂದರೂ ಕೂಲಿ ಪಾವತಿಸಿ ಹಣ ದುರುಪಯೋಗ ಮಾಡಿಕೊಳ್ಳಲಾಗಿದೆ. ಜೊತೆಗೆ, ಹಲವು ಕಾಮಗಾರಿಗಳಿಗೆ ಕಡದವನ್ನು ಒದಗಿಸದೇ ಲೋಪ ಎಸಗಲಾಗಿದೆ. ನಾಮಫಲಕ ಅಳವಡಿಸದೇ ತೆರಿಗೆ ಕಡಿತಗೊಳಿಸದೇ ಬಾಬ್ತು ಜಮೆ ಮಾಡಲಾಗಿದೆ' ಎಂದು ವರದಿ ಉಲ್ಲೇಖಿಸಿದೆ.

ನಿರುದ್ಯೋಗ ಸಮಸ್ಯೆ ಹೋಗಲಾಡಿಸಲು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ದುಡಿಯುವ ಕಾರ್ಮಿಕರಿಗೆ ಕೆಲಸ ಒದಗಿಸುವ ಉದ್ದೇಶದಿಂದ 2013–14ನೇ ಸಾಲಿನಿಂದ ಮನರೇಗಾ ಯೋಜನೆ ಜಾರಿಗೊಳಿಸಲಾಗಿದೆ. ಯೋಜನೆಯಡಿ ಹಲವು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಆದರೆ, ಕಾಮಗಾರಿಗೆ ತಕ್ಕಂತೆ ಲೆಕ್ಕದ ದಾಖಲೆಗಳನ್ನು ಒದಗಿಸುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ. ಕಾಮಗಾರಿಗೆ ಸಂಬಂಧಪಟ್ಟ ದಾಖಲೆಗಳು ಲಭ್ಯವಿಲ್ಲದಿದ್ದರಿಂದ, ಹಣ ದುರುಪಯೋಗ ಆಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದಾಗಿ ವರದಿಯಲ್ಲಿ ತಿಳಿಸಲಾಗಿದೆ.

ವರದಿ ಉಲ್ಲೇಖಿಸಿ ರಾಜ್ಯದ ಎಲ್ಲ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ (ಸಿಇಒ) 2024ರ ಅಕ್ಟೋಬರ್ 10ರಂದು ಪತ್ರ ಬರೆದಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಯುಕ್ತ, 'ದುರುಪಯೋಗ ಆಗಿರುವ ಹಣವನ್ನು ವಸೂಲಿ ಮಾಡಲು ಕ್ರಮ ಜರುಗಿಸಿ' ಎಂದು ಸೂಚಿಸಿದ್ದಾರೆ. ಪತ್ರ ಬರೆದು ನಾಲ್ಕು ತಿಂಗಳಾದರೂ ಹಣ ವಸೂಲಾತಿಗೆ ಸಿಇಒಗಳು ಕ್ರಮ ಜರುಗಿಸದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ಪಿಡಿಒ, ಅಧ್ಯಕ್ಷ ಹೊಣೆ: 'ಸಾಮಾಜಿಕ ಲೆಕ್ಕ ಪರಿಶೋಧನೆ ದಿನಾಂಕವನ್ನು ನೋಟಿಸ್ ಮೂಲಕ ಗ್ರಾಮ ಪಂಚಾಯಿತಿ ಹಾಗೂ ಅನುಷ್ಠಾನ ಇಲಾಖೆಗಳಿಗೆ ತಿಳಿಸಲಾಗಿತ್ತು. ಆದರೆ, ನಿಗದಿತ ದಿನದಂದು ಯಾವುದೇ ದಾಖಲೆಗಳನ್ನು ಒದಗಿಸದೇ ಲೆಕ್ಕ ಪರಿಶೋಧನೆಗೆ ಅಡ್ಡಿಪಡಿಸಲಾಗಿದೆ' ಎಂದು ವರದಿ ಉಲ್ಲೇಖಿಸಿದೆ.

'ಕಡತಗಳನ್ನು ಒದಗಿಸಲು ವಿಫಲರಾಗಿದ್ದಕ್ಕೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷರು ಹೊಣೆಗಾರರಾಗಿದ್ದು, ಅವರೇ ಆರ್ಥಿಕ ಅವ್ಯವಹಾರಕ್ಕೆ ಕಾರಣರಾಗಿದ್ದಾರೆ' ಎಂದೂ ವರದಿಯಲ್ಲಿ ತಿಳಿಸಲಾಗಿದೆ.

ವಸೂಲಾತಿ ಕೋಶ ನಿಷ್ಕ್ರಿಯ: ಮನರೇಗಾ ಯೋಜನೆಯಡಿ ದುರುಪಯೋಗವಾದ ಹಣವನ್ನು ವಸೂಲಿ ಮಾಡಲು ಜಿಲ್ಲಾ ಮಟ್ಟದಲ್ಲಿ ವಸೂಲಾತಿ ಕೋಶ ರಚಿಸಬೇಕೆಂಬ ನಿಯಮವಿದೆ. ಆದರೆ, ಬಹುತೇಕ ಜಿಲ್ಲೆಗಳಲ್ಲಿ ಈ ಕೋಶ ನಿಷ್ಕ್ರಿಯಗೊಂಡಿದೆ. ಆಯಾ ಜಿಲ್ಲಾ ಪಂಚಾಯಿತಿ ಸಿಇಒಗಳ ನಿರ್ಲಕ್ಷ್ಯದಿಂದಾಗಿ, ಹಣ ವಸೂಲಿ ಪ್ರಕ್ರಿಯೆ ವಿಳಂಬವಾಗುತ್ತಿದೆ.

ವಸೂಲಾತಿ ಕೋಶಕ್ಕೆ ಸಂಬಂಧಪಟ್ಟಂತೆ ಸಾಮಾಜಿಕ ಕಾರ್ಯಕರ್ತ ವೈ.ಡಿ. ಕುನ್ನಿಬಾವಿ ಅವರಿಗೆ ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ನೀಡಿರುವ ಹಾವೇರಿ ಜಿ.ಪಂ. ಮುಖ್ಯ ಲೆಕ್ಕಾಧಿಕಾರಿ, 'ವಸೂಲಾತಿ ಕೋಶ ರಚಿಸಲು ಬೇಕಾದ ಸದಸ್ಯರಾದ ಜಿಲ್ಲಾ ಯೋಜನಾಧಿಕಾರಿ ಹುದ್ದೆ ಕಚೇರಿಯಲ್ಲಿಲ್ಲ. ಲೆಕ್ಕಾಧಿಕಾರಿ–2 ಹುದ್ದೆ ಸಹ ಖಾಲಿ ಇದೆ. ಹೀಗಾಗಿ, ವಸೂಲಾತಿ ಕೋಶ ಕಾರ್ಯನಿರ್ವಹಿಸಲು ತೊಂದರೆಯಾಗಿದೆ' ಎಂದಿದ್ದಾರೆ.

₹4,500 ಕೋಟಿ ಅವ್ಯವಹಾರ ?

ಮನರೇಗಾ ಯೋಜನೆಯಡಿ 2013–14ನೇ ಸಾಲಿನಿಂದ 2022–23ನೇ ಸಾಲಿನವರೆಗೆ ಕೈಗೊಂಡಿರುವ ಕಾಮಗಾರಿಗಳ ಕೂಲಿ ಮೊತ್ತದಲ್ಲಿ ಸುಮಾರು ₹4,500 ಕೋಟಿ ಮೊತ್ತಕ್ಕೆ ಯಾವುದೇ ದಾಖಲೆ ಸಲ್ಲಿಕೆಯಾಗಿಲ್ಲ. ಈ ಮೊತ್ತವನ್ನು ಆಕ್ಷೇಪಣಾ ಮೊತ್ತವೆಂದು ಘೋಷಿಸಲಾಗಿದ್ದು, ಇದಕ್ಕೆ ಸೂಕ್ತ ದಾಖಲೆ ಸಲ್ಲಿಸುವಂತೆಯೂ ಅಧಿಕಾರಿಗಳಿಗೆ ಹಲವು ಬಾರಿ ಸೂಚಿಸಲಾಗಿದೆ. ಆದರೆ, ಅಧಿಕಾರಿಗಳು ಯಾವುದೇ ದಾಖಲೆ ಸಲ್ಲಿಸಿಲ್ಲ.

ಯಾವ ಇಲಾಖೆಯ ಎಷ್ಟು ಹಣ ದುರುಪಯೋಗ

ಇಲಾಖೆ/ಸಂಸ್ಥೆ	ಪ್ರಕರಣಗಳ ಸಂಖ್ಯೆ	ದುರುಪಯೋಗ ಮೊತ್ತ (₹ಕೋಟಿಗಳಲ್ಲಿ)
ಗ್ರಾಮ ಪಂಚಾಯಿತಿ	95,726	480.32
ಸಾಮಾಜಿಕ ಅರಣ್ಯ	5,250	55.56
ಪ್ರಾದೇಶಿಕ ಅರಣ್ಯ	389	6.51
ಕೃಷಿ	8,028	22.82
ತೋಟಗಾರಿಕೆ	14,333	47.61
ಪಿಆರ್‌ಇಡಿ	2,305	39.43
ರೇಷ್ಮೆ	4,948	15.11
ಜಲಾನಯನ	314	2.22
ಸಣ್ಣ ನೀರಾವರಿ	38	0.29

ಚಿಂಕಾರದಲ್ಲೂ ಗಣಿಗಾರಿಕೆ ಪ್ರಹಾರ

ಒಂದನೇ ಪುಟದಿಂದ...

'ಮಿನರಲ್ ಎಂಟರ್‌ಪ್ರೈಸಸ್ ಪ್ರೈವೇಟ್ ಲಿಮಿಟೆಡ್' ಕಂಪನಿಯು 'ಸಾರಂಗಪಾಣಿ ಮ್ಯಾಂಗನೀಸ್ ಮತ್ತು ಕಬ್ಬಿಣದ ಅದಿರು ಗಣಿಗಾರಿಕೆ ಯೋಜನೆ'ಗಾಗಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಗೊಲ್ಲರಹಳ್ಳಿ, ಲಕ್ಮೇನಹಳ್ಳಿ, ಕೋಡಿಹಳ್ಳಿ, ಹೊಸಹಳ್ಳಿ, ತೋನಲಾಪುರ ಗ್ರಾಮಗಳಲ್ಲಿ ಅಂದಾಜು 53 ಹೆಕ್ಟೇರ್ ಅರಣ್ಯ ಭೂಮಿ ಪರಿವರ್ತನೆ ಕೋರಿ ಅರಣ್ಯ ಇಲಾಖೆಗೆ 2022ರಲ್ಲಿ ಪ್ರಸ್ತಾವ ಸಲ್ಲಿಸಿತ್ತು. 2023ರಲ್ಲಿ ಅರಣ್ಯ ಅಧಿಕಾರಿಗಳ ತಂಡ ಜಂಟಿ ಸಮೀಕ್ಷೆ ನಡೆಸಿತ್ತು. ಕಾಡಿನಲ್ಲಿ ಸಂಪರ್ಕ ರಸ್ತೆ ನಿರ್ಮಾಣಕ್ಕೆ ಕೇಳಿರುವ ಜಾಗದ ಪ್ರಮಾಣವನ್ನು ಕಡಿಮೆ ಮಾಡುವಂತೆ ಸಲಹೆನೀಡಿತ್ತು. ಜತೆಗೆ, ಮೂರು ಆಕ್ಷೇಪವ್ಯಕ್ತಪಡಿಸಿತ್ತು. 'ಗಣಿಗಾರಿಕೆಗೆ ಕೇಳಿರುವ ಅರಣ್ಯದಲ್ಲಿ ಸಮೃದ್ಧ ವನ್ಯಜೀವಿಗಳಿವೆ. ಪರ್ಯಾಯ ಕಂದಾಯ ಭೂಮಿ ಇದ್ದರೂ ಅದನ್ನು ಬಳಸಿಕೊಳ್ಳುತ್ತಿಲ್ಲ ಏಕೆ' ಎಂದು ಪ್ರಶ್ನಿಸಿತ್ತು. ಕಂಪನಿಯು 2024ರ ಅಕ್ಟೋಬರ್‌ನಲ್ಲಿ ಸ್ಪಷ್ಟೀಕರಣ ನೀಡಿತ್ತು. 48.20 ಹೆಕ್ಟೇರ್‌ಗಳ ಪರಿಷ್ಕೃತ ಪ್ರಸ್ತಾವ ಸಲ್ಲಿಸಿತ್ತು. ಪರಿಹಾರಾತ್ಮಕ ಅರಣ್ಯೀಕರಣಕ್ಕೆ ಚಾಮರಾಜನಗರ ಜಿಲ್ಲೆಯಲ್ಲಿ 106 ಎಕರೆ ಭೂಮಿ ಗುರುತಿಸಲಾಗಿತ್ತು.

2024ರ ಡಿಸೆಂಬರ್ ಕೊನೆಯಲ್ಲಿ ಸ್ಥಳ ಪರಿಶೀಲನೆ ನಡೆಸಿದ್ದ ಡಿಸಿಎಫ್ ಮತ್ತು ಸಿಸಿಎಫ್, 'ಪ್ರಸ್ತಾವಿತ ಅರಣ್ಯವು ರಾಷ್ಟ್ರೀಯ ಉದ್ಯಾನ, ವನ್ಯಜೀವಿ ಅಭಯಾರಣ್ಯ, ಹುಲಿ ಮೀಸಲು ಪ್ರದೇಶ, ಆನೆ ಕಾರಿಡಾರ್‌ನ ಭಾಗವಲ್ಲ. ಈ ಪ್ರದೇಶವು ಚಿಂಕಾರ ವನ್ಯಜೀವಿ ಅಭಯಾರಣ್ಯದಿಂದ 7.53 ಕಿ.ಮೀ ದೂರದಲ್ಲಿದೆ. ಆದರೆ, ಪರಿಸರ ಸೂಕ್ಷ್ಮ ಪ್ರದೇಶದ ವ್ಯಾಪ್ತಿಯಲ್ಲಿದೆ' ಎಂದು ವರದಿಯಲ್ಲಿ ಉಲ್ಲೇಖಿಸಿದ್ದಾರೆ. 'ಅರಣ್ಯ ಭೂಮಿಯನ್ನು ಗಣಿಗಾರಿಕೆ ಮತ್ತು ಸಂಪರ್ಕ ರಸ್ತೆಗಾಗಿ ಬಳಸಲಾಗುತ್ತಿದೆ. ಇದೊಂದು ಅತ್ಯಗತ್ಯ ಯೋಜನೆ' ಎಂಬ ಕಾರಣ ನೀಡಿ ಇಬ್ಬರು ಅಧಿಕಾರಿಗಳು ಶಿಫಾರಸು ಮಾಡಿದ್ದಾರೆ. ಗಣಿಗಾರಿಕೆ ಸಂಸ್ಥೆಯು ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಪ್ರಕಾರ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿಯ ಪೂರ್ವಾನುಮತಿ ಪಡೆಯಬೇಕು ಎಂದು ಸಿಸಿಎಫ್ ಸೂಚಿಸಿದ್ದಾರೆ.



ರಥೋತ್ಸವ

ವಿಜಯನಗರ ಜಿಲ್ಲೆ ಕೊಟ್ಟೂರಿನ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿಯ ರಥೋತ್ಸವ ಶನಿವಾರ ಸಂಜೆ ಭಾರಿ ಸಂಖ್ಯೆ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು

ಪ್ರಜಾವಾಣಿ ಚಿತ್ರ: ಲವ ಕೆ.

ಎಬಿಎಆರ್‌ಕೆ ಬೆನ್ನುಹುರಿ ವಿರೂಪಕ್ಕೆ ಚಿಕಿತ್ಸೆ

ಬೆಂಗಳೂರು: ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯಡಿ (ಎಬಿ-ಎಆರ್‌ಕೆ) ಬೆನ್ನುಹುರಿ ವಿರೂಪಕ್ಕೆ ಸಂಬಂಧಿಸಿದ ಚಿಕಿತ್ಸೆಗಳನ್ನು ಸೇರ್ಪಡೆ ಮಾಡಿ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಚಿಕಿತ್ಸಾತ್ಮಕ ಸೇವೆ ಒದಗಿಸಲಾಗುತ್ತದೆ. ಬೆನ್ನುಹುರಿ ವಿರೂಪಕ್ಕೆ ಸಂಬಂಧಿಸಿದ ಚಿಕಿತ್ಸಾ ವಿಧಾನಗಳಿಗೆ ತಜ್ಞ ವೈದ್ಯರ ಸಮಿತಿ ಶಿಫಾರಸು ಅನ್ವಯ ಪ್ರತಿ ಶಸ್ತ್ರಚಿಕಿತ್ಸೆಗೆ ₹ 1.5 ಲಕ್ಷ ನಿಗದಿಪಡಿಸಿದೆ.

ಬೆನ್ನುಹುರಿ ವಿರೂಪಕ್ಕೆ ಸಂಬಂಧಿಸಿದ 36 ಚಿಕಿತ್ಸಾ ವಿಧಾನಗಳು ಸೇರಿ, ಒಟ್ಟು 1,650 ಚಿಕಿತ್ಸಾ ವಿಧಾನಗಳಿಗೆ ಯೋಜನೆಯಡಿ ಅನುಮತಿ ನೀಡಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ದಂತ ಚಿಕಿತ್ಸೆ ಅನುಷ್ಠಾನ: ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯಡಿ ಎಂಟು ವೈದ್ಯಕೀಯ ಸಂಸ್ಥೆಗಳಲ್ಲಿ ದಂತ ಚಿಕಿತ್ಸೆ ಅನುಷ್ಠಾನಗೊಳಿಸಿ, ಗುತ್ತಿಗೆ ಆಧಾರದಲ್ಲಿ ದಂತ ವೈದ್ಯಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವಂತೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ.

ಸುದ್ದಿ 2 ನಿಮಿಷ

'ಗೌಡರ ಕುಟುಂಬದಿಂದ ಮಾದಿಗ ಸಮಾಜಕ್ಕೆ ಸಾಮಾಜಿಕ ನ್ಯಾಯ'

ಚಿಕ್ಕಬಳ್ಳಾಪುರ: ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರ ಕುಟುಂಬ ಮಾದಿಗ ಸಮುದಾಯಕ್ಕೆ ಸಾಮಾಜಿಕ ನ್ಯಾಯ ದೊರಕಿಸಿಕೊಟ್ಟಿದೆ ಎಂದು ಚಿತ್ರದುರ್ಗ ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದ ಆದಿಚುಂಚನಗಿರಿ ಶಾಖಾ ಮಠದಲ್ಲಿ ಶನಿವಾರ ನಡೆದ 'ಭಕ್ತ ಸಂಗಮ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಆಡಳಿತಾತ್ಮಕವಾಗಿ ಮಾದಿಗ ಸಮಾಜ ಮುಂದೆ ಬರಬೇಕು ಎಂದು ಎಚ್.ಡಿ.ದೇವೇಗೌಡ ಮತ್ತು ಎಚ್.ಡಿ.ಕುಮಾರಸ್ವಾಮಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ (ಕೆಪಿಎಸ್‌ಸಿ) ಮಾದಿಗ ಸಮಾಜದವರನ್ನು ಅಧ್ಯಕ್ಷರನ್ನಾಗಿ ನೇಮಿಸಿದರು. ಸ್ವಾತಂತ್ರ್ಯ ನಂತರ ಕೆಪಿಎಸ್‌ಸಿ ಅಧ್ಯಕ್ಷ ಹುದ್ದೆಯನ್ನು ಮಾದಿಗ ಸಮಾಜವು ಪಡೆದಿರಲಿಲ್ಲ. ಶೋಷಿತ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಕೊಟ್ಟಿದ್ದು ದೇವೇಗೌಡರ ಕುಟುಂಬ' ಎಂದು ಬಣ್ಣಿಸಿದರು.

ಮಾದಿಗ ಸಮುದಾಯದ ಡಿ.ಮಂಜುನಾಥ್ ಅವರನ್ನು ರಾಜಕೀಯವಾಗಿ ದೇವೇಗೌಡರು ಬೆಳೆಸಿದರು. ಮಾದಾರ ಗುರುಪೀಠಕ್ಕೆ ಮೊದಲ ಕಾಣಿಕೆ ನೀಡಿದ್ದು ಕುಮಾರಸ್ವಾಮಿ, ಆಶೀರ್ವದಿಸಿದ್ದು ಬಾಲಗಂಗಾಧರನಾಥ ಸ್ವಾಮೀಜಿ ಎಂದರು.

ಮಧ್ಯಕರ್ನಾಟಕದಲ್ಲಿ ಮಡಿವಾಳ, ಬಂಜಾರ, ಭೋವಿ ಸೇರಿ ಶೋಷಿತ ಸಮುದಾಯದ ಹಲವು ಮಠ, ಪೀಠಗಳು ಇವೆ. ಈ ಎಲ್ಲ ಮಠ ಪೀಠಗಳು ಒಕ್ಕಲಿಗ ಸಮುದಾಯ, ಆದಿಚುಂಚನಗಿರಿ ಮಠವನ್ನು ಮರೆಯುವ ಸ್ಥಿತಿಯಲ್ಲಿ ಇಲ್ಲ. ಶೋಷಿತ ಸಮುದಾಯಗಳನ್ನು ಆಶೀರ್ವದಿಸುವ ಮೂಲಕ ಸಾಮಾಜಿಕ ನ್ಯಾಯ, ಅಂಬೇಡ್ಕರ್ ಅವರ ತತ್ವಗಳನ್ನು ಕಾರ್ಯರೂಪಕ್ಕೆ ತರುವ ನಿಟ್ಟಿನಲ್ಲಿ ಸರ್ಕಾರಕ್ಕೆ ಮಿಗಿಲಾಗಿ ಆದಿಚುಂಚನಗಿರಿ ಮಠ ಕೆಲಸ ಮಾಡುತ್ತಿದೆ ಎಂದು ಪ್ರತಿಪಾದಿಸಿದರು.



ಏ.12ರಿಂದ ಬನವಾಸಿಯಲ್ಲಿ ವೈಭವದ ಕದಂಬೋತ್ಸವ

ಶಿರಸಿ: 'ತಾಲ್ಲೂಕಿನ ಬನವಾಸಿಯಲ್ಲಿ ಏಪ್ರಿಲ್ 12 ಮತ್ತು 13ರಂದು ಕದಂಬೋತ್ಸವ ನಡೆಯಲಿದ್ದು, ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಸ್ಪರ್ಧೆಗಳು ನಡೆಯಲಿವೆ' ಎಂದು ಶಾಸಕ ಶಿವರಾಮ ಹೆಬ್ಬಾರ ತಿಳಿಸಿದರು.

'ಏಪ್ರಿಲ್ 10ರಂದು ಗುಡ್ನಾಪುರ ರಾಣಿ ನಿವಾಸದಲ್ಲಿ ಕದಂಬ ಜ್ಯೋತಿಗೆ ಚಾಲನೆ ಸಿಗಲಿದ್ದು, ಗುಡ್ನಾಪುರ ಉತ್ಸವ ಕೂಡ ನಡೆಯಲಿದೆ. ಎರಡು ದಿನ ವಿವಿಧೆಡೆ ಸಂಚರಿಸಿ, ಬನವಾಸಿಗೆ ಬರುವ ಕದಂಬ ಜ್ಯೋತಿಯಿಂದ ಕದಂಬೋತ್ಸವವನ್ನು ಮುಖ್ಯಮಂತ್ರಿಯವರು ಉದ್ಘಾಟಿಸುವರು. ಸಾಹಿತಿ ಬಿ.ಎ.ವಿವೇಕ ರೈ ಅವರಿಗೆ ಪಂಪ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಅವರು ಶನಿವಾರ ಸುದ್ದಿಗಾರರಿಗೆ ತಿಳಿಸಿದರು.

ಶಾಸಕ ಭೀಮಣ್ಣ ನಾಯ್ಕ ಮಾತನಾಡಿ, 'ಕದಂಬೋತ್ಸವವನ್ನು ಮನೆ ಹಬ್ಬದಂತೆ ಎಲ್ಲರೂ ಆಚರಿಸಬೇಕು' ಎಂದರು ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ, ಉಪವಿಭಾಗಾಧಿಕಾರಿ ಕೆ.ವಿ.ಕಾವ್ಯಾರಾಣಿ, ನಗರಸಭೆ ಅಧ್ಯಕ್ಷೆ ಶರ್ಮಿಳಾ ಮಾದನಗೇರಿ ಇದ್ದರು.

ಹಿಮಾಂಶಿ ಇಂದೂಲಾಲ್‌ಗೆ 'ಕುವೆಂಪು ರಾಷ್ಟ್ರೀಯ ಪುರಸ್ಕಾರ' ಪ್ರದಾನ

'ಬಸವಣ್ಣ, ಕುವೆಂಪು ಭಾಷಣದ ಸರಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಸವಣ್ಣ, ಕುವೆಂಪು ಅವರ ವಿಚಾರಧಾರೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಬದಲು, ಅವರನ್ನು ಭಾಷಣದ ಸರಕುಗಳನ್ನಾಗಿ ಬಳಸಲಾಗುತ್ತಿದೆ' ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಬೇಸರ ವ್ಯಕ್ತಪಡಿಸಿದರು.

ಎಂ. ಚಂದ್ರಶೇಖರ್ ಪ್ರತಿಷ್ಠಾನದ ಸಹಯೋಗದಲ್ಲಿ ಕುಪ್ಪಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಗುಜರಾತಿ ಲೇಖಕಿ ಹಿಮಾಂಶಿ ಇಂದೂಲಾಲ್ ಶೆಲತ್ ಅವರಿಗೆ 'ಕುವೆಂಪು ರಾಷ್ಟ್ರೀಯ ಪುರಸ್ಕಾರ' ಪ್ರದಾನ ಮಾಡಿ ಮಾತನಾಡಿದರು. ಈ ಪುರಸ್ಕಾರವು ₹ 5 ಲಕ್ಷ ನಗದು ಒಳಗೊಂಡಿದೆ.

'ಸಮಾಜ ಎದುರಿಸುತ್ತಿರುವ ಸಮಸ್ಯೆಗಳಿಗೆ ಕುವೆಂಪು ಅವರ ಸಂದೇಶಗಳು ಪರಿಹಾರೋಪಾಯಗಳಾಗಿವೆ. ಆದರೆ, ಅವರು ಹೇಳಿದ್ದನ್ನು ಯಾರೂ ಪಾಲನೆ ಮಾಡುತ್ತಿಲ್ಲ. ಅವರು 'ಮನುಜಮತ ವಿಶ್ವಪಥ' ಸಂದೇಶ ನೀಡಿದ್ದರು. ಈ ಸಂದರ್ಭದಲ್ಲಿ ವಿಶ್ವಮಾನವ ಆಗುತ್ತೇನೆ ಎನ್ನುವವರು ಯಾರು ಇದ್ದಾರೆ? ಅವರ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ, ಶಾಂತಿ, ಭ್ರಾತೃತ್ವ ಹಾಗೂ ಗಾಂಧೀಜಿ ಅವರು ಅಪೇಕ್ಷೆ ಮಾಡಿದ ಸಮಾಜ ನಿರ್ಮಾಣ ಸಾಧ್ಯ' ಎಂದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಹಾಗೂ ಪ್ರತಿಷ್ಠಾನದ ಅಧ್ಯಕ್ಷ ಬಿ.ಎಲ್. ಶಂಕರ್ ಉಪಸ್ಥಿತರಿದ್ದರು.



ಹಿಮಾಂಶಿ ಇಂದೂಲಾಲ್ ಶೆಲತ್ ಅವರಿಗೆ 'ಕುವೆಂಪು ರಾಷ್ಟ್ರೀಯ ಪುರಸ್ಕಾರ' ಪ್ರದಾನ ಮಾಡಲಾಯಿತು. ಬರಗೂರು ರಾಮಚಂದ್ರಪ್ಪ, ಎಚ್.ಕೆ. ಪಾಟೀಲ, ಬಿ.ಎಲ್. ಶಂಕರ್, ಶಿವರಾಜ್ ತಂಗಡಗಿ, ಎಂ. ಚಂದ್ರಶೇಖರ್ ಪ್ರತಿಷ್ಠಾನದ ಸರೋಜಾ ಎಂ. ಚಂದ್ರಶೇಖರ್, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ಸಾಹಿತಿಗಳು ಸರ್ಕಾರದ ವಕ್ತಾರರಾಗಬಾರದು'

'ಸಾಹಿತಿಗಳು ಸರ್ಕಾರದ ವಕ್ತಾರರಾಗಬಾರದು. ಪ್ರಭುತ್ವದ ಜತೆಗೆ ರಾಜಿಯಾಗಿರದ ಕುವೆಂಪು ಅವರು, ಪ್ರಭುತ್ವವನ್ನು ಪ್ರಶ್ನೆ ಮಾಡುವ ಬಗೆಯನ್ನು ತೋರಿಸಿಕೊಟ್ಟಿದ್ದರು. ಇದು ಇವತ್ತಿನ ಸಂದರ್ಭದಲ್ಲಿ ಮುಖ್ಯವಾಗುತ್ತದೆ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ಆಶಯ ನುಡಿಗಳನ್ನಾಡಿದ ಅವರು, 'ನಮಗೆ ಸಹಾನುಭೂತಿ ಇರುವ ಸರ್ಕಾರ ಇದ್ದಾಗಲೂ ಅದರಿಂದ ಅಂತರ ಕಾಪಾಡಿಕೊಳ್ಳುವುದು ಹೇಗೆ ಎಂದು ಕಲಿತುಕೊಳ್ಳಬೇಕು. ಇಲ್ಲವಾದಲ್ಲಿ ಸರ್ಕಾರದ ವಕ್ತಾರರಾಗುತ್ತೇವೆ' ಎಂದು ಹೇಳಿದರು.

ದೇವಸ್ಥಾನಗಳ ನೌಕರರಿಗೆ ಸಂಚಿತ ನಿಧಿಯಿಂದ ವೇತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರ್ಮಿಕ ದತ್ತಿ ಇಲಾಖೆಯ ದೇವಸ್ಥಾನಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ ನೌಕರರಿಗೆ ಇನ್ನು ಮುಂದೆ ವೇತನ ಮತ್ತು ಭತ್ಯೆಗಳು ರಾಜ್ಯ ಸರ್ಕಾರದ ಸಂಚಿತ ನಿಧಿಯಿಂದಲೇ ದೊರೆಯಲಿದೆ. ಇಲ್ಲಿವರೆಗೆ ಆಯಾ ದೇವಾಲಯಗಳ ಆದಾಯದಿಂದ ವೇತನ ನೀಡಲಾಗುತ್ತಿತ್ತು.



ರಾಜ್ಯದಲ್ಲಿ 'ಎ' ದರ್ಜೆ ಹಿರಿಯ ಶ್ರೇಣಿಯ 10, ಕಿರಿಯ ಶ್ರೇಣಿಯ 12, ಗ್ರೂಪ್ 'ಬಿ'ಯ 23, ಅಧೀಕ್ಷಕರು 39, ಪ್ರಥಮ ದರ್ಜೆ ಸಹಾಯಕರು 23, ದ್ವಿತೀಯ ದರ್ಜೆ ಸಹಾಯಕರು 19 ಹಾಗೂ ಗ್ರೂಪ್ 'ಡಿ'ಯ 5 ಮಂದಿ ನೌಕರರಿಗೆ ಸಂಚಿತ ನಿಧಿಯಿಂದ ವೇತನ ನೀಡಲು ಆರ್ಥಿಕ ಇಲಾಖೆ ಒಪ್ಪಿಗೆ ನೀಡಿದೆ.

'ಒಟ್ಟು 131 ನೌಕರರ ತಿಂಗಳ ವೇತನ ಸುಮಾರು ₹ 1 ಕೋಟಿಯಂತೆ ವರ್ಷಕ್ಕೆ ₹ 12.16 ಕೋಟಿಯನ್ನು ಆಯಾ ದೇವಸ್ಥಾನದವರು ಭರಿಸುತ್ತಿದ್ದರು. ಇನ್ನು ಮುಂದೆ ಸರ್ಕಾರವೇ ವೇತನ ನೀಡುವುದರಿಂದ ದೇವಸ್ಥಾನಗಳಿಗೆ ಈ ಮೊತ್ತ ಉಳಿತಾಯವಾಗಲಿದೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದ್ದಾರೆ.



ಕೊಪ್ಪಳ ತಾಲ್ಲೂಕಿನ ಮೋರನಾಳ ಗ್ರಾಮಕ್ಕೆ ಶನಿವಾರ ಮೇಘಾಲಯ ರಾಜ್ಯಪಾಲ ಸಿ.ಎಚ್.ವಿಜಯಶಂಕರ್ ಅವರು ಭೇಟಿ ನೀಡಿದಾಗ ಹಿರಿಯ ಕಲಾವಿದೆ ಭೀಮವ್ವ ಶಿಳ್ಳೇಕ್ಯಾತರ ತೊಗಲು ಗೊಂಬೆಯಾಟ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

ಮೇಘಾಲಯದ ರಾಜಭವನಕ್ಕೆ ಕಲಾವಿದೆ ಭೀಮವ್ವಗೆ ಆಹ್ವಾನ

ಅಳವಂಡಿ (ಕೊಪ್ಪಳ ಜಿಲ್ಲೆ): ತೊಗಲು ಗೊಂಬೆಯಾಟದಲ್ಲಿ ಮಾಡಿದ ಸಾಧನೆಗೆ ಪದ್ಮಶ್ರೀ ಗೌರವ ಪಡೆದಿರುವ ಕೊಪ್ಪಳ ತಾಲ್ಲೂಕಿನ ಮೋರನಾಳ ಗ್ರಾಮದ ಭೀಮವ್ವ ದೊಡ್ಡಬಾಳಪ್ಪ ಶಿಳ್ಳೇಕ್ಯಾತರ ಅವರ ಪ್ರತಿಭೆಗೆ ಮೇಘಾಲಯ ರಾಜ್ಯಪಾಲ ಸಿ.ಎಚ್.ವಿಜಯಶಂಕರ್ ಮನಸೋತರು.

ರಾಜ್ಯಪಾಲರು ಗ್ರಾಮಕ್ಕೆ ಶನಿವಾರ ಭೇಟಿ ನೀಡಿ ಅಜ್ಜಿಯನ್ನು ಸನ್ಮಾನಿಸಿ ಮೇಘಾಲಯ ರಾಜಭವನದ ಉಡುಗೊರೆ ನೀಡಿದರು. ಕಲೆಯ ವೈಶಿಷ್ಟತೆ, ಹಿನ್ನೆಲೆ ಮತ್ತು ಗೊಂಬೆಯಾಟ ಆಡಿಸುವ ವಿಧಾನಗಳ ಬಗ್ಗೆ ತಿಳಿದುಕೊಂಡರು. ರಾಮಾಯಣ ಮತ್ತು ಮಹಾಭಾರತದ ಕಥೆಯನ್ನು ಹೇಳುವ ತೊಗಲು ಗೊಂಬೆಯಾಟದ ಕೆಲವು ಹಾಡುಗಳನ್ನು ಅಜ್ಜಿ ಹಾಗೂ ಅವರ ಪುತ್ರ ಕೇಶಪ್ಪ ಶಿಳ್ಳೇಕ್ಯಾತರ ಹಾಡಿದರು.

ಅಜ್ಜಿ ಹಾಗೂ ಅವರ ಕುಟುಂಬದವರು ಹಾಡಿದ ಹಾಡುಗಳನ್ನು ಮನತುಂಬಿ ಆಲಿಸಿದ ರಾಜ್ಯಪಾಲರು, ಮೆಚ್ಚುಗೆ ವ್ಯಕ್ತಪಡಿಸಿದರು. 'ಮೇಘಾಲಯದ ರಾಜಭವನದಲ್ಲಿ ಈ ಕಲೆ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಬೇಕು. ಇದೇ ಕಲಾವಿದರನ್ನು ಕರೆಯಿಸಬೇಕು' ಎಂದು ತಮ್ಮ ವಿಶೇಷ ಕರ್ತವ್ಯಾಧಿಕಾರಿಗೆ ರಾಜ್ಯಪಾಲರು ನಿರ್ದೇಶನ ನೀಡಿದರು.

ಹೊಸ ಜಿಲ್ಲಾಸ್ಪತ್ರೆಗೆ ಕ್ರಮ: ಸಚಿವ

ಪ್ರಜಾವಾಣಿ ವಾರ್ತೆ

ವಿಜಯಪುರ: 'ವೈದ್ಯಕೀಯ ಮಹಾವಿದ್ಯಾಲಯಗಳು ಇರುವ ಜಿಲ್ಲಾಸ್ಪತ್ರೆಗಳನ್ನು ವೈದ್ಯಕೀಯ ಶಿಕ್ಷಣ ಇಲಾಖೆಗೆ ವಹಿಸಿ, ಅಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಹೊಸದಾಗಿ ಜಿಲ್ಲಾಸ್ಪತ್ರೆಗಳನ್ನು ನಿರ್ಮಿಸುವ ಉದ್ದೇಶವಿದೆ' ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ನಗರದಲ್ಲಿ ಶನಿವಾರ ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ 31ನೇ ರಾಜ್ಯಮಟ್ಟದ ಸಮ್ಮೇಳನದಲ್ಲಿ ಮಾತನಾಡಿದರು.

ವರ್ಗಾವಣೆಗೆ ಕ್ರಮ: ಸರ್ಕಾರಿ ವೈದ್ಯಾಧಿಕಾರಿಗಳ ಬೇಡಿಕೆಗೆ ಪ್ರತಿಕ್ರಿಯಿಸಿದ ಸಚಿವರು, 'ವೈದ್ಯಾಧಿಕಾರಿಗಳ ವರ್ಗಾವಣೆಯಲ್ಲಿ ಜನಪ್ರತಿನಿಧಿಗಳ ಹಸ್ತಕ್ಷೇಪ ತಡೆಯಲು ಹಾಗೂ ಪಾರದರ್ಶಕತೆ ಕಾಯ್ದುಕೊಳ್ಳಲು ರಾಜ್ಯ ಸರ್ಕಾರ ವರ್ಗಾವಣೆ ಕೌನ್ಸಿಲ್ ಕಾಯ್ದೆ ಜಾರಿಗೆ ತಂದಿದೆ. ಆದರೆ, ಕೆಲವರು ಇದರ ವಿರುದ್ಧ ಕೋರ್ಟ್‌ಗೆ ಹೋಗಿದ್ದಾರೆ. ಕಾನೂನು ತೊಡಕು ನಿವಾರಣೆಯಾದ ಬಳಿಕ ಅರ್ಹತೆ, ಅನುಭವ, ಹಿರಿತನದ ಮೇರೆಗೆ ವರ್ಗಾವಣೆ ವ್ಯವಸ್ಥೆ ಜಾರಿಗೆ ಬರಲಿದೆ ಎಂದರು.

ದುಬೈಗೆ ಹಾರಿದ ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಚರ್ಚೆ ಕಾಂಗ್ರೆಸ್ ವಲಯದಲ್ಲಿ ತಾರಕಕ್ಕೇರಿರುವ ಮಧ್ಯೆಯೇ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದುಬೈಗೆ ತೆರಳಿದ್ದಾರೆ.



ಡಿ.ಕೆ. ಶಿವಕುಮಾರ್

ಖಾಸಗಿ ಕಾರ್ಯಕ್ರಮದ ನಿಮಿತ್ತ ಕುಟುಂಬ ಸಮೇತ ದುಬೈಗೆ ತೆರಳಿರುವ ಅವರು, ಫೆ. 24ರಂದು ಬೆಂಗಳೂರಿಗೆ ಮರಳಲಿ ದ್ದಾರೆ ಎಂದು ಮೂಲಗಳು ಹೇಳಿವೆ.

ಇತ್ತೀಚೆಗೆ ನಡೆದ ಸರ್ಕಾರಿ ನೌಕರರ ಸಮಾವೇಶದಲ್ಲಿ ಮಾತನಾಡಿದ್ದ ಅವರು, 'ಮುಂದಿನ ಚುನಾವಣೆಯೂ ನನ್ನ ನೇತೃತ್ವದಲ್ಲೇ ನಡೆಯಲಿದೆ. ಇನ್ನೂ ಎಂಟು–ಹತ್ತು ವರ್ಷ ವಿಧಾನಸೌಧದಲ್ಲೇ ಇರುತ್ತೇನೆ' ಎನ್ನುವ ಮೂಲಕ ಮುಂದಿನ ಚುನಾವಣೆಯ ನಂತರವೇ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಎಂದು ಮಾರ್ಮಿಕವಾಗಿ ಹೇಳಿದ್ದರು. 'ಅವರ ಹೇಳಿಕೆಯಲ್ಲಿ ತಪ್ಪೇನಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಪ್ರತಿಕ್ರಿಯಿಸಿದ್ದರು.

ರಾಜ್ಯ ಬಿಜೆಪಿ ಮುಖಂಡರಿಗೆ ಪ್ರಿಯಾಂಕ್ ಖರ್ಗೆ ಪ್ರಶ್ನೆ

ಕೇಶವ ಕೃಪಾಕ್ಕೆ ಹೋಗಬೇಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಕಾಂಗ್ರೆಸ್ ಪಕ್ಷದ ಶಾಸಕರು, ಸಚಿವರು ತಮ್ಮ ಪಕ್ಷದ ಹೈಕಮಾಂಡ್ ಅನ್ನು ಭೇಟಿಯಾಗದೇ, ಕೇಶವ ಕೃಪಾವನ್ನು, ನರೇಂದ್ರ ಮೋದಿ ಅಥವಾ ಜೆ.ಪಿ.ನಡ್ಡಾ ಅವರನ್ನು ಭೇಟಿ ಮಾಡಬೇಕೇ? ರಣದೀಪ್ ಸಿಂಗ್ ಸುರ್ಜೇವಾಲಾ, ಕೆ.ಸಿ.ವೇಣುಗೋಪಾಲ್, ಮಲ್ಲಿಕಾರ್ಜುನ ಖರ್ಗೆ ಅಥವಾ ರಾಹುಲ್ ಗಾಂಧಿ ಅವರನ್ನು ನಾನು ಭೇಟಿಯಾದರೆ, ಅದರಲ್ಲಿ ತಪ್ಪೇನಿದೆ' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೈಕಮಾಂಡ್ ಭೇಟಿಗೆ ತೆರಳುತ್ತಿರುವ ಕುರಿತ ಸುದ್ದಿಗಾರರ ಪ್ರಶ್ನೆಗೆ ಶನಿವಾರ ಪ್ರತಿಕ್ರಿಯಿಸಿದರು.

'ಗೃಹಲಕ್ಷ್ಮಿ ಯೋಜನೆಯ ಹಣದ ಕಂತು ಬಿಡುಗಡೆ ತಡವಾಗಿದ್ದು ನಿಜ. ಫಲಾನುಭವಿಗಳ ಖಾತೆಗೆ ಈ ವಾರದಲ್ಲಿ ಹಣ ಸೇರಲಿದೆ. ಗ್ಯಾರಂಟಿ ಯೋಜನೆಗಳನ್ನು ಬಿಟ್ಟಿ ಭಾಗ್ಯ ಎಂದಿದ್ದ ಬಿಜೆಪಿಯವರು ಇದರ ಬಗ್ಗೆ ಮಾತನಾಡುವುದು ಏಕೆ' ಎಂದು ಪ್ರಶ್ನಿಸಿದರು.



'ಮುಂದಿನ ಚುನಾವಣೆಗೆ ನನ್ನದೇ ನೇತೃತ್ವ' ಎಂಬ ಡಿ.ಕೆ.ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ನಮ್ಮದು ಸಾಮೂಹಿಕ ನಾಯಕತ್ವ. ಹಿರಿಯ ನಾಯಕರಾದ ಡಿ.ಕೆ.ಶಿವಕುಮಾರ್ ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರಾಗಿದ್ದಾರೆ. ಹಾಗಾಗಿ ಅವರ, ಸಿದ್ದರಾಮಯ್ಯನವರ ಹಾಗೂ ಹೈಕಮಾಂಡ್ ಸೂಚಿಸುವವರ ನಾಯಕತ್ವದಲ್ಲಿ ಚುನಾವಣೆ ಎದುರಿಸುತ್ತೇವೆ' ಎಂದರು.

'ಹೈಕಮಾಂಡ್ ನಮಗೆ ವಹಿಸಿದ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಿಸುವುದು ನಮ್ಮ ಕೆಲಸ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಯಾವಾಗ ಆಗಬೇಕೋ, ಆಗ ಆಗಿಯೇ ಆಗುತ್ತದೆ. ಸಚಿವ ಸಂಪುಟ ವಿಸ್ತರಣೆಯೂ ಸದ್ಯಕ್ಕೆ ಇಲ್ಲ' ಎಂದರು.

ಡಿಕೆಶಿಯವರು ಎಲ್ಲಾ ಸಚಿವರ 'ಮಾರ್ಕ್ಸ್ ಕಾರ್ಡ್' ಪಡೆದುಕೊಂಡು ದೆಹಲಿಗೆ ಹೋಗುತ್ತಿದ್ದಾರೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಇದು ತಪ್ಪು ಮಾಹಿತಿ. ಎಐಸಿಸಿಯು, ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಳಲ್ಲಿ ಎಷ್ಟು ಈಡೇರಿದೆ? ಎಷ್ಟು ಹೊಸ ನೀತಿಗಳನ್ನು ರೂಪಿಸಲಾಗಿದೆ? ಎಷ್ಟು ವಿನೂತನ ಕಾರ್ಯಕ್ರಮ ರೂಪಿಸಲಾಗಿದೆ? ಎಷ್ಟು ಅನುದಾನ ಬಳಕೆಯಾಗಿದೆ ಎಂಬ ಕುರಿತು ಎಲ್ಲ ಸಚಿವರಲ್ಲಿ ರಿಪೋರ್ಟ್ ಕಾರ್ಡ್ ಪಡೆದುಕೊಂಡಿದೆ. ನಾವು ಇದನ್ನು ಹೈಕಮಾಂಡ್‌ಗೂ ನೀಡಬೇಕು ಹಾಗೂ ಜನರಿಗೂ ನೀಡಬೇಕು' ಎಂದರು.

'ಸಿ.ಎಂ ಗಾದಿ: ಡಿಕೆಶಿ ಆಕಾಂಕ್ಷೆ ಹೊಸದಲ್ಲ'

ಹುಬ್ಬಳ್ಳಿ: 'ಮುಖ್ಯಮಂತ್ರಿ ರೇಸ್‌ನಲ್ಲಿ ಡಿ.ಕೆ. ಶಿವಕುಮಾರ್ ಮೊದಲಿನಿಂದಲೂ ಇದ್ದಾರೆ. ಸಿ.ಎಂ ಹಾಗೂ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆ ಹೈಕಮಾಂಡ್ ತೀರ್ಮಾನಿಸುತ್ತದೆ. ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ನಾನು ಆಕಾಂಕ್ಷಿ ಅಲ್ಲ. ಸಮಯ ಬಂದಾಗ, ತೀರ್ಮಾನಿಸುವೆ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕೆಪಿಸಿಸಿ ಅಧ್ಯಕ್ಷರನ್ನು ನೇಮಿಸುವ ಅಧಿಕಾರ ಪಕ್ಷದ ಹೈಕಮಾಂಡ್‌ಗೆ ಇದೆಯೇ ಹೊರತು ನಮಗಿಲ್ಲ. ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಆಗಲಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ಯಾವಾಗ ಬದಲಾವಣೆ ಆಗುತ್ತದೆ ಎಂಬುದನ್ನು ನೋಡಬೇಕು' ಎಂದರು.



ಸತೀಶ ಜಾರಕಿಹೊಳಿ

'ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಿಗೆ ಹಣ ನೀಡುವುದು ಒಂದೆರಡು ತಿಂಗಳು ವಿಳಂಬವಾಗಿದೆ ಹೊರತು ಯಾವ ಗ್ಯಾರಂಟಿ ಯೋಜನೆಗಳನ್ನೂ ನಿಲ್ಲಿಸಲ್ಲ. ಬಾಕಿಯುಳಿದ ಹಣವನ್ನು ಸೇರಿಸಿ ಕೊಡಲಾಗುತ್ತದೆ' ಎಂದರು.

'ಕೃಷಿ ಭೂಮಿ ನಡುವೆ ಕಂದಕ ನಿರ್ಮಿಸಿದ್ದ ಅರಣ್ಯ ಇಲಾಖೆ'

ಕಂದಕ ಮುಚ್ಚಿ ರೈತರ ಆಕ್ರೋಶ

ಪ್ರಜಾವಾಣಿ ವಾರ್ತೆ

ಹಾಸನ: ಬೇಲೂರು ತಾಲ್ಲೂಕಿನ ಅಡವಿ ಬಂಟೆನಹಳ್ಳಿಯಲ್ಲಿ ರೈತರ ಹಾಗೂ ಅರಣ್ಯ ಇಲಾಖೆ ನಡುವಿನ ಭೂವಿವಾದ ತಾರಕಕೇರಿದ್ದು, ಭೂಮಿ ವಶಕ್ಕೆ ಅರಣ್ಯ ಇಲಾಖೆ ತೆಗೆದಿದ್ದ ಕಂದಕವನ್ನು ಗ್ರಾಮಸ್ಥರು ಶನಿವಾರ ಮುಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ರೈತರಿಗೆ ಮಂಜೂರಾಗಿದ್ದ ಭೂಮಿ ಇಲಾಖೆಗೆ ಸೇರಿದ್ದು ಎಂದು, ಸರಹದ್ದು ಗುರುತಿಸುವ ನೆಪದಲ್ಲಿ ಕೃಷಿ ಜಮೀನಿನ ಮಧ್ಯಭಾಗದಲ್ಲಿಯೇ ಶುಕ್ರವಾರ ಬೆಳಿಗ್ಗೆಯಿಂದ ರಾತ್ರಿವರೆಗೂ ಇಲಾಖೆಯ ಸಿಬ್ಬಂದಿ ದೊಡ್ಡ ಕಂದಕವನ್ನು ನಿರ್ಮಿಸಿದ್ದರು. ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಶನಿವಾರ ಗ್ರಾಮಸ್ಥರು ಮತ್ತು ರೈತ ಮಹಿಳೆಯರು ಕಂದಕವನ್ನು ಮುಚ್ಚಿ, ಇಲಾಖೆ ವಿರುದ್ಧ ಧಿಕ್ಕಾರಗಳನ್ನು ಕೂಗಿದರು.

'ರೈತರ ಕೃಷಿ ಭೂಮಿ ಮಧ್ಯಭಾಗದಲ್ಲಿ ಟ್ರಂಚ್ (ಕಂದಕ) ತೆಗೆದು ದೌರ್ಜನ್ಯ ಎಸಗಿದ್ದರಿಂದ, ಮುಚ್ಚಿದ್ದೇವೆ. ಗೋಮಾಳ ಮತ್ತು ರೈತರು ಸಾಗುವಳಿ ಮಾಡುತ್ತಿರುವ ಭೂಮಿಯ ದಾಖಲೆಯಾದ ಪಹಣಿಯಲ್ಲಿ ಅರ್ಹರ ಹೆಸರು ದಾಖಲಾಗಿದೆ. ಆದರೂ ಅರಣ್ಯ ಇಲಾಖೆ ಭೂಮಿ ತನಗೆ ಸೇರಿದ್ದು ಎಂದು ವಾದಿಸುತ್ತಿದೆ' ಎಂದು ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ಆರ್. ನವೀನ್ ಕುಮಾರ್ ದೂರಿದರು.

ರೈತ ವಿರೂಪಾಕ್ಷ ಮಾತನಾಡಿ, 'ಗ್ರಾಮದಲ್ಲಿ ಸುಮಾರು 150 ರೈತರಿದ್ದು 1969ರಿಂದಲೂ ಮಂಜೂರಾತಿ ಪಡೆದು ಉಳುಮೆ ಮಾಡುತ್ತಿದ್ದೇವೆ. ಅರಣ್ಯ ಇಲಾಖೆಯು ರಾತ್ರೋರಾತ್ರಿ ಗೋಮಾಳ ಸೇರಿದಂತೆ ನಮ್ಮ ಭೂಮಿಯಲ್ಲೂ ಕಂದಕ ನಿರ್ಮಿಸಿದೆ. ರೈತರು 1–2 ಎಕರೆ ಭೂಮಿಯನ್ನೇ ನಂಬಿ ಜೀವನ ಸಾಗಿಸುತ್ತಿದ್ದು, ಇಲಾಖೆ ದೌರ್ಜನ್ಯ ಎಸಗುತ್ತಿದೆ. ಸರ್ಕಾರ ರೈತರ ಪರವಾಗಿ ನ್ಯಾಯ ಒದಗಿಸಬೇಕು' ಎಂದು ಮನವಿ ಮಾಡಿದರು.

'ಕೂಡಲೇ ಕಂದಾಯ ಮತ್ತು ಅರಣ್ಯ ಇಲಾಖೆ ಜಂಟಿ ಸರ್ವೆ ನಡೆಸಿ ಅರ್ಹ ರೈತರ ಭೂಮಿಯ ಹಕ್ಕನ್ನು ಉಳಿಸಿಕೊಡಬೇಕು' ಎಂದು ಆಗ್ರಹಿಸಿದರು. ಬಂಟೆನಹಳ್ಳಿ ಗ್ರಾಮದ ವಿರೂಪಾಕ್ಷ, ಸಿದ್ಧಮಲ್ಲಪ್ಪ, ಪುಟ್ಟಸ್ವಾಮಿಗೌಡ, ಜಯಣ್ಣ, ಗಂಗಾಧರ, ನಾಗೇಗೌಡ, ಗಣೇಶ, ಕಿರಣ, ಮಲ್ಲೇಶ್, ಯೋಗೇಶ್, ಶಿವೇಗೌಡ, ಶಿವಪ್ಪ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಬೇಲೂರು ತಾಲ್ಲೂಕಿನ ಅಡವಿ ಬಂಟೆನಹಳ್ಳಿಯಲ್ಲಿ ಅರಣ್ಯ ಇಲಾಖೆ ತೆಗೆದಿದ್ದ ಕಂದಕವನ್ನು ಶನಿವಾರ ಗ್ರಾಮಸ್ಥರು ಮುಚ್ಚಿದರು

₹14.35 ಕೋಟಿ ತೆರಿಗೆ ಬಾಕಿ ಪಾವತಿಸಲು ಬಿಬಿಎಂಪಿ ಸೂಚನೆ– ಕಡತ ವಾಪಸ್

ಆದೇಶವಿದ್ದರೂ ಶಾಲೆಗೆ ದಕ್ಕದ ಸ್ವತ್ತು

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸುಮಾರು ₹100 ಕೋಟಿ ಮೌಲ್ಯದ ನಿವೇಶನ, ಕಟ್ಟಡ ಒಳಗೊಂಡ ಸ್ವತ್ತನ್ನು ಚಿಕ್ಕಪೇಟೆ ಸರ್ಕಾರಿ ಶಾಲೆಗೆ ನೀಡಿ ಎರಡು ವರ್ಷಗಳ ಹಿಂದೆಯೇ ಸರ್ಕಾರ ಆದೇಶ ಹೊರಡಿಸಿದ್ದರೂ, ₹14.35 ಕೋಟಿ ತೆರಿಗೆ ಬಾಕಿ, ಬಡ್ಡಿ ಪಾವತಿಸದೆ ನೋಂದಣಿ ಮಾಡಲಾಗದು ಎಂದಿರುವ ಬಿಬಿಎಂಪಿ ಕಡತವನ್ನು ಹಿಂದಿರುಗಿಸಿದೆ.

ಸ್ವಾತಂತ್ರ್ಯ ಪೂರ್ವದಲ್ಲೇ ಆರಂಭವಾಗಿದ್ದ ಶಾಲೆ ಸ್ವತ್ತನ್ನು ಶಾಲಾ ಶಿಕ್ಷಣ ಇಲಾಖೆ ಹೆಸರಿಗೆ ನೋಂದಣಿ ಮಾಡಬೇಕು. ನಿವೇಶನ, ಕಟ್ಟಡದ ಎಲ್ಲ ವ್ಯಾಪಾರಿಗಳನ್ನೂ ತೆರವುಗೊಳಿಸಬೇಕು ಎಂದು ಕಂದಾಯ ಇಲಾಖೆ ಡಿಸೆಂಬರ್ 2022ರಲ್ಲಿ ಆದೇಶ ಹೊರಡಿಸಿತ್ತು.

ಕರ್ನಾಟಕ ಭೂ ಕಂದಾಯ ಮಂಜೂರಾತಿ ನಿಯಮಗಳ ಅನ್ವಯ ಹೊರಡಿಸಿದ್ದ ಆದೇಶದಂತೆ ಸ್ವತ್ತನ್ನು ಶಾಲೆ ಹೆಸರಿಗೆ ನೋಂದಣಿ ಮಾಡಿಕೊಡುವಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿ, ಬೆಂಗಳೂರು ಉತ್ತರ ತಾಲ್ಲೂಕು ತಹಶೀಲ್ದಾರ್ ಅವರು ಬಿಬಿಎಂಪಿಯನ್ನು ಕೋರಿದ್ದರು.ಆದರೆ, ಎರಡು ವರ್ಷಗಳಿಂದ ಕ್ರಮ ಕೈಗೊಳ್ಳದ ಬಿಬಿಎಂಪಿ ಕಂದಾಯ ವಿಭಾಗ, 2008ರಿಂದ ಇಲ್ಲಿಯವರೆಗೆ ಬಾಕಿ ಇರುವ ₹14.35 ಕೋಟಿ ಕಂದಾಯ ಪಾವತಿಸುವವರೆಗೂ ನೋಂದಣಿ ಮಾಡಿಕೊಡಲು ಆಗದು ಎಂದು ಕಂದಾಯ ಇಲಾಖೆಗೆ ಪತ್ರ ಬರೆದಿದೆ.

ಸರ್ಕಾರದ ಆದೇಶದಂತೆ ಶಾಲೆ ಹೆಸರಿಗೆ ನೋಂದಣಿ ಆಗಬೇಕು. ತೆರಿಗೆ ಬಾಕಿಗೂ, ಶಾಲೆಗೂ ಸಂಬಂಧ ಇಲ್ಲ. ಜಿಲ್ಲಾಧಿಕಾರಿ ಜತೆ ಚರ್ಚಿಸಲಾಗುವುದು

ತ್ರಿಲೋಕ್‌ಚಂದ್ರ, ಆಯುಕ್ತ, ಶಾಲಾ ಶಿಕ್ಷಣ ಇಲಾಖೆ

ಬೆಂಗಳೂರು ಉತ್ತರ ತಾಲ್ಲೂಕು ಚಿಕ್ಕಪೇಟೆ ಒಟಿಸಿ ರಸ್ತೆಯ 13,735 ಚದರಡಿ ವಿಸ್ತೀರ್ಣದ, ದಾನಿಗಳು ನೀಡಿದ್ದ ಜಾಗದಲ್ಲಿ 1945ರಲ್ಲೇ ಪ್ರಾಥಮಿಕ, ಮಾಧ್ಯಮಿಕ ಶಾಲೆ ಆರಂಭಿಸಲಾಗಿತ್ತು. ಬಳಿಕ ಪ್ರೌಢಶಾಲೆಯನ್ನೂ ತೆರೆಯಲಾಗಿತ್ತು. 1979ರ ವೇಳೆಗೆ ಶಿಥಿಲಾವಸ್ಥೆಗೆ ತಲುಪಿದ್ದ ಶಾಲಾ ಕೊಠಡಿಗಳನ್ನು ಕೆಡವಿ, ಹೊಸ ಕೊಠಡಿ ನಿರ್ಮಿಸಲು ಅವಕಾಶ ಕೋರಿ 'ರಜತಾ ಎಂಟರ್ ಪ್ರೈಸಸ್' ಎಂಬ ಖಾಸಗಿ ಸಂಸ್ಥೆ ಸರ್ಕಾರಕ್ಕೆ ಮನವಿ ಸಲ್ಲಿಸಿತ್ತು. ಇದನ್ನು ಪುರಸ್ಕರಿಸಿದ್ದ ಸರ್ಕಾರ, ನೆಲ, ಮೊದಲ ಮಹಡಿಯಲ್ಲಿ ವಾಣಿಜ್ಯ ಮಳಿಗೆಗಳನ್ನು ಕಟ್ಟಲು, 2ನೇ ಮಹಡಿಯಲ್ಲಿ ಶಾಲಾ ಕೊಠಡಿ ನಿರ್ಮಿಸಿಕೊಡಲು ಒಪ್ಪಂದ ಮಾಡಿಕೊಂಡು ತಿಂಗಳಿಗೆ ₹ 16,350ರಂತೆ 26 ವರ್ಷಗಳಿಗೆ ಜಾಗವನ್ನು ಗುತ್ತಿಗೆ ನೀಡಿತ್ತು.

2011ರಲ್ಲಿ ರಜತಾ ಕಾಂಪ್ಲೆಕ್ಸ್ ಬಾಡಿಗೆದಾರರ ಕ್ಷೇಮಾಭಿವೃದ್ಧಿ ಸಂಘಕ್ಕೆ ಮರುಗುತ್ತಿಗೆ ನೀಡಲಾಗಿತ್ತು. ಈ ಅವಧಿ 2021 ಜೂನ್‌ಗೆ ಮುಕ್ತಾಯವಾಗಿತ್ತು. ಬಳಿಕ ಸಂಘದ ಕೋರಿಕೆಯಂತೆ ಅಂದಿನ ಬೆಂಗಳೂರು ನಗರ ಜಿಲ್ಲಾಧಿಕಾರಿ, ಬ್ಯಾಂಕ್, ವಸತಿ ಗೃಹ, ಕೆಳ ಹಂತದಲ್ಲಿ 141 ಮಳಿಗೆಗಳಿರುವ ನಾಲ್ಕು ಮಹಡಿಗಳ ಕಟ್ಟಡವನ್ನು ಮಾರಾಟ, ಗುತ್ತಿಗೆ, ಹರಾಜು ಹಾಕಲು ನಿರ್ದೇಶನ ನೀಡುವಂತೆ ಕಂದಾಯ ಇಲಾಖೆಯನ್ನು ಕೋರಿದ್ದರು.

ಈ ಬಗ್ಗೆ 'ಪ್ರಜಾವಾಣಿ' 2022, ಆ.18ರ ಸಂಚಿಕೆಯಲ್ಲಿ 'ಸರ್ಕಾರಿ ಶಾಲೆ ಮಾರಾಟಕ್ಕಿದೆ!' ಎಂಬ ಶೀರ್ಷಿಕೆಯಲ್ಲಿ ವಿಶೇಷ ವರದಿ ಪ್ರಕಟಿಸಿತ್ತು. ಆ ನಂತರ ಆಸ್ತಿ ಪರಭಾರೆ ಪ್ರಕ್ರಿಯೆಗಳು ಸ್ಥಗಿತವಾಗಿದ್ದವು. ಕಂದಾಯ ಇಲಾಖೆ ಸ್ವತ್ತನ್ನು ಶಾಲೆಗೆ ಮರಳಿಸಲು ಆದೇಶ ಹೊರಡಿಸಿತ್ತು.

ಕಂದಾಯ–ಬಿಬಿಎಂಪಿ ಜಟಾಪಟಿ

ಬಹುಕೋಟಿ ಮೊತ್ತದ ಗುತ್ತಿಗೆ ಹಣ, ತೆರಿಗೆ ಸಂಗ್ರಹಿಸದೆ ವರ್ಷಗಳಿಂದ ನಿರ್ಲಕ್ಷ್ಯ ತೋರಿದ್ದ ಕಂದಾಯ ಇಲಾಖೆ ಹಾಗೂ ಬಿಬಿಎಂಪಿ ಅಧಿಕಾರಿಗಳು, ಶಾಲೆಯ ಹೆಸರಿಗೆ ಆದೇಶವಾದ ನಂತರ ಪರಸ್ಪರ ಜಟಾಪಟಿಗೆ ಇಳಿದಿದ್ದಾರೆ.

ಬಿಬಿಎಂಪಿ 2008ರಿಂದ ತೆರಿಗೆ ಹಣ, ಕಂದಾಯ ಇಲಾಖೆ ಗುತ್ತಿಗೆ ಹಣವನ್ನೇ ಸಂಗ್ರಹಿಸಿಲ್ಲ.

'ಗುತ್ತಿಗೆ ಹಣ, ತೆರಿಗೆ ಬಾಕಿ ವಿಚಾರಕ್ಕೆ ತಹಶೀಲ್ದಾರ್, ಬಿಬಿಎಂಪಿ ಸಹಾಯಕ ಕಂದಾಯ ಅಧಿಕಾರಿ ಪರಸ್ಪರ ಪತ್ರ ಬರೆದು ಆರೋಪ–ಪ್ರತ್ಯಾರೋಪ ಮಾಡುತ್ತಿದ್ದಾರೆ. ಗುತ್ತಿಗೆ ಪಡೆದವರು ಅಲ್ಲಿನ ಬಾಡಿಗೆದಾರರಿಂದ ಹಣ ಸಂಗ್ರಹಿಸುತ್ತಲೇ ಇದ್ದಾರೆ. ಬಾಡಿಗೆದಾರರನ್ನು ತೆರವು ಮಾಡುವಂತೆ ಕೋರ್ಟ್ ಆದೇಶವಿದ್ದರೂ, ಅಧಿಕಾರಿಗಳು ಕ್ರಮಕೈಗೊಂಡಿಲ್ಲ' ಎನ್ನುತ್ತಾರೆ ಹೆಸರು ಬಹಿರಂಗಪಡಿಸಲು ಇಚ್ಛಿಸದ ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿ.

'ಸಿ.ಎಂಗೆ ಜೈಲು ತಪ್ಪಿಸಲಾಗದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜೈಲಿಗೆ ಹೋಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ' ಎಂದು ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಶನಿವಾರ ಹೇಳಿದರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ರಾಜ್ಯ ಸರ್ಕಾರದಲ್ಲಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಸಚಿವರ ಮಧ್ಯೆ ಹೊಂದಾಣಿಕೆಯೇ ಇಲ್ಲ. ಎಲ್ಲರೂ ಅವರವರ ಸಮಸ್ಯೆಗಳಲ್ಲೇ ಸಿಲುಕಿದ್ದಾರೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ರಾಜ್ಯದಲ್ಲಿ ಆಡಳಿತ ಹದಗೆಟ್ಟಿದೆ. ಕಾನೂನು ಮತ್ತು ಸುವ್ಯವಸ್ಥೆ ಇಲ್ಲದಂತಾಗಿದೆ. ಕೋರಮಂಗಲದಲ್ಲಿ ಈಚೆಗೆ ಸಾಮೂಹಿಕ ಅತ್ಯಾಚಾರ ನಡೆದಿದೆ. ಬಸ್ ನಿರ್ವಾಹಕನ ಮೇಲೆ ಪುಂಡರು ಹಲ್ಲೆ ನಡೆಸಿದ್ದಾರೆ. ಸರ್ಕಾರಕ್ಕೆ ನಿಯಂತ್ರಣ ತಪ್ಪಿದೆ' ಎಂದರು.

'ಮೆಟ್ರೊ' : ದರ ಏರಿಕೆ ಖಂಡಿಸಿ ವಿವಿಧ ಸಂಘಟನೆಗಳಿಂದ ಪ್ರತಿಭಟನೆ, ಎಚ್ಚರಿಕೆ

ಪ್ರಯಾಣ ದರ ಇಳಿಸದಿದ್ದರೆ ಬಹಿಷ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಪ್ರಯಾಣದರ ಇಳಿಸದಿದ್ದಲ್ಲಿ 'ಮೆಟ್ರೊ' ಪ್ರಯಾಣವನ್ನು ಬಹಿಷ್ಕರಿಸುವುದು ಅನಿವಾರ್ಯ ಎಂದು ಜನಾಂದೋಲನ ಸಂಘಟನಾ ವೇದಿಕೆ, ಕರ್ನಾಟಕ ಇಂಡಸ್ಟ್ರಿಯಲ್ ಆ್ಯಂಡ್ ಅದರ್ ಎಸ್ಟಾಬ್ಲಿಷ್‌ಮೆಂಟ್ಸ್ ಎಂಪ್ಲಾಯೀಸ್ ಫೆಡರೇಷನ್ ಎಚ್ಚರಿಸಿವೆ.

ಪ್ರಯಾಣ ದರ ಏರಿಕೆ ವಿರೋಧಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಈ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ದರ ನಿಗದಿ ಸಮಿತಿಯನ್ನು ಕೇಂದ್ರ ಸರ್ಕಾರ ರಚಿಸಿತ್ತು. ದರ ಏರಿಕೆಗೆ ರಾಜ್ಯ, ಕೇಂದ್ರ ಸರ್ಕಾರಗಳು ಸಮ್ಮತಿಸಿದ್ದವು. ಹಾಗಾಗಿ ದರ ಏರಿಕೆ ನಮ್ಮದಲ್ಲ ಎಂದು ಸರ್ಕಾರಗಳು ನುಣುಚಿಕೊಳ್ಳಬಾರದು ಎಂದು ಈ ವೇಳೆ ಪ್ರತಿಭಟನಾಕಾರರು ಸರ್ಕಾರವನ್ನು ಒತ್ತಾಯಿಸಿದರು.


ಮೆಟ್ರೊ ಪ್ರಯಾಣ ದರ ಹೆಚ್ಚಳ ವಿರೋಧಿಸಿ ಜನಾಂದೋಲನ ಸಂಘಟನಾ ವೇದಿಕೆ ಮತ್ತು ಕರ್ನಾಟಕ ಇಂಡಸ್ಟ್ರೀಯಲ್ ಅಂಡ್ ಅದರ್ ಎಸ್ಟಾಬ್ಲಿಷ್‌ಮೆಂಟ್ಸ್ ಎಂಪ್ಲಾಯೀಸ್ ಫೆಡರೇಷನ್ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು

ಬಿಜೆಪಿ, ಕಾಂಗ್ರೆಸ್ ಈ ವಿಷಯದಲ್ಲಿ ಅನುಕೂಲಕರ ರಾಜಕೀಯ ಮಾಡುತ್ತಿವೆ. ಜೆಡಿಎಸ್ . ಶಾಸಕರು, ಸಂಸದರು ಚಕಾರ ಎತ್ತುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮುಖಂಡರಾದ ಕೆ.ಎ. ಗಂಗಣ್ಣ, ವಕೀಲ ವಿನೋದ್, ಲೋಕೇಶ್ ಮಾತನಾಡಿದರು.

'ಮೆಟ್ರೊ': ಪ್ರಯಾಣ ದರ ಇಳಿಸಿ



ಬೆಂಗಳೂರು: 'ನಮ್ಮ ಮೆಟ್ರೊ' ಪ್ರಯಾಣದರವನ್ನು ಏರಿಸಿದ ನಂತರದಲ್ಲಿ ಮೆಟ್ರೊದಲ್ಲಿ ಪ್ರಯಾಣಿಕರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗುತ್ತಿದೆ. 'ಮೆಟ್ರೊ' ದಿಂದ ವಿಮುಖರಾದ ಜನರು ಬಿಎಂಟಿಸಿ ಬಸ್‌ಗಳು, ಖಾಸಗಿ ವಾಹನಗಳಲ್ಲಿ ಸಂಚರಿಸುತ್ತಿದ್ದಾರೆ. ಸಂಚಾರ ದಟ್ಟಣೆ ಹೆಚ್ಚುವ ಜೊತೆಗೆ ಪರಿಸರ ಮಾಲಿನ್ಯಕ್ಕೂ ಕಾರಣವಾಗಿದೆ. ಪ್ರಯಾಣದರ ಇಳಿಸುವ ಮೂಲಕ ಜನರು ಮೆಟ್ರೊಗೆ ಮರಳುವಂತೆ ಮಾಡಬೇಕು' ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.



ಸಾರ್ವಜನಿಕರಿಗೆ ಪ್ರಯಾಣಿಸಲು ಅನುಕೂಲವಾಗಿದ್ದ 'ನಮ್ಮ ಮೆಟ್ರೊ' ಪ್ರಯಾಣ ದರ ಏರಿಕೆ ಮಾಡಿರುವುದು ಖಂಡನೀಯ. ಇತರೆ ರಾಜ್ಯಗಳಲ್ಲಿ 'ಮೆಟ್ರೊ'ಗಳ ಪ್ರಯಾಣ ದರ ಕಡಿಮೆ ಇದೆ ಮತ್ತು ಜನರಿಗೆ ಹತ್ತಿರವಾಗಿವೆ. ಬಿಎಂಆರ್‌ಸಿಎಲ್ ಪ್ರಯಾಣ ದರ ಹೆಚ್ಚಿಸಿರುವುದರಿಂದ 'ಮೆಟ್ರೊ' ಸಾರ್ವಜನಿಕರಿಂದ ದೂರವಾಗುತ್ತಿದೆ. ಇದು ಶ್ರೀಮಂತರು ಓಡಾಡುವ ಮೆಟ್ರೊವಾಗುವ ಸಾಧ್ಯತೆಗಳಿವೆ. ಕೂಡಲೇ ಪ್ರಯಾಣ ದರ ಕಡಿಮೆ ಮಾಡಬೇಕು.

ಕಾವ್ಯ ಸಹ್ಯಾದ್ರಿ, ರಾಜಾಜಿನಗರ



ಮೆಟ್ರೊ ಪ್ರಯಾಣ ದರ ಏರಿಕೆ ಮಾಡಿರುವುದು ಸಮಂಜಸವಲ್ಲ. ಸಾರ್ವಜನಿಕರ ಅಭಿಪ್ರಾಯಗಳನ್ನೂ ಪಡೆದು ದರ ನಿರ್ಧಾರ ಮಾಡಬೇಕಿತ್ತು. ಏಕಾಏಕಿ ಪ್ರಯಾಣ ದರ ಹೆಚ್ಚಿಸುವ ಮೂಲಕ ಬಿಎಂಆರ್‌ಸಿಎಲ್ ಸಾರ್ವಜನಿಕರಿಗೆ ದ್ರೋಹ ಮಾಡಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಬಗ್ಗೆ ಚರ್ಚಿಸಿ ಪ್ರಯಾಣ ದರ ಇಳಿಕೆ ಮಾಡಬೇಕು.

ಕುಮಾರ ಆರ್., ಜೆ ಪಿ ನಗರ



ಜನಪ್ರತಿನಿಧಿಗಳು ಮೆಟ್ರೊ ಪ್ರಯಾಣ ದರ ಏರಿಕೆಯ ಬಗ್ಗೆ ಮಾತನಾಡದಿರುವುದು ವಿಪರ್ಯಾಸ. ಸಾರ್ವಜನಿಕರು ದುಬಾರಿ ಪ್ರಯಾಣ ದರ ನೀಡಿ ಮೆಟ್ರೊದಲ್ಲಿ ಸಂಚರಿಸುತ್ತಿದ್ದಾರೆ. ಬಿಎಂಆರ್‌ಸಿಎಲ್ ಆಡಳಿತ ಮಂಡಳಿ ಸಾರ್ವಜನಿಕರ ಆಕ್ರೋಶದ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ. ಪ್ರಯಾಣ ದರ ಏರಿಕೆ ಸಮಿತಿಯ ಸದಸ್ಯರು ಜನಸಾಮಾನ್ಯರ ಬಗ್ಗೆ ಚಿಂತಿಸದೇ, ದರ ನಿಗದಿಪಡಿಸಿರುವುದು ಖಂಡನೀಯ.

ವಿ. ನಾಗರಾಜು ಕಾವಲಪಾಳ್ಯ, ರಾಜಾಜಿನಗರ



'ನಮ್ಮ ಮೆಟ್ರೊ' –ಒಂದು ಸಾರ್ವಜನಿಕ ಸಾರಿಗೆ ವ್ಯವಸ್ಥೆ. ಇದರಲ್ಲಿ ಲಾಭ ಮತ್ತು ನಷ್ಟದ ಬಗ್ಗೆ ಚಿಂತನೆ ಮಾಡುತ್ತಿರುವುದು ಎಷ್ಟು ಸರಿ? ಮೆಟ್ರೊ ಉದ್ಯಮವಲ್ಲ ಅದೊಂದು ಸಾರ್ವಜನಿಕ ಸೇವಾ ಸಾರಿಗೆ. ಬಿಎಂಆರ್‌ಸಿಎಲ್ ಮೆಟ್ರೊ ಪ್ರಯಾಣ ದರ ಏರಿಕೆ ಮಾಡುವ ಮೂಲಕ ಜನರನ್ನು ಸುಲಿಗೆ ಮಾಡುತ್ತಿದೆ. ಇದರಿಂದ ಪ್ರಯಾಣಿಕರ ಸಂಖ್ಯೆ ಕುಗ್ಗಿದರೂ, ಬಿಎಂಆರ್‌ಸಿಎಲ್ ಪರಿಷ್ಕೃತ ದರ ಏರಿಕೆ ಆದೇಶ ಹಿಂಪಡೆಯುತ್ತಿಲ್ಲ.

ಎನ್. ಪ್ರಭಾ ಬೆಳವಂಗಲ, ಮೆಟ್ರೊ ಪ್ರಯಾಣಿಕರು



ಮೆಟ್ರೊ ಪ್ರಯಾಣ ದರದ ಅವೈಜ್ಞಾನಿಕವಾಗಿ ಹೆಚ್ಚಿಸಿರುವುದು ಖಂಡನೀಯ. ಮೊದಲು ಪರಿಷ್ಕೃತ ಮೆಟ್ರೊ ಪ್ರಯಾಣ ದರ ಏರಿಕೆ ಆದೇಶವನ್ನು ಹಿಂಪಡೆಯಬೇಕು. ಖರ್ಚು– ಆದಾಯಕ್ಕಾಗಿ ಜಾಹಿರಾತು ಮತ್ತಿತರ ಮೂಲಗಳನ್ನು ಬಳಸಿಕೊಳ್ಳಬೇಕು. ಅದನ್ನು ಬಿಟ್ಟು ಪ್ರಯಾಣ ದರ ಹೆಚ್ಚಿಸಿ ಸಾರ್ವಜನಿಕರನ್ನು ಸುಲಿಗೆ ಮಾಡುವುದು ಸರಿಯಾದ ಕ್ರಮವಲ್ಲ. ರೈಲುಗಳ ಕೊರತೆಯಿಂದಾಗಿ ಕೆಲವೊಮ್ಮೆ ಹತ್ತು ನಿಮಿಷದವರೆಗೆ ಕಾಯುವ ಪರಿಸ್ಥಿತಿ ಇದೆ. ಇದರಿಂದ ಫ್ಲಾಟ್‌ಫಾರ್ಮ್‌ನಲ್ಲಿ ದಟ್ಟಣೆ ಹೆಚ್ಚಾಗುತ್ತದೆ. ಇದರ ಬದಲಿಗೆ ಮೂರ್ನಾಲ್ಕು ನಿಮಿಷಗಳಿಗೊಂದು ರೈಲು ಸಂಚರಿವಂತಾಗಬೇಕು.

ವಿ. ರಮೇಶ್ ಬಾಬು, ಶ್ರೀನಿವಾಸಪುರ



ಮೆಟ್ರೊ ಪ್ರಯಾಣ ದರ ಏರಿಕೆ ಮಾಡುವ ಮೂಲಕ 'ನಮ್ಮ ಮೆಟ್ರೊ' ತನ್ನತನ ಕಳೆದುಕೊಂಡಿದೆ. ಸಮಯದ ಉಳಿತಾಯ ಹಾಗೂ ಸಂಚಾರ ದಟ್ಟಣೆಯಿಂದ ಪಾರಾಗಲು ಮೆಟ್ರೊ ಅನುಕೂಲವಾಗಿತ್ತು. ಆದರೆ ಮೆಟ್ರೊ ರೈಲು ಈಗ ಹಳಿ ತಪ್ಪಿದಂತೆ ಭಾಸವಾಗುತ್ತಿದೆ. ಸಂಬಂಧಪಟ್ಟವರು ಮೆಟ್ರೊ ಪ್ರಯಾಣ ದರ ಇಳಿಕೆ ಮಾಡುವ ನಿರ್ಧಾರ ಕೈಗೊಳ್ಳಬೇಕು.

ರಾಜೇಶ್ವರಿ ರಾವ್, ವಿಜಯನಗರ

ಅಭಿಪ್ರಾಯ ಕಳುಹಿಸಿ

ಮೆಟ್ರೊ ಪ್ರಯಾಣ ದರ ಏರಿಕೆಯ ಬಗ್ಗೆ ಸಾರ್ವಜನಿಕರು ತಮ್ಮ ಅಭಿಪ್ರಾಯಗಳನ್ನು 50 ಪದಗಳ ಮಿತಿಯಲ್ಲಿ ಈ ಕೆಳಗಿನ ವಾಟ್ಸ್‌ಆ್ಯಪ್ ಸಂಖ್ಯೆಗೆ ಕಳುಹಿಸಬಹುದು. ಜೊತೆಗೆ ನಿಮ್ಮ ಭಾವಚಿತ್ರವೂ ಇರಲಿ.

ವಾಟ್ಸ್‌ಆ್ಯಪ್ ಸಂಖ್ಯೆ: **96060 38256**

'ಬೇರು ಕತ್ತರಿಸುವ ರಾಕ್ಷಸಿ ಬ್ರಾಹ್ಮಣ್ಯ'

ಎಚ್‌.ಟಿ.ಪೋತೆ ಅಭಿನಂದನಾ ಕಾರ್ಯಕ್ರಮದಲ್ಲಿ ಮೂಡ್ನಾಕೂಡು ಚಿನ್ನಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬ್ರಾಹ್ಮಣ್ಯ ಎಂಬ ಒಳರಾಕ್ಷಸ ತಳ ಸಮುದಾಯಗಳ ಬೇರುಗಳನ್ನು ತುಂಡರಿಸುತ್ತಿದೆ' ಎಂದು ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಬೇಸರ ವ್ಯಕ್ತಪಡಿಸಿದರು.

ನೂರಕ್ಕೂ ಅಧಿಕ ಕೃತಿಗಳನ್ನು ಸಾಹಿತ್ಯ ಲೋಕಕ್ಕೆ ನೀಡಿರುವ ಎಚ್‌. ಟಿ. ಪೋತೆ ಅವರಿಗೆ ಶನಿವಾರ ನಡೆದ ಅಭಿನಂದನಾ ಸಮಾರಂಭ, ವಿಚಾರ ಸಂಕಿರಣ, ಸಾಕ್ಷ್ಯಚಿತ್ರ ಪ್ರದರ್ಶನ, ಕಥಾ ಆಲಾಪ, ಐದು ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಾವಿರಾರು ವರ್ಷಗಳಿಂದ ಬ್ರಾಹ್ಮಣ್ಯ ಈ ಕೆಲಸ ಮಾಡಿಕೊಂಡು ಬಂದಿದ್ದು, ಇತ್ತೀಚೆಗೆ ಜಾಸ್ತಿಯಾಗಿದೆ. ಇದರ ವಿರುದ್ಧ ಬಹಿರಂಗವಾಗಿ ಮಾತನಾಡಿ ವಿರೋಧಿಸಬೇಕು. ಆದರೆ, ಆಳುವ ವರ್ಗವೇ ಬ್ರಾಹ್ಮಣ್ಯಕ್ಕೆ ಹೆದರಿ ಕೂತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ದೇಶವನ್ನು ವೈಜ್ಞಾನಿಕವಾಗಿ ಮುನ್ನಡೆಸಬೇಕು ಎಂದು ಸಂವಿಧಾನದಲ್ಲಿದ್ದರೂ ಮೌಢ್ಯಗಳೇ ಆಳುತ್ತಿವೆ. ದೇಶ ಹಿಂದುಳಿಯಲು ಜಾತಿ ವ್ಯವಸ್ಥೆ, ಮೌಢ್ಯವೇ ಕಾರಣ ಎಂದರು.

ದಲಿತ ಸಾಹಿತ್ಯವನ್ನು ಪ್ರಬಲ ವರ್ಗದವರು ಓದುವುದಿಲ್ಲ. ಶಾಲೆಗಳಲ್ಲಿ ಪಠ್ಯವಾಗಿಲ್ಲ. ತುಳಿತಕ್ಕೆ ಒಳಗಾದವರ ನೋವು ಜಗತ್ತಿಗೆ ಗೊತ್ತಾಗುವುದಾದರೂ ಹೇಗೆ ಎಂದು ಪ್ರಶ್ನಿಸಿದರು.

ಹಿಂದೆ ಅಸಮಾನತೆ, ಅಸ್ಪೃಶ್ಯತೆ ಬಗ್ಗೆ ಆಕ್ರೋಶದಿಂದ ಬರೆಯುತ್ತಿದ್ದರು. ನಂತರದ ತಲೆಮಾರು ಆಕ್ರೋಶ ಬಿಟ್ಟು ಈವರ್ಗದವರ ತಲ್ಲಣವನ್ನು ಕಟ್ಟಿಕೊಡಲು ಒತ್ತು ನೀಡಿತು. ಪೋತೆ ಅವರು ಈ ಸಾಲಿಗೆ ಸೇರಿದ ಬರಹಗಾರ ಎಂದು ಬಣ್ಣಿಸಿದರು.

ಶೇಷಾದ್ರಿಪುರ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ವೂಡೇ ಪಿ. ಕೃಷ್ಣ, ಗುಲಬರ್ಗಾ ವಿಶ್ವವಿದ್ಯಾಲಯ ಕುಲಪತಿ ಗೂರು ಶ್ರೀರಾಮುಲು, ಸಪ್ನ ಬುಕ್ ಹೌಸ್ ಮಾಲೀಕ ನಿತಿನ್ ಷಾ, ದಲಿತ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಅರ್ಜುನ ಗೊಳಸಂಗಿ ಉಪಸ್ಥಿತರಿದ್ದರು.



ನಗರದಲ್ಲಿ ಶನಿವಾರ ನಡೆದ ಅಭಿನಂದನಾ ಕಾರ್ಯಕ್ರಮದಲ್ಲಿ ಎಚ್‌ಟಿ.ಪೋತೆ ಹಾಗೂ ಲಲಿತಾ ಎಚ್‌ಪೋತೆ ದಂಪತಿ ಪರಸ್ಪರ ಹಾರ ಬದಲಾಯಿಸಿಕೊಂಡರು. ಸಂಸದ ರಾಧಾಕೃಷ್ಣ ದೊಡಮನಿ, ವಿದ್ವಾಂಸ ಮಲ್ಲೇಪುರಂ ಜಿ.ವೆಂಕಟೇಶ, ಸಪ್ನ ಬುಕ್ ಹೌಸ್ ಮಾಲೀಕ ನಿತಿನ್ ಷಾ, ಸಾಹಿತಿ ಹಂ.ಪ.ನಾಗರಾಜಯ್ಯ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

'ರೈಜ್ - 2025' ಕಾರ್ಯಾಗಾರ

ಬೊಮ್ಮನಹಳ್ಳಿ: ಆರೋಗ್ಯ ರಕ್ಷಣೆ ಮತ್ತು ಸ್ಮಾರ್ಟ್ ತಯಾರಿಕೆ ಸೇರಿ ಹಲವು ನಿರ್ಣಾಯಕ ಕ್ಷೇತ್ರಗಳಲ್ಲಿ 5ಜಿ ಮತ್ತು 6ಜಿ ತಂತ್ರಜ್ಞಾನ ರೂಪಾಂತರಿಸಿ ಕ್ರಾಂತಿಕಾರಿ ಬದಲಾವಣೆ ತರುವ ವಿವಿಧ ಆಯಾಮಗಳ ಕುರಿತು 'ರೈಜ್ - 2025' ಕಾರ್ಯಾಗಾರ ನಡೆಯಿತು.

ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯು (ಐಐಐಟಿ-ಬಿ) ಈ ತಂತ್ರಜ್ಞಾನ ಕಾರ್ಯಾಗಾರ ಆಯೋಜಿಸಿತ್ತು.

ಐಐಐಟಿ-ಬಿ ನಿರ್ದೇಶಕ ಪ್ರೊ. ದೇವವ್ರತ ದಾಸ್, 'ಸಂವಹನ ತಂತ್ರಜ್ಞಾನಗಳ ಪ್ರಗತಿಯ ಪರಿಣಾಮಕಾರಿ ಬಳಕೆ ಆರ್ಥಿಕ, ಸುರಕ್ಷತೆ, ಸಾಮಾಜಿಕ ಪ್ರಗತಿಗೆ ಮಹತ್ವದ್ದಾಗಿದೆ' ಎಂದರು.

'6ಜಿ ಬಳಕೆ, ಸಂಭಾವ್ಯ ಅನ್ವಯಗಳು ಮತ್ತು ನೀತಿ ಪರಿಗಣನೆಗಳ ಕುರಿತು ಮುನ್ನೋಟ ಕೊಡುವ ಕಾರ್ಯಾಗಾರ ಇದಾಗಿದೆ' ಎಂದು ಟಾಟಾ ಕಮ್ಯೂನಿಕೇಶನ್‌ನ ಉಪಾಧ್ಯಕ್ಷ ವಿಶ್ವನಾಥ್ ರಾಮಸ್ವಾಮಿ ಹೇಳಿದರು.

'ಕಾವ್ಯಕ್ಕೆ, ಕವಿಗಳಿಗೆ ಪ್ರಚಾರದ ಕೊರತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾವ್ಯಕ್ಕೆ, ಕವಿಗಳಿಗೆ ಪ್ರಚಾರದ ಕೊರತೆ ಎದುರಾಗಿದೆ. ಕಾವ್ಯವನ್ನು ಜನರಿಂದ ದೂರ ಮಾಡುವ ಪ್ರಯತ್ನಗಳು ನಡೆಯುತ್ತಿವೆ' ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಶನಿವಾರ ಬೇಸರ ವ್ಯಕ್ತಪಡಿಸಿದರು.

ವಿಶ್ವ ಮಾನವ ರಾಷ್ಟ್ರಕವಿ ಕುವೆಂಪು ಕಲಾನಿಕೇತನ, ರಂಗ ಮಂಡಲ ಬೆಂಗಳೂರು, ರಂಗ ಚಂದಿರ ಸಂಸ್ಥೆಗಳ ಸಹಯೋಗದಲ್ಲಿ ನಡೆದ 'ಕಾವ್ಯ ಸಂಸ್ಕೃತಿ ಯಾನ: ರಾಜಧಾನಿ ಬೆಂಗಳೂರಿನಿಂದ ಕೊಡುಗೆ ಜಿಲ್ಲೆಯ ಕಡೆಗೆ ಕಾವ್ಯ ದೀವಟಿಗೆಯ ಪಯಣ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಟಿ.ವಿ ವಾಹಿನಿಗಳು, ವಿದ್ಯುನ್ಮಾನ ಮಾಧ್ಯಮಗಳಲ್ಲಿ ಕವಿತೆಗಳ ಬಗ್ಗೆ ಒಂದು ಸಾಲೂ ಬರುವುದಿಲ್ಲ. ಕವಿ ಹೆಸರು ಹೇಳುವುದಿಲ್ಲ. ಚಿತ್ರನಟ ಕೊಲೆ ಮಾಡಿದರೆ, ಶೆಡ್ಡಿಗೆ ಹಾಕಿಕೊಂಡು ಹೊಡೆದ ಘಟನೆಗಳಿಗೆ ಪ್ರಚಾರ ಸಿಗುತ್ತದೆ. ಮಾಧ್ಯಮಗಳು ಅಮಾನವೀಯ ಘಟನೆಗಳಿಗೇ ಆದ್ಯತೆ ನೀಡುತ್ತಿವೆ' ಎಂದರು.

'ಕಾವ್ಯದಿಂದ ಯಶಸ್ಸು, ಕೀರ್ತಿ ಸಂಪಾದಿಸಬಹುದು. ಕಾವ್ಯವನ್ನು ಹೊಸ ಪೀಳಿಗೆ ಕವಿಗಳು ಶ್ರೀಮಂತಗೊಳಿಸುತ್ತಿದ್ದಾರೆ. ಕವಿತೆಗಳನ್ನು ಹಾಡಿನ ಮೂಲಕ ಪ್ರಸ್ತುತಪಡಿಸಬೇಕು' ಎಂದು ಹೇಳಿದರು.

ಸತ್ಯಮಂಗಲ ಮಹಾದೇವ, ಗೀತಾ ಡಿ.ಸಿ., ಕಾವ್ಯ ಸಂಸ್ಕೃತಿಯಾನ ಪ್ರಧಾನ ಸಂಚಾಲಕ ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಜಿಪಿಓ ಚಂದ್ರು ಉಪಸ್ಥಿತರಿದ್ದರು.


ಕಾವ್ಯ ದೀವಟಿಗೆ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಸ್ಮಿತಾ ಅಮೃತರಾಜ್, ಸತ್ಯಮಂಗಲ ಮಹಾದೇವ, ಎಲ್.ಎನ್.ಮುಕುಂದರಾಜ್, ಜಿಪಿಓ ಚಂದ್ರು, ಕಾವ್ಯ ಸಂಸ್ಕೃತಿ ಯಾನ ಪ್ರಧಾನ ಸಂಚಾಲಕ ಮಲ್ಲಿಕಾರ್ಜುನಸ್ವಾಮಿ ಮಹಾಮನೆ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ


ಖಾಲಿ ಹುದ್ದೆಗಳ ಭರ್ತಿಯೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಅಖಿಲ ಭಾರತ ಫಾರ್ಮಸಿ ಅಧಿಕಾರಿಗಳ ಸಂಘದ ಸದಸ್ಯರು ಶನಿವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು

'ಸಾಲ ಮರುಪಾವತಿ ಅವಧಿ ವಿಸ್ತರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈತರು ಪಡೆದ ದೀರ್ಘಾವಧಿ ಸಾಲದ ಅರ್ಧವಾರ್ಷಿಕ ಕಂತು ಪಾವತಿಗೆ ಎರಡುತಿಂಗಳು ಹೆಚ್ಚುವರಿ ಅವಕಾಶ ನೀಡುವಂತೆ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳಿಗೆ (ಪಿಕಾರ್ಡ್) ಸೂಚಿಸಬೇಕು ಎಂದು ವಿಧಾನಪರಿಷತ್ತಿನ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ.

ಸಾಲ ವಸೂಲಾತಿ ಸರಿಯಾದ ಕ್ರಮವಾದರೂ, ರೈತರಿಗೆ ಹಣ ಹೊಂದಾಣಿಕೆ ಮಾಡಿಕೊಳ್ಳಲು ತೊಂದರೆಯಾಗಿದೆ. ದೀರ್ಘಾವಧಿ ಸಾಲಕ್ಕೆ ಅರ್ಧವಾರ್ಷಿಕ ಕಂತುಗಳನ್ನು ನಿಗದಿಪಡಿಸಿದ್ದು, ಸೆಪ್ಟೆಂಬರ್ ಹಾಗೂ ಮಾರ್ಚ್ ತಿಂಗಳಲ್ಲಿ ಸಾಲ ವಸೂಲಿ ಮಾಡುತ್ತಿವೆ. ಈಗ ಸಾಲದ ಕಂತು ಮರುಪಾವತಿಗೆ ನೋಟಿಸ್ ನೀಡಿವೆ. ಹಿಂದೆ ನೀಡಿದ್ದಂತೆ ಈಗಲೂ ಎರಡು ತಿಂಗಳು ಹೆಚ್ಚುವರಿ ಅವಕಾಶ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್, ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರನ್ನು ಕೋರಿದ್ದಾರೆ.


ದಿನೇಶ್ ಗೂಳಿಗೌಡ

'ನಮ್ಮ ರಸ್ತೆ'ಯಲ್ಲಿ 'ನಮ್ಮ ಬಸ್ಸು' ರಸಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಆಯೋಜಿಸಿದ್ದ 'ನಮ್ಮ ರಸ್ತೆ- 2025' ಪ್ರದರ್ಶನ, ಕಾರ್ಯಾಗಾರದ ಕೊನೆಯ ದಿನವಾದ ಶನಿವಾರ ಬಿಎಂಟಿಸಿ 'ನಮ್ಮ ಬಸ್ಸು' ರಸಪ್ರಶ್ನೆಯನ್ನು ಆಯೋಜಿಸಿತ್ತು.

'ಫ್ರೆಂಡ್ಸ್ ಆಫ್ ಬಿಎಂಟಿಸಿ' ವತಿಯಿಂದ ರಸಪ್ರಶ್ನೆ ಆಯೋಜಿಸಿ, ಬಹುಮಾನ, ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು. ಬೆಂಗಳೂರಿನ ಪಾದಚಾರಿ ಮಾರ್ಗಗಳ ಕುರಿತು ತಜ್ಞರ ಜೊತೆ ಚರ್ಚೆ ನಡೆಯಿತು. ಪಾದಚಾರಿಗಳಿಗೆ ಸುಗಮ ಮಾರ್ಗ ಹಾಗೂ ಸುರಕ್ಷತೆಗಾಗಿ ಮೂಲಸೌಕರ್ಯ ಕಲ್ಪಿಸಲು ಸಲಹೆ ನೀಡಲಾಯಿತು.

ಮೂರು ದಿನಗಳ ಕಾರ್ಯಕ್ರಮದಲ್ಲಿ 70ಕ್ಕೂ ಹೆಚ್ಚು ಭಾಷಣಕಾರರು, 68 ಸರ್ಕಾರಿ ಮತ್ತು ಪಾಲುದಾರ ಸಂಸ್ಥೆಗಳು, 16ಕ್ಕೂ ಹೆಚ್ಚು ಶಾಲೆ ಮತ್ತು ಕಾಲೇಜುಗಳು, ಕಾರ್ಪೊರೇಟ್ ಸಂಸ್ಥೆಗಳು ಭಾಗವಹಿಸಿ ನಗರದ ಚಲನಶೀಲತೆಯ ಸವಾಲುಗಳು ಮತ್ತು ಪರಿಹಾರಗಳ ಕುರಿತು ಜಾಗೃತಿ ಮೂಡಿಸಲಾಯಿತು. ಬಿಎಂಟಿಸಿ, ಬಿಎಂಆರ್‌ಸಿಎಲ್, ಕೆ-ರೈಡ್, ಡಲ್ಟ್ ಮತ್ತು ಬೆಂಗಳೂರು ಸಂಚಾರ ಪೊಲೀಸ್ ಇಲಾಖೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಬಿಬಿಎಂಪಿ ಕೇಂದ್ರ ಕಚೇರಿ ಆವರಣದಲ್ಲಿರುವ ಡಾ.ರಾಜ್‌ಕುಮಾರ್ ಗಾಜಿನ ಮನೆಯಲ್ಲಿ ಆಯೋಜಿಸಲಾಗಿದ್ದ 'ನಮ್ಮ ರಸ್ತೆ- 2025' ಪ್ರದರ್ಶನವನ್ನು ಐದು ಸಾವಿರಕ್ಕೂ ಹೆಚ್ಚು ಜನರು ವೀಕ್ಷಿಸಿದರು. ಸುಸ್ಥಿರ ನಗರ ಸಾರಿಗೆ ಪರಿಹಾರಗಳನ್ನು ಚರ್ಚಿಸಲು ಸರ್ಕಾರ ಮತ್ತು ನಾಗರಿಕ ಸಮಾಜ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ಮತ್ತು ವೈವಿಧ್ಯಮಯ ನಾಗರಿಕರು ಮತ್ತು ಪಾಲುದಾರರಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು ಎಂದು ಪ್ರಕಟಣೆ ತಿಳಿಸಿದೆ.

ಬಿಬಿಎಂಪಿ ಎಂಜಿನಿಯರ್‌ಗಳ ಸಾಮರ್ಥ್ಯ ವೃದ್ಧಿ ಕಾರ್ಯಾಗಾರ, ಉತ್ತಮ ಬೀದಿಗಳನ್ನು ನಿರ್ಮಿಸುವುದು, ಸಾರ್ವಜನಿಕ ಸಾರಿಗೆ ತಂತ್ರಜ್ಞಾನ ವಿಕಸನ ಸಮಾವೇಶಗಳು ನಡೆದವು.


'ನಮ್ಮ ಬಸ್ಸು' ರಸಪ್ರಶ್ನೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು

ಅಲ್ಪಸಂಖ್ಯಾತರ ಹಕ್ಕು ದಿನದಲ್ಲಿ ಸಚಿವ ಜಮೀರ್ ಅಹಮದ್

ಅಲ್ಪಸಂಖ್ಯಾತರ ಶಿಕ್ಷಣಕ್ಕೆ ₹ 1200 ಕೋಟಿ ವಿನಿಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರವು ಅಲ್ಪಸಂಖ್ಯಾತ ಸಮುದಾಯಗಳ ಮಕ್ಕಳ ಶಿಕ್ಷಣಕ್ಕಾಗಿ ₹1,200 ಕೋಟಿ ಅನುದಾನ ವಿನಿಯೋಗಿಸಿದೆ' ಎಂದು ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಬಿ.ಝಡ್ ಜಮೀರ್ ಅಹಮದ್ ಖಾನ್ ಹೇಳಿದರು.

ರಾಜ್ಯ ಅಲ್ಪಸಂಖ್ಯಾತರ ಆಯೋಗ ಶನಿವಾರ ಏರ್ಪಡಿಸಿದ್ದ ಅಲ್ಪಸಂಖ್ಯಾತರ ಹಕ್ಕುಗಳ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ 2013ರಲ್ಲಿ ಆಗಿನ ಕಾಂಗ್ರೆಸ್ ಸರ್ಕಾರ ಅಲ್ಪಸಂಖ್ಯಾತ ಸಮುದಾಯದ ಅಭಿವೃದ್ಧಿಗೆ ಬಜೆಟ್‌ನಲ್ಲಿ ₹3,200 ಕೋಟಿ ಅನುದಾನ ಮೀಸಲಿಟ್ಟಿತ್ತು. ಆದರೆ, ನಂತರ ಬಂದ ಸರ್ಕಾರಗಳು ಅನುದಾನ ಕಡಿಮೆ ಮಾಡಿದವು. ಅಲ್ಪಸಂಖ್ಯಾತ ಸಮುದಾಯದಲ್ಲಿ ಶಿಕ್ಷಣ ಪಡೆದವರ ಸಂಖ್ಯೆ ಕಡಿಮೆ. ಹಾಗಾಗಿ ಮಕ್ಕಳ ಶಿಕ್ಷಣಕ್ಕಾಗಿ ಹೆಚ್ಚಿನ ಅನುದಾನ ವಿನಿಯೋಗ ಮಾಡಲಾಗುತ್ತಿದೆ ಎಂದರು.

'ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ 1 ರಿಂದ 8ನೇ ತರಗತಿವರೆಗಿನ ಮಕ್ಕಳಿಗೆ ನೀಡುತ್ತಿದ್ದ ವಿದ್ಯಾರ್ಥಿ ವೇತನವನ್ನು ರದ್ದುಗೊಳಿಸಿತು. ಸಿದ್ದರಾಮಯ್ಯ ಎರಡನೇ ಬಾರಿಗೆ ಮುಖ್ಯಮಂತ್ರಿ ಆದ ಮೇಲೆ ರಾಜ್ಯದಲ್ಲಿ ವಿದ್ಯಾರ್ಥಿ ವೇತನವನ್ನು ಜಾರಿಗೊಳಿಸಿದರು' ಎಂದು ತಿಳಿಸಿದರು.

ಜೈನ್ ಸಮುದಾಯದ ಡಾ.ಸುಯಶ್ ನಿಧಿ ಅವರು, ಸಮುದಾಯದ ಶ್ವೇತಾಂಬರ ಪಂಗಡವನ್ನು 3ಬಿಗೆ ಸೇರಿಸಬೇಕು. ಜೈನ ದೇವಾಲಯಗಳನ್ನು ರಕ್ಷಣೆ ಮಾಡಬೇಕು ಎಂದು ಕೋರಿದರು.

ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ರಾಜ್ಯಸಭೆ ಸದಸ್ಯ ಲಹರ್ ಸಿಂಗ್ ಸಿರೋಯಾ, ಆರ್ಚ್ ಬಿಷಪ್ ಡಾ.ಪೀಟರ್ ಮಚಾಡೊ, ಮಹಾಬೋಧಿ ಸೊಸೈಟಿ ನಿರ್ದೇಶಕ ವೆನ್ ಭಿಕ್ಕು ಬುದ್ಧದತ್ತ ಮಾತನಾಡಿದರು.

ಪಾರ್ಸಿ ಅಂಜುಮನ್ ಉಪಾಧ್ಯಕ್ಷ ಶೆರಿಯಾರ್ ವಕೀಲ್, ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಯು.ನಿಸಾರ್ ಅಹಮದ್, ಕಾರ್ಯದರ್ಶಿ ಡಾ.ಮಾಜುದ್ದೀನ್ ಖಾನ್, ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆ ಕಾರ್ಯದರ್ಶಿ ಸಲ್ಮಾ ಕೆ. ಫಹೀಮ್, ಅಮೀರ್ ಎ ಶರಿಯತ್‌ನ ಮೌಲಾನ ಸಗೀರ್ ಅಹಮದ್ ರಶಾದಿ, ಸಿಖ್ ಸಮುದಾಯದ ಧ್ಯಾನ್ ಪ್ರೀತ್ ಸುಖದೇವ್ ಹಾಜರಿದ್ದರು.

ಇದೇ ವೇಳೆ ಮುಸ್ಲಿಂ, ಜೈನ, ಪಾರ್ಸಿ, ಸಿಖ್ ಸಮುದಾಯದವರು ಪ್ರಾರ್ಥನೆ ಸಲ್ಲಿಸಿದರು.



ಕಾರ್ಯಕ್ರಮದಲ್ಲಿ ಅಲ್ಪಸಂಖ್ಯಾತರ ಆಯೋಗ ಅಧ್ಯಕ್ಷ ನಿಸಾರ್ ಅಹಮದ್ ಅವರನ್ನು ಸನ್ಮಾನಿಸಲಾಯಿತು. ನಸೀರ್ ಅಹಮದ್, ಪೀಟರ್ ಮಚಾಡೊ, ಜಮೀರ್ ಅಹಮದ್ ಖಾನ್, ವೆನ್ ಭಿಕ್ಕು ಬುದ್ಧದತ್ತ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಯತ್ನಾಳ್ ಬಣದ ಕುಮಾರ್ ಬಂಗಾರಪ್ಪ ಹೇಳಿಕೆ

ಅಕ್ರಮ ವಲಸಿಗರ ಬಗ್ಗೆ ಅಧ್ಯಯನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಸಕ ಬಸನಗೌಡ ಪಾಟೀಲ ಯತ್ನಾಳ ಬಣದಲ್ಲಿ ಗುರುತಿಸಿಕೊಂಡಿರುವ ಮಾಜಿ ಸಚಿವ ಕುಮಾರ್ ಬಂಗಾರಪ್ಪ ಅವರು ರಾಜ್ಯದಲ್ಲಿ ನೆಲಸಿರುವ ಅಕ್ರಮ ವಲಸಿಗರ ಬಗ್ಗೆ ಅಧ್ಯಯನ ನಡೆಸಲಿದ್ದಾರೆ.

ಈ ಹಿಂದೆ ಅವರು ವಕ್ಫ್ ಆಸ್ತಿಗಳಿಗೆ ಸಂಬಂಧಿಸಿದಂತೆ ರಾಜ್ಯವ್ಯಾಪಿ ಅಧ್ಯಯನ ನಡೆಸಿ, ವರದಿಯೊಂದನ್ನು ವಕ್ಫ್ ಕುರಿತ ಸಂಸತ್ತಿನ ಜಂಟಿ ಸಂಸದೀಯ ಸಮಿತಿಗೆ ಸಲ್ಲಿಸಿದ್ದರು.

ಈ ಕುರಿತು 'ಪ್ರಜಾವಾಣಿ'ಗೆ ಮಾಹಿತಿ ನೀಡಿದ ಅವರು, 'ರಾಜ್ಯದಲ್ಲಿ ಸುಮಾರು 40 ಲಕ್ಷದಷ್ಟು ವಿವಿಧ ದೇಶಗಳ ಅಕ್ರಮ ವಲಸಿಗರಿದ್ದು, ಇವರು ಸರ್ಕಾರದ ಎಲ್ಲ ಸೌಲಭ್ಯ ಪಡೆದುಕೊಳ್ಳುತ್ತಿದ್ದಾರೆ. ನಮ್ಮ ತೆರಿಗೆ ಹಣ ಇವರಿಗಾಗಿ ಪೋಲಾಗುತ್ತಿದೆ. ವಿಶ್ವದ ವಿವಿಧ ರಾಷ್ಟ್ರಗಳಲ್ಲಿ ಅಕ್ರಮ ವಲಸಿಗರ ಬಗ್ಗೆ ಚರ್ಚೆ ದೊಡ್ಡ ಮಟ್ಟದಲ್ಲಿ ನಡೆಯುತ್ತಿದೆ. ನಾವೂ ಈ ಸಮಸ್ಯೆಯತ್ತ ಗಮನಹರಿಸಲೇಬೇಕಾಗಿದೆ' ಎಂದರು.

'ಬೆಂಗಳೂರು ನಗರದಲ್ಲಿ ದೊಡ್ಡ ಪ್ರಮಾಣದಲ್ಲಿ ಅಕ್ರಮ ವಲಸಿಗರು ನೆಲಸಿದ್ದಾರೆ. ಅಕ್ರಮ ವಲಸಿಗರ ಹೆಸರಲ್ಲಿ ಸಮಾಜಘಾತುಕ ಶಕ್ತಿಗಳೂ ಬಂದು 'ಸ್ಲೀಪರ್ ಸೆಲ್' ಆಗಿ ಬೇರು ಬಿಟ್ಟಿದ್ದಾರೆ. ಈ ಬಗ್ಗೆ ಮೌನ ವಹಿಸಿಕೊಂಡು ಕೂತರೆ ಮುಂದೆ ದೇಶಕ್ಕೆ ಗಂಡಾಂತರ ತಪ್ಪಿದ್ದಲ್ಲ' ಎಂದರು.

'ಇದು ದೇಶದ ಆರ್ಥಿಕ, ಸಾಮಾಜಿಕ ಮತ್ತು ಭದ್ರತೆಯ ವಿಷಯವಾಗಿದೆ. ಆದ್ದರಿಂದ, ಈ ಬಗ್ಗೆ ವೈಯಕ್ತಿಕ ನೆಲೆಯಲ್ಲಿ ಅಧ್ಯಯನ ನಡೆಸಲು ಮುಂದಾಗಿದ್ದೇನೆ. ಮುಂದಿನ ದಿನಗಳಲ್ಲಿ ನನ್ನ ಪ್ರಯತ್ನಕ್ಕೆ ಬೇರೆ ನಾಯಕರು ಕೈಜೋಡಿಸಬಹುದು' ಎಂದು ಅವರು ಹೇಳಿದರು.

'ಅಧ್ಯಯನದ ಬಳಿಕ ವರದಿ ತಯಾರಿಸಿ ಸರ್ಕಾರಗಳಿಗೆ ಸಲ್ಲಿಸಬೇಕೆ ಎಂದು ಇನ್ನು ತೀರ್ಮಾನಿಸಿಲ್ಲ. ಆಳವಾದ ಅಧ್ಯಯನ ಮಾಡುವುದಷ್ಟೇ ನನ್ನ ಗುರಿ' ಎಂದು ಕುಮಾರ್ ಹೇಳಿದರು.



ದೇಶದ ಸುರಕ್ಷತೆ, ಭದ್ರತೆ ದೃಷ್ಟಿಯಿಂದ ಆಳವಾದ ಅಧ್ಯಯನ ಮಾಡಲಾಗುವುದು. ಈಗಲೇ ಎಚ್ಚೆತ್ತುಕೊಳ್ಳದಿದ್ದರೆ ದೇಶಕ್ಕೆ ಗಂಡಾಂತರ ತಪ್ಪಿದ್ದಲ್ಲ

ಕುಮಾರ್ ಬಂಗಾರಪ್ಪ, ಮಾಜಿ ಸಚಿವ

'ಮರಾಠಿ ಪುಂಡರನ್ನು ಬಂಧಿಸಿ'

ಬೆಂಗಳೂರು: 'ಬೆಳಗಾವಿಯಲ್ಲಿ ಬಸ್ ನಿರ್ವಾಹಕರ ಮೇಲೆ ಹಲ್ಲೆ ನಡೆಸಿದ ಮರಾಠಿ ಪುಂಡರ ಬಂಧಿಸಿ, ಗಡಿಪಾರು ಮಾಡಬೇಕು' ಎಂದು ಕರ್ನಾಟಕ ವಿಕಾಸ ರಂಗ ಆಗ್ರಹಿಸಿದೆ.

'ಕನ್ನಡದಲ್ಲಿ ಮಾತನಾಡಿದ ನಿರ್ವಾಹಕರಿಗೆ, ಮರಾಠಿ ಭಾಷೆಯಲ್ಲಿ ಮಾತನಾಡಲು ಒತ್ತಾಯಿಸಿ ಹಲ್ಲೆ ನಡೆಸಿರುವುದು ಖಂಡನೀಯ. ಇಂತಹ ಪುಂಡಾಟಿಕೆ ಹತ್ತಿಕ್ಕಲು ಕಠಿಣಕ್ರಮ ಕೈಗೊಳ್ಳುವ ಅಗತ್ಯವಿದೆ' ಎಂದು ಕರ್ನಾಟಕ ವಿಕಾಸ ರಂಗದ ರಾಜ್ಯ ಘಟಕದ ಅಧ್ಯಕ್ಷ ವ.ಚ. ಚನ್ನೇಗೌಡ ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

'ಚಾಲಕರು ಮತ್ತು ನಿರ್ವಾಹಕರ ಮೇಲೆ ಹಲ್ಲೆ ಪ್ರಕರಣಗಳಲ್ಲಿ ಸಾರಿಗೆ ಸಂಸ್ಥೆ ಆಡಳಿತ ವರ್ಗ ಯಾವುದೇ ಕಠಿಣ ಕ್ರಮ ಕೈಗೊಳ್ಳದಿರುವುದು ಖಂಡನೀಯ'' ಎಂದು ತಿಳಿಸಿದ್ದಾರೆ.



ಕೊಪ್ಪಳ ತಾಲ್ಲೂಕಿನ ಯಲಮಗೇರಿ ಗ್ರಾಮದ ರೈತ ಪಾಲಾಕ್ಷಗೌಡ ಮೇಟಿ ಅವರ ಹೊಲದಲ್ಲಿ ಕೇಸರ್ ತಳಿಯ ಮಾವು ಹೂ ಬಿಟ್ಟಿರುವುದು ಪ್ರಜಾವಾಣಿ ಚಿತ್ರಗಳು/ಭರತ್ ಕಂದಕೂರು

ವಿದೇಶಗಳಲ್ಲಿಯೂ ಕೊಪ್ಪಳ ಕೇಸರ್, ದಾಳಿಂಬೆ ಹಣ್ಣುಗಳ ಘಮಲು

‘ಉದ್ಯಮಿ’ಯಾದ ತೋಟಗಾರಿಕೆ ಬೆಳೆಗಾರ

• ಪ್ರಮೋದ ಕುಲಕರ್ಣಿ

ಕೊಪ್ಪಳ: ಹಣ್ಣಿನ ಬೆಳೆಗಳಿಂದ ಹೆಚ್ಚು ಲಾಭ ಸಿಗುತ್ತದೆ ಎಂಬುದನ್ನು ಅರಿತು ಕುಷ್ಟಗಿ ತಾಲ್ಲೂಕಿನ ಜೂಲಕಟ್ಟಿ ಗ್ರಾಮದ ಗ್ಯಾನಪ್ಪ ಗುಂಡಗಿ ಹಾಗೂ ಅವರ 11 ಜನ ಮಕ್ಕಳು ಮೂರ್ನಾಲ್ಕು ವರ್ಷಗಳ ಹಿಂದೆ ತಮ್ಮ ಒಟ್ಟು 30 ಎಕರೆ ತೋಟದ ಪೈಕಿ ಆರು ಎಕರೆಯಲ್ಲಿ ನಾಲ್ಕು ಸಾವಿರ ದಾಳಿಂಬೆ ಸಸಿಗಳನ್ನು ನಾಟಿ ಮಾಡಿ ₹20 ಲಕ್ಷ ಖರ್ಚು ಮಾಡಿದರು. 14 ತಿಂಗಳಲ್ಲಿ ಮೊದಲ ಫಸಲು ಬಂದಾಗ ಮಾಡಿದ ಖರ್ಚು ಕಳೆದು ₹22 ಲಕ್ಷ ಲಾಭ ಕೈಸೇರಿತು. ಇದಾದ ನಂತರದ ಋತುವಿಗೆ ಎರಡನೇ ಫಸಲಿಗೆ ಬಂಪರ್ ಬೆಲೆಯೂ ಲಭಿಸಿ ಬರೋಬ್ಬರಿ ₹1.06 ಕೋಟಿ ಲಾಭ ಬಂತು! ಮೂರನೇ ಋತುವಿನ ಫಸಲಿನಲ್ಲಿಯೂ ದೊಡ್ಡ-ಮಟ್ಟದಲ್ಲಿ ಹಣ ಜೇಬಿಗಿಳಿಯಿತು. ಅವರೀಗ ನಾಲ್ಕನೇ ಫಸಲಿನ ನಿರೀಕ್ಷೆಯಲ್ಲಿದ್ದಾರೆ...

ಮೊದಲು ಶೇಂಗಾ ಬೆಳೆದು ಸಂಕಷ್ಟ ಎದುರಿಸಿ ಸಾಲ ಮಾಡುವ ಸ್ಥಿತಿಗೆ ತಲುಪಿದ್ದ ಗ್ಯಾನಪ್ಪ ಗುಂಡಗಿ ಅವರ ಕುಟುಂಬ ಈಗ ಆರ್ಥಿಕವಾಗಿ ಗಟ್ಟಿಯಾಗಿದೆ.

‘ನಮ್ಮ ತಂದೆಗೆ ಏಳು ಜನ ಪುತ್ರರು, ನಾಲ್ಕು ಜನ ಪುತ್ರಿಯರಿದ್ದಾರೆ. ಸೊಸೆಯಂದಿರು, ಮಕ್ಕಳು, ಮೊಮ್ಮಕ್ಕಳು ಸೇರಿ ಮನೆಯಲ್ಲಿ 70 ಜನರಿದ್ದೇವೆ. ದಾಳಿಂಬೆ ಬೆಳೆಗೆ ಉತ್ತಮ ಮಾರುಕಟ್ಟೆ ಲಭಿಸಿದ್ದರಿಂದ ಭರಪೂರ ಆದಾಯ ಗಳಿಸಲು ಸಾಧ್ಯವಾಯಿತು. ಇದು ನಮ್ಮ ಕುಟುಂಬದವರನ್ನು ವಿದ್ಯಾವಂತರನ್ನಾಗಿಸಿದೆ. ನನ್ನ ತಂದೆಗೆ 19 ಜನ ಮೊಮ್ಮಕ್ಕಳಿದ್ದು ಅದರಲ್ಲಿ ಒಬ್ಬ ಪಿಎಸ್ಐ ಸೇರಿ ಆರು ಜನ ಸರ್ಕಾರಿ ನೌಕರಿ ಪಡೆದುಕೊಂಡಿದ್ದಾರೆ’ ಎಂದು ಗ್ಯಾನಪ್ಪ ಗುಂಡಗಿ ಅವರ ಆರನೇ ಮಗ ದ್ಯಾಮಣ್ಣ ಗುಂಡಗಿ ಹೇಳಿದರು.

ಕೊಪ್ಪಳ ತಾಲ್ಲೂಕಿನ ಅಳವಂಡಿ ಸಮೀಪದ ಮೈನಹಳ್ಳಿ ಗ್ರಾಮದ ಈಶಪ್ಪ ಹಳ್ಳಿ ಎರಡು ವರ್ಷಗಳಿಂದ ತೈವಾನ್ ಪಿಂಕ್ ತಳಿಯ ಪೇರಲ ಬೆಳೆಯುತ್ತಿದ್ದು ವಾರ್ಷಿಕವಾಗಿ ಆರೇಳು ಲಕ್ಷ ಲಾಭ ಪಡೆ-ಯುತ್ತಿದ್ದಾರೆ. ‘ಅತಿಯಾದ ರಾಸಾಯನಿಕ ಬಳಕೆಯಿಂದ ಸತ್ವ ಕಳೆದುಕೊಂಡಿದ್ದ ಭೂಮಿಗೆ ಹೊಲದಲ್ಲಿಯೇ ಕೊಟ್ಟಿಗೆ ಗೊಬ್ಬರ, ಸೆಗಣಿ, ಕುರಿಹಿಕ್ಕಿ, ಜೀವಾಮೃತ ತಯಾರಿಸಿ ಅದನ್ನೇ ಬಳಕೆ ಮಾಡಿದ್ದರಿಂದ ಖರ್ಚು ಕಡಿಮೆಯಾಗಿ ಆರ್ಥಿಕ ಸ್ಥಿತಿ ಬದಲಾಗಿದೆ. ತೋಟಗಾರಿಕಾ ಕೃಷಿ ಆಯ್ಕೆ ಮಾಡಿಕೊಂಡಿದ್ದು ಬದುಕು ನೀಡಿದೆ’ ಎನ್ನುತ್ತಾರೆ ಈಶಪ್ಪ ಹಳ್ಳಿ.

ಕೊಪ್ಪಳ ತಾಲ್ಲೂಕಿನ ಕಲ್ಲತಾವರಗೇರಾ ಗ್ರಾಮದ 33 ವರ್ಷದ ಅಂಬರೀಶ್ ತಟ್ಟಿ ಎನ್ನುವ ಯುವರೈತ ತಮ್ಮ ನಾಲ್ಕೂವರೆ ಎಕರೆ ತೋಟದಲ್ಲಿ ಮಾವಿನ ಹಣ್ಣುಗಳ ತಳಿ ಬೇನಿಷಾ ಬೆಳೆದಿದ್ದಾರೆ. ಕೊಪ್ಪಳ ತಾಲ್ಲೂಕು ವ್ಯಾಪ್ತಿಯ ರೈತರಿಗೆ ಮೆಕ್ಕೆಜೋಳ, ಕಡಲೆ, ಶೇಂಗಾ ಸಾಂಪ್ರದಾಯಿಕ ಬೆಳೆಯಾಗಿದೆ. ಅಂಬರೀಶ್ ಕೂಡ ಇದೇ ಸಾಂಪ್ರದಾಯಿಕ ಬೆಳೆಯ ಬೆನ್ನಿಗೆ ಬಿದ್ದು ವಾರ್ಷಿಕ ₹30 ಸಾವಿರದಿಂದ ₹40 ಸಾವಿರ ಮಾತ್ರ ಲಾಭ ಗಳಿಸುತ್ತಿದ್ದರು. ಇದಕ್ಕೆ ವಿದಾಯ ಹೇಳಿ ಏಳು ವರ್ಷಗಳ ಹಿಂದೆ ನೆಟ್ಟ ಮಾವಿನ ಸಸಿಗಳು ಈಗ ಪ್ರತಿವರ್ಷವೂ ‘ಅಕ್ಷಯ ಪಾತ್ರೆ’ಯಂತೆ ಫಸಲು ನೀಡುತ್ತಿವೆ. ವಾರ್ಷಿಕ ಆದಾಯ ಗಳಿಕೆ ಪ್ರಮಾಣ ₹5 ಲಕ್ಷದಿಂದ ₹6 ಲಕ್ಷಕ್ಕೆ ಏರಿಕೆಯಾಗಿದೆ. ಇದರಿಂದ ಪ್ರೇರಣೆಗೊಂಡು ದೇಶ ಹಾಗೂ ವಿದೇಶಗಳಲ್ಲಿ ಖ್ಯಾತಿ ಪಡೆಯುತ್ತಿರುವ ‘ಕೇಸರ್’ ಮಾವನ್ನೂ ಈಗ ಬೆಳೆಯಲು ಆರಂಭಿಸಿದ್ದಾರೆ.

ಕೊಪ್ಪಳ ತಾಲ್ಲೂಕಿನ ಇರಕಲ್ಲಗಡ ಹೋಬಳಿ ಸಮೀಪದ ಯಲಮಗೇರಿ ಎಂಬ ಗ್ರಾಮದಲ್ಲಿ ಯುವರೈತ ಪಾಲಾಕ್ಷಗೌಡ ಮೇಟಿ ಆರೇಳು ವರ್ಷಗಳಿಂದ ನಿರಂತರವಾಗಿ ಪಪ್ಪಾಯ ಬೆಳೆದು ಪ್ರತಿ ಋತುವಿಗೂ ₹20 ಲಕ್ಷ ವಹಿವಾಟು ನಡೆಸುತ್ತಿದ್ದಾರೆ. ನಾಲ್ಕು ವರ್ಷಗಳ ಹಿಂದೆ ನಾಟಿ ಮಾಡಿದ್ದ ಕೇಸರ್ ಮಾವು ಮೊದಲ ವರ್ಷ ಹೇರಳವಾಗಿ ಹೂ ಬಿಟ್ಟಿವೆ. ಮೊದಲ ಫಸಲು ಇದೇ ವರ್ಷದ ಏಪ್ರಿಲ್ ಅಂತ್ಯದಲ್ಲಿ ಬರಲಿದ್ದು ಈಗಾಗಲೇ ಏಜೆಂಟರು ಬಂದು ತೋಟ ಗುತ್ತಿಗೆ ಪಡೆದಿದ್ದಾರೆ. ಹಣ್ಣುಗಳ ಕಣ್ಗಾವಲಿಗೆ ಹೊಲದಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಿದ್ದಾರೆ.



ಜಿಲ್ಲೆಯಲ್ಲಿ ಬೆಳೆಯುವ ಹಣ್ಣುಗಳಿಗೆ ತೋಟಗಾರಿಕಾ ಇಲಾಖೆ ಮಾಡಿರುವ ‘ಕೊಪ್ಪಳ’ ಹೆಸರಿನ ಬ್ರ್ಯಾಂಡ್

ಇವು ಕೆಲವು ಉದಾಹರಣೆಗಳಷ್ಟೇ. ಸಣ್ಣ ಮತ್ತು ಮಧ್ಯಮ ವರ್ಗದ ರೈತರು ಕೂಡ ಈಗ ಕೊಪ್ಪಳ ಜಿಲ್ಲೆಯಲ್ಲಿ ತೋಟಗಾರಿಕಾ ಬೆಳೆಗಳ ಬೆನ್ನು ಹತ್ತಿದ್ದಾರೆ. ಕಡಿಮೆ ವರ್ಷಗಳಲ್ಲಿ ಗುಣಮಟ್ಟದ ಫಸಲು ಲಭಿಸುವುದು, ನಿರ್ವಹಣೆ ಸುಲಭ, ತೋಟಗಾರಿಕಾ ಇಲಾಖೆಯ ಯೋಜನೆಗಳನ್ನು ರೈತರಿಗೆ ತಲುಪಿಸುವಲ್ಲಿ ಅಧಿಕಾರಿಗಳ ನಿರಂತರ ಪ್ರಯತ್ನ, ಜಿಲ್ಲೆಯ ಬಿರುಬಿಸಿಲು, ಬಹುತೇಕ ಕೆಂಪು ಮಣ್ಣಿನ ಭೂಮಿ ಈ ಎಲ್ಲ ಅಂಶಗಳು ರೈತರು ತೋಟಗಾರಿಕಾ ಕ್ಷೇತ್ರದತ್ತ ಒಲವು ತೋರಲು ಕಾರಣವಾಗಿವೆ. ಮುಖ್ಯವಾಗಿ ಮೂಲತಃ ಕೃಷಿಕರೇ ಆಗಿರುವ ಕೊಪ್ಪಳ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಕೃಷ್ಣ ಸಿ. ಉಕ್ಕುಂದ ಹಾಗೂ ಅವರ ತಂಡದವರು ಮಾರುಕಟ್ಟೆ ಕಲ್ಪಿಸಿಕೊಡುತ್ತಿರುವುದು ರೈತರಿಗೆ ವರದಾನವಾಗಿದೆ.

‘ಬೆಳೆಗಳಿಗೆ ಇಲಾಖೆಯಿಂದಲೇ ಮಾರುಕಟ್ಟೆ ಸೌಲಭ್ಯ ಒದಗಿಸಲಾಗುತ್ತಿದೆ. ವ್ಯಾಪಾರಿಗಳು ಜೊತೆ ಒಪ್ಪಂದ, ವ್ಯವಹಾರ ಸಂಬಂಧಿತ ಸಂಪನ್ಮೂಲ ವ್ಯಕ್ತಿಗಳಿಂದ ರೈತರಿಗೆ ತರಬೇತಿ, ಋತುವಾರು ನಡೆಯುವ ಹಣ್ಣುಗಳು ಮೇಳ, ಸಸ್ಯ ಸಂತೆ ಕಾರ್ಯಕ್ರಮಗಳಿಂದ ರೈತರು, ವ್ಯಾಪಾರಿಗಳು ಮತ್ತು ರಫ್ತುದಾರರ ನಡುವೆ ನೇರ ಸಂಹವನ ಸಾಧ್ಯವಾಗುತ್ತಿದೆ. ಸಸಿ ನೀಡಿದವರೇ ಫಸಲು ಬಂದ ಬಳಿಕ ರೈತರಿಂದ ಪಡೆಯುವ ‘ಮರಳಿ ಖರೀದಿ’ ವ್ಯವಸ್ಥೆ ಮಾಡಲಾಗಿದೆ. ಈ ಎಲ್ಲ ಪ್ರಯತ್ನಗಳಿಂದ ವಾರ್ಷಿಕವಾಗಿ ₹450 ಕೋಟಿಯಿಂದ ₹500 ಕೋಟಿ ತೋಟಗಾರಿಕಾ ಬೆಳೆಗಳ ವಹಿವಾಟು ನಡೆಸಲಾಗುತ್ತಿದೆ’ ಎನ್ನುತ್ತಾರೆ ಕೃಷ್ಣ ಸಿ. ಉಕ್ಕುಂದ.

ಐದು ವರ್ಷಗಳ ಹಿಂದೆ ಜಿಲ್ಲೆಯಲ್ಲಿ 22 ಸಾವಿರ ಹೆಕ್ಟೇರ್ ಮಾತ್ರ ತೋಟಗಾರಿಕಾ ಪ್ರದೇಶವಿತ್ತು. ಈಗ 55 ಸಾವಿರ ಹೆಕ್ಟೇರ್‌ಗೆ ಏರಿಕೆಯಾಗಿದೆ. ಇಲಾಖೆಯು ತನ್ನ ಕಚೇರಿ ಆವರಣದಲ್ಲಿ ಕಿಸಾನ್ ಕೇರ್ ಸೆಂಟರ್ ಆರಂಭಿಸಿದ್ದು, ಇದು ರಾಜ್ಯದ ಮಾದರಿ ಕೇಂದ್ರವಾಗಿದೆ. ಈ ಕೇಂದ್ರದಲ್ಲಿ ಕೃಷಿ ಪರಿಕರಕಗಳ ಮಾರಾಟ, ರೈತರಿಗೆ ಸಲಹೆ ನೀಡಲಾಗುತ್ತದೆ. ರೈತರೇ ನೇರವಾಗಿ ಇಲಾಖೆ ಯೋಜನೆಗಳ ಮಾಹಿತಿ ಪಡೆದುಕೊಳ್ಳಬಹುದು. ಬ್ಯಾಂಕ್ ಸೌಲಭ್ಯಗಳು, ರೈತ ಸಂಸ್ಥೆಗಳ ಮಾಹಿತಿ, ರೈತರೊಂದಿಗೆ ಆಪ್ತ ಸಮಾಲೋಚನೆ, ಮರು ಖರೀದಿ ಒಪ್ಪಂದ, ಬೆಳೆಗಳ ಮೌಲ್ಯ ವರ್ಧನೆಗೆ ಕ್ರಮ, ಸ್ಥಳೀಯ ಮಾರುಕಟ್ಟೆ ಹಾಗೂ ರಫ್ತು ಮಾರುಕಟ್ಟೆ, ತಂತ್ರಜ್ಞಾನ ಆಧರಿತ ತೋಟಗಾರಿಕೆ ಮತ್ತು ಸಾವಯವ ದೃಢೀಕರಣ ಪತ್ರಗಳ ಮಾಹಿತಿ ಇವೆಲ್ಲವೂಗಳ ಮಾಹಿತಿ ಕೇಂದ್ರದಲ್ಲಿ ಸಿಗುತ್ತದೆ. ಈ ಅಂಶಗಳು ಕೂಡ ಜಿಲ್ಲೆಯಲ್ಲಿ ತೋಟಗಾರಿಕಾ ಕ್ಷೇತ್ರ ಹೆಚ್ಚಿಸಲು ಕಾರಣವಾಗಿವೆ ಎನ್ನುತ್ತಾರೆ ಅಧಿಕಾರಿಗಳು.



ತಾವು ಬೆಳೆದ ತೈವಾನ್ ಪಿಂಕ್ ಪೇರಲ ಜೊತೆ ರೈತ ಗೋಣೆಪ್ಪ

ರೈತರು ಹಣ್ಣುಗಳನ್ನು ಬೆಳೆದರೂ ಕೋವಿಡ್ ಸಮಯದಲ್ಲಿ ಮಾರುಕಟ್ಟೆ ಸಿಗದೇ ಪರದಾಡು-ವಂತಾಗಿತ್ತು. ಆಗ ತೋಟಗಾರಿಕಾ ಇಲಾಖೆ ಹಣ್ಣುಗಳನ್ನು ಬೆಳೆದ ರೈತರನ್ನು ಒಂದೇ ವೇದಿಕೆಗೆ ತಂದಿತು. ವಾಟ್ಸ್‌ಆ್ಯಪ್ ಮೂಲಕ ಯಾವ ಹಣ್ಣುಗಳಿಗೆ ಎಲ್ಲಿ ಹೆಚ್ಚು ಬೇಡಿಕೆಯಿದೆ ಎನ್ನುವ ಮಾಹಿತಿ ವಿನಿಮಯವಾಯಿತು. ಇದರಿಂದ ಎಲ್ಲ ರೈತರಿಗೂ ಅನುಕೂಲವಾಯಿತು. ಕೋವಿಡ್ ಸಂಕಷ್ಟದ ಕಾಲದಲ್ಲಿ ಹೀಗೆ ಆರಂಭವಾದ ‘ಮಾರುಕಟ್ಟೆ ಗ್ರೂಪ್’ ವರದಾನವಾಗಿದೆ.

ಅನ್ನದ ಬಟ್ಟಲು: ಜಿಲ್ಲೆಯಲ್ಲಿ ಒಟ್ಟು 4.10 ಲಕ್ಷ ಹೆಕ್ಟೇರ್ ಕೃಷಿ ಭೂಮಿಯಿದೆ. ತುಂಗಭದ್ರಾ ಜಲಾಶಯದ ಅಚ್ಚುಕಟ್ಟು ಪ್ರದೇಶ ವ್ಯಾಪ್ತಿಯ ಗಂಗಾವತಿ, ಕನಕಗಿರಿ, ಕಾರಟಗಿ ಭಾಗದಲ್ಲಿ ಹೆಚ್ಚು ಭತ್ತ ಬೆಳೆಯುತ್ತಿದ್ದಾರೆ. ಒಟ್ಟು 65 ಸಾವಿರ ಹೆಕ್ಟೇರ್ ಭತ್ತದ ಕೃಷಿಯಿದೆ. ಹೀಗಾಗಿ ಗಂಗಾವತಿಯು ರಾಜ್ಯದ ಭತ್ತದ ಕಣಜವೆಂದು ಖ್ಯಾತಿ ಪಡೆದಿದೆ. ನಿರಂತರವಾಗಿ ಭತ್ತ ಬೆಳೆಯುತ್ತಿರುವ ಪರಿಣಾಮ ಮಣ್ಣಿನ ಫಲವತ್ತತೆ ನಾಶವಾಗಿ ಸವಕಳಿ, ವಿಪರೀತ ರಾಸಾಯನಿಕ ಗೊಬ್ಬರ ಬಳಕೆ, ಅತಿಯಾಗಿ ನೀರು ಹೊಲದಲ್ಲಿ ನಿಲ್ಲಿಸುತ್ತಿರುವುದರಿಂದ ಭತ್ತ ಬೆಳೆಯುವ ರೈತನ ಬದುಕು ಸಂಕಷ್ಟಕ್ಕೆ ಸಿಲುಕಿದೆ.

ಭತ್ತದ ಕೃಷಿ ಆರಂಭಿಸಿದ ಹೊಸತರಲ್ಲಿ ಪ್ರತಿ ಎಕರೆಗೆ 35ರಿಂದ 40 ಕ್ವಿಂಟಲ್ ಭತ್ತ ಬೆಳೆಯುತ್ತಿದ್ದ ರೈತನಿಗೆ ಈಗ 15ರಿಂದ 20 ಕ್ವಿಂಟಲ್ ಬಂದರೆ ಅದೇ ಹೆಚ್ಚು ಎನ್ನುವಂತಾಗಿದೆ. ಭತ್ತದಿಂದ ಆಗುತ್ತಿರುವ ನಷ್ಟ ಮತ್ತು ತೋಟಗಾರಿಕೆಯಿಂದ ಸಿಗುತ್ತಿರುವ ಸುಲಭ ಮಾರುಕಟ್ಟೆ ಸೌಲಭ್ಯದಿಂದಾಗಿ ಜಿಲ್ಲೆಯಲ್ಲಿ ತೋಟಗಾರಿಕಾ ಕ್ಷೇತ್ರದತ್ತ ಒಲವು ಹೆಚ್ಚಾಗುತ್ತಿದೆ. ಸತ್ವ ಕಳೆದುಕೊಂಡ ಭೂಮಿಯಲ್ಲಿ ತಾಳೆ ಹಾಗೂ ಬಾಳೆ ಬೆಳೆದು ಕಳೆದು ಹೋದ ಭೂಮಿಯ ಸತ್ವ ಮರಳಿ ಗಳಿಸುವ ಪ್ರಯತ್ನ ನಡೆಯುತ್ತಿದೆ.

ಬೇಡಿಕೆ ಹೆಚ್ಚಿಸಿದ ಬ್ರ್ಯಾಂಡ್ ಮೌಲ್ಯ: ಜಿಲ್ಲೆಯಲ್ಲಿ ರೈತರು ತೋಟಗಾರಿಕಾ ಬೆಳೆಗಳಲ್ಲಿ ಮಾವಿನ ವಿವಿಧ ತಳಿಗಳು, ದಾಳಿಂಬೆ, ಪಪ್ಪಾಯ, ಪೇರಲ, ದ್ರಾಕ್ಷಿ, ಸೀತಾಫಲ, ಬಾಳೆ, ಅಂಜೂರು, ಕಲ್ಲಂಗಡಿ, ಕರಬೂಜ ಬೆಳೆಯುತ್ತಿದ್ದಾರೆ. ಮಾವಿನ ಹಣ್ಣುಗಳಲ್ಲಿ ಕೇಸರ್, ಬೇನಿಷಾ, ಆಪೋಸ್ ಬೆಳೆಯುತ್ತಿದ್ದರೂ, ಕೇಸರ್ ಹಣ್ಣಿಗೆ ಬೇಡಿಕೆಯಿದೆ. ಪ್ರಕಾಶಮಾನವಾದ ಕಿತ್ತಳೆ ಬಣ್ಣದ ತಿರುಳಿಗೆ ಕೇಸರ್ ಎಂದೂ ಕರೆಯಲ್ಪಡುವ ‘ಗಿರ್ ಕೇಸರ್’ ಮಾವು ಗುಜರಾತ್‌ನಲ್ಲಿ ಖ್ಯಾತಿಯಾಗಿದ್ದು ಪ್ರತಿ ವರ್ಷ ಜೂನ್ ವೇಳೆಗೆ ಮಾರುಕಟ್ಟೆಗೆ ಬರುತ್ತದೆ. ಅದೇ ಬಣ್ಣ ಹಾಗೂ ರುಚಿ ಹೊಂದಿರುವ ಕೊಪ್ಪಳ ಕೇಸರ್ ಏಪ್ರಿಲ್ ಅಂತ್ಯದಲ್ಲಿ ಮಾರುಕಟ್ಟೆಗೆ ಬರುವುದರಿಂದ ಬೇಡಿಕೆಯೂ ಸಿಗುತ್ತದೆ.

ಜಿಲ್ಲೆಯಲ್ಲಿ ಬೆಳೆಯುವ ಎಲ್ಲಾ ಹಣ್ಣುಗಳ ಹಿಂದೆ ತೋಟಗಾರಿಕಾ ಇಲಾಖೆ ‘ಕೊಪ್ಪಳ’ ಎನ್ನುವ ಬ್ರ್ಯಾಂಡ್ ಸೃಷ್ಟಿಸಿದ್ದು, ‘ಕೊಪ್ಪಳ ಕೇಸರ್’ ಒಂದು ಋತುವಿನಲ್ಲಿ 25 ಸಾವಿರ ಟನ್, ಕೊಪ್ಪಳ ದಾಳಿಂಬೆ 35 ಸಾವಿರ ಟನ್ ಮತ್ತು ಪಪ್ಪಾಯ ಐದು ಸಾವಿರ ಮೆಟ್ರಿಕ್ ಟನ್ ಮುಂಬೈ, ದೆಹಲಿ, ಗುಜರಾತ್, ಉತ್ತರ ಪ್ರದೇಶದ ಜೊತೆಗೆ ದುಬೈ, ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಕತಾರ್ ರಾಷ್ಟ್ರಗಳಿಗೂ ಕಳುಹಿಸಲಾಗುತ್ತಿದೆ. ಸ್ಥಳೀಯ ದಲ್ಲಾಳಿಗಳು ನೇರವಾಗಿ ರೈತರ ಹೊಲಕ್ಕೆ ಬಂದು ಖರೀದಿಸಿ ಅದನ್ನು ಮುಂಬೈ, ಕೋಲ್ಕತ್ತ ಹಾಗೂ ದೆಹಲಿ ಮಾರುಕಟ್ಟೆ ಮೂಲಕ ವಿದೇಶಗಳಿಗೆ ರಫ್ತು ಮಾಡುತ್ತಿದ್ದಾರೆ. ದಾಳಿಂಬೆಯು ಶ್ರೀಲಂಕಾ ಮತ್ತು ದುಬೈಗೆ ರಫ್ತಾಗುತ್ತಿದೆ. ಗುಜರಾತ್ ‘ಗಿರ್ ಕೇಸರ್’ ಮಾದರಿಯಲ್ಲಿಯೇ ‘ಕೊಪ್ಪಳ ಕೇಸರ್’ ಮಾವಿನ ಹಣ್ಣಿನ ತಳಿಗೆ ಭೌಗೋಳಿಕ ಸೂಚಕ ಸ್ಥಾನಮಾನ (ಜಿಐ ಟ್ಯಾಗ್) ಪಡೆಯುವ ಪ್ರಯತ್ನಗಳು ನಡೆಯುತ್ತಿವೆ.

ಎರಡು ವರ್ಷಗಳ ಹಿಂದೆ ಕೊಪ್ಪಳದಲ್ಲಿ ನಡೆದಿದ್ದ ರಫ್ತುದಾರರ, ಖರೀದಿದಾರರ ಹಾಗೂ ಮಾರಾಟಗಾರರ ಸಮಾವೇಶದಿಂದ ನೇರವಾಗಿ ರೈತರು ಹಾಗೂ ರಫ್ತುದಾರರ ನಡುವೆ ವ್ಯವಹಾರ ಏರ್ಪಟ್ಟಿದೆ. ಹಣ್ಣುಗಳು ಕಾಯಿ ಕಟ್ಟುವಾಗಲೇ ದಲ್ಲಾಳಿಗಳು ತೋಟಕ್ಕೆ ಬಂದು ಗುತ್ತಿಗೆ ಪಡೆಯುತ್ತಿದ್ದಾರೆ. ಇದರಲ್ಲಿ ಕೆಲವರು ಸ್ಥಳೀಯ ಮಾರುಕಟ್ಟೆಗೆ ಮಾರಾಟ ಮಾಡಿದರೆ, ಇನ್ನೂ ಕೆಲವರು ರಾಜ್ಯ, ಹೊರರಾಜ್ಯ ಮತ್ತು ವಿದೇಶಗಳಿಗೆ ಕಳುಹಿಸುತ್ತಿದ್ದಾರೆ.

ವಿದೇಶಿ ಹಣ್ಣುಗಳ ಆಕರ್ಷಣೆ: ವಿದೇಶಗಳಲ್ಲಿ ಬೆಳೆಯುವ ದುಬಾರಿ ಬೆಲೆಯ ಸಸಿಗಳನ್ನು ಪ್ರತಿವರ್ಷವೂ ಸಸ್ಯಸಂತೆಯಲ್ಲಿ ತರಿಸಲಾಗುತ್ತದೆ. ಅವುಗಳ ಆಕರ್ಷಣೆಗೆ ಒಳಗಾಗಿ ರೈತರು ಕೃಷಿಯಲ್ಲಿ ಹೊಸ ಪ್ರಯೋಗ ಮಾಡಿ ವಿದೇಶಿ ತಳಿಗಳನ್ನೂ ಬೆಳೆಯುತ್ತಿದ್ದಾರೆ.

ದುಬಾರಿ ಬೆಲೆಯ ಮಾವಿನ ಹಣ್ಣುಗಳಲ್ಲಿ ಒಂದಾದ ಜಪಾನ್ ಮೂಲದ ‘ಮೀಯಾ ಜಾಕಿ’ ತಳಿ 2023ರ ಮಾವು ಮೇಳದಲ್ಲಿ ಮೊದಲ ಬಾರಿಗೆ ಪ್ರದರ್ಶನಕ್ಕೆ ಇರಿಸಲಾಗಿತ್ತು. ಆರಂಭದಲ್ಲಿ ಈ ತಳಿಯ ಒಂದು ಸಸಿಗೆ ₹5 ಸಾವಿರವಿತ್ತು. ಈಗ ಜಿಲ್ಲೆಯಲ್ಲಿಯೇ ರೈತರು ಹತ್ತು ಹೆಕ್ಟೇರ್ ಪ್ರದೇಶದಲ್ಲಿ ಮೀಯಾ ಜಾಕಿ ಬೆಳೆದಿದ್ದು, ಸಸಿಗಳ ದರ ₹1,000ಕ್ಕೆ ಇಳಿದಿದೆ.

ಜಿಲ್ಲೆಯ ತೋಟಗಾರಿಕಾ ಬೆಳೆಗಾರರಿಗೆ ಸಿಗುತ್ತಿರುವ ಉತ್ತೇಜನದಿಂದಾಗಿ ಸಣ್ಣ ರೈತರೂ ತಮ್ಮ ಕಿರಿದಾದ ಜಾಗದಲ್ಲಿ ತರಕಾರಿ, ಹೂ, ಹಣ್ಣುಗಳನ್ನು ಬೆಳೆಯುತ್ತಿದ್ದಾರೆ. ತೋಟಗಾರಿಕಾ ಹಬ್ ಆಗಿ ಬೆಳೆಯುತ್ತಿರುವ ಕೊಪ್ಪಳ ಜಿಲ್ಲೆಯಲ್ಲಿ ತೋಟಗಾರಿಕಾ ಹೈ ಟೆಕ್ನಾಲಜಿ ಪಾರ್ಕ್ ನಿರ್ಮಾಣ ಮಾಡುವುದಾಗಿ 2020–21ರಲ್ಲಿ ಬಜೆಟ್‌ನಲ್ಲಿ ಸರ್ಕಾರ ಘೋಷಿಸಿತ್ತು. ಇದಕ್ಕೆ ಡಿಪಿಆರ್ ಸಿದ್ಧವಾಗಿದ್ದು, ಅನುಷ್ಠಾನವಾದರೆ ತೋಟಗಾರಿಕಾ ಪ್ರದೇಶ ಮತ್ತಷ್ಟು ವಿಸ್ತಾರವಾಗುತ್ತದೆ. ಉತ್ತರ ಕರ್ನಾಟಕದ ಜಿಲ್ಲೆಗಳ ತೋಟಗಾರಿಕಾ ಬೆಳೆಗಳಿಗೆ ಕೊಪ್ಪಳ ಜಿಲ್ಲೆಯಲ್ಲಿ ಸ್ಥಳೀಯವಾಗಿ ಮತ್ತಷ್ಟು ಮಾರುಕಟ್ಟೆ ಲಭಿಸುತ್ತದೆ. ಸಂಸ್ಕರಣೆ, ಮೌಲ್ಯವರ್ಧನೆಗಳ ಅವಕಾಶಗಳು ಕೂಡ ಹೆಚ್ಚಾಗುತ್ತವೆ. ❖

ಕೊಪ್ಪಳ ಜಿಲ್ಲೆಯಲ್ಲಿ ತೋಟಗಾರಿಕೆ ಪ್ರದೇಶ ಹೆಚ್ಚಾದ ವಿವರ (ಹೆಕ್ಟೇರ್‌ಗಳಲ್ಲಿ)

ವರ್ಷ	ತೋಟಗಾರಿಕಾ ಪ್ರದೇಶ	ಹೆಚ್ಚಾದ ಪ್ರದೇಶ
2020	22,000	1,000
2021	28,000	6,000
2022	36,000	8,000
2023	45,000	9,000
2024	55,000	10,000



ಕೊಪ್ಪಳ ಜಿಲ್ಲೆಯಲ್ಲಿ ಐದು ವರ್ಷಗಳಲ್ಲಿ 33 ಸಾವಿರ ಹೆಕ್ಟೇರ್ ತೋಟಗಾರಿಕಾ ಪ್ರದೇಶ ಹೆಚ್ಚಾಗಿದೆ. ಮುಂದಿನ ಐದು ವರ್ಷಗಳಲ್ಲಿ ಪ್ರತಿವರ್ಷವೂ 10 ಸಾವಿರ ಹೆಕ್ಟೇರ್ ಹೆಚ್ಚಿಸುವ ಗುರಿ ಇದೆ.
ಕೃಷ್ಣ ಸಿ. ಉಕ್ಕುಂದ, ತೋಟಗಾರಿಕೆ ಇಲಾಖೆ ಉಪನಿರ್ದೇಶಕ, ಕೊಪ್ಪಳ



ಕೊಪ್ಪಳ ಜಿಲ್ಲೆಯಲ್ಲಿರುವ ಬಹುತೇಕ ಕೆಂಪು ಮಣ್ಣು, ಬಿಸಿಲಿನ ವಾತಾವರಣ ತೋಟಗಾರಿಕಾ ಬೆಳೆಗಳಿಗೆ ಹೇಳಿಮಾಡಿಸಿದಂತಿದೆ. ಇಂಥ ವಾತಾವರಣದಲ್ಲಿ ಮಾವಿನ ಹಣ್ಣುಗಳ ರುಚಿಯೂ ಹೆಚ್ಚು
ಅಂಬರೀಶ್ ತಟ್ಟಿ, ರೈತ



ಪಪ್ಪಾಯ ಹಾಗೂ ಮಾವು ಬೆಳೆಯಲು ಆರಂಭಿಸಿದ ಬಳಿಕ ನೌಕರನಂತೆ ಪ್ರತಿ ತಿಂಗಳೂ ಹಣ ಗಳಿಸಲು ಸಾಧ್ಯವಾಗುತ್ತಿದೆ. ತೋಟಗಾರಿಕೆಯಿಂದ ರೈತನೂ ಉದ್ಯಮಿಯಾಗುತ್ತಿದ್ದಾನೆ.
ಪಾಲಾಕ್ಷಗೌಡ ಮೇಟಿ, ರೈತ



ದಾಳಿಂಬೆ ಬೆಳೆದು ಕೋಟ್ಯಂತರ ರೂಪಾಯಿ ಲಾಭ ಗಳಿಸಿದ್ದೇನೆ. ಖರ್ಚು ಕೂಡ ಸಾಕಷ್ಟಿದೆ. ವೈಜ್ಞಾನಿಕವಾಗಿ ಕೃಷಿ ಮಾಡಿದರೆ ಹೂಡಿಕೆ ಮಾಡುವ ಖರ್ಚಿಗೆ ನಷ್ಟವಾಗುವುದಿಲ್ಲ.
ದ್ಯಾಮಣ್ಣ ಗುಂಡಗಿ
ದಾಳಿಂಬೆ ಬೆಳೆದ ಕುಷ್ಟಗಿ ರೈತ

ಜವಳು ಭೂಮಿಯಲ್ಲೂ ಮೂಡಿತು ಹಸಿರು



ಕುಷ್ಟಗಿ ತಾಲ್ಲೂಕಿನ ನಿಡಶೇಷಿ ಗ್ರಾಮದ ಬಳಿ ತೋಟಗಾರಿಕಾ ಇಲಾಖೆಗೆ ಸೇರಿದ 70 ಎಕರೆ ಫಲವತ್ತತೆಯಿಲ್ಲದೆ ಜವಳಾಗಿತ್ತು. ಇಂಥ ಭೂಮಿಯಲ್ಲಿ ಯಾವ ಕೃಷಿ ಮಾಡಲು ಸಾಧ್ಯವಿಲ್ಲ ಎಂದು ಮಣ್ಣು ಪರೀಕ್ಷೆ ಪ್ರಯೋಗಾಲಯ ವರದಿ ನೀಡಿತ್ತು. ಆದರೂ ಕೊಪ್ಪಳ ಜಿಲ್ಲೆಯ ತೋಟಗಾರಿಕಾ ಇಲಾಖೆ ಅಧಿಕಾರಿಗಳು ಸಮಗ್ರ ಕೃಷಿ ವ್ಯವಸ್ಥೆ ರೂಪಿಸಿ ಇಸ್ರೇಲಿ ಮಾದರಿಯಲ್ಲಿ ಎರೆಹುಳು, ಎರೆಜಲ ಹಾಕಿಸಿ ಸಿಮೆಂಟ್‌ನ ರಿಂಗ್‌ಗಳಲ್ಲಿ ಮಣ್ಣು ತುಂಬಿಸಿ ಕೃಷಿ ಮಾಡಿಸಿದರು. ಅಲ್ಲಿ ಪೇರಲ, ದಾಳಿಂಬೆ, ಲಿಂಬೆ ಯಥೇಚ್ಛವಾಗಿ ಬೆಳೆದಿದ್ದು, ಇಸ್ರೇಲಿ ಮಾದರಿ ಕೃಷಿಗೆ ಈ ಕ್ಷೇತ್ರ ಹೆಸರಾಗಿದೆ. ಪಾಲಿಹೌಸ್ ಮತ್ತು ಕಡಿಮೆ ಖರ್ಚಿನಲ್ಲಿ ಪಾಲಿ ಟನಲ್ ನೆರಳಿನಲ್ಲಿಯೂ ವೀಳ್ಯದೆಲೆ ಬೆಳೆಯಲಾಗುತ್ತಿದೆ.



ಕುಷ್ಟಗಿ ತಾಲ್ಲೂಕಿನ ನಿಡಶೇಷಿ ಬಳಿ ತೋಟಗಾರಿಕಾ ಇಲಾಖೆಯ ಫಾರ್ಮ್‌ನಲ್ಲಿ ‘ಕಲ್ಲಿನ ರಿಂಗ್’ನಲ್ಲಿ ದಾಳಿಂಬೆ ಬೆಳೆ

ಹವಾಮಾನ ಬದಲಾವಣೆ ಸಮಸ್ಯೆಗೂ ಪರಿಹಾರ

ಕೊಪ್ಪಳ ಜಿಲ್ಲೆಯಲ್ಲಿ ಒಂದು ವರ್ಷ ವಿಪರೀತ ಮಳೆಯಾದರೆ, ಇನ್ನು ಕೆಲವು ಬಾರಿ ಆಗುವುದೇ ಇಲ್ಲ. ಇಂಥ ವಾತಾವರಣದಲ್ಲಿ ರೈತರಿಗೆ ತೋಟಗಾರಿಕಾ ಬೆಳೆ ‘ಬರ ಸಹಿಷ್ಣುತೆ’ಯಾಗಿದೆ. ಸಣ್ಣ ರೈತರು ಗೋಡಂಬಿ, ಹುಣಸೆ, ದಾಳಿಂಬೆ, ಮಾವು ಹೀಗೆ ಅನೇಕ ಬೆಳೆಗಳನ್ನು ಒಂದರಿಂದ ಗರಿಷ್ಠ ಮೂರು ವರ್ಷದ ತನಕ ಪೋಷಿಸಿದರೆ ಮುಂದಿನ ಎರಡ್ಮೂರು ದಶಕಗಳ ಕಾಲ ಕಡಿಮೆ ನೀರಿನಲ್ಲಿಯೂ ಈ ಬೆಳೆಗಳು ರೈತರನ್ನು ಶ್ರೀಮಂತರನ್ನಾಗಿಸುತ್ತವೆ.

ಈ ತೋಟಗಾರಿಕಾ ಹಸಿರು ಕೃಷಿ ರೈತನಿಗೆ ಲಾಭ ಕೊಟ್ಟು ಹವಾಮಾನ ಬದಲಾವಣೆ ಸಮಸ್ಯೆಗಳಿಗೂ ಪರಿಹಾರ ಒದಗಿಸುತ್ತಿದೆ. ಸುಸ್ಥಿರ ತೋಟಗಾರಿಕೆಯಿಂದ ಇಂಗಾಲದ ಹೊರಸೂಸುವಿಕೆ ಕಡಿಮೆಯಾಗಿ ಮಣ್ಣು ಮತ್ತು ಸಸ್ಯಗಳಲ್ಲಿ ಇಂಗಾಲದ ಸಂಗ್ರಹ ಹೆಚ್ಚಿಸುತ್ತಿವೆ. ಇದು ಭವಿಷ್ಯದ ತಾಪಮಾನ ಏರಿಕೆ ಪ್ರಮಾಣವನ್ನು ಕಡಿಮೆ ಮಾಡಬಹುದು ಎನ್ನುತ್ತಾರೆ ತೋಟಗಾರಿಕಾ ಇಲಾಖೆ ಅಧಿಕಾರಿಗಳು.

ಬೆಳೆಗಳ ವಿವರ

ಬೆಳೆ	ಪ್ರದೇಶ (ಹೆಕ್ಟೇರ್‌ಗಳಲ್ಲಿ)
ದಾಳಿಂಬೆ	12,000
ಮಾವು	10,000
ಕಲ್ಲಂಗಡಿ, ಕರಬೂಜ, ಹೂ, ಗೋಡಂಬಿ, ಹುಣಸೆ	9,000
ಪಪ್ಪಾಯ	5,000
ಪೇರಲ	3,000
ಬಾಳೆ	1,000
ನುಗ್ಗೇಕಾಯಿ	1,000
ತಾಳೆ	500
ನೇರಳೆ	400
ದ್ರಾಕ್ಷಿ	300
ಲಿಂಬೆ	250
ಸೀತಾಫಲ	200
ಅಂಜೂರ್	200
ಹಲಸು	200
ಇತರೆ	11,450

ಗುಂಡಣ್ಣ



25 ವರ್ಷಗಳ ಹಿಂದೆ — ಬುಧವಾರ, 23-2-2000

• **ಉತ್ತರ ಪತ್ರಿಕೆ ಹಾಜರುಪಡಿಸಲು ಕೆಪಿಎಸ್‌ಸಿಗೆ ಕೋರ್ಟ್ ಆದೇಶ**

ಬೆಂಗಳೂರು, ಫೆ. 22– ಕರ್ನಾಟಕ ಲೋಕಸೇವಾ ಆಯೋಗ ಪ್ರಥಮ ಮತ್ತು ದ್ವಿತೀಯ ದರ್ಜೆ ಅಧಿಕಾರಿಗಳ ನೇಮಕಕ್ಕೆ ನಡೆಸಿದ ಅಂತಿಮ ಪರೀಕ್ಷೆಯ ಕನ್ನಡ ಪತ್ರಿಕೆಯಲ್ಲಿ ಕಡಿಮೆ ಅಂಕ ಬಂದಿರುವುದನ್ನು ಪ್ರಶ್ನಿಸಿರುವ ಸಂಬಂಧ, ಹೈಕೋರ್ಟ್ ಇಂದು ಅರ್ಜಿದಾರರ ಉತ್ತರ ಪತ್ರಿಕೆಗಳನ್ನು ಫೆ. 28ರಂದು ಹಾಜರುಪಡಿಸುವಂತೆ ಕೆಪಿಎಸ್‌ಸಿಗೆ ಆದೇಶಿಸಿತು.

ಹುಬ್ಬಳ್ಳಿಯ ಲಿಂಗಣ್ಣ ಕಂಚಬಾಳ್ ಮತ್ತು ಇತರ ಎಂಟು ಮಂದಿ, ಎಸ್ಎಸ್ಎಲ್‌ಸಿವರೆಗೆ ಕನ್ನಡ ಪ್ರಥಮ ಭಾಷೆಯಾಗಿ ಓದಿದ್ದು, ಭಾಷಾ ಪತ್ರಿಕೆಯಲ್ಲಿ ಕಡಿಮೆ ಅಂಕ ಬಂದಿರುವುದನ್ನು ಪ್ರಶ್ನಿಸಿ, ಮರು ಮೌಲ್ಯಮಾಪನಕ್ಕೆ ಕೋರಿದ್ದಾರೆ.

50 ವರ್ಷಗಳ ಹಿಂದೆ — ಭಾನುವಾರ, 23-2-1975

• **‘ಪಾನನಿರೋಧಕ್ಕಾಗಿ ರಾಜೀನಾಮೆಗೆ ಸಿದ್ಧ’**

ಬೆಂಗಳೂರು, ಫೆ. 22– ಹರಿಜನರ ಹಿತದೃಷ್ಟಿಯಿಂದ ರಾಜ್ಯದಲ್ಲಿ ಮತ್ತೆ ಪಾನ ನಿರೋಧ ಜಾರಿಗೆ ತರುವಂತೆ ಮಾಡಲು ಹರಿಜನ ಸಚಿವರು ಹಾಗೂ ಶಾಸಕರು ರಾಜೀನಾಮೆ ನೀಡಲು ಸಿದ್ಧರಾಗಬೇಕೆಂದು ವಿಧಾನಪರಿಷತ್ತಿನಲ್ಲಿ ಇಂದು ಉಪಸಭಾಪತಿ ಟಿ.ಎನ್. ನರಸಿಂಹಮೂರ್ತಿಯವರು ಕರೆ ನೀಡಿದರು.

ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ ನರಸಿಂಹಮೂರ್ತಿ ಅವರು, ಪಾನನಿರೋಧ ನೀತಿ ಜಾರಿಗೆ ತರುವಂತೆ ಮುಖ್ಯಮಂತ್ರಿಯವರನ್ನು ಒತ್ತಾಯಪಡಿಸಲು ಹಾಗೂ ಅಗತ್ಯಬಿದ್ದರೆ ರಾಜೀನಾಮೆ ಕೊಡಲು ತಾವೂ ಸಿದ್ಧ ಎಂದು ತಿಳಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಫೆಬ್ರುವರಿ 23, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣದಶಮಿ ಗಂ. 13-56 ನಕ್ಷತ್ರ: ಮೂಲ ಗಂ. 18-43 ಯೋಗ: ವಜ್ರ ಗಂ. 11-19 ಕರಣ: ವಿಷ್ಟಿ ಗಂ. 13-56, ಕುಂಭ ಮಾಸದ 11 ನೇ ದಿನ, ಮಳೆನಕ್ಷತ್ರ: ಶತಭಿಷ 2.
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 06-53 **ಸೂರ್ಯಾಸ್ತ :** 06-35 **ಮುಸ್ಲಿಂ ದಿನಾಂಕ:** 24 ಶಬನ್
ದಿನ ವಿಶೇಷ: ಸ್ವಾಮಿ ದಯಾನಂದ ಸರಸ್ವತಿಯವರ ಜನ್ಮದಿನ (ಆರ್ಯ ಸಮಾಜ ಸ್ಥಾಪಕ)
ಅದೃಷ್ಟ ಸಂಖ್ಯೆ: 3, 7

ಮೇಷ: ಕಾಲೇಜು ದಿನಗಳ ಗೆಳೆಯರ ಭೇಟಿಯು ಸಂಭ್ರಮವನ್ನುಂಟುಮಾಡುವುದು. ಬಟ್ಟೆ ಅಥವಾ ಇತರ ವಸ್ತುಗಳ ಖರೀದಿಗೆ ಕುಟುಂಬದವರೊಂದಿಗೆ ಅಂಗಡಿಗಳನ್ನು ಸುತ್ತುವಿರಿ. ಉಲ್ಲಾಸಕರ ಸಂಜೆ ನಿಮ್ಮದಾಗುವುದು.

ವೃಷಭ: ಆಸ್ತಿ ವಿಚಾರವಾಗಿ ಹಲವು ಜನ ಸಲಹೆ ಕೊಟ್ಟರೂ, ಅಂತಿಮವಾಗಿ ಸಹೋದರನ ಮಾತಿನಂತೆ ನಡೆಯುವುದು ಉತ್ತಮ. ಸಾಮಾಜಿಕ ಕಾರ್ಯಕ್ರಮಗಳಲ್ಲಿ ಪ್ರಮುಖ ಪಾತ್ರವನ್ನು ವಹಿಸುವಿರಿ.

ಮಿಥುನ: ಹೆಚ್ಚಿನ ಸಮಯವನ್ನು ವ್ಯರ್ಥ ಮಾಡುವುದರಿಂದ ಹಿರಿಯರ ಬಳಿ ಮೂದಲಿಸಿಕೊಳ್ಳುವಿರಿ. ನಿಮ್ಮಲ್ಲಿನ ಸಂಗೀತ ಕಲೆಗೆ ಸಹೋದರಿಯರಿಂದ ಸಹಕಾರ ದೊರಕಲಿದೆ.

ಕರ್ಕಾಟಕ: ಅಪರಿಚಿತರೇ ತುಂಬಿರುವ ಸ್ಥಳದಲ್ಲಿ ಸ್ಥಾನಮಾನ ಹಾಗೂ ಗೌರವ ಸಂಪಾದಿಸುವುದು ಸವಾಲಿನ ವಿಷಯವಾದರೂ, ನೀವು ಅದರಲ್ಲಿ ಯಶಸ್ವಿ ಆಗುವಿರಿ. ಕಿರಿಯರ ತಪ್ಪನ್ನು ಮನ್ನಿಸಿ, ಅಗತ್ಯ ಸಹಕಾರ ನೀಡಿ.

ಸಿಂಹ: ವಂಶಪಾರಂಪರ್ಯವಾಗಿ ಬಂದಿರುವ ವ್ಯಾಪಾರ ವ್ಯವಹಾರಗಳ ವಿಸ್ತರಣೆಗೆ ಪುತ್ರರಿಂದ ಸಹಕಾರ ಸಿಗಲಿದೆ. ಆಹಾರದಲ್ಲಿ ಪಥ್ಯ ಪಾಲಿಸಲು ವೈದ್ಯರು ಸೂಚಿಸಿದ್ದಲ್ಲಿ, ತಪ್ಪದೇ ಪಾಲಿಸುವುದು ಉತ್ತಮ.

ಕನ್ಯಾ: ಉತ್ತಮ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಲು ಇಂದಿನಿಂದಲೇ ಪ್ರಾರಂಭಿಸಿ. ಕೃತಕ ಉಸಿರಾಟ ಅಥವಾ ಕೃತಕ ಆಹಾರ ಅವಲಂಬಿಸಿರುವವರ ಆರೋಗ್ಯದಲ್ಲಿ ತುಸು ಚೇತರಿಕೆ ಕಂಡುಬರುವುದು.

ತುಲಾ: ಹೆಂಡತಿ–ಮಕ್ಕಳಿಗೆ ಕೊಟ್ಟ ಭರವಸೆಯನ್ನು ಉಳಿಸಿಕೊಳ್ಳಲು ಆರ್ಥಿಕ ಸಹಕಾರ ಬೇಕಾಗುವುದು. ಮಕ್ಕಳೊಡನೆ ಸಮಯ ಕಳೆಯುವಿರಿ. ಸ್ವ–ಉದ್ಯೋಗಿಗಳಿಗೆ ಅಲ್ಪ ಶ್ರಮದಿಂದ ಹೆಚ್ಚಿನ ಗಳಿಕೆಯಾಗಲಿದೆ.

ವೃಶ್ಚಿಕ: ಮನೆಯವರ ಒಳಿತಿಗೆ ಆದಾಯದ ಹೊಸ ಮಾರ್ಗಗಳನ್ನು ಕಂಡುಕೊಳ್ಳಲು ಸೂಕ್ತ ಸಮಯ. ಸಾಮಾಜಿಕ ಸಂಘ ಸಂಸ್ಥೆಗಳ ಪದಾಧಿಕಾರ ಆಕಸ್ಮಿಕವಾಗಿ ದೊರಕುವುದು. ಹನುಮಂತನ ನಾಮ ಸ್ಮರಣೆ ಮಾಡಿ.

ಧನು: ವ್ಯಾಪಾರ ವ್ಯವಹಾರಗಳಲ್ಲಿ ನಡೆದ ಆಂತರಿಕ ಒಪ್ಪಂದಗಳಿಂದ ಲಾಭ ಹೊಂದುವಿರಿ. ಸಣ್ಣಪುಟ್ಟ ನೋವು ಅಥವಾ ಅನಾರೋಗ್ಯಕ್ಕೆ ಒಳಗಾಗಿದ್ದರೆ, ಯೋಗಾಭ್ಯಾಸ ಮಾಡುವುದು ಸೂಕ್ತ.

ಮಕರ: ಅನ್ವೇಷಣಾ ಸ್ವಭಾವ ವೃತ್ತಿ ಬದುಕಿಗೆ ಉತ್ತಮ ತಿರುವು ನೀಡಲಿದೆ. ಬಂಧುಗಳು ಬಹುಕಾಲದ ನಂತರ ಮನೆಗೆ ಭೇಟಿ ನೀಡಲಿದ್ದು, ಸಂತೋಷ ತರಲಿದೆ. ಚರ್ಮಕ್ಕೆ ಸಂಬಂಧಿಸಿದ ರೋಗಗಳು ಬಾಧಿಸಬಹುದು.


ಕುಂಭ: ದೊಡ್ಡ ಸಾಮಾಜಿಕ ಕಾರ್ಯಕ್ರಮದಲ್ಲಿ ಭಾಗವಹಿಸುವುದರಿಂದ ಉತ್ತಮ ಜ್ಞಾನ ಹಾಗೂ ಅನುಭವವನ್ನು ಪಡೆಯಲಿದ್ದೀರಿ. ನಿಸ್ವಾರ್ಥ ಮನೋಭಾವದಿಂದ ಮಾಡಿದ ಕೆಲಸಗಳು ಈ ದಿನ ಫಲ ನೀಡಲಿವೆ.

ಮೀನ: ಕಲಾವಿದರಿಗೆ ಸಾಂಸ್ಕೃತಿಕ ಸಮಾರಂಭದಲ್ಲಿ ಭಾಗವಹಿಸುವ ಅವಕಾಶ ದೊರೆತು ಸಂತಸವಾಗಲಿದೆ. ಆಧ್ಯಾತ್ಮಿಕ ವಿಷಯಗಳ ಬಗ್ಗೆ ಹೆಚ್ಚಿನ ಗಮನ ನೀಡುವುದರಿಂದ ಮನಃಶಾಂತಿ ಸಿಗುತ್ತದೆ.

ಪದಬಂಧ 5962 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸರ ನೀಡಿದಾಗ ಸಲ್ಲಾಪದ ಮಾತುಕತೆ (3)
3.ಆಗಸದತ್ತ ನೋಡುತ್ತಿರುವ ಮಡಿವಾಳ (3)
6.ಕನಿಕರ ಹೊಂದಿರುವ ಆಳು! (3)
7.ಮಣಿ ಧರಿಸಿರುವ ಚಲುವೆ (3)
8.ಈತ ಪಕ್ಕಾ ಹಳ್ಳಿಯವನು! (3)
10.ಮುದ್ದಿನಿಂದ ಕುಡಿಸಿದ ಔಷಧ (2)
11.ಕನ್ನ ಕೊರೆದಾಗ ಕಾಣಿಸಿದ ದರ್ಪಣ (3)
13.ಬಾದಾರಯಣನ ಕಾಲದ ಶರ (2)
15.ಕದದ ಬಳಿ ನಡೆದ ಯುದ್ಧ (3)
16.ನಡುವೆ ಜೀ ಎನ್ನುತ್ತಿರುವ ಮಂತ್ರಿ (3)
17.ದಾನ ನೀಡಿರುವ ರಾಕ್ಷಸ (3)
18.ವಿವಾದವಿಲವೇ ನಡೆದ ಮದುವೆ (3)
19.ತಿರುಗಿಸಿದರೂ ಇದು ಹೊಸದು (3)

ಮೇಲಿಂದ ಕೆಳಕ್ಕೆ
1.ಮಧುರವಾದ ಸ್ವಪ್ನ (5)
2.ಕೊನೆಗೆ ಬೆಲೆಯಿಟ್ಟು ನೀಡಿದ ಸಲಿಗೆ (3)
3.ನಗು ಪದದ ವಿರುದ್ಧ ಪದ (2)
4.ಕೊನೆಗೆ ಹದ್ದು ಕುಳಿತಿರುವ ಎಲ್ಲೆ (4)
5.ಕುಣಿಯುತ್ತಾ ಹಾಕಿದ ಜೀರುಗಂಟು (3)
9.ಪತ್ರಿಕೆಯ ಉದ್ದ ಸಾಲು (3)
10.ಮಡಿವಂತೆಯ ಉಡಿ (3)
12.ಲೋಹದ ಹಕ್ಕಿಯಲ್ಲಿನ ಪಯಣ (5)
13.ಅದೇ ತಾನೆ ಮೂಡುತ್ತಿರುವ ಸೂರ್ಯ (4)
14.ಅವಳಿಗೆ ಹುಟ್ಟಿದ ಜೋಡಿ! (3)
15.ವನದ ಬಗ್ಗೆ ಬರೆದ ಪದ್ಯ (3)
17.ಬಾಯಾರಿಕೆ ಹೀಗೆ ಬಂದಿದೆ (2)



5961ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ರಣರಂಗ 5.ಜಾಯಮಾನ
6.ದಾರಿಹೋಕ 8.ಕಳಕಳಿ
11.ಮಕರಂದ 13.ಸವಿಸ್ತಾರ
14.ಪ್ರಕರಣ 16.ಕರಗತ

ಮೇಲಿಂದ ಕೆಳಕ್ಕೆ:
1.ಪ್ರಜಾಪತಿ 2.ಪ್ರಾಮಾಣಿಕ
3.ರಸದಾಳಿ 4.ಗಣಕ
7.ಹೋಲಿಕೆ 9.ಕಳಂಕ
10.ಹರವಿ 11.ಮರಕತ
12.ದಸಕತ್ತು 13.ಪರಿಣಯ
14.ಸರೀಕ

ಸುಡೊಕು 6347

	8			5				
1			6		4		7	3
	5			7			2	
5		8	9					
						7	5	2
4		7			6		8	
2		5		9			3	
	6		3		5	2		7
3		9		6			4	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6346 ಸುಡೊಕು

6	2	4	5	3	9	7	1	8
8	9	5	6	7	1	2	4	3
1	3	7	2	4	8	5	9	6
3	4	1	8	2	5	9	6	7
2	8	6	3	9	7	1	5	4
7	5	9	4	1	6	8	3	2
5	1	3	7	6	2	4	8	9
4	7	8	9	5	3	6	2	1
9	6	2	1	8	4	3	7	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮಲೆ ಮಹದೇಶ್ವರ ಬೆಟ್ಟದಲ್ಲಿ 25ರಿಂದ ಮಾರ್ಚ್ 1ರವರೆಗೆ ಶಿವರಾತ್ರಿ ಜಾತ್ರಾ ಮಹೋತ್ಸವ • ಅಹೋರಾತ್ರಿ ಜಾಗರಣೆ

ಕಾವೇರಿ ದಾಟಿ ಮಾದಪ್ಪನ ಸನ್ನಿಧಿಗೆ ಭಕ್ತರು

ಪ್ರಜಾವಾಣಿ ವಾರ್ತೆ

ಹನೂರು (ಚಾಮರಾಜನಗರ ಜಿಲ್ಲೆ): ಪ್ರಸಿದ್ಧ ಯಾತ್ರಾಸ್ಥಳವಾಗಿರುವ ಮಲೆ ಮಹದೇಶ್ವರ ಬೆಟ್ಟದಲ್ಲಿ ಇದೇ 25ರಿಂದ ಆರಂಭವಾಗಲಿರುವ ಶಿವರಾತ್ರಿ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಸಾವಿರಾರು ಭಕ್ತರು ಕಾವೇರಿ ನದಿ ದಾಟಿ ಮಾದಪ್ಪನ ಕ್ಷೇತ್ರದತ್ತ ಸಾಗುತ್ತಿದ್ದಾರೆ.

ಬೆಂಗಳೂರು, ಕನಕಪುರ, ನೆಲಮಂಗಲ, ಮಾಗಡಿ, ಸಾತನೂರು, ಹಾರೋಹಳ್ಳಿ, ರಾಮನಗರ ಸೇರಿದಂತೆ ಹಲವು ಕಡೆಗಳಿಂದ ಆಗಮಿಸುತ್ತಿರುವ ಭಕ್ತರು ಕನಕಪುರ ತಾಲ್ಲೂಕಿನ ಗಡಿ ಮಾರ್ಗವಾಗಿ ಕಾವೇರಿ ನದಿ ದಾಟಿ ತಾಲ್ಲೂಕಿನ ಬಸವನಕಡ ಸ್ಥಳ ತಲುಪುತ್ತಿದ್ದಾರೆ. ಭಕ್ತರು ನದಿ ದಾಟಲು ಅನುವಾಗುವಂತೆ ನದಿಯ ನೀರಿನ ಹರಿವನ್ನು ತಗ್ಗಿಸಲಾಗಿದೆ.

ಉತ್ಸವ, ಜಾತ್ರೆಗಳ ವೇಳೆ ಭಕ್ತರು ಪಾದಯಾತ್ರೆಯಲ್ಲಿ ಬೆಟ್ಟಕ್ಕೆ ಬರುವುದು ಸಾಮಾನ್ಯ. ಆದರೆ, ಶಿವರಾತ್ರಿ ಜಾತ್ರೆಗೆ ಲಕ್ಷಾಂತರ ಭಕ್ತರು ಪಾದಯಾತ್ರೆಯಲ್ಲಿ ಬರುವುದು ಹಾಗೂ ಕಾವೇರಿ ನದಿ ದಾಟಿ ದೇವರ ದರ್ಶನ ಪಡೆದು ಹರಕೆ ತೀರಿಸುವುದು ವಿಶೇಷ. ಜಾತ್ರೆ ಆರಂಭಕ್ಕೆ ಇನ್ನೆರಡು ದಿನ ಉಳಿದಿರುವುದರಿಂದ, ಬಹುತೇಕ ಭಕ್ತರು ಕಾವೇರಿ ನದಿ ದಾಟಿ ಬಳಿಕ ತೀರದಲ್ಲಿ ರಾತ್ರಿ ತಂಗಿ ಮರುದಿನ ಬೆಳಿಗ್ಗೆ ಪಾದಯಾತ್ರೆ ಆರಂಭಿಸುತ್ತಿದ್ದಾರೆ. ಪಾದಯಾತ್ರೆ ಮಾರ್ಗದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.

'ಚಿಕ್ಕ ವಯಸ್ಸಿನಿಂದಲೂ ತಂದೆಯೊಂದಿಗೆ ಪಾದಯಾತ್ರೆಯಲ್ಲಿ ಬರುವುದು ಅಭ್ಯಾಸವಾಗಿದ್ದು ಮುಂದುವರಿಸಿಕೊಂಡು ಬಂದಿದ್ದೇನೆ. ಎರಡು ವರ್ಷಗಳಿಂದ ಗ್ರಾಮಸ್ಥರೊಂದಿಗೆ ತಂಡವಾಗಿ ಪಾದಯಾತ್ರೆ ಕೈಗೊಳ್ಳುತ್ತಿದ್ದೇವೆ' ಎನ್ನುತ್ತಾರೆ ಕನಕಪುರ ತಾಲ್ಲೂಕಿನ ಬೆನಗೋಡು ಗ್ರಾಮದ ಮಹಾದೇವಮ್ಮ.


ಮಲೆ ಮಹದೇಶ್ವರ ಬೆಟ್ಟದಲ್ಲಿ ಶಿವರಾತ್ರಿ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಮೇಕೆದಾಟು ಸಮೀಪದ ಸಂಗಮದಲ್ಲಿ ಕಾವೇರಿ ನದಿ ದಾಟಿದ ಪಾದಯಾತ್ರಿಗಳು ಚಿತ್ರ/ ಶ್ರೀರಾಮ್ ಬೆಳಕರ


ಚಾರ್ಮಾಡಿ ಘಾಟಿ ಮೂಲಕ ಧರ್ಮಸ್ಥಳಕ್ಕೆ ಬರುತ್ತಿರುವ ಪಾದಯಾತ್ರಿಗಳು

ರಾತ್ರಿ ವೇಳೆ ಕಾವೇರಿ ದಾಟಲು ನಿಷೇಧ

ಕನಕಪುರ: ಮಲೆಮಹದೇಶ್ವರ ಬೆಟ್ಟಕ್ಕೆ ಕನಕಪುರ ತಾಲ್ಲೂಕಿನ ಸಂಗಮ ಮೂಲಕ ಸಾವಿರಾರು ಭಕ್ತರು ಕಾವೇರಿ ನದಿ ದಾಟಿ ಹೋಗುತ್ತಿದ್ದು, ಅಹಿತಕರ ಘಟನೆ ನಡೆಯದಂತೆ ಜಿಲ್ಲಾಡಳಿತ ಸೂಕ್ತ ಭದ್ರತೆ ಕಲ್ಪಿಸಿದೆ. ನದಿಯನ್ನು ಹಗಲಿನ ವೇಳೆ ಮಾತ್ರ ದಾಟಬೇಕು. ರಾತ್ರಿಯಲ್ಲಿ ದಾಟುವುದನ್ನು ನಿಷೇಧಿಸಲಾಗಿದೆ.

ಈ ಹಿಂದೆ ಕಾಲ್ನಡಿಗೆ ಮೂಲಕ ಸಾಗುವ ಭಕ್ತರು ಕಾವೇರಿ ನದಿ ದಾಟುವಾಗ ನೀರಿನ ಪ್ರವಾಹದಲ್ಲಿ ಸಿಲುಕಿ ಸಾವು–ನೋವು ಸಂಭವಿಸುತ್ತಿದ್ದವು. ಈ ವರ್ಷದಿಂದ ನದಿ ದಾಟಲು ಸೂಕ್ತ ವ್ಯವಸ್ಥೆ ಮಾಡಲಾಗಿದೆ.

ನದಿಯಲ್ಲಿ ನೀರಿನ ಹರಿವು ಕಡಿಮೆ ಇರುವ ಜಾಗ ಗುರುತಿಸಿ ಎರಡು ದಡಕ್ಕೂ ಹಗ್ಗ ಕಟ್ಟಲಾಗಿದೆ. ನದಿ ದಡದಲ್ಲಿ ಹೆಚ್ಚಿನ ಸಂಖ್ಯೆ ಪೊಲೀಸರನ್ನು ನಿಯೋಜಿಸಲಾಗಿದೆ.

ಧರ್ಮಸ್ಥಳ: 26ರಂದು ಶಿವರಾತ್ರಿ ವೈಭವ

• ಆರ್.ಎನ್.ಪೂವಣಿ

ಉಜಿರೆ (ದಕ್ಷಿಣ ಕನ್ನಡ): ಧರ್ಮಸ್ಥಳದಲ್ಲಿ ಫೆ.26ರಂದು ಶಿವರಾತ್ರಿ ಆಚರಣೆ ನಡೆಯಲಿದೆ. ಅಹೋರಾತ್ರಿ ಶಿವಪಂಚಾಕ್ಷರಿ ಪಠಣ, ಭಜನೆ, ಪ್ರಾರ್ಥನೆ, ಧ್ಯಾನದೊಂದಿಗೆ ಭಕ್ತರು ಉಪವಾಸ ಹಾಗೂ ಜಾಗರಣೆ ಮಾಡಲಿದ್ದಾರೆ. ಸಂಜೆ 6ರಿಂದ 27ರ ನಸುಕಿನವರೆಗೆ ದೇವಸ್ಥಾನದಲ್ಲಿ ಭಕ್ತರು ಶತರುದ್ರಾಭಿಷೇಕ ಹಾಗೂ ಎಳನೀರಿನ ಅಭಿಷೇಕ ನೆರವೇರಿಸುವರು. 27ರಂದು ಬೆಳಿಗ್ಗೆ ರಥೋತ್ಸವ ನಡೆಯಲಿದೆ.

ಮುಖ್ಯ ಪ್ರವೇಶದ್ವಾರದಲ್ಲಿ ಮಾಹಿತಿ ಕಚೇರಿ ತೆರೆಯಲಾಗಿದ್ದು, ಉಚಿತ ವೈದ್ಯಕೀಯ ಸೇವೆ ಲಭ್ಯವಿದೆ. ಪೊಲೀಸ್ ಹೊರ ಠಾಣೆ ಆರಂಭಿಸಲಾಗಿದ್ದು, ಕೆಎಸ್‌ಆರ್‌ಟಿಸಿಯು ರಾಜ್ಯದ ವಿವಿಧ ಭಾಗಗಳಿಂದ ಧರ್ಮಸ್ಥಳಕ್ಕೆ ವಿಶೇಷ ಬಸ್ ಸೌಲಭ್ಯ ಕಲ್ಪಿಸಿದೆ.

ಪಾದಯಾತ್ರೆ: ಪ್ರತಿ ವರ್ಷದಂತೆ ಈ ಬಾರಿಯೂ ಧರ್ಮಸ್ಥಳಕ್ಕೆ ಸುಮಾರು ಐವತ್ತು ಸಾವಿರ ಪಾದಯಾತ್ರಿಗಳು ಬರಲಿದ್ದು, 30 ಸಾವಿರ ಮಂದಿ ಹೆಸರು ನೋಂದಾಯಿಸಿದ್ದಾರೆ. ಉಜಿರೆಯಲ್ಲಿರುವ ಎಸ್‌ಡಿಎಂ ಶಿಕ್ಷಣ ಸಂಸ್ಥೆಗಳಲ್ಲಿ ಹಾಗೂ ಧರ್ಮಸ್ಥಳದಲ್ಲಿ ಗಾಯತ್ರಿ, ಶರಾವತಿ, ರಜತಾದ್ರಿ, ಸಹ್ಯಾದ್ರಿ, ವೈಶಾಲಿ, ಸಾಕೇತ ಹಾಗೂ ಗಂಗೋತ್ರಿ ವಸತಿಛತ್ರಗಳಲ್ಲಿ ಪಾದಯಾತ್ರಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

ಎಸ್‌ಡಿಎಂ ಮೆಡಿಕಲ್ ಟ್ರಸ್ಟ್ ಆಶ್ರಯದಲ್ಲಿ ಚಾರ್ಮಾಡಿ, ಮುಂಡಾಜೆ, ಸೋಮಂತಡ್ಕ, ಕಲ್ಮಂಜ ಹಾಗೂ ಉಜಿರೆಯಲ್ಲಿ ತುರ್ತುಚಿಕಿತ್ಸಾ ಘಟಕಗಳ ಮೂಲಕ ಉಚಿತ ಚಿಕಿತ್ಸೆ ನೀಡಲಾಗುವುದು. ಬೂಡುಜಾಲು, ಮುಂಡಾಜೆ, ಉಜಿರೆ, ಚಾರ್ಮಾಡಿಯಲ್ಲಿ ಪಾದಯಾತ್ರಿಗಳಿಗೆ ತಂಗಲು ಅವಕಾಶ ಕಲ್ಪಿಸಲಾಗಿದೆ. ಇಲ್ಲಿ ಊಟ ಮಾಡಿ ರಾತ್ರಿ ವಿಶ್ರಾಂತಿ ಪಡೆದು ಮರುದಿನ ಪಾದಯಾತ್ರೆ ಮುಂದುವರಿಸಬಹುದಾಗಿದೆ.

ಧರ್ಮಸ್ಥಳ ಪಾದಯಾತ್ರಿಗಳ ಸಂಘ: ಬೆಂಗಳೂರು, ಮೈಸೂರು, ಧಾರವಾಡ, ಶಿವಮೊಗ್ಗ, ಚಿಕ್ಕಮಗಳೂರು ಮತ್ತಿತರ 'ಧರ್ಮಸ್ಥಳ ಪಾದಯಾತ್ರಿಗಳ ಸಂಘ'ದ ನೇತೃತ್ವದಲ್ಲಿ ಪಾದಯಾತ್ರಿಗಳು ಬರುತ್ತಿದ್ದಾರೆ. ಬಹುತೇಕ ಪಾದಯಾತ್ರಿಗಳು ಕೊಟ್ಟಿಗೆಹಾರ, ಚಾರ್ಮಾಡಿ, ಉಜಿರೆ ಹಾಗೂ ಕೊಕ್ಕಡ ತಲುಪಿ, 26ರಂದು ಬೆಳಿಗ್ಗೆ ಧರ್ಮಸ್ಥಳ ತಲುಪುತ್ತಾರೆ. ನೇತ್ರಾವತಿ ನದಿಯಲ್ಲಿ ಸ್ನಾನ ಮಾಡಿ, ಬಳಿಕ ದೇವರ ದರ್ಶನ, ಸೇವೆ ಮಾಡಿ ರಾತ್ರಿ ಶಿವಪಂಚಾಕ್ಷರಿ ಪಠಣದೊಂದಿಗೆ ಜಾಗರಣೆ ಮಾಡುವರು.

ಅಂದು ಸಂಜೆ 6 ಗಂಟೆಗೆ ದೇವಸ್ಥಾನದ ಎದುರು ಇರುವ ಪ್ರವಚನ ಮಂಟಪದಲ್ಲಿ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಆಶೀರ್ವಚನ ನೀಡಿ ಜಾಗರಣೆಗೆ ಚಾಲನೆ ನೀಡುವರು.

ಲಾಕರ್‌ನಲ್ಲಿದ್ದ ಹಣಕ್ಕೆ ಗೆದ್ದಲು

ಪ್ರಜಾವಾಣಿ ವಾರ್ತೆ

ಉಳ್ಳಾಲ: ಕೋಟೆಕಾರ್‌ನಲ್ಲಿರುವ ರಾಷ್ಟ್ರೀಕೃತ ಬ್ಯಾಂಕ್‌ವೊಂದರ ಲಾಕರ್‌ನಲ್ಲಿ ಇಟ್ಟಿದ್ದ ₹8 ಲಕ್ಷ ಹಣವನ್ನು ಗೆದ್ದಲು ತಿಂದು ಹಾಕಿದೆ ಎಂದು ಹಣ ಇಟ್ಟಿದ್ದ ಕುಟುಂಬದವರು ಹೇಳಿದ್ದಾರೆ.

ಹಣ ಇಟ್ಟು ಆರು ತಿಂಗಳ ಬಳಿಕ ಲಾಕರ್ ತೆರೆಯಲಾಗಿತ್ತು. ಹಣವನ್ನು ಗೆದ್ದಲು ತಿಂದಿದೆ. ಬ್ಯಾಂಕ್‌ನವರೇ ಖುದ್ದಾಗಿ ಲಾಕರ್ ತೆರೆದಿದ್ದಾರೆ. ಲಾಕರ್ ಮಳೆ ನೀರಿನಲ್ಲಿ ನೆನೆದ ಸ್ಥಿತಿಯಲ್ಲಿದ್ದರೆ ದುಡ್ಡು ಸಂಪೂರ್ಣವಾಗಿ ಕಪ್ಪಾಗಿ ಹುಡಿ ಹುಡಿಯಾಗಿ ಗೆದ್ದಲು ಹಿಡಿದು ಚೂರಾಗಿ ಬಿದ್ದಿತ್ತು. ಆರ್‌ಬಿಐ ನಿಯಮದ ಪ್ರಕಾರ ದುಡ್ಡನ್ನು ಲಾಕರ್‌ನಲ್ಲಿ ಇಡುವಂತಿಲ್ಲ.


ಗೆದ್ದಲು ತಿಂದಿರುವ ನೋಟುಗಳು

ಹೀಗಾಗಿ ಇದಕ್ಕೂ ನಮಗೂ ಸಂಬಂಧ ಇಲ್ಲ ಎಂದು ಬ್ಯಾಂಕ್‌ನವರು ಹೇಳಿದ್ದಾರೆ. ಹಣ ಕಳೆದುಕೊಂಡವರು ಬ್ಯಾಂಕ್ ಕೇಂದ್ರ ಕಚೇರಿಗೆ ದೂರು ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ದುಷ್ಕರ್ಮಿಗಳಿಂದ ಶಿಲುಬೆ ಧ್ವಂಸ

ಪ್ರಜಾವಾಣಿ ವಾರ್ತೆ

ಉಡುಪಿ: ಶಿರ್ವ ವ್ಯಾಪ್ತಿಯ ಮೂಡುಬೆಳ್ಳೆ ಗ್ರಾಮದ ಕಟ್ಟಂಗೇರಿ ಸಮೀಪದ ಕುದ್ರು ಮಲೆ ಎಂಬಲ್ಲಿ ಸ್ಥಾಪಿಸಿದ್ದ ಶಿಲುಬೆಯನ್ನು ದುಷ್ಕರ್ಮಿಗಳು ಧ್ವಂಸಗೊಳಿಸಿದ್ದಾರೆ.

ಖಾಸಗಿ ಜಾಗದಲ್ಲಿರುವ ಶಿಲುಬೆಯನ್ನು ಸುತ್ತಮುತ್ತಲಿನ ಕ್ರೈಸ್ತ ಕುಟುಂಬದವರು 30 ವರ್ಷಗಳಿಂದ ಆರಾಧಿಸುತ್ತಿದ್ದರು ಎಂದು ಸ್ಥಳೀಯರು ತಿಳಿಸಿದ್ದಾರೆ.

'ಖಾಸಗಿ ಜಾಗದಲ್ಲಿದ್ದ ಶಿಲುಬೆಯನ್ನು ದುಷ್ಕರ್ಮಿಗಳು ಮುರಿದು ಹಾಕಿದ್ದಾರೆ. ಸ್ಥಳೀಯರ ದೂರಿನ ಅನ್ವಯ ಶಿರ್ವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಶಿಲುಬೆಯು ಗುಡ್ಡದ ಮೇಲೆ ಇದ್ದು ಅಲ್ಲಿ ಯಾವುದೇ ಮನೆಗಳಿಲ್ಲ. 15 ದಿವಸಗಳ ಹಿಂದೆ ಶಿಲುಬೆ ಸರಿಯಾಗಿತ್ತು ಎಂದು ಸ್ಥಳೀಯರು ತಿಳಿಸಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಅರುಣ್ ಕೆ. ತಿಳಿಸಿದ್ದಾರೆ.


ದುಷ್ಕರ್ಮಿಗಳು ಶಿಲುಬೆಯನ್ನು ಮುರಿದಿರುವುದು

'ಸ್ಥಳೀಯರಿಂದ ಮಾಹಿತಿ ಪಡೆದು ಕೃತ್ಯ ಎಸಗಿದವರನ್ನು ಶೀಘ್ರ ಪತ್ತೆ ಮಾಡಲಾಗುವುದು' ಎಂದು ಅವರು ಹೇಳಿದ್ದಾರೆ.

'ವೆಲೆರಿಯನ್ ಲೋಬೊ ಎಂಬುವವರ ಸ್ವಂತ ಜಾಗದಲ್ಲಿ ಈ ಶಿಲುಬೆ ನಿರ್ಮಿಸಿದ್ದರು. ಪ್ರತಿ ವರ್ಷ ಉಪವಾಸ ದಿನಗಳಲ್ಲಿ ಸುಮಾರು 30 ಕುಟುಂಬಗಳು ಪ್ರಾರ್ಥನೆ ಸಲ್ಲಿಸುತ್ತಿದ್ದವು. ಶಿಲುಬೆಯನ್ನು ಧ್ವಂಸ ಮಾಡಿ ಕ್ರೈಸ್ತರ ಭಾವನೆಗಳಿಗೆ ನೋವುಂಟು ಮಾಡಿರುವ ದುಷ್ಕರ್ಮಿಗಳನ್ನು ಶೀಘ್ರ ಬಂಧಿಸಬೇಕು' ಎಂದು ಭಾರತೀಯ ಕ್ರೈಸ್ತ ಒಕ್ಕೂಟದ ಅಧ್ಯಕ್ಷ ಪ್ರಶಾಂತ್ ಜತ್ತನ್ನ ಆಗ್ರಹಿಸಿದ್ದಾರೆ.

ಕುಂಭಮೇಳ ಯಾತ್ರಿಕರ ಸಾವಿನ ಸಂಖ್ಯೆ 6ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೀದರ್: ಉತ್ತರ ಪ್ರದೇಶದ ವಾರಾಣಸಿ ಸಮೀಪ ಶುಕ್ರವಾರ (ಫೆ.21) ಸಂಭವಿಸಿದ ರಸ್ತೆ ಅಪಘಾತದಲ್ಲಿ ಬೀದರ್‌ನ ಯಾತ್ರಿಕರ ಮೃತರ ಸಂಖ್ಯೆ ಆರಕ್ಕೆ ಏರಿಕೆಯಾಗಿದೆ.

ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಬನಾರಸ್ ಟ್ರಾಮಾ ಕೇರ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ನಗರದ ಲಾಡಗೇರಿ ನಿವಾಸಿ ಸುಲೋಚನಾ ಚಂದ್ರಕಾಂತ (38) ಶುಕ್ರವಾರ ತಡರಾತ್ರಿ ಮೃತಪಟ್ಟಿದ್ದಾರೆ. ಅಪಘಾತದಲ್ಲಿ ನಗರದ ಲಾಡಗೇರಿಯ ಒಂದೇ ಕುಟುಂಬದ ಮೂವರು ಸೇರಿದಂತೆ ಐದು ಜನ ಶುಕ್ರವಾರ ಸ್ಥಳದಲ್ಲೇ ಮೃತಪಟ್ಟಿದ್ದರು. ಪ್ರಯಾಗ ರಾಜ್‌ನಲ್ಲಿ ನಡೆಯುತ್ತಿರುವ ಕುಂಭ ಮೇಳಕ್ಕೆ ತೆರಳುವಾಗ ಅಪಘಾತ ಸಂಭವಿಸಿತ್ತು.

ಮೃತದೇಹ ತರಲು ಜಿಲ್ಲಾಡಳಿತವು ವಿಶೇಷ ತಂಡ ರಚಿಸಿ, ಈಗಾಗಲೇ ವಾರಾಣಸಿಗೆ ಕಳುಹಿಸಿದೆ. ಮರಣೋತ್ತರ ಪರೀಕ್ಷೆ ಬಳಿಕ ಜಿಲ್ಲೆಗೆ ತರಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾಡಳಿತದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

10 ವರ್ಷಗಳ ರಶೀದಿ ಪರಿಶೀಲನೆಗೆ ಬಳ್ಳಾರಿ ವಿಶ್ವವಿದ್ಯಾಲಯ ನಿರ್ಧಾರ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ಕುಲಪತಿ ಸಹಿ ನಕಲು ಮಾಡಿ, ನೂರಾರು ಮಂದಿಗೆ ಘಟಿಕೋತ್ಸವದ ನಕಲಿ ಪ್ರಮಾಣ ಪತ್ರ ನೀಡಿರುವುದು ಬಹಿರಂಗವಾಗಿದೆ. ಹೀಗಾಗಿ, ಈ 10 ವರ್ಷಗಳಲ್ಲಿ ಪ್ರಮಾಣ ಪತ್ರಕ್ಕಾಗಿ ನೀಡಲಾದ ರಶೀದಿಗಳನ್ನು ಪರಿಶೀಲಿಸಲು ವಿಶ್ವವಿದ್ಯಾಲಯ ಮುಂದಾಗಿದೆ.

'ವಿಶ್ವವಿದ್ಯಾಲಯದ ಪರೀಕ್ಷಾಂಗ ವಿಭಾಗದ ಗುತ್ತಿಗೆ ನೌಕರರು ಈ ಕೃತ್ಯದಲ್ಲಿ ಭಾಗಿ ಆಗಿದ್ದಾರೆ. ವಿಶ್ವವಿದ್ಯಾಲಯಕ್ಕೆ ಸಂದಾಯ ಆಗಬೇಕಿದ್ದ ಹಣ ನಷ್ಟವಾಗಿದೆ. ಅಕ್ರಮದಲ್ಲಿ ಭಾಗಿಯಾದವರ ವಿರುದ್ಧ ಕಾನೂನಾತ್ಮಕ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ' ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

'ವಿಶ್ವವಿದ್ಯಾಲಯದಲ್ಲಿ ಅಕ್ರಮವಾಗಿ ನಕಲಿ ಪ್ರಮಾಣ ಪತ್ರ ನೀಡಿದ್ದ ಪ್ರಕರಣ ಪತ್ತೆ ಆಗಿತ್ತು. ಈ ಪ್ರಕರಣದಲ್ಲಿ ವಿಶ್ವವಿದ್ಯಾಲಯ ಸಿಬ್ಬಂದಿಯೂ ಆಗಿದ್ದ ವೈಕುಂಠಮೂರ್ತಿ ಎಂಬಾತನನ್ನು ಇತ್ತೀಚೆಗೆ ಅಮಾನತು ಮಾಡಲಾಗಿತ್ತು. ಈ ಪ್ರಕರಣದ ತನಿಖೆ ವೇಳೆ ಘಟಿಕೋತ್ಸವ ಪ್ರಮಾಣ ಪತ್ರದ ಅಕ್ರಮವೂ ಬಯಲಾಗಿದೆ. ಇದಕ್ಕಾಗಿ ಕುಲಪತಿಯ ಸಹಿಯ ಸೀಲ್ ಅನ್ನೂ ಗುಪ್ತವಾಗಿ ತಯಾರಿಸಿಟ್ಟುಕೊಳ್ಳಲಾಗಿತ್ತು' ಎಂದು ಗೊತ್ತಾಗಿದೆ.

'ಹೊರಗುತ್ತಿಗೆ ನೌಕರರು ಈ ಅಕ್ರಮದಲ್ಲಿ ಭಾಗಿಯಾಗಿದ್ದಾರೆ. 10 ವರ್ಷಗಳಲ್ಲಿ ಏನಾಗಿದೆ ಎಂಬುದನ್ನು ಪರಿಶೀಲಿಸಲು ನಾವು ತೀರ್ಮಾನಿಸಿದ್ದೇವೆ' ಎಂದು ಆಡಳಿತ ವಿಭಾಗದ ಕುಲಸಚಿವ ರುದ್ರೇಶ 'ಪ್ರಜಾವಾಣಿ'ಗೆ ತಿಳಿಸಿದರು.

4 ಜಿಲ್ಲೆಗಳಲ್ಲಿ ವಸ್ತುಪ್ರದರ್ಶನ

ಮೈಸೂರು: 'ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ (ಕೆಇಎ) ಮೈಸೂರಿಗೆ ಮಾತ್ರವೇ ಸೀಮಿತವಾಗಿದೆ ಎಂಬುದನ್ನು ಹೋಗಲಾಡಿಸಲು ಮೊದಲ ಹಂತದಲ್ಲಿ ರಾಜ್ಯದ 4 ಜಿಲ್ಲೆಗಳಲ್ಲಿ ವಸ್ತುಪ್ರದರ್ಶನ ಆಯೋಜಿಸಲಾಗುವುದು' ಎಂದು ಅಧ್ಯಕ್ಷ ಅಯೂಬ್ ಖಾನ್ ತಿಳಿಸಿದರು.

ಇಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಳ್ಳಾರಿ, ಬೆಳಗಾವಿ, ದಾವಣಗೆರೆ ಹಾಗೂ ಶಿವಮೊಗ್ಗದಲ್ಲಿ ತಲಾ 45 ದಿನಗಳವರೆಗೆ ವಸ್ತುಪ್ರದರ್ಶನ ನಡೆಸಲಾಗುವುದು. ಅದಕ್ಕಾಗಿ ಜಿಲ್ಲಾಡಳಿತಗಳ ಸಹಯೋಗವನ್ನು ಪಡೆಯಲಾಗುವುದು. ಮುಂದಿನ ದಿನಗಳಲ್ಲಿ ಇತರ ಜಿಲ್ಲೆಗಳಲ್ಲೂ ಆಯೋಜನೆಗೆ ಕ್ರಮ ವಹಿಸಲಾಗುವುದು' ಎಂದರು.

'ಫೆ.24ರಂದು ಬಳ್ಳಾರಿಯಲ್ಲಿ ಹಾಗೂ 25ರಂದು ಬೆಳಗಾವಿಯಲ್ಲಿ ಅಲ್ಲಿನ ಜಿಲ್ಲಾಧಿಕಾರಿ ಜೊತೆ ಚರ್ಚಿಸಿ ಜಾಗ ಮತ್ತು ದಿನಾಂಕದ ಬಗ್ಗೆ ಚರ್ಚಿಸಲಾಗುವುದು' ಎಂದರು.

ರೈಲುಗಳ ತಾತ್ಕಾಲಿಕ ನಿಲುಗಡೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು-ತಾಳಗುಪ್ಪ ಡೈಲಿ ಎಕ್ಸ್‌ಪ್ರೆಸ್ ರೈಲಿಗೆ ಇದ್ದ ಅರಸಾಳು ಮತ್ತು ಕುಂಸಿ ನಿಲ್ದಾಣಗಳಲ್ಲಿ ತಾತ್ಕಾಲಿಕ ನಿಲುಗಡೆಯನ್ನು ನೈರುತ್ಯ ರೈಲ್ವೆಯು ಮುಂದುವರಿಸಿದೆ.

ಒಂದು ನಿಮಿಷದ ನಿಲುಗಡೆಯು ಫೆ.23ರವರೆಗೆ ಇತ್ತು. ಪ್ರಯಾಣಿಕರ ಅನುಕೂಲಕ್ಕಾಗಿ ಆ.23ರ ವರೆಗೆ ಮುಂದುವರಿಸಲಾಗಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಕಾರಿಡಾರ್ ನಿರ್ಮಾಣಕ್ಕೆ ಮಸೀದಿ ತೆರವು

ಮೀರತ್ (ಪಿಟಿಐ): ಇಲ್ಲಿನ ದೆಹಲಿ ರಸ್ತೆಯಲ್ಲಿ ಇದ್ದ ದಶಕಗಳಷ್ಟು ಹಳೆಯ ಮಸೀದಿಯನ್ನು ಪ್ರಾದೇಶಿಕ ರ‍್ಯಾಪಿಡ್ ಟ್ರಾನ್ಸಿಟ್ ಸಿಸ್ಟಂ (ಆರ್‌ಆರ್‌ಟಿಎಸ್) ಕಾರಿಡಾರ್ ನಿರ್ಮಾಣಕ್ಕಾಗಿ ಕೆಡವಲಾಯಿತು.

ಈ ಮಾರ್ಗದಲ್ಲಿ ಸಾಗಲಿರುವ ರ‍್ಯಾಪಿಡ್ ರೈಲು ಯೋಜನೆಗೆ ಮಸೀದಿ ಅಡ್ಡಿಯಾಗಿತ್ತು. ಹೀಗಾಗಿ ತೆರವಿಗೆ ಕ್ರಮ ತೆಗೆದುಕೊಳ್ಳಲಾಯಿತು ಎಂದು ಅಧಿಕಾರಿಗಳು ಹೇಳಿದರು.

‘ಮಸೀದಿ ಆಡಳಿತ ಮಂಡಳಿ ಮತ್ತು ಸ್ಥಳೀಯ ಮುಸ್ಲಿಂ ಸಮುದಾಯದವರ ಸಮ್ಮತಿ ಮೇರೆಗೆ ಮಸೀದಿ ತೆರವು ಕಾರ್ಯಕೈಗೊಳ್ಳಲಾಯಿತು’ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಬ್ರಿಜೇಶ್ ಕುಮಾರ್ ಸಿಂಗ್ ತಿಳಿಸಿದರು.

‘ಮುಸ್ಲಿಂ ಸಮುದಾಯದ ಸದಸ್ಯರು ಗುರುವಾರ ಸುತ್ತಿಗೆಯಿಂದ ಮಸೀದಿ ಕೆಲ ಭಾಗಗಳನ್ನು ಕೆಡವಿದರು. ನಂತರ ಅದರ ರಚನೆಯನ್ನು ಕೆಡವಲಾಯಿತು. ಬಳಿಕ ಬುಲ್ಡೋಜರ್ ನೆರವಿನಿಂದ ಇಡೀ ಮಸೀದಿಯನ್ನು ಪೂರ್ಣವಾಗಿ ಕೆಡವಿ, ಅವಶೇಷಗಳನ್ನು ತೆರವುಗೊಳಿಸಲಾಯಿತು’ ಎಂದು ಮಾಹಿತಿ ನೀಡಿದರು.

‘ಪರಸ್ಪರ ಒಪ್ಪಂದದೊಂದಿಗೆ ಈ ಕಾರ್ಯ ನಡೆದಿದೆ. ಬೇರೆಡೆ ಮಸೀದಿ ನಿರ್ಮಾಣಕ್ಕೆ ಪರ್ಯಾಯ ಜಾಗವನ್ನು ಒದಗಿಸಿಲ್ಲ. ಈ ಕುರಿತು ಮುಸ್ಲಿಂ ಸಮುದಾಯದಿಂದ ಯಾವುದೇ ಪ್ರಸ್ತಾವವೂ ಬಂದಿಲ್ಲ’ ಎಂದರು.

‘ನಾವೇ ಮಸೀದಿಯನ್ನು ತೆರವುಗೊಳಿಸಿದ್ದೇವೆ. ಆದರೆ ಮಸೀದಿಯ ಐತಿಹಾಸಿಕತೆಯನ್ನು ಸಾಬೀತುಪಡಿಸುವ 1857ರ ದಾಖಲೆಗಳು ನಮ್ಮ ಬಳಿಯಿವೆ’ ಎಂದು ಮಸೀದಿಯ ಪ್ರತಿನಿಧಿ ಹಾಜಿ ಸ್ವಾಲೆ ಹೀನ್ ಪ್ರತಿಕ್ರಿಯಿಸಿದರು.

ಯುಎಸ್‌ಏಡ್: ಮೋದಿಗೆ ₹182 ಕೋಟಿ– ಡೊನಾಲ್ಡ್ ಟ್ರಂಪ್ ಹೇಳಿಕೆ ಸೃಷ್ಟಿಸಿದ ಸಂಚಲನ

ಬಿಜೆಪಿ ವಿರುದ್ಧ ಕಾಂಗ್ರೆಸ್ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮತದಾನ ಹೆಚ್ಚಳ ಮಾಡುವುದಕ್ಕೆ ‘ಯುಎಸ್‌ಏಡ್’ನಡಿ ಭಾರತಕ್ಕೆ ಹಣ ನೀಡಲಾಗುತ್ತಿತ್ತು ಎಂಬ ವಿವಾದದ ಬಿಸಿ ಈಗ ಬಿಜೆಪಿಗೆ ತಟ್ಟಿದೆ.

‘ಮತ ಪ್ರಮಾಣ ಹೆಚ್ಚಿಸುವ ಉದ್ದೇಶದಿಂದ, ಭಾರತದಲ್ಲಿನ ನನ್ನ ಮಿತ್ರ, ಪ್ರಧಾನಿ ನರೇಂದ್ರ ಮೋದಿ ಅವರಿಗೆ ₹182 ಕೋಟಿ (21 ಮಿಲಿಯನ್ ಡಾಲರ್) ನೀಡಲಾಗುತ್ತಿತ್ತು’ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆಯನ್ನೇ ಅಸ್ತ್ರವನ್ನಾಗಿ ಮಾಡಿಕೊಂಡಿರುವ ಕಾಂಗ್ರೆಸ್, ಬಿಜೆಪಿ ವಿರುದ್ಧದ ಟೀಕಾ ಪ್ರಹಾರವನ್ನು ಹರಿತಗೊಳಿಸಿದೆ. ‘ಟ್ರಂಪ್ ಹೇಳಿಕೆ ಹೊರಬಿದ್ದ ಬೆನ್ನಲ್ಲೇ ಕೇಸರಿ ಪಕ್ಷ ಮೌನಕ್ಕೆ ಶರಣಾಗಿರುವುದು ಏಕೆ? ಅವರ ಹೇಳಿಕೆಯನ್ನು ಬಿಜೆಪಿ ಅಲ್ಲಗಳೆಯುತ್ತಿಲ್ಲವೇಕೆ’ ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

ಯುಎಸ್‌ಏಡ್ ವಿವಾದವನ್ನು ಮುಂದಿಟ್ಟು, ಆಮ್ ಆದ್ಮಿ ಪಕ್ಷದ (ಎಎಪಿ) ವಿರುದ್ಧವೂ ಕಾಂಗ್ರೆಸ್ ಟೀಕೆ ಮಾಡಿದೆ. ಎಎಪಿ ಮತ್ತು ಕಾಂಗ್ರೆಸ್, ‘ಇಂಡಿಯಾ’ ಮೈತ್ರಿಕೂಟದ ಅಂಗಪಕ್ಷಗಳು ಎಂಬುದು ವಿಶೇಷ.

‘2012ರಲ್ಲಿ ಯುಎಸ್‌ಏಡ್‌ನಡಿ ನೀಡಲಾಗಿದ್ದ 3.16 ಕೋಟಿಗೂ (3.65 ಲಕ್ಷ ಡಾಲರ್) ಎಎಪಿ ರಚಿಸಿರುವುದಕ್ಕೂ ಏನಾದರೂ ಸಂಬಂಧ ಇದೆಯೇ’ ಎಂದು ಕಾಂಗ್ರೆಸ್ ಪಕ್ಷದ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಪ್ರಶ್ನಿಸಿದ್ದಾರೆ.

‘ಬಿಜೆಪಿ ವರಿಷ್ಠ ನಾಯಕ ಎಲ್.ಕೆ.ಅಡ್ವಾಣಿ ಅವರ ವಿರುದ್ಧ ‘ಪಿತೂರಿ’ ನಡೆಸಿ, ನರೇಂದ್ರ ಮೋದಿ ಅವರನ್ನೇ ಪ್ರಧಾನಿ ಅಭ್ಯರ್ಥಿಯನ್ನಾಗಿ ಮಾಡುವ ಅಭಿಯಾನ ಆಗ ನಡೆದಿತ್ತು. ಯುಎಸ್‌ಏಡ್ ನಡಿ ನೀಡಲಾಗಿದ್ದ ₹3.16 ಕೋಟಿ ಪೈಕಿ ಭಾಗಶಃ ಮೊತ್ತವನ್ನು ಈ ಅಭಿಯಾನಕ್ಕೆ ಬಳಸಲಾಗಿತ್ತೇ’ ಎಂದು ಖೇರಾ ಪ್ರಶ್ನಿಸಿದ್ದಾರೆ.

‘ಯುಎಸ್‌ಏಡ್ ಕುರಿತ ಟ್ರಂಪ್ ಹೇಳಿಕೆಗಳು ಬಹಿರಂಗಗೊಂಡವು. ಇದರ ಬೆನ್ನಲ್ಲೇ, ‘ಭಾರತಕ್ಕೆ ₹182 ಕೋಟಿ ಕಳುಹಿಸುವ ಯೋಜನೆ ಕುರಿತ ದಾಖಲೆ ಇಲ್ಲ’ ಎಂಬುದಾಗಿ ‘ವಾಷಿಂಗ್ಟನ್ ಪೋಸ್ಟ್’ ವರದಿ ಪ್ರಕಟಿಸಿತು.

ಆದರೆ, ಮೋದಿ ನೇತೃತ್ವದ ಸರ್ಕಾರ, ಅದರ ಆರ್ಥಿಕ ಸಲಹೆಗಾರ, ಬಿಜೆಪಿಯ ಐ.ಟಿ ಘಟಕದ ಮುಖಸ್ಥರು ಹಾಗೂ ಬಿಜೆಪಿ ಪರವಾಗಿ ಕೆಲಸ ಮಾಡುವ ಗುಂಪುಗಳು ಮತ್ತು ಮಾಧ್ಯಮಗಳಿಂದ ಈ ವಿಚಾರವನ್ನು ಮುಂದಿಟ್ಟುಕೊಂಡು ‘ಡೀಪ್ ಸ್ಟೇಟ್’ ಹಾಗೂ ‘ವಿದೇಶಿ ಹಸ್ತಕ್ಷೇಪ’ ಎಂಬ ತಮ್ಮ ಆರೋಪಗಳನ್ನು ಸಾಬೀತುಪಡಿಸಲು ಪ್ರಯತ್ನಗಳು ನಡೆದವು ಎಂದೂ ಖೇರಾ ಕುಟುಕಿದ್ದಾರೆ.

‘ಯುಎಸ್‌ಏಡ್‌ನಿಂದ ಎಷ್ಟು ಹಣ ಸ್ವೀಕರಿಸಲಾಗಿತ್ತು. ಎಷ್ಟು ಜನರು, ಸಾಂಸ್ಕೃತಿಕ ಸಂಘಟನೆ ಎಂಬ ಮುಖವಾಡ ಹೊತ್ತ ಎಷ್ಟು ರಾಜಕೀಯ ಪಕ್ಷಗಳು ಹಣ ಪಡೆದಿವೆ ಎಂಬ ಬಗ್ಗೆ ಶ್ವೇತಪತ್ರ ಹೊರಡಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಎಷ್ಟು ಹಣ, ಯಾವಾಗ ಪಾವತಿ?



ಮಾಧ್ಯಮಗಳಲ್ಲಿ ಪ್ರಕಟವಾಗಿರುವ ವರದಿಗಳನ್ನು ಉಲ್ಲೇಖಿಸಿರುವ ಪವನ್ ಖೇರಾ, ಯುಎಸ್‌ಏಡ್‌ನಡಿ ಯಾವ ಯಾವ ವರ್ಷ, ಯಾವ ಸಂಘಟನೆಗಳಿಗೆ ಹಣ ನೀಡಲಾಗಿದೆ ಎಂಬ ವಿವರಗಳ ಕುರಿತು ಮಾಹಿತಿ ಹಂಚಿಕೊಂಡಿದ್ದಾರೆ.

2001ರಿಂದ 2024ರ ನಡುವೆ ₹ 25 ಸಾವಿರ ಕೋಟಿ (2.9 ಶತಕೋಟಿ ಡಾಲರ್) ನೀಡಲಾಗಿದೆ. ಈ ಪೈಕಿ, ಯುಪಿಎ ಅವಧಿಯಲ್ಲಿ ₹10 ಸಾವಿರ ಕೋಟಿ (1.2 ಶತಕೋಟಿ ಡಾಲರ್) ನೀಡಲಾಗಿದ್ದರೆ, ಮೋದಿ ಸರ್ಕಾರದ ಆಡಳಿತದ ಅವಧಿಯಲ್ಲಿ ₹ 11 ಸಾವಿರ ಕೋಟಿ (1.3 ಶತಕೋಟಿ ಡಾಲರ್) ನೀಡಲಾಗಿದೆ.

ಯುಎಸ್‌ಏಡ್ ಮೊದಲ ಕಂತಿನ ಹಣ ₹ 3.16 ಕೋಟಿ, ‘ಡೆಮಾಕ್ರಟಿಕ್ ಪಾರ್ಟಿಸಿಪೇಷನ್ ಅಂಡ್ ಸಿವಿಲ್ ಸೊಸೈಟಿ’ಗೆ ಅಮೆರಿಕದ ಹಣಕಾಸು ವರ್ಷ 2013ರಲ್ಲಿ ಸಂದಾಯವಾಗಿದೆ. ಈ ಹಣಕಾಸು ವರ್ಷವು 2012ರ ಅಕ್ಟೋಬರ್ 1ರಂದು ಆರಂಭಗೊಂಡಿತ್ತು ಎಂಬುದು ಗಮನಾರ್ಹ ಎಂದು ಖೇರಾ ಹೇಳಿದ್ದಾರೆ.

‘2012ರಲ್ಲಿ ಅಣ್ಣಾ ಹಜಾರೆ ಚಳವಳಿ ಜೋರಾಗಿ ನಡೆದಿತ್ತು. ಅರವಿಂದ ಕೇಜ್ರಿವಾಲ್ ಸ್ವಂತ ಪಕ್ಷ ರಚಿಸುವ ತಯಾರಿಯಲ್ಲಿದ್ದರು. ಆಗ, ಗುಜರಾತ್ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಅವರು ಬಿಜೆಪಿಯ ಪ್ರಧಾನಿ ಅಭ್ಯರ್ಥಿಯಾಗಲು ಭರ್ಜರಿ ಸಿದ್ಧತೆ ನಡೆಸುತ್ತಿದ್ದರು. ಆಗ, ಯುಎಸ್‌ಏಡ್ ನೆರವಿನಿಂದ ಯಾರೆಲ್ಲಾ ಪ್ರಯೋಜನ ಪಡೆದಿದ್ದಾರೆ’ ಎಂದು ಪ್ರಶ್ನಿಸಿದ್ದಾರೆ.


‘ತಾವು ಹೆಣೆದಿರುವ ಸುಳ್ಳು ಸಂಕಥನಕ್ಕೆ ಇಂಬು ನೀಡುವುದಕ್ಕಾಗಿ ಆರ್‌ಎಸ್‌ಎಸ್ ಹಾಗೂ ಬಿಜೆಪಿ ನಾಯಕರು, ವಿಶ್ವಾಸಾರ್ಹ ನಾಗರಿಕ ಸಮಾಜ ಸಂಘಟನೆಗಳು, ಎನ್‌ಜಿಒ ಹಾಗೂ ರಾಜಕೀಯ ಪಕ್ಷಗಳ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ’

‘ಆರ್‌ಎಸ್‌ಎಸ್ ಹಾಗೂ ಬಿಜೆಪಿ ನಾಯಕರಿಗೆ ಸಾರ್ವಜನಿಕ ವೇದಿಕೆಗಳಲ್ಲಿ ಛೀಮಾರಿ ಹಾಕುವ ಜೊತೆಗೆ, ಸುಳ್ಳು ಹೇಳುವ ಮೂಲಕ ದೇಶದ ದಾರಿ ತಪ್ಪಿಸುತ್ತಿರುವುದ ಕ್ಕಾಗಿ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು’ ಎಂದೂ ಒತ್ತಾಯಿಸಿದ್ದಾರೆ.

ಪ್ರಧಾನಿ ಮೋದಿ ಕೂಡಲೇ ತಮ್ಮ ಮಿತ್ರ ಟ್ರಂಪ್ ಅವರಿಗೆ ಕರೆ ಮಾಡಿ, ಈ ಬಗ್ಗೆ ಪ್ರಶ್ನಿಸಬೇಕು. ಪ್ರಶ್ನೆ ಮಾಡದೇ ಇದ್ದಲ್ಲಿ, ಟ್ರಂಪ್ ಹೇಳಿರುವುದು ನಿಜ ಎಂಬುದು ಸ್ಪಷ್ಟವಾಗುತ್ತದೆ


ಪವನ್ ಖೇರಾ, ಕಾಂಗ್ರೆಸ್‌ನ ಮಾಧ್ಯಮ ವಿಭಾಗ ಮುಖಸ್ಥ

‘ಮತಪತ್ರ: ಟ್ರಂಪ್ ಮಾತನ್ನು ಮೋದಿ ಪರಿಗಣಿಸಲಿ’



ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರಗಳನ್ನು (ಇವಿಎಂ) ಬಳಸುವ ಬದಲು ಮತಪತ್ರಗಳನ್ನು ಬಳಸಬೇಕು ಎಂಬ ತಮ್ಮ ಮಿತ್ರ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾತನ್ನು ಪ್ರಧಾನಿ ನರೇಂದ್ರ ಮೋದಿ ಪರಿಗಣಿಸಬೇಕು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಶನಿವಾರ ಹೇಳಿದ್ದಾರೆ.

‘ಭಾರತದ ಚುನಾವಣಾ ಪ್ರಕ್ರಿಯೆಯ ಸಮಗ್ರತೆ ಕುರಿತಂತೆ ವ್ಯಕ್ತವಾಗುತ್ತಿರುವ ಕಳವಳಕ್ಕೆ ಪರಿಹಾರ ಸಿಗುವಂತಾಗಲು, ಟ್ರಂಪ್ ಮಾತನ್ನು ಮೋದಿ ಗಣನೆಗೆ ತೆಗೆದುಕೊಳ್ಳಬೇಕು’ ಎಂದಿದ್ದಾರೆ.



ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲ್ಲೂಕಿನ ಗುಣವಂತೆಯಲ್ಲಿ ಶನಿವಾರ ನಡೆದ ಕೆರೆಮನೆ ಶಂಭು ಹೆಗಡೆ ರಾಷ್ಟ್ರೀಯ ನಾಟ್ಯೋತ್ಸವದ ಉದ್ಘಾಟನಾ ಕಾರ್ಯಕ್ರಮದಲ್ಲಿ ಕರ್ನಾಟಕ ಜಾನಪದ ಪರಿಷತ್ತಿಗೆ ನೀಡಲಾದ ‘ಕೆರೆಮನೆ ಶಿವರಾಮ ಹೆಗಡೆ ರಾಷ್ಟ್ರೀಯ ಪ್ರಶಸ್ತಿ’ಯನ್ನು ಪರಿಷತ್ ಅಧ್ಯಕ್ಷ ಹಿ.ಚಿ.ಬೋರಲಿಂಗಯ್ಯ ಮತ್ತು ವ್ಯವಸ್ಥಾಪಕ ಟ್ರಸ್ಟಿ ಆದಿತ್ಯ ನಂಜರಾಜ್ ಸ್ವೀಕರಿಸಿದರು. ಕೆರೆಮನೆ ಶ್ರೀಧರ ಹೆಗಡೆ, ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ ನಿರ್ದೇಶಕ ಕೆರೆಮನೆ ಶಿವಾನಂದ ಹೆಗಡೆ, ಪತ್ರಕರ್ತ ಜಿ.ಯು.ಭಟ್, ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿ ನಿರಂಜನ ವಾನಳ್ಳಿ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವ ಮಂಕಾಳ ವೈದ್ಯ, ಲಕ್ಷ್ಮೀನಾರಾಯಣ ಕಾಶಿ, ಕೇರಳ ಫೋಕ್ಲ್ಯಾಂಡ್ ಅಧ್ಯಕ್ಷ ಜಯರಾಜನ್ ಪಾಲ್ಗೊಂಡಿದ್ದರು

ಐಆರ್‌ಎಸ್ ಅಧಿಕಾರಿ, ತಾಯಿ, ತಂಗಿ ಸಾವು

ಕೊಚ್ಚಿ/ರಾಂಚಿ (ಪಿಟಿಐ): ಐಆರ್‌ಎಸ್ ಅಧಿಕಾರಿ ಮತ್ತು ಅವರ ಸಹೋದರಿ ಹಾಗೂ ತಾಯಿ ಕಾಕ್ಕನಾಡು ಕೇಂದ್ರೀಯ ಅಬಕಾರಿ ಸಿಬ್ಬಂದಿ ಕ್ವಾರ್ಟರ್ಸ್‌ನಲ್ಲಿ ನಿಗೂಢವಾಗಿ ಮೃತಪಟ್ಟಿದ್ದಾರೆ.

ಮೃತರನ್ನು ಕೊಚ್ಚಿಯ ಕೇಂದ್ರೀಯ ಅಬಕಾರಿ ಮತ್ತು ಕಸ್ಟಮ್ಸ್‌ನ ಐಆರ್‌ಎಸ್ ಅಧಿಕಾರಿ ಹಾಗೂ ಹೆಚ್ಚುವರಿ ಆಯುಕ್ತ ಮನೀಶ್ ವಿಜಯ್ (43), ಅವರ ಸಹೋದರಿ ಶಾಲಿನಿ ವಿಜಯ್ ಮತ್ತು ಅವರ ತಾಯಿ ಶಕುಂತಲಾ ಅಗರ್‌ವಾಲ್ ಎಂದು ಗುರುತಿಸಲಾಗಿದೆ.

ಶಾಲಿನಿ ಅವರು ಜಾರ್ಖಂಡ್‌ನಲ್ಲಿ ರಾಜ್ಯ ಸರ್ಕಾರಿ ಅಧಿಕಾರಿಯಾಗಿದ್ದರು. ಜಾರ್ಖಂಡ್ ಸಾರ್ವಜನಿಕ ಸೇವಾ ಆಯೋಗದ (ಜೆಪಿಎಸ್‌ಸಿ) ಮೊದಲ ಬ್ಯಾಚ್‌ನ ಟಾಪರ್ ಕೂಡ ಹೌದು. ಮನೀಶ್ ವಿಜಯ್ ಅವರು ಕ್ವಾರ್ಟರ್ಸ್‌ನಲ್ಲಿ ವಾಸವಿದ್ದರು.

ಮನೀಶ್ ಮತ್ತು ಅವರ ಸಹೋದರಿ ಶಾಲಿನಿ ಅವರ ಶವಗಳು ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿವೆ.

ಅಲ್ಲದೆ, ಅವರ ತಾಯಿ ಶಕುಂತಲಾ ಅವರ ಶವದ ಮೇಲೆ ಬಿಳಿ ಬಟ್ಟೆ ಹೊದಿಸಿ, ಹೂವುಗಳನ್ನು ಹಾಕಿರುವುದು ಕಂಡುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೆಲವು ದಿನಗಳಿಂದ ರಜೆಯಲ್ಲಿದ್ದ ಮನೀಶ್ ಅವರು ಕೆಲಸಕ್ಕೆ ಹಿಂತಿರುಗದ ಕಾರಣ, ಸಹೋದ್ಯೋಗಿಗಳು ಗುರುವಾರ ರಾತ್ರಿ ಅವರ ನಿವಾಸಕ್ಕೆ ಭೇಟಿ ನೀಡಿದ್ದರು. ಆಗ, ಮೂವರು ಮೃತಪಟ್ಟಿರುವುದು ಗೊತ್ತಾಗಿದೆ.

ಸಮನ್ಸ್ ಬಂದಿತ್ತು: ಜಾರ್ಖಂಡ್‌ನ ಗರ್ವಾದಲ್ಲಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಯಾಗಿದ್ದ ಶಾಲಿನಿ ಅವರು ತನ್ನ ಹುದ್ದೆಯ ನೇಮಕ ವೇಳೆ ಅಕ್ರಮ ನಡೆಸಿರುವ ಆರೋಪ ಎದುರಿಸುತ್ತಿದ್ದರು

ಸಿಬಿಐ ತನಿಖೆ ನಡೆಸುತ್ತಿರುವ ಈ ಪ್ರಕರಣದಲ್ಲಿ, ಜಾರ್ಖಂಡ್‌ನಲ್ಲಿ ಫೆ.15ರಂದು ವಿಚಾರಣೆಗೆ ಹಾಜರಾಗಲು ಶಾಲಿನಿ ಅವರಿಗೆ ಕೋರ್ಟ್ ಸಮನ್ಸ್ ಬಂದಿತ್ತು ಎಂದು ಮೂಲಗಳು ಹೇಳಿವೆ.

ತಾಯಿ ಸಾವಿಗೆ ನೊಂದು ಆತ್ಮಹತ್ಯೆ?: ‘ಮನೀಶ್ ವಿಜಯ್ ಅವರ ತಾಯಿ ಸಹಜವಾಗಿ ಮೃತಪಟ್ಟಿದ್ದರೆ, ದುಃಖದಿಂದ ಅಣ್ಣ–ತಂಗಿ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ಇದೆ. ಮರಣೋತ್ತರ ಪರೀಕ್ಷೆಯ ನಂತರ ನಿಖರ ಕಾರಣ ಗೊತ್ತಾಗಲಿದೆ. ಎಲ್ಲಾ ಆಯಾಮಗಳಿಂದಲೂ ತನಿಖೆ ನಡೆಸಲಾಗುತ್ತಿದೆ’ ಎಂದು ಕೇರಳ ಪೊಲೀಸರು ಶನಿವಾರ ಹೇಳಿದ್ದಾರೆ.

ಸುದ್ದಿ 2 ನಿಮಿಷ

‘ದೇಶದ ಚುನಾವಣೆಯಲ್ಲಿ ಅಕ್ರಮ ವಲಸಿಗರ ಹಸ್ತಕ್ಷೇಪ’

ಛತ್ರಪತಿ ಸಂಭಾಜಿನಗರ (ಮಹಾರಾಷ್ಟ್ರ) (ಪಿಟಿಐ): ದೇಶದ ಚುನಾವಣಾ ಪ್ರಕ್ರಿಯೆಯಲ್ಲಿ ಅಕ್ರಮ ವಲಸಿಗರು ಹಸ್ತಕ್ಷೇಪ ಮಾಡುತ್ತಿದ್ದಾರೆ. ಈ ಬಗ್ಗೆ ಜಾಗೃತಿ ಮೂಡಿಸಬೇಕಿದೆ ಎಂದು ಉಪರಾಷ್ಟ್ರಪತಿ ಜಗದೀಪ್ ಧನಕರ್ ಶನಿವಾರ ಹೇಳಿದ್ದಾರೆ.

ಡಾ.ಬಾಬಾಸಾಹೇಬ್ ಅಂಬೇಡ್ಕರ್ ಮರಾಠವಾಡ ವಿಶ್ವವಿದ್ಯಾಲಯದ 65ನೇ ಘಟಿಕೋತ್ಸವದಲ್ಲಿ ಮಾತನಾಡಿದರು.

‘ಭಾರತದಲ್ಲಿ ಹಕ್ಕಿಲ್ಲದೆಯೂ ಕೋಟ್ಯಂತರ ಜನರು ಇಲ್ಲಿ ವಾಸಿಸುತ್ತಿದ್ದಾರೆ. ಅವರು ಇಲ್ಲಿ ತಮ್ಮ ಜೀವನೋಪಾಯ ನಡೆಸುತ್ತಿದ್ದಾರೆ. ಅವರು ನಮ್ಮ ಸಂಪನ್ಮೂಲಗಳ ಮೇಲೆ ಬೇಡಿಕೆಗಳನ್ನು ಇಡುತ್ತಿದ್ದಾರೆ.

ನಮ್ಮ ಶಿಕ್ಷಣ, ಆರೋಗ್ಯ ಕ್ಷೇತ್ರ, ವಸತಿ ಕ್ಷೇತ್ರದ ಮೇಲೂ ಬೇಡಿಕೆಗಳನ್ನು ಇಡುತ್ತಿದ್ದಾರೆ. ಈಗ ಇನ್ನಷ್ಟು ಮುಂದೆ ಹೋಗಿ, ಅವರು ನಮ್ಮ ಚುನಾವಣಾ ಪ್ರಕ್ರಿಯೆಯಲ್ಲಿ ಮಧ್ಯಪ್ರವೇಶಿಸುತ್ತಿದ್ದಾರೆ. ಪ್ರತಿಯೊಬ್ಬ ಭಾರತೀಯನು ಎಚ್ಚರಗೊಳ್ಳಬೇಕಿದೆ. ಈ ಬಗ್ಗೆ ಎಲ್ಲರಲ್ಲೂ ಜಾಗೃತಿ ಮೂಡಿಸುವ ಕರ್ತವ್ಯ ನಮ್ಮೆಲ್ಲರ ಮೇಲಿದೆ’ ಎಂದರು.

ಅಮೆರಿಕ ಸರ್ಕಾರವು ಅಕ್ರಮ ವಲಸಿಗರನ್ನು ಗಡೀಪಾರು ಮಾಡುತ್ತಿರುವುದನ್ನು ಉಲ್ಲೇಖಿಸಿದ ಅವರು, ‘ದೇಶದಲ್ಲಿ ಈ ಪ್ರಕ್ರಿಯೆಯು ಯಾವಾಗ ಪ್ರಾರಂಭವಾಗಲಿದೆ ಯೆಂದು ಪ್ರತಿ ಭಾರತೀಯನೂ ಕೇಳಬೇಕು’ ಎಂದು ಅವರು ಹೇಳಿದರು.



ಪಂಜಾಬ್: ಅಸ್ತಿತ್ವದಲ್ಲೇ ಇಲ್ಲದ ಇಲಾಖೆ ನಿರ್ವಹಿಸುತ್ತಿರುವ ಮಂತ್ರಿ!

ಚಂಡೀಗಢ(ಪಿಟಿಐ): ಪಂಜಾಬ್ ಸರ್ಕಾರದಲ್ಲಿ ಕಳೆದ 21 ತಿಂಗಳಿಂದ ಸಂಪುಟ ದರ್ಜೆ ಸಚಿವರಾಗಿರುವ ಕುಲದೀಪ್ ಸಿಂಗ್ ಧಾಲೀವಾಲ್, ಎನ್‌ಆರ್‌ಐ ವ್ಯವಹಾರಗಳು ಹಾಗೂ ಆಡಳಿತ ಸುಧಾರಣೆ ಇಲಾಖೆ ನೋಡಿಕೊಳ್ಳುತ್ತಿದ್ದಾರೆ. ಆದರೆ, ಆಡಳಿತ ಸುಧಾರಣಾ ಇಲಾಖೆಯೇ ಅಸ್ತಿತ್ವದಲ್ಲಿ ಎಂಬ ಮಾಹಿತಿಯನ್ನು ರಾಜ್ಯ ಸರ್ಕಾರವೇ ಅವರಿಗೆ ನೀಡಿದೆ!

ಫೆ.18ರಂದು ಸರ್ಕಾರ ಹೊರಡಿಸಿರುವ ಅಧಿಸೂಚನೆಯಲ್ಲಿ ಈ ಮಾಹಿತಿ ಒದಗಿಸಲಾಗಿದೆ. ಈ ಇಲಾಖೆಗೆ ಸಂಬಂಧಿಸಿ ಯಾವುದೇ ಸಿಬ್ಬಂದಿಯನ್ನು ಒದಗಿಸಿರಲಿಲ್ಲ. ಇಲಾಖೆಯ ಸಭೆಯೂ ನಡೆದಿಲ್ಲ ಎಂದು ಮೂಲಗಳು ಹೇಳಿವೆ.

2023ರ ಮೇನಲ್ಲಿ ನಡೆದ ಸಂಪುಟ ಪುನರ್‌ರಚನೆ ವೇಳೆ ಧಾಲೀವಾಲ್ ಅವರಿಂದ ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆ ಕಿತ್ತುಕೊಂಡು, ಎನ್‌ಆರ್‌ಐ ವ್ಯವಹಾರಗಳ ಖಾತೆ ಹಾಗೂ ಆಡಳಿತ ಸುಧಾರಣಾ ಇಲಾಖೆಯ ಹೊಣೆ ನೀಡಲಾಗಿತ್ತು. ಈ ವಿಚಾರ ಮುಂದಿಟ್ಟುಕೊಂಡು ವಿರೋಧ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್ ಹಾಗೂ ಎಸ್‌ಎಡಿ, ಆಮ್ ಆದ್ಮಿ ಪಕ್ಷ (ಎಎಪಿ) ನೇತೃತ್ವದ ಸರ್ಕಾರದ ವಿರುದ್ಧ ಚಾಟಿ ಬೀಸಿವೆ.

‘ಎಂತಹ ಬದಲಾವಣೆ!’ ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡಿರುವ, ಪಂಜಾಬ್‌ನ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಮರಿಂದರ್ ಸಿಂಗ್ ರಾಜಾ ವಾರಿಂಗ್, ಈ ಬೆಳವಣಿಗೆ ಕುರಿತು ಪತ್ರಿಕೆಯೊಂದರಲ್ಲಿ ಪ್ರಕಟವಾಗಿರುವ ವರದಿಯನ್ನು ಹಂಚಿಕೊಂಡಿದ್ದಾರೆ.

ಅಸ್ಸಾಂ: ಖಾಸಗಿ ವಿ.ವಿ ಕುಲಪತಿ ಬಂಧನ

ಗುವಾಹಟಿ: ಮೇಘಾಲಯದ ಖಾಸಗಿ ವಿ.ವಿ ‘ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವ ವಿದ್ಯಾಲಯ, ಮೇಘಾಲಯ’ (ಯುಎಸ್‌ಟಿಎಂ) ಕುಲಪತಿ ಮೆಹಬೂಬ್ ಉಲ್ ಹಕ್ ಅವ ರನ್ನು ಅಸ್ಸಾಂ ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿಗೆ ಸಂಬಂಧಿಸಿದ ವಿಚಾರವಾಗಿ ಹಕ್ ಅವರನ್ನು ಅವರ ನಿವಾಸದಿಂದ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಹಕ್ ಅವರು ಸ್ಥಾಪಿಸಿದ ಶಿಕ್ಷಣ ಸಂಶೋಧನೆ ಮತ್ತು ಅಭಿವೃದ್ಧಿ ಪ್ರತಿಷ್ಠಾನ ನಡೆಸುವ ಶಾಲೆಯೊಂದರಲ್ಲಿ ಶುಕ್ರವಾರ ಬಿಗುವಿನ ವಾತಾವರಣ ಸೃಷ್ಟಿಯಾಗಿತ್ತು.

ಯುಎಸ್‌ಟಿಎಂ ವಿ.ವಿ ನಕಲಿ ಪದವಿ ಪ್ರಮಾಣಪತ್ರ ನೀಡುತ್ತಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಅವರು ಈಚೆಗೆ ಆರೋಪಿಸಿದ್ದರು.

‘ಬಿವೈವಿ ಕೆಳಗಿಳಿಸುವುದು ಶತಸಿದ್ಧ’

ಒಂದನೇ ಪುಟದಿಂದ...

‘ನಾವು ಈ ಹೋರಾಟದಿಂದ ಹಿಂದೆ ಸರಿದಿದ್ದೇವೆ, ನಾಮಪತ್ರ ಸಲ್ಲಿಸುವುದಿಲ್ಲ ಎಂಬ ಸುದ್ದಿ ಹರಡಲಾಗುತ್ತಿದೆ. ಆದರೆ ಚುನಾವಣೆ ನಡೆದಾಗ ನಮ್ಮಲ್ಲಿಯೇ ಯಾರಾದರೊಬ್ಬರು ನಾಮಪತ್ರ ಸಲ್ಲಿಸುತ್ತೇವೆ. ನಮ್ಮ ನಿರ್ಧಾರದಲ್ಲಿ ಯಾವುದೇ ಬದಲಾವಣೆ ಇಲ್ಲ’ ಎಂದರು.

‘ಮುಂದಿನ ಚುನಾವಣೆಗೆ ಇನ್ನೂ ಮೂರು ವರ್ಷ ಇದೆ. ಈಗಿನಿಂದಲೇ ಸಂಘಟನಾ ಕೆಲಸ ಮಾಡಿದರಷ್ಟೇ ಚುನಾವಣೆಗೆ ಪಕ್ಷವನ್ನು ಸನ್ನದ್ಧವಾಗಿಸಲು ಸಾಧ್ಯ. ಈಗಿನ ನಾಯಕತ್ವದಿಂದ ಇದು ಸಾಧ್ಯವಿಲ್ಲ. ಹೀಗಾಗಿಯೇ ರಾಜ್ಯಾಧ್ಯಕ್ಷರನ್ನು ಬದಲಿಸಬೇಕು ಎಂಬುದು ನಮ್ಮ ಪ್ರತಿಪಾದನೆ’ ಎಂದರು.

‘ಬಿಜೆಪಿ ಜಿಲ್ಲಾ ಘಟಕಗಳ ಅಧ್ಯಕ್ಷರಾಗಿ ಆಯ್ಕೆಯಾದವರಲ್ಲಿ ಕೆಜೆಪಿ ನಾಯಕರೇ ಹೆಚ್ಚು ಇದ್ದಾರೆ. ಈ ಬಗ್ಗೆ ಅಸಮಾಧಾನ ಹೆಚ್ಚಾಗಿದೆ. ಹೀಗಿದ್ದೂ ಚುನಾವಣೆಗೆ ನಾವು ಸಿದ್ಧರಿದ್ದೇವೆ. ನಮ್ಮ ಬಣದಿಂದ ಯಾರು ಕಣಕ್ಕೆ ಇಳಿಯಬೇಕು ಎಂಬುದನ್ನು ಆಗ ನಿರ್ಧರಿಸುತ್ತೇವೆ’ ಎಂದು ಹೇಳಿದರು.

ಕುಮಾರ್ ಬಂಗಾರಪ್ಪ ಸುದ್ದಿಗೋಷ್ಠಿಯ ಬೆನ್ನಲ್ಲೇ ಪ್ರತಿಕ್ರಿಯೆ ನೀಡಿರುವ ಶಾಸಕ ಶಿವರಾಂ ಹೆಬ್ಬಾರ್, ‘ನಾನು ಮತ್ತು ಸೋಮಶೇಖರ್ ಅಸಮಾಧಾನ ವ್ಯಕ್ತಪಡಿಸಿದಾಗ ಅದು ತಪ್ಪು ಎಂದು ಯತ್ನಾಳ ಹೇಳಿದ್ದರು. ಈಗ ಅವರೇ ಆ ಕೆಲಸ ಮಾಡುತ್ತಿದ್ದಾರೆ’ ಎಂದು ಹೇಳಿದರು.

‘ಅವಕಾಶ ಕೊಟ್ಟರೆ ಸಿದ್ಧ’

ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ನಿರ್ವಹಣೆಗೆ ಅವಕಾಶ ಕೊಟ್ಟರೆ ಸಿದ್ಧನಿದ್ದೇನೆ. ಬಿಜೆಪಿಯ ಈಗಿನ ವ್ಯವಸ್ಥೆಯಲ್ಲಿ ಹಿಂದುಳಿದವರಿಗೆ, ದಲಿತರಿಗೆ ಅವಕಾಶ ಇಲ್ಲ. ನಾನು ಬಂಗಾರಪ್ಪ ಅವರ ಮಗ ಎಂದು ಆ ಸ್ಥಾನ ಕೊಡುವುದು ಬೇಡ. ಹಾಗೆ ಮಾಡಿದರೆ ಯಡಿಯೂರಪ್ಪ ಅವರ ಮಗ ಎಂದು ವಿಜಯೇಂದ್ರಗೆ ಅಧಿಕಾರ ಕೊಟ್ಟರಲ್ಲ, ಹಾಗೇ ಆಗುತ್ತದೆ. ಪಕ್ಷಕ್ಕಾಗಿ ದುಡಿದಿದ್ದಕ್ಕೆ, ಸಂಘಟನೆಗೆ, ಹೋರಾಟಕ್ಕೆ ಆ ಸ್ಥಾನ ನೀಡಬೇಕು. ಅಂತಹ ಅವಕಾಶ ನನಗೇ ಸಿಗಬೇಕು ಎಂದೇನೂ ಇಲ್ಲ. ಹಿಂದುಳಿದವರು, ದಲಿತರಲ್ಲಿ ಯಾರಿಗೇ ಆ ಸ್ಥಾನ ಸಿಕ್ಕರೂ ಸರಿ. ಒಟ್ಟಿನಲ್ಲಿ ಈ ವ್ಯವಸ್ಥೆ ಬದಲಾಗಬೇಕು.

ಕುಮಾರ್ ಬಂಗಾರಪ್ಪ

‘ಬೇಸತ್ತು ದೂರ ಉಳಿದೆ’

ಬಿಜೆಪಿಯಲ್ಲಿನ ವ್ಯವಸ್ಥೆ, ಅಲ್ಲಿರುವ ಬಣ ರಾಜಕಾರಣದಿಂದ ಬೇಸತ್ತು ಪಕ್ಷದಿಂದ ದೂರ ಉಳಿದಿದ್ದೇನೆ. ಪಕ್ಷದಲ್ಲಿ ಎಷ್ಟು ಬಣಗಳಿವೆ ಎಂಬುದು ಎಲ್ಲರಿಗೂ ಗೊತ್ತಿದೆ. ಆ ಬಗ್ಗೆ ಏನಾದರೂ ಹೇಳಿದರೆ ವಿವಾದವಾಗುತ್ತದೆ ಎಂದು ಸುಮ್ಮನಿದ್ದೇನೆ. ಆದರೆ ಒಂದು ದಿನ ಮಾತನಾಡಲೇ ಬೇಕಾಗುತ್ತದೆ. ಸರಿಯಾದ ಸಮಯ ನೋಡಿಕೊಂಡು ಮಾತನಾಡುತ್ತೇನೆ. ವಿವಾದವಾಗುವುದಿದ್ದರೆ ಆಗಲಿ.

ಶಿವರಾಂ ಹೆಬ್ಬಾರ್, ಬಿಜೆಪಿ ಶಾಸಕ

‘ಯಾರಾದರೂ ಸ್ಪರ್ಧಿಸಬಹುದು’

ರಾಜ್ಯಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದರೆ ಪಕ್ಷದ ಯಾರು ಬೇಕಾದರೂ ಸ್ಪರ್ಧಿಸಬಹುದು. ಅದಕ್ಕೆ ಅವಕಾಶವಿದೆ. ನಮಗೆ ಆ ಬಗ್ಗೆ ಅಭ್ಯಂತರವಿಲ್ಲ. ಚುನಾವಣೆ ನಡೆದರಷ್ಟೇ ಸ್ಪರ್ಧೆಗೆ ಅವಕಾಶವಿರುತ್ತದೆ. ಅದು ನಡೆಯುತ್ತದೆ ಎಂದು ಅವರು ಹೇಳುತ್ತಿದ್ದಾರೆ. ಆದರಿಲ್ಲಿ ಚುನಾವಣೆಯ ಮಾತೇ ಇಲ್ಲ. ಏನು ನಡೆಯಬೇಕು, ಏನು ಬದಲಾಗಬೇಕು ಎಂಬುದನ್ನು ನಾವು ನಿರ್ಧರಿಸುವುದಿಲ್ಲ. ಅದನ್ನು ಪಕ್ಷದ ವರಿಷ್ಠರು ಮಾಡುತ್ತಾರೆ.

ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್‌ನಲ್ಲಿ ವಿರೋಧ ಪಕ್ಷದ ನಾಯಕ

ತೆಲಂಗಾಣ: ನಿರ್ಮಾಣ ಹಂತದ ಕಾಲುವೆ ಕುಸಿತ

ಸುರಂಗದಲ್ಲಿ ಸಿಲುಕಿದ 8 ಮಂದಿ

ಹೈದರಾಬಾದ್ (ಪಿಟಿಐ): ತೆಲಂಗಾಣದ ನಾಗರಕರ್ನೂಲ್ ಜಿಲ್ಲೆಯಲ್ಲಿ ನಿರ್ಮಾಣ ಹಂತದಲ್ಲಿರುವ ಶ್ರೀಶೈಲಂ ಎಡ ದಂಡೆ ಕಾಲುವೆಯ (ಎಸ್‌ಎಲ್‌ಬಿಸಿ) ಸುರಂಗದ ಮೇಲ್ಛಾವಣಿಯು ಶನಿವಾರ ಕುಸಿದಿದ್ದು, ಸುರಂಗದೊಳಗೆ 8 ಕಾರ್ಮಿಕರು ಸಿಲುಕಿದ್ದಾರೆ.


ವಿಷಯ ತಿಳಿಯುತ್ತಿದ್ದಂತೆಯೇ ನೀರಾವರಿ ಸಚಿವ ಎನ್.ಉತ್ತಮ್ ಕುಮಾರ್ ರೆಡ್ಡಿ ಸೇರಿದಂತೆ ಇಲಾಖೆಯ ಪ್ರಮುಖ ಅಧಿಕಾರಿ ಘಟನಾ ಸ್ಥಳಕ್ಕೆ ತಲುಪಿದರು. ಘಟನೆಯ ಕುರಿತು ಮಾಹಿತಿ ಪಡೆದುಕೊಂಡ ಬಳಿಕ ಸಚಿವರು ಪ್ರರ್ತಕರ್ತರೊಂದಿಗೆ ಮಾತನಾಡಿದರು.

‘ಇಬ್ಬರು ಎಂಜಿನಿಯರ್‌ಗಳು, ಇಬ್ಬರು ಯಂತ್ರ ಆಪರೇಟರ್‌ಗಳು, ನಾಲ್ವರು ಕಾರ್ಮಿಕರು ಸುರಂಗದಲ್ಲಿ ಸಿಕುಲಿದ್ದಾರೆ. ಸುರಂಗದಲ್ಲಿ ಸಿಲುಕಿರುವವರ ರಕ್ಷಣೆಗೆ ಸರ್ಕಾರ ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತಿದೆ. ಕಳೆದ ವರ್ಷ ಉತ್ತರಾಖಂಡದಲ್ಲಿ ಹೆದ್ದಾರಿ ನಿರ್ಮಾಣದ ವೇಳೆ ಸುರಂಗದಲ್ಲಿ ಸಿಲುಕಿಕೊಂಡಿದ್ದವರನ್ನು ರಕ್ಷಿಸಿದ್ದ ತಂಡವನ್ನೇ ಇಲ್ಲಿಯೂ ಕರೆಸಿಕೊಳ್ಳುವ ಯತ್ನ ನಡೆಸಲಾಗುತ್ತಿದೆ’ ಎಂದರು.

ಘಟನೆ ಬಗ್ಗೆ ಕೇಂದ್ರ ಕಲ್ಲಿದ್ದಲು ಸಚಿವ ಜಿ.ಕೃಷ್ಣಾ ರೆಡ್ಡಿ ಅವರು ಮಾಹಿತಿ ಪಡೆದುಕೊಂಡಿದ್ದಾರೆ.

ಸರ್ಕಾರಿ ಒಡೆತನದ ಸಿಂಗರೇಣಿ ಕೊಲಿಯರೀಸ್ ಕಂಪನಿಯ 19 ಸದಸ್ಯರ ತಂಡವು ರಕ್ಷಣಾ ಕಾರ್ಯ ನಡೆಸಲು ಘಟನಾ ಸ್ಥಳ ತಲುಪಿದೆ. ‘ಸುರಂಗದೊಳಗೆ ಸಿಲುಕಿರುವವರ ರಕ್ಷಣಾ ಕಾರ್ಯಕ್ಕೆ ಬೇಕಾಗಿರುವ ಅತ್ಯಾಧುನಿಕ ಉಪಕರಣಗಳು ನಮ್ಮ ಬಳಿ ಇವೆ’ ಎಂದು ಕಂಪನಿ ಹೇಳಿಕೊಂಡಿದೆ.

ಕಾಲುವೆ ನಿರ್ಮಿಸುತ್ತಿರುವ ಕಂಪನಿಯು ಈಗಾಗಲೇ ತನ್ನ ಸಿಬ್ಬಂದಿಯನ್ನು ಸುರಂಗದೊಳಗೆ ಇಳಿಸಿ, ಪರಿಶೀಲನೆ ನಡೆಸಿದೆ.



ನೀರಾವರಿ ಸಚಿವ ಉತ್ತಮ್ ಕುಮಾರ್ ರೆಡ್ಡಿ ಅವರು ಶ್ರೀಶೈಲಂ ಎಡ ದಂಡೆ ಕಾಲುವೆ ನಿರ್ಮಾಣ ಸ್ಥಳಕ್ಕೆ ಶನಿವಾರ ಭೇಟಿ ನೀಡಿ ಪರಿಶೀಲಿಸಿದರು –ಪಿಟಿಐ ಚಿತ್ರ

ಘಟನೆ ನಡೆದದ್ದು ಹೇಗೆ?

‘ಕಾಲುವೆ ನಿರ್ಮಾಣಕ್ಕೆ ಕೊರೆಯಲಾಗಿದ್ದ ಸುರಂಗದ 14 ಕಿ.ಮೀ ಆಳದಲ್ಲಿ ಸಿಬ್ಬಂದಿ ಸಿಲುಕಿದ್ದಾರೆ. ಸುರಂಗದೊಳಗೆ ಸಣ್ಣ ಪ್ರಮಾಣದಲ್ಲಿ ನೀರು ಜಿನುಗಲು ಆರಂಭವಾಯಿತು. ಬಳಿಕ, ಈ ಪ್ರಮಾಣ ಹೆಚ್ಚಾಯಿತು. ಒಳಗೆ ಕೆಲಸ ಮಾಡುತ್ತಿದ್ದ ಹಲವು ಕಾರ್ಮಿಕರು ತಕ್ಷಣವೇ ಹೊರಗೆ ಬಂದರು’ ಎಂದು ಸಚಿವ ಉತ್ತಮ್ ಕುಮಾರ್ ವಿವರಿಸಿದರು. ‘ಸುರಂಗದಿಂದ ಹೊರಗೆ ಬರುತ್ತಿದ್ದಂತೆಯೇ ದೊಡ್ಡ ಶಬ್ದ ಕೇಳಿಸಿತು.ಟನಲ್ ಬೋರಿಂಗ್ ಯಂತ್ರದ ಸಮೀಪ ಕೆಲಸ ಮಾಡುತ್ತಿದ್ದ 8 ಮಂದಿ ಸಿಲುಕಿಕೊಂಡರು’ ಎಂದು ಮಾಹಿತಿ ನೀಡಿದರು.

ರಕ್ಷಣೆ ಹೇಗೆ?: ‘ಸೇನೆ ಹಾಗೂ ಎನ್‌ಡಿಆರ್‌ಎಫ್ ನೆರವನ್ನು ಕೋರಲಾಗಿದೆ. ಜೊತೆಗೆ, ರಾಜ್ಯದ ಅಗ್ನಿಶಾಮಕ ದಳ ಮತ್ತು ವಿಪತ್ತು ನಿರ್ವಹಣಾ ಪಡೆಯು ರಕ್ಷಣಾ ಕಾರ್ಯದಲ್ಲಿ ತೊಡಗಿದೆ’ ಎಂದರು.

ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹ

ಬೆಂಗಳೂರು: ಬಸ್ ನಿರ್ವಾಹಕರ ಮೇಲೆ ಬೆಳಗಾವಿಯಲ್ಲಿ ಮರಾಠಿ ಭಾಷಿಕರಿಂದ ನಡೆದ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪಿತಸ್ಥರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕೇಂದ್ರ ಕನ್ನಡ ಕ್ರಿಯಾ ಸಮಿತಿ ಆಗ್ರಹಿಸಿದೆ.



ಮನು ಬಳಿಗಾರ್

ಈ ಬಗ್ಗೆ ಸಮಿತಿ ರಾಜ್ಯಾಧ್ಯಕ್ಷ ಮನು ಬಳಿಗಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ. ‘ಮರಾಠಿ ಭಾಷೆಯಲ್ಲಿ ಮಾತನಾಡುವಂತೆ ಒತ್ತಾಯಿಸಿ, ಬಸ್ ನಿರ್ವಾಹಕ ಮಹದೇವ ಮಲ್ಲಪ್ಪ ಹುಕ್ಕೇರಿ ಅವರ ಮೇಲೆ ಬಾಳೇಕುಂದ್ರಿ ಗ್ರಾಮದ ಪ್ರಯಾಣಿಕರು ಹಲ್ಲೆ ಮಾಡಿದ್ದಾರೆ. ಸಾರ್ವಜನಿಕ ಸೇವೆಯಲ್ಲಿರುವ ನಿರ್ವಾಹಕರ ಮೇಲೆ ಈ ರೀತಿ ಭಾಷಾ ವಿಷಯದಲ್ಲಿ ಹಲ್ಲೆ ನಡೆಸಿರುವುದು ಆತಂಕಕಾರಿ ಘಟನೆ’ ಎಂದು ಹೇಳಿದ್ದಾರೆ.

‘ಕನ್ನಡ ಭಾಷೆಯ ಬಗ್ಗೆ ಕಾಳಜಿಯುಳ್ಳ ಮುಖ್ಯಮಂತ್ರಿ ಅವರು ಈ ಘಟನೆಯ ಬಗ್ಗೆ ಗಮನಹರಿಸಿ, ಹಲ್ಲೆ ನಡೆಸಿರುವ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಪೊಲೀಸ್ ಇಲಾಖೆಗೆ ಸೂಕ್ತ ನಿರ್ದೇಶನ ನೀಡಬೇಕು. ಸಾರ್ವಜನಿಕ ಸೇವೆಯಲ್ಲಿರುವ ಸಾರಿಗೆ ಸಿಬ್ಬಂದಿಗೆ ಸೂಕ್ತ ರಕ್ಷಣೆ ಒದಗಿಸಬೇಕು’ ಎಂದು ಆಗ್ರಹಿಸಿದ್ದಾರೆ.

‘ಮಹಾ’, ಕರ್ನಾಟಕ ಬಸ್ ಸಂಚಾರ ಸ್ಥಗಿತ



ನಿರ್ವಾಹಕರ ಮೇಲಿನ ಪೋಕ್ಸೊ ಪ್ರಕರಣ ಹಿಂತೆಗೆದುಕೊಳ್ಳುವಂತೆ ಆಗ್ರಹಿಸಿ, ಬೆಳಗಾವಿ ತಾಲ್ಲೂಕಿನ ಮಾರಿಹಾಳ ಠಾಣೆ ಎದುರು ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣಗೌಡ ಬಣ)ಯಿಂದ ಪ್ರತಿಭಟನೆ ನಡೆಸಲಾಯಿತು. ಸ್ಥಳಕ್ಕೆ ಬಂದ ಸಿಪಿಐ ಗುರುರಾಜ ಕಲ್ಯಾಣಶೆಟ್ಟಿ ಅವರೊಂದಿಗೆ ನಾಯಕಿ ಆಯೇಷಾ ಸನದಿ ವಾಗ್ವಾದ ನಡೆಸಿದರು ಪ್ರಜಾವಾಣಿ ಚಿತ್ರ

ಒಂದನೇ ಪುಟದಿಂದ...

ಕೊಲ್ಹಾಪುರ ಮಾರ್ಗವಾಗಿ ದಿನವೂ ಮಹಾರಾಷ್ಟ್ರ ಸಾರಿಗೆಯ 30 ಬಸ್ ಬರುತ್ತಿದ್ದವು. ಶನಿವಾರ 20 ಬಸ್ ಮಾತ್ರ ಬಂದಿವೆ. ಇದರಲ್ಲಿ ಮೂರು ಬಸ್‌ಗಳು ಕೇಂದ್ರ ಬಸ್ ನಿಲ್ದಾಣ ಪ್ರವೇಶಿಸಿವೆ. ಉಳಿದ ಬಸ್‌ಗಳ ಚಾಲಕರು ಪ್ರಯಾಣಿಕರನ್ನು ನಗರದಿಂದ ದೂರದಲ್ಲಿ ಇಳಿಸಿ ವಾಪಸ್ ಹೋಗಿದ್ದಾರೆ

ದೂರು–ಪ್ರತಿ ದೂರು: ‘ಕನ್ನಡದಲ್ಲಿ ಮಾತನಾಡಿದ್ದಕ್ಕೆ ಗುಂಪುಗೂಡಿ ಹಲ್ಲೆ ಮಾಡಲಾಗಿದೆ’ ಎಂದು ಆರೋಪಿಸಿ ಬಸ್ ಚಾಲಕ ಕತಾಲ್ ಸಾಬ್ ಮೊಮಿನ್ ಅವರು ಶುಕ್ರವಾರ ರಾತ್ರಿ ಮಾರಿಹಾಳ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಇದಕ್ಕೆ ಪ್ರತಿಯಾಗಿ ಘಟನೆಗೆ ಕಾರಣವಾದ ಬಾಲಕಿಯು ನಿರ್ವಾಹಕ ಮಹಾದೇವ ವಿರುದ್ಧ ಪೋಕ್ಸೊ ಪ್ರಕರಣ ದಾಖಲು ಮಾಡಿದ್ದಾರೆ.‘ನಿರ್ವಾಹಕ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ. ಕೆಟ್ಟ ಪದ ಬಳಸಿ, ಕೆಟ್ಟದಾಗಿ ಸನ್ನೆ ಮಾಡಿದ್ದಾರೆ’ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಮೂವರ ಬಂಧನ

ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾರುತಿ ತುರುಮುರಿ, ರಾಹುಲ್ ರಾಜು ನಾಯ್ಡು, ಬಾಳು ಗೋಜಗೇಕರ್ ಎಂಬುವರನ್ನು ಮಾರಿಹಾಳ ಠಾಣೆ ಪೊಲೀಸರು ಬಂಧಿಸಿದ್ದಾರೆ. ಇದರಲ್ಲಿ ಕಾನೂನು ಸಂಘರ್ಷಕ್ಕೆ ಒಳಗಾದ ಇನ್ನೊಬ್ಬ ಬಾಲಕ ಆರೋಪಿ ಆಗಿದ್ದಾನೆ. ಮೂವರನ್ನು ಶನಿವಾರ ಸಂಜೆ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದ್ದು, 14 ದಿನಗಳ ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ.

ಪ್ರಯಾಣಿಕರಿಗೆ ಸೀರೆ, ಹೂವು

ಬೆಂಗಳೂರಿನಿಂದ ಬೆಳಗಾವಿಗೆ ಶನಿವಾರ ಹೊರಟಿದ್ದ ಎರಡು ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ಕರುನಾಡ ವಿಜಯಸೇನೆ ಸದಸ್ಯರು ತಡೆದು ಚಿತ್ರದುರ್ಗದ ಬಸ್ ನಿಲ್ದಾಣದಲ್ಲಿ ಪ್ರತಿಭಟನೆ ನಡೆಸಿದರು. ಈ ವೇಳೆ ಪುರುಷ ಪ್ರಯಾಣಿಕರಿಗೆ ಸೀರೆ ಹೊದಿಸಿ, ಹೂ ನೀಡಿದರು. ಬೆಳಗಾವಿಯಲ್ಲಿರುವ ಮರಾಠಿಗರು ಕೂಡಲೇ ಕನ್ನಡ ಕಲಿಯಬೇಕು. ಇಲ್ಲದಿದ್ದರೆ ಬೆಳಗಾವಿ ಬಿಟ್ಟು ಮಹಾರಾಷ್ಟ್ರಕ್ಕೆ ತೆರಳಬೇಕು ಎಂದು ಎಚ್ಚರಿಸಿದರು. ನಿರ್ವಾಹಕನ ಮೇಲೆ ದಾಖಲಿಸಿರುವ ಪೋಕ್ಸೊ ಪ್ರಕರಣ ರದ್ದು ಮಾಡುವಂತೆ ಆಗ್ರಹಿಸಿದರು.

‘ಈಗ ಸ್ನೇಹಯುತವಾಗಿ ಸೀರೆ, ಹೂವು ಕೊಟ್ಟಿದ್ದೇವೆ. ಬೆಳಗಾವಿಯಲ್ಲಿರುವ ಕನ್ನಡಿಗರ ಮೇಲೆ ಇದೇ ಬಗೆಯ ದೌರ್ಜನ್ಯ ನಡೆಸಿದರೆ ತೀವ್ರ ಸ್ವರೂಪದ ಹೋರಾಟ ಎದುರಿಸಬೇಕಾಗುತ್ತದೆ’ ಎಂದು ಕರುನಾಡ ವಿಜಯಸೇನೆಯ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಟಿ.ಶಿವಕುಮಾರ್ ಎಚ್ಚರಿಸಿದರು.

ಎರಡೂ ಕಡೆಯವರಿಂದ ದೂರು ಪಡೆಯಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿ, ಕಾನೂನು ಕ್ರಮ ಕೈಗೊಳ್ಳಲಾಗುವುದು.

ಯಡಾ ಮಾರ್ಟಿನ್ ಮಾರ್ಬನ್ಯಾಂಗ್ ನಗರ ಪೊಲೀಸ್ ಕಮಿಷನರ್, ಬೆಳಗಾವಿ

ಪೊಲೀಸರ ಸೂಚನೆ ಮತ್ತು ಮುಂಜಾಗ್ರತಾ ಕ್ರಮದ ಹಿನ್ನೆಲೆಯಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರದಿಂದ ಬರುವ ಬಸ್‌ಗಳು ಗಡಿಯವರೆಗೆ ಸಂಚರಿಸುತ್ತಿವೆ.

ರಾಜೇಶ ಹುದ್ದಾರ, ನಿಯಂತ್ರಣಾಧಿಕಾರಿ, ವಾಯವ್ಯ ಸಾರಿಗೆ ಸಂಸ್ಥೆ, ಬೆಳಗಾವಿ ವಿಭಾಗ

ಏನಿದು ಪ್ರಕರಣ?: ಬಸ್ ಅನ್ನು ಶುಕ್ರವಾರ ಹತ್ತಿದ ಬಾಲಕಿ ಆಧಾರ್ ಕಾರ್ಡ್ ತೋರಿಸಿ ತನಗೆ ಹಾಗೂ ತನ್ನ ಸ್ನೇಹಿತನಿಗೆ ಎರಡು ಟಿಕೆಟ್ ಕೊಡಲು ಹೇಳಿದರು. ಇದಕ್ಕೆ ಉತ್ತರಿಸಿದ ನಿರ್ವಾಹಕ, ‘ನೀವು ಮಾತ್ರ ಉಚಿತವಾಗಿ ಪ್ರಯಾಣಿಸಬಹುದು. ಹುಡುಗನಿಗೆ ಹಣ ಕೊಟ್ಟು, ಟಿಕೆಟ್ ಪಡೆಯಿರಿ’ ಎಂದರು. ಈ ವೇಳೆ ಮಾತು ತಾರಕಕ್ಕೇರಿ ಜಗಳವಾಯಿತು. ಬಸ್ ಸಣ್ಣ ಬಾಳೇಕುಂದ್ರಿ ಗ್ರಾಮ ತಲುಪಿದಾಗ, ಬಾಲಕಿ ಊರಿನವರಿಗೆ ದೂರಿದ್ದರು. ಏಕಾಏಕಿ ಗುಂಪುಗೂಡಿದ ಜನ ಬಸ್ ಏರಿ ಚಾಲಕ ಮತ್ತು ನಿರ್ವಾಹಕರನ್ನು ಥಳಿಸಿದ್ದರು.

ಕರವೇ ಪ್ರತಿಭಟನೆ: ನಿರ್ವಾಹಕ ಮತ್ತು ಚಾಲಕನ ಮೇಲಿನ ಹಲ್ಲೆ ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆಯ ಬಣಗಳು ಪ್ರತಿಭಟನೆ ನಡೆಸಿದವು. ‘ಇಬ್ಬರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದ್ದು, ತಕ್ಷಣವೇ ಹಿಂಪಡೆಯಬೇಕು’ ಎಂದು ಆಗ್ರಹಿಸಿದರು.

ಕ್ಲಿಷ್ಟಕರ ಕಾಲಘಟ್ಟದಲ್ಲಿದ್ದೇವೆ: ದೇವಿ

ಪ್ರಜಾವಾಣಿ ವಾರ್ತೆ

ಧಾರವಾಡ: ‘ಇತ್ತೀಚೆಗೆ ಸಹನೆ ಕಳೆದುಕೊಳ್ಳುವಂಥ ಮತ್ತು ಇನ್ನೊಬ್ಬರ ದೃಷ್ಟಿಕೋನ ಮಾನ್ಯ ಮಾಡದ ದುರಾಭ್ಯಾಸ ಬೆಳೆಸಿಕೊಂಡಿದ್ದೇವೆ. ನಾವು ಅವಕಾಶ ಸೃಷ್ಟಿಸಬೇಕೆ ಹೊರತು ಎಲ್ಲವೂ ನಮ್ಮ ಮೂಗಿನ ನೇರಕ್ಕೆ ಇರುವಂತೆ ಭಾವಿಸಬಾರದು’ ಎಂದು ಭಾಷಾ ತಜ್ಞ ಗಣೇಶ್ ಎನ್.ದೇವಿ ಕಳವಳ ವ್ಯಕ್ತಪಡಿಸಿದರು.

ನಗರದಲ್ಲಿ ಶನಿವಾರ ನಿರ್ದಿಗಂತ-ಸಂಸ್ಥೆಯ ಮೂರು ದಿನಗಳ ನಿರ್ದಿಗಂತ ಉತ್ಸವ ಉದ್ಘಾಟಿಸಿ ಮಾತನಾಡಿದ ಅವರು, ‘ಅಧಿಕಾರ ವ್ಯವಸ್ಥೆಯು ನಮ್ಮನ್ನು ಇನ್ನಷ್ಟು ಗುಲಾಮಗಿರಿಗೆ ತಳ್ಳುತ್ತಿದೆ’ ಎಂದರು.

‘ಜಯಂತ್ ಕಾಯ್ಕಿಣಿ ರಚಿತ ನಾಟಕವು ಅಂತರ್‌ಧರ್ಮೀಯ ಸಂಬಂಧ ತೋರಿಸಲಾಗುತ್ತದೆ ಎಂದು ಅದರ ಪ್ರದರ್ಶನಕ್ಕೆ ಅಡ್ಡಿಪಡಿಸಲಾಗುತ್ತದೆ. ಸಮಾಜ ವಿಜ್ಞಾನಿ ಶಿವವಿಶ್ವನಾಥನ್ ಅವರು ಭಾಷಣ ಮಾಡದಂತೆ ತಡೆಯಲಾಗುತ್ತದೆ. ಹೀಗಾಗಿ ನಾವು ಕ್ಲಿಷ್ಟಕರ ಕಾಲಘಟ್ಟದಲ್ಲಿ ಇದ್ದೇವೆ’ ಎಂದರು.

‘ರಂಗಕರ್ಮಿಗಳು ಪ್ರಸ್ತುತ ಸಂಕಷ್ಟದಲ್ಲಿ ಇದ್ದಾರೆ. ರಂಗಭೂಮಿಯು ಸಂಸ್ಕೃತಿಯ ಜೀವಾಳ. ಅದು ಕಳೆಗುಂದಿದರೆ, ಸಂಸ್ಕೃತಿ ಉಳಿಯಲ್ಲ’ ಎಂದರು.

ಸಾಹಿತಿ ಪ್ರೊ. ರಾಜೇಂದ್ರ ಚೆನ್ನಿ ಮಾತನಾಡಿ, ‘ರಾಷ್ಟ್ರಮಟ್ಟದಲ್ಲಿ ಒಕ್ಕೂಟ ವ್ಯವಸ್ಥೆಯನ್ನು ನಾಶಪಡಿಸುವ ಪ್ರಯತ್ನ ರಾಜಕೀಯವಾಗಿ ನಡೆದಿದೆ. ಒಕ್ಕೂಟ ವ್ಯವಸ್ಥೆಯು ಸಂವಿಧಾನದ ಜೀವಾಳ. ಈ ಪರಿಕಲ್ಪನೆಯನ್ನು ಎತ್ತಿಹಿಡಿಯಬೇಕಿದೆ’ ಎಂದರು.

‘ನಾಡಿನ ಪ್ರತಿಯೊಂದು ನೆಲ ಸಂಸ್ಕೃತಿಯು ಸ್ವತಂತ್ರವಾಗಿದೆ. ಸೌಹಾರ್ದದಿಂದ ಒಪ್ಪಿ, ಒಕ್ಕೂಟ ಮಾಡಿಕೊಂಡಿದ್ದೇವೆ. ಒಕ್ಕೂಟದಲ್ಲಿ ಪ್ರತಿಯೊಂದು ಅಂಗಕ್ಕೂ ಸ್ವಾಯತ್ತತೆ ಇರುತ್ತದೆ. ಸರ್ವಾಧಿಕಾರದ ಪ್ರಶ್ನೆ ಇರಲ್ಲ. ಎಲ್ಲವೂ ಒಟ್ಟಿಗೆ ಇರುತ್ತವೆಯೇ ಹೊರತು, ಒಂದೇ ಆಕೃತಿ ಪಡೆದುಕೊಳ್ಳಬೇಕೆಂಬ ಒತ್ತಾಯ ಇರಲ್ಲ’ ಎಂದರು.



ಧಾರವಾಡದಲ್ಲಿ ಶನಿವಾರ ನಿರ್ದಿಗಂತ ಉತ್ಸವ ಉದ್ಘಾಟನಾ ಸಮಾರಂಭದಲ್ಲಿ ರಂಗಕರ್ಮಿ ಪ್ರಕಾಶ್ ಗರುಡ, ಭಾಷಾ ತಜ್ಞ ಗಣೇಶ ಎನ್‌.ದೇವಿ, ಪ್ರೊ.ರಾಜೇಂದ್ರ ಚೆನ್ನಿ ಮತ್ತು ನಿರ್ದಿಗಂತ ಸಂಸ್ಥೆಯ ಪ್ರಕಾಶ್ ರಾಜ್ ಪಾಲ್ಗೊಂಡಿದ್ದರು

ಪ್ರೋತ್ಸಾಹ ಧನ ನೀಡಲು ರಾಜ್ಯ ಸರ್ಕಾರಕ್ಕೆ ರೈತರ ಒತ್ತಾಯ

ಕುಸಿದ ಕಡಲೆಕಾಳು ಧಾರಣೆ

• ಜಿ.ಬಿ.ನಾಗರಾಜ್

ದಾವಣಗೆರೆ: ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯಡಿ ರೈತರಿಂದ ಕಡಲೆಕಾಳು ಖರೀದಿಸಲು ರಾಜ್ಯ ಸರ್ಕಾರವು ಖರೀದಿ ಕೇಂದ್ರಗಳನ್ನು ತೆರೆದಿರುವ ಬೆನ್ನಲ್ಲೇ, ಮುಕ್ತ ಮಾರುಕಟ್ಟೆಯಲ್ಲಿ ಧಾರಣೆಯು ಇಳಿಕೆಯಾಗಿದೆ. ಇಳುವರಿ ಕುಸಿತದ ನಡುವೆಯೂ ಈ ಬಾರಿ ಬೆಲೆ ಕೈಹಿಡಿಯಬಹುದು ಎಂಬ ರೈತರ ನಿರೀಕ್ಷೆ ಹುಸಿಯಾಗಿದೆ.

ಉತ್ತಮ ಗುಣಮಟ್ಟದ ಕ್ವಿಂಟಲ್ ಕಡಲೆಕಾಳಿಗೆ ಕೇಂದ್ರ ಸರ್ಕಾರವು ₹5,650 ಬೆಂಬಲ ಬೆಲೆ ನಿಗದಿಪಡಿಸಿದೆ. ಜನವರಿ 27ರಿಂದ ರಾಜ್ಯದಾದ್ಯಂತ ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ. ಈ ಕೇಂದ್ರಗಳನ್ನು ತೆರೆಯುವುದಕ್ಕೂ ಮೊದಲು ಮುಕ್ತ ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ ಕನಿಷ್ಠ ₹6,800ರಿಂದ ಗರಿಷ್ಠ ₹7,100 ದರ ಇತ್ತು. ಕೇಂದ್ರಗಳು ಕಾರ್ಯಾರಂಭಗೊಂಡ ಬಳಿಕ ದರವು ₹5,800ರಿಂದ ₹6,400ಕ್ಕೆ ಕುಸಿದಿದೆ.

ಜಿಲ್ಲೆಯಲ್ಲಿ ಕಡಲೆ ಕೊಯ್ಲು ಆರಂಭವಾಗಿದ್ದು, ರೈತರು ಮಾರುಕಟ್ಟೆಗೆ ಸಾಗಿಸುತ್ತಿದ್ದಾರೆ. ಕಳೆದ ವರ್ಷದ ನವೆಂಬರ್‌ನಲ್ಲಿ ಕ್ವಿಂಟಲ್‌ಗೆ ಸರಾಸರಿ ₹8,200, ಡಿಸೆಂಬರ್‌ನಲ್ಲಿ ₹7,100 ಇದ್ದ ದರವು ಪ್ರಸಕ್ತ ವರ್ಷದ ಜನವರಿ ಅಂತ್ಯದಿಂದ ಇಳಿಕೆಯಾಗುತ್ತ ಬಂದಿದೆ.

‘ಈ ಬಾರಿ ಪ್ರತಿ ಎಕರೆಗೆ ಸರಾಸರಿ ಮೂರು ಕ್ವಿಂಟಲ್ ಇಳುವರಿ ಬಂದಿದೆ. ಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಇದ್ದಿದ್ದರಿಂದ ಹೆಚ್ಚಿನ ಆದಾಯ ಸಿಗಲಿದೆ ಎಂಬ ನಿರೀಕ್ಷೆ ಇತ್ತು. ಆದರೆ, ಖರೀದಿ ಕೇಂದ್ರ ತೆರೆದ ಬಳಿಕ ಮುಕ್ತ ಮಾರುಕಟ್ಟೆಯಲ್ಲಿ ಬೆಲೆ ಇಳಿಕೆಯಾಗಿದೆ’ ಎಂದು ಜಗಳೂರು ರೈತ ಮುಖಂಡ ತಿಪ್ಪೇಸ್ವಾಮಿ ಹೇಳುತ್ತಾರೆ.

‘ಕೇಂದ್ರ ಸರ್ಕಾರವು ಕೃಷಿ ವೆಚ್ಚಕ್ಕೆ ಅನುಗುಣವಾಗಿ ವೈಜ್ಞಾನಿಕ ಆಧಾರದ ಮೇಲೆ ಬೆಂಬಲ ಬೆಲೆಯನ್ನು ಪರಿಷ್ಕರಿಸುತ್ತಿಲ್ಲ. ರಾಜ್ಯ ಸರ್ಕಾರ ಕೂಡ ಪ್ರೋತ್ಸಾಹಧನ ನೀಡಿಲ್ಲ. ಎಂಎಸ್‌ಪಿ ಜೊತೆಗೆ ಕ್ವಿಂಟಲ್‌ಗೆ ₹1,000 ಪ್ರೋತ್ಸಾಹ ಧನ ನೀಡಿದರೆ ರೈತರಿಗೆ ಅನುಕೂಲವಾಗಲಿದೆ’ ಎಂದು ಒತ್ತಾಯಿಸುತ್ತಾರೆ ಅವರು.

ಕೇಂದ್ರದತ್ತ ಸುಳಿಯದ ರೈತರು: ರಾಜ್ಯದ 272 ಖರೀದಿ ಕೇಂದ್ರಗಳಲ್ಲಿ ಈವರೆಗೆ 159 ರೈತರು ಮಾತ್ರ ಹೆಸರು ನೋಂದಣಿ ಮಾಡಿದ್ದಾರೆ.

ರಾಜ್ಯದ 10.03 ಲಕ್ಷ ಹೆಕ್ಟೇರ್‌ನಲ್ಲಿ ಕಡಲೆ ಬೆಳೆಯಲಾಗಿದೆ. ಅಂದಾಜು 6.63 ಲಕ್ಷ ಟನ್ ಉತ್ಪಾದನೆಯ ನಿರೀಕ್ಷೆ ಇದೆ. ಕರ್ನಾಟಕ ಸಹಕಾರ ಮಾರಾಟ ಮಹಾಮಂಡಳಿಯು ರಾಜ್ಯದ ಖರೀದಿ ಏಜೆನ್ಸಿಯಾಗಿದೆ. ನೋಂದಣಿ ಪ್ರಕ್ರಿಯೆ ನಿರೀಕ್ಷಿತ ಪ್ರಮಾಣದಲ್ಲಿ ನಡೆಯದಿರುವುದರಿಂದ ಖರೀದಿ ಸಾಧ್ಯವಾಗಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ.



ಕಡಲೆ ಕಟಾವು ಮಾಡಿ ಜಮೀನಿನಲ್ಲಿ ರಾಶಿ ಹಾಕಲಾಗಿದೆ

> ಸರ್ಕಾರ ನಿಗದಿಪಡಿಸಿರುವ ಬೆಂಬಲ ಬೆಲೆ ತೃಪ್ತಿಕರವಾಗಿಲ್ಲ. ಮಾರುಕಟ್ಟೆಯಲ್ಲಿ ಕಳೆದ ವರ್ಷದಷ್ಟು ಬೆಲೆ ಸಿಗುತ್ತಿಲ್ಲ. ಇದರಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ
> **ಎನ್.ಕೆ. ಕಾರ್ತಿಕ್**, ರೈತ, ಜಗಳೂರಿನ ಗೊಲ್ಲರಹಟ್ಟಿ

> ಬೆಂಬಲ ಬೆಲೆಗಿಂತ ಮುಕ್ತ ಮಾರುಕಟ್ಟೆಯಲ್ಲಿ ದರ ಹೆಚ್ಚಿದೆ. ಹೀಗಾಗಿ, ರೈತರು ಖರೀದಿ ಕೇಂದ್ರಗಳಿಗೆ ಬರುತ್ತಿಲ್ಲ
> **ಸಿ. ಪಿಳ್ಳೆಗೌಡ**, ಪ್ರಧಾನ ವ್ಯವಸ್ಥಾಪಕ, ಕರ್ನಾಟಕ ಸಹಕಾರ ಮಾರಾಟ ಮಹಾಮಂಡಳಿ

ಜಿಲ್ಲೆ	ಖರೀದಿ ಕೇಂದ್ರ	ರೈತರ ನೋಂದಣಿ
ಬಾಗಲಕೋಟೆ	4	0
ಬಳ್ಳಾರಿ	2	0
ಬೆಳಗಾವಿ	14	14
ಬೀದರ್	51	3
ಚಿತ್ರದುರ್ಗ	11	2
ದಾವಣಗೆರೆ	2	0
ಧಾರವಾಡ	24	109
ಗದಗ	56	30
ಕಲಬುರಗಿ	59	1
ಕೊಪ್ಪಳ	16	0
ರಾಯಚೂರು	14	0
ವಿಜಯಪುರ	9	0
ಯಾದಗಿರಿ	10	0

‘ಕಚ್ಚಾ ತೈಲ ಬೆಲೆ ಇಳಿಕೆ ನಿರೀಕ್ಷೆ’



ಹರ್ದೀಪ್ ಸಿಂಗ್ ಪುರಿ

ವಿಜಯವಾಡ (ಆಂಧ್ರಪ್ರದೇಶ) (ಪಿಟಿಐ): ‘ಅಮೆರಿಕ ಸೇರಿ ವಿವಿಧ ರಾಷ್ಟ್ರಗಳಿಂದ ಅಂತರರಾಷ್ಟ್ರೀಯ ಮಾರುಕಟ್ಟೆಗೆ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲ ಪೂರೈಕೆಯಾಗುತ್ತಿದೆ. ಹಾಗಾಗಿ, ಜಾಗತಿಕ ಮಟ್ಟದಲ್ಲಿ ತೈಲ ಬೆಲೆ ಕಡಿಮೆಯಾಗುವ ನಿರೀಕ್ಷೆಯಿದೆ. ಇದು ಹಣದುಬ್ಬರ ಇಳಿಕೆಗೆ ನೆರವಾಗಲಿದೆ’ ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂಧನ ವಲಯಕ್ಕೆ ಸಂಬಂಧಿಸಿದಂತೆ ಭಾರತ ಮತ್ತು ಅಮೆರಿಕದ ನಡುವಿನ ಬಾಂಧವ್ಯ ಸದೃಢವಾಗಿದೆ ಎಂದರು.

ಅರ್ಜೆಂಟೀನಾ ಸೇರಿದಂತೆ 40ಕ್ಕೂ ಹೆಚ್ಚು ರಾಷ್ಟ್ರಗಳಿಂದ ಭಾರತವು ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. ಕೆಲವು ರಾಷ್ಟ್ರಗಳು ತೈಲ ಉತ್ಪಾದನೆ ಕಡಿತದ ಬಗ್ಗೆ ಕೈಗೊಂಡಿದ್ದ ನಿರ್ಧಾರವನ್ನು ಪರಿಷ್ಕರಿಸುವ ಸಾಧ್ಯತೆ ಇದೆ ಎಂದು ಹೇಳಿದರು.

ಡಾಲರ್‌ನಲ್ಲಿಯೇ ಕಚ್ಚಾ ತೈಲದ ವಹಿವಾಟು ನಡೆಯುತ್ತದೆ. ಇದನ್ನು ಬದಲಾಯಿಸಲು ಸಾಧ್ಯವಿಲ್ಲ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಅಮೆರಿಕದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲ ಉತ್ಪಾದಿಸುವ ಬಗ್ಗೆ ಹೇಳಿದ್ದಾರೆ. ಅಲ್ಲದೆ, ಜಾಗತಿಕ ಮಟ್ಟದಲ್ಲಿ ತೈಲ ಬೆಲೆ ತಗ್ಗಿಸಲು ಅಗತ್ಯವಿರುವ ಕ್ರಮ ಕೈಗೊಳ್ಳುವುದಾಗಿಯೂ ಅವರು ಹೇಳಿದ್ದಾರೆ ಎಂದರು.

2022ರ ಫೆಬ್ರುವರಿಯಿಂದ ಇಲ್ಲಿಯವರೆಗೆ ವಿಶ್ವದ ಹಲವು ದೇಶಗಳಲ್ಲಿ ಪೆಟ್ರೋಲ್ ಬೆಲೆಯಲ್ಲಿ ಏರಿಕೆ ಆಗಿದೆ. ಪಾಕಿಸ್ತಾನದಲ್ಲಿ ಶೇ 48, ಬಾಂಗ್ಲಾದೇಶ ಶೇ 14.7, ಶ್ರೀಲಂಕಾ ಶೇ 37, ನೇಪಾಳ ಶೇ 16.2, ಅಮೆರಿಕ ಶೇ 14.2, ಇಟಲಿ ಶೇ 4.8, ಸ್ಪೇನ್ ಶೇ 4.2, ಜರ್ಮನಿ ಶೇ 2 ಮತ್ತು ಫ್ರಾನ್ಸ್‌ನಲ್ಲಿ ಶೇ 4.7ರಷ್ಟು ಏರಿಕೆಯಾಗಿದೆ. ಆದರೆ, ಭಾರತದಲ್ಲಿ ಶೇ 0.7ರಷ್ಟು ಇಳಿಕೆಯಾಗಿದೆ ಎಂದು ವಿವರಿಸಿದರು.

ಪಿಂಚಣಿ ಹೆಚ್ಚಳಕ್ಕೆ ತ್ವರಿತ ಕ್ರಮ: ಕೇಂದ್ರ

ನವದೆಹಲಿ (ಪಿಟಿಐ): ಕೈಗಾರಿಕೆ, ಸಾರ್ವಜನಿಕ, ಸಹಕಾರ ಮತ್ತು ಖಾಸಗಿ ವಲಯದ ಪಿಂಚಣಿದಾರರಿಗೆ ಕನಿಷ್ಠ ಮಾಸಿಕ ₹7,500 ಪಿಂಚಣಿ ಹೆಚ್ಚಿಸುವ ಬಗ್ಗೆ ಸರ್ಕಾರವು ತ್ವರಿತವಾಗಿ ಕ್ರಮ ಕೈಗೊಳ್ಳಲಿದೆ ಎಂದು ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯ ಅವರು, ಇಪಿಎಸ್–95 ರಾಷ್ಟ್ರೀಯ ಆಂದೋಲನ ಸಮಿತಿಗೆ (ಎನ್‌ಎಸಿ) ಭರವಸೆ ನೀಡಿದ್ದಾರೆ.

ಪಿಂಚಣಿ ಮೊತ್ತ ಹೆಚ್ಚಳ ಸಂಬಂಧ ಸಮಿತಿಯ ನಿಯೋಗವು ಸಚಿವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು. ಸರ್ಕಾರದ ಕ್ರಮದಿಂದ 78 ಲಕ್ಷ ಪಿಂಚಣಿದಾರರಿಗೆ ಅನುಕೂಲವಾಗಲಿದೆ ಎಂಬ ಬಗ್ಗೆ ಮನವರಿಕೆ ಮಾಡಿಕೊಡಲಾಗಿದೆ. ಬೇಡಿಕೆ ಈಡೇರಿಸುವುದಾಗಿ ಸಚಿವರು ಭರವಸೆ ನೀಡಿದ್ದಾರೆ ಎಂದು ಸಮಿತಿಯು ತಿಳಿಸಿದೆ.

‘ಹಲವು ವರ್ಷಗಳಿಂದ ಪಿಂಚಣಿ ಹೆಚ್ಚಳಕ್ಕೆ ಆಗ್ರಹಿಸಿ ಹೋರಾಟ ನಡೆಸಲಾಗುತ್ತಿದೆ. ಕೇಂದ್ರ ಹಣಕಾಸು ಸಚಿವಾಲಯ ಮತ್ತು ಕಾರ್ಮಿಕ ಸಚಿವಾಲಯವು ಬೇಡಿಕೆ ಈಡೇರಿಸುವ ಬಗ್ಗೆ ಭರವಸೆ ನೀಡಿವೆ’ ಎಂದು ಸಮಿತಿಯ ಅಧ್ಯಕ್ಷ ಅಶೋಕ್ ರಾವುತ್ ತಿಳಿಸಿದ್ದಾರೆ.

2025–26ನೇ ಸಾಲಿನ ಬಜೆಟ್‌ನಲ್ಲಿ ಸರ್ಕಾರವು ಪಿಂಚಣಿ ಹೆಚ್ಚಿಸಲಿದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ಘೋಷಣೆ ಮಾಡಲಿಲ್ಲ ಎಂದು ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು 100ಕ್ಕೆ	₹490
12 ಕ್ಕೆ	₹67
ಮೈಸೂರು 100ಕ್ಕೆ	₹490

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹425-677
ದ್ವಿತಳಿ (ಬಿ.ವಿ)	₹295-827

ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್‌ಗೆ ಕಹಿ ಅನುಭವ

ಮುರಿದ ಆಸನ ನೀಡಿದ ಏರ್ ಇಂಡಿಯಾ



ಶಿವರಾಜ್ ಸಿಂಗ್ ಚೌಹಾಣ್

ಭೋಪಾಲ್/ ಮುಂಬೈ (ಪಿಟಿಐ): ಏರ್ ಇಂಡಿಯಾ ವಿಮಾನದಲ್ಲಿ ಭೋಪಾಲ್‌ನಿಂದ ನವದೆಹಲಿಗೆ ಪ್ರಯಾಣಿಸುತ್ತಿದ್ದ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಮುರಿದ ಆಸನ ನೀಡಿದ್ದು, ತಮಗಾದ ತೊಂದರೆ ಬಗ್ಗೆ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪ್ರಯಾಣಿಕರಿಂದ ಪೂರ್ಣ ಟಿಕೆಟ್ ದರ ಪಡೆಯುವ ವಿಮಾನಯಾನ ಕಂಪನಿಯು ಕಳಪೆದರ್ಜೆಯ ಸೌಲಭ್ಯ ಒದಗಿಸಿದೆ. ಹಣಕ್ಕೆ ತಕ್ಕಂತೆ ಸೌಲಭ್ಯ ಕಲ್ಪಿಸದಿರುವುದು ಅನೈತಿಕವಾದುದು. ಪ್ರಯಾಣಿಕರಿಗೆ ಮಾಡುವ ಮೋಸವಾಗಿದೆ ಎಂದು ತಮಗಾದ ಕಹಿ ಅನುಭವವನ್ನು ಅವರು ‘ಎಕ್ಸ್’ನಲ್ಲಿ ಬರೆದುಕೊಂಡಿದ್ದಾರೆ.

ಇದರ ಬೆನ್ನಲ್ಲೇ ಏರ್ ಇಂಡಿಯಾವು ಸಚಿವರಲ್ಲಿ ಕ್ಷಮೆ ಯಾಚಿಸಿದ್ದು, ಪ್ರಕರಣದ ಬಗ್ಗೆ ತನಿಖೆಗೆ ಆದೇಶಿಸಿದೆ.

‘ಪೂಸಾದಲ್ಲಿ ರೈತರ ಜಾತ್ರೆಯ ಉದ್ಘಾಟನೆ ಇತ್ತು. ಅಲ್ಲದೆ, ಕುರುಕ್ಷೇತ್ರದಲ್ಲಿ ನೈಸರ್ಗಿಕ ಕೃಷಿ ಮಿಷನ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕಿತ್ತು. ಬಳಿಕ ಚಂಡೀಗಢದಲ್ಲಿ ರೈತ ಸಂಘಟನೆಯ ಪ್ರತಿನಿಧಿಗಳ ಜೊತೆಗೆ ಮಾತುಕತೆ ನಿಗದಿಯಾಗಿತ್ತು. ಇದರಲ್ಲಿ ಪಾಲ್ಗೊಳ್ಳಲು ಭೋಪಾಲ್‌ನಲ್ಲಿ ವಿಮಾನ ಹತ್ತಿದೆ’ ಎಂದು ಸಚಿವರು ಹೇಳಿದ್ದಾರೆ.

‘ನನಗೆ 8ಸಿ ಆಸನ ನಿಗದಿಪಡಿಸಲಾಗಿತ್ತು. ಇದರಲ್ಲಿ ನಾನು ಕುಳಿತುಕೊಂಡಾಗ ಕೆಳಕ್ಕೆ ಬಾಗಿತು. ಇದನ್ನು ಪರಿಶೀಲಿಸಿದಾಗ ಮುರಿದು ಹೋಗಿರುವುದು ಗೊತ್ತಾಯಿತು. ನಾನು ಆರಾಮವಾಗಿ ಕುಳಿತು ಪ್ರಯಾಣಿಸಲು ತೊಂದರೆ ಅನುಭವಿಸಿದೆ’ ಎಂದು ವಿವರಿಸಿದ್ದಾರೆ.

‘ಈ ಬಗ್ಗೆ ವಿಮಾನ ಸಿಬ್ಬಂದಿಯ ಗಮನ ಸೆಳೆದೆ. ಈ ಆಸನವನ್ನು ಪ್ರಯಾಣಿಕರಿಗೆ ನೀಡದಂತೆ ಕಂಪನಿ ಕೂಡ ತಿಳಿಸಿರುವುದಾಗಿ ಅವರು ನನಗೆ ಹೇಳಿದರು. ವಿಮಾನದಲ್ಲಿದ್ದ ಹಲವು ಆಸನಗಳ ಸ್ಥಿತಿಯು ಇದಕ್ಕಿಂತ ಭಿನ್ನವಾಗಿರಲಿಲ್ಲ’ ಎಂದು ಹೇಳಿದ್ದಾರೆ.

‘ಸಹ ಪ್ರಯಾಣಿಕರು ತಮ್ಮ ಆಸನ ಬಿಟ್ಟುಕೊಡಲು ಮುಂದಾದರು. ಅವರಿಗೆ ತೊಂದರೆ ನೀಡುವುದು ನನಗೆ ಇಷ್ಟವಿರಲಿಲ್ಲ. ಅದೇ ಆಸನದಲ್ಲಿ ಕುಳಿತು ದೆಹಲಿ ತಲುಪಿದೆ’ ಎಂದು ಹೇಳಿದ್ದಾರೆ.

‘ಟಾಟಾ ಸಮೂಹದ ತೆಕ್ಕೆಗೆ ಸೇರಿದ ಬಳಿಕ ಏರ್ ಇಂಡಿಯಾ ವಿಮಾನದ ಸೇವೆಯಲ್ಲಿ ಸುಧಾರಣೆಯಾಗಿದೆ ಎಂದು ಭಾವಿಸಿದ್ದೆ. ನನ್ನ ಕಲ್ಪನೆಯೇ ತಪ್ಪಾಗಿರುವುದು ಈಗ ಅರ್ಥವಾಗಿದೆ’ ಎಂದಿದ್ದಾರೆ.

‘ಮುಂದಿನ ದಿನಗಳಲ್ಲಿ ಪ್ರಯಾಣಿಕರ ಸುಖಕರ ಪ್ರಯಾಣಕ್ಕೆ ಪೂರಕವಾಗಿ ಸೌಲಭ್ಯ ಕಲ್ಪಿಸಲು ಟಾಟಾ ಆಡಳಿತ ಮಂಡಳಿ ಕ್ರಮವಹಿಸಲಿದೆಯೇ’ ಎಂದು ಸಚಿವರು ಪ್ರಶ್ನಿಸಿದ್ದಾರೆ.

ಕ್ಷಮೆಯಾಚನೆ: ‘ಸಚಿವರಿಗೆ ಆಗಿರುವ ತೊಂದರೆ ಬಗ್ಗೆ ಕಂಪನಿಯು ಕ್ಷಮೆಯಾಚಿಸಲಿದೆ. ಈ ಪ್ರಕರಣದ ಬಗ್ಗೆ ಕೂಲಂಕಷ ತನಿಖೆಗೆ ಆದೇಶಿಸಲಾಗಿದೆ. ಮುಂದಿನ ದಿನಗಳಲ್ಲಿ ಪ್ರಯಾಣಿಕರಿಗೆ ಇಂತಹ ಸಮಸ್ಯೆಯಾಗದಂತೆ ಮುಂಜಾಗ್ರತೆ ವಹಿಸಲಾಗುವುದು’ ಎಂದು ಏರ್ ಇಂಡಿಯಾ ವಕ್ತಾರರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸಾಲ ನೀಡಿಕೆ ಠೇವಣಿ ಸಂಗ್ರಹ ಇಳಿಕೆ: ಆರ್‌ಬಿಐ

ಮುಂಬೈ (ಪಿಟಿಐ): 2024–25ನೇ ಡಿಸೆಂಬರ್ ತ್ರೈಮಾಸಿಕದಲ್ಲಿ ದೇಶದ ವಾಣಿಜ್ಯ ಬ್ಯಾಂಕ್‌ಗಳ ಸಾಲ ನೀಡಿಕೆ ಪ್ರಮಾಣ ಹಾಗೂ ಠೇವಣಿ ಸಂಗ್ರಹದಲ್ಲಿ ಇಳಿಕೆಯಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತಿಳಿಸಿದೆ.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಸಾಲ ನೀಡಿಕೆಯು ಶೇ 12.6ರಷ್ಟು ಹಾಗೂ ಠೇವಣಿ ಸಂಗ್ರಹವು ಶೇ 11.7ರಷ್ಟಿತ್ತು. ಇದಕ್ಕೆ ಹೋಲಿಸಿದರೆ ಡಿಸೆಂಬರ್ ತ್ರೈಮಾಸಿಕದಲ್ಲಿ ಕ್ರಮವಾಗಿ ಶೇ 11.8ರಷ್ಟು ಹಾಗೂ ಶೇ 11ಕ್ಕೆ ಇಳಿಕೆಯಾಗಿದೆ ಎಂದು ತಿಳಿಸಿದೆ.

ಬ್ಯಾಂಕ್‌ಗಳ ಒಟ್ಟು ಸಾಲದ ಪೈಕಿ ವೈಯಕ್ತಿಕ ಸಾಲದ ಪಾಲು ಹೆಚ್ಚಿದೆ (ಶೇ 31.5ರಷ್ಟು) ಎಂದು ವಾಣಿಜ್ಯ ಬ್ಯಾಂಕ್‌ಗಳ ಸಾಲದ ವಿವರ ಕುರಿತು ಪ್ರಕಟಿಸಿರುವ ಆರ್‌ಬಿಐ ವರದಿ ತಿಳಿಸಿದೆ.


ಒಟ್ಟು ಸಾಲದಲ್ಲಿ ಕೃಷಿ ಮತ್ತು ಕೈಗಾರಿಕೆಗಳಿಗೆ ನೀಡುವ ಸಾಲವು ದಾಖಲೆ ಪ್ರಮಾಣದಲ್ಲಿ ಏರಿಕೆಯಾಗಿದೆ. ವ್ಯಾಪಾರ, ಫೈನಾನ್ಸ್, ವೃತ್ತಿಪರ ಹಾಗೂ ಇತರೆ ಸೇವೆಗಳಿಗೆ ನೀಡುವ ಸಾಲದ ಪ್ರಮಾಣದಲ್ಲಿ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ನಿಫ್ಟಿ ಗುಚ್ಛಕ್ಕೆ ಜಿಯೊ ಫೈನಾನ್ಶಿಯಲ್, ಜೊಮಾಟೊ

ನವದೆಹಲಿ (ಪಿಟಿಐ): ನಿಫ್ಟಿಯಲ್ಲಿ ಅತಿಹೆಚ್ಚು ಮಾರುಕಟ್ಟೆ ಬಂಡವಾಳ ಹೊಂದಿರುವ 50 ಕಂಪನಿಗಳ ಗುಚ್ಛಕ್ಕೆ (ನಿಫ್ಟಿ 50) ಮಾರ್ಚ್ 28ರಂದು, ಜಿಯೊ ಫೈನಾನ್ಶಿಯಲ್ ಸರ್ವಿಸಸ್ ಲಿಮಿಟೆಡ್ ಹಾಗೂ ಜೊಮಾಟೊ ಕಂಪನಿಯು ಅಧಿಕೃತವಾಗಿ ಸೇರ್ಪಡೆಯಾಗಲಿವೆ ಎಂದು ರಾಷ್ಟ್ರೀಯ ಷೇರು ವಿನಿಮಯ ಕೇಂದ್ರ ತಿಳಿಸಿದೆ.

ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಹಾಗೂ ಬ್ರಿಟಾನಿಯಾ ಇಂಡಸ್ಟ್ರೀಸ್ ಲಿಮಿಟೆಡ್‌ನ ಮಾರುಕಟ್ಟೆ ಬಂಡವಾಳ ಮೌಲ್ಯ (ಎಂ–ಕ್ಯಾಪ್) ಕಡಿಮೆಯಾಗಿದೆ. ಹಾಗಾಗಿ, ಈ ಸ್ಥಾನಕ್ಕೆ ಜಿಯೊ ಫೈನಾನ್ಶಿಯಲ್ ಮತ್ತು ಜೊಮಾಟೊ ಸೇರ್ಪಡೆಯಾಗುತ್ತಿವೆ. ಕಳೆದ ಆರು ತಿಂಗಳ ಅವಧಿಯಲ್ಲಿ ಈ ಎರಡು ಕಂಪನಿಗಳ ಎಂ–ಕ್ಯಾಪ್ ಒಂದೂವರೆ ಪಟ್ಟು ಹೆಚ್ಚಳವಾಗಿದೆ.

ಜೊಮಾಟೊ ₹1.69 ಲಕ್ಷ ಕೋಟಿ ಹಾಗೂ ಜಿಯೊ ಫೈನಾನ್ಶಿಯಲ್ ಎಂ–ಕ್ಯಾಪ್ ₹1.04 ಲಕ್ಷ ಕೋಟಿ ಇದೆ. ಬಿಪಿಸಿಎಲ್ ₹60,928 ಕೋಟಿ ಹಾಗೂ ಬ್ರಿಟಾನಿಯಾ ₹64,151 ಕೋಟಿ ಎಂ–ಕ್ಯಾಪ್ ಹೊಂದಿವೆ.



ಶಿವರಾತ್ರಿ ಸಡಗರ

ಮಹಾಶಿವರಾತ್ರಿ ಹಬ್ಬದ ಅಂಗವಾಗಿ ಚಿಕ್ಕಮಗಳೂರಿನಲ್ಲಿ ಶನಿವಾರ ಕೆಲಸಗಾರರೊಬ್ಬರು, ಶಿವನ ಮೂರ್ತಿಗೆ ಬಣ್ಣ ಬಳಿದರು –ಪಿಟಿಐ ಚಿತ್ರ

ಮೋದಿ ಪ್ರಧಾನ ಕಾರ್ಯದರ್ಶಿಯಾಗಿ ಶಕ್ತಿಕಾಂತ ದಾಸ್



ನವದೆಹಲಿ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಮಾಜಿ ಗವರ್ನರ್ ಶಕ್ತಿಕಾಂತ ದಾಸ್ ಅವರನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಎರಡನೇ ಪ್ರಧಾನ ಕಾರ್ಯದರ್ಶಿಯಾಗಿ ಶನಿವಾರ ನೇಮಕಗೊಳಿಸಲಾಗಿದೆ.

ಈವರೆಗೆ ಈ ಹುದ್ದೆ ನಿರ್ವಹಿಸುತ್ತಿದ್ದ ಗುಜರಾತ್ ಕೇಡರ್‌ನ ಐಎಎಸ್ ಅಧಿಕಾರಿ ಪಿ.ಕೆ.ಮಿಶ್ರಾ ಅವರ ನಿವೃತ್ತಿಯಾದ ಜಾಗಕ್ಕೆ ದಾಸ್ ಅವರನ್ನು ನೇಮಿಸಲಾಗಿದೆ.

‘ಶಕ್ತಿಕಾಂತ ದಾಸ್ ಅವರ ಪ್ರಧಾನ ಕಾರ್ಯದರ್ಶಿ–2 ಅವಧಿ ತಕ್ಷಣದಿಂದಲೇ ಅನ್ವಯವಾಗಲಿದೆ. ಪ್ರಧಾನಿ ಅವರ ಅವಧಿಯವರೆಗೆ ಅಥವಾ ಮುಂದಿನ ಆದೇಶದವರೆಗೆ ಇರಲಿದೆ’ ಎಂದು ಅಧಿಕೃತ ಆದೇಶದಲ್ಲಿ ತಿಳಿಸಲಾಗಿದೆ. ತಮಿಳುನಾಡು ಕೇಡರ್ ಐಎಎಸ್ ಅಧಿಕಾರಿಯಾಗಿದ್ದ ದಾಸ್ ಅವರು 42 ವರ್ಷಗಳ ಅನುಭವ ಹೊಂದಿದ್ದಾರೆ. ಆರ್‌ಬಿಐನ 25ನೇ ಗವರ್ನರ್ ಆಗಿಯೂ ಜವಾಬ್ದಾರಿ ನಿರ್ವಹಿಸಿದ್ದಾರೆ.

ಡಿಜಿಟಲ್ ವೇದಿಕೆ: ಹೊಸ ಕಾಯ್ದೆಯ ಅಗತ್ಯತೆ ಪರಿಶೀಲನೆ– ಕೇಂದ್ರ

ನವದೆಹಲಿ(ಪಿಟಿಐ): ಡಿಜಿಟಲ್ ವೇದಿಕೆಗಳ ಮೂಲಕ ಹಂಚಿಕೊಳ್ಳಲಾಗುತ್ತಿರುವ ‘ಹಾನಿಕಾರಕ’ ವಿಷಯಗಳ ನಿಯಂತ್ರಣಕ್ಕಾಗಿ ಹೊಸ ಕಾನೂನು ಚೌಕಟ್ಟು ರೂಪಿಸುವ ಅಗತ್ಯತೆ ಕುರಿತು ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಪರಿಶೀಲಿಸುತ್ತಿದೆ.

ಈಗಿರುವ ಕಾಯ್ದೆಯಲ್ಲಿನ ಅವಕಾಶಗಳಲ್ಲಿ ಬದಲಾವಣೆಯ ಅಗತ್ಯವಿದೆಯೇ ಎಂಬುದನ್ನು ಕೂಡ ಪರಿಶೀಲಿಸುತ್ತಿದೆ ಎಂದು ಹೇಳಿದೆ. ಸಂವಹನ ಮತ್ತು ಮಾಹಿತಿ ತಂತ್ರಜ್ಞಾನ ಕುರಿತ ಸಂಸದೀಯ ಸ್ಥಾಯಿ ಸಮಿತಿಗೆ ನೀಡಿರುವ ಪ್ರತಿಕ್ರಿಯೆಯಲ್ಲಿ ಸಚಿವಾಲಯ ಈ ಮಾಹಿತಿ ನೀಡಿದೆ.

ಬಿಜೆಪಿ ಸಂಸದ ನಿಶಿಕಾಂತ್ ದುಬೆ ಈ ಸಮಿತಿ ಮುಖ್ಯಸ್ಥರಾಗಿದ್ದಾರೆ. ವಿವಾದಾತ್ಮಕ ಹಾಗೂ ಹಾನಿಕಾರಕ ವಿಷಯಗಳ ಪ್ರಸಾರ ನಿಯಂತ್ರಿಸುವುದಕ್ಕಾಗಿ ಸದ್ಯದ ಕಾನೂನಿಗೆ ತಿದ್ದುಪಡಿಯ ಅಗತ್ಯವಿದೆಯೇ ಎಂಬ ಬಗ್ಗೆ ವರದಿ ಸಲ್ಲಿಸುವಂತೆ ಸಮಿತಿಯು ಫೆ.13ರಂದು ಸಚಿವಾಲಯಕ್ಕೆ ಸೂಚಿಸಿತ್ತು.

ಯೂಟ್ಯೂಬ್ ಕಾರ್ಯಕ್ರಮವೊಂದರಲ್ಲಿ ರಣವೀರ್ ಅಲಹಾಬಾದಿಯಾ ಮಾಡಿದ್ದರು ಎನ್ನಲಾದ ಕೆಲ ಹೇಳಿಕೆಗಳಿಗೆ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. ಈ ಕಾರಣಕ್ಕೆ ಸಚಿವಾಲಯ ಇಂಥ ಕ್ರಮಕ್ಕೆ ಮುಂದಾಗಿದೆ.

ಎಫ್‌ಬಿಐ ಮುಖ್ಯಸ್ಥರಾಗಿ ಕಾಶ್ ಪಟೇಲ್ ಪದಗ್ರಹಣ

ಭಗವದ್ಗೀತೆ ಹೆಸರಿನಲ್ಲಿ ಪ್ರಮಾಣ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ತನಿಖಾ ಸಂಸ್ಥೆ ಎಫ್‌ಬಿಐನ 9ನೇ ನಿರ್ದೇಶಕರಾಗಿ ನೇಮಕ ಗೊಂಡಿರುವ ಭಾರತ ಮೂಲದ ಕಾಶ್ ಪಟೇಲ್ ಅವರು ಭಗವದ್ಗೀತೆ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಶ್ವೇತಭವನದ ಆವರಣದಲ್ಲಿರುವ ಐಸೆನ್‌ಹೋವರ್ ಎಕ್ಸಿಕ್ಯೂಟಿವ್ ಕಚೇರಿ ಕಟ್ಟಡದ (ಇಇಒಬಿ) ಇಂಡಿಯನ್ ಟ್ರೀಟಿ ರೂಮ್‌ನಲ್ಲಿ ನಡೆದ ಸಮಾರಂಭದಲ್ಲಿ ಅಮೆರಿಕದ ಅಟಾರ್ನಿ ಜನರಲ್ ಪ್ಯಾಮ್ ಬಾಂಡಿ ಅವರು ಶುಕ್ರವಾರ ಪ್ರಮಾಣ ವಚನ ಬೋಧಿಸಿದರು. ಪಟೇಲ್ ಅವರ ಕುಟುಂಬ ಸದಸ್ಯರು ಮತ್ತು ಅವರ ಗೆಳತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ನಂತರ ಮಾತನಾಡಿದ 44 ವರ್ಷದ ಪಟೇಲ್, ‘ಅಮೆರಿಕ ಕನಸು ಈಗ ಸಾಕಾರಗೊಂಡಿದೆ. ಅಮೆರಿಕ ಕನಸು ಸತ್ತಿದೆ ಎಂದು ಯಾರಾದರೂ ಭಾವಿಸಿದ್ದರೆ, ನನ್ನತ್ತ ನೋಡಿ. ಕಾನೂನು ಜಾರಿ ಇಲಾಖೆಯನ್ನು ಮುನ್ನಡೆಸಲಿರುವ ಅಮೆರಿಕದ ಮೊದಲ ತಲೆಮಾರಿನ ಭಾರತೀಯ ಹುಡುಗನನ್ನು ನೀವು ನೋಡುತ್ತಿದ್ದೀರಿ. ಇದು ಬೇರೆಲ್ಲಿಯೂ ಸಂಭವಿಸಲು ಸಾಧ್ಯವಿಲ್ಲ. ದೇವರು ಸೃಷ್ಟಿಸಿರುವ ಈ ಸುಂದರ ಜಗತ್ತಿನ ಶ್ರೇಷ್ಠ ರಾಷ್ಟ್ರವೊಂದರಲ್ಲಿ ಸಾಧ್ಯವಾಗಿದೆ’ ಎಂದು ಹೇಳಿದರು.



ಕಾಶ್ ಪಟೇಲ್ ಅವರು ಎಫ್‌ಬಿಐನ ನಿರ್ದೇಶಕರಾಗಿ ಪ್ರಮಾಣ ವಚನ ಸ್ವೀಕರಿಸಿದರು ಎಎಫ್‌ಪಿ ಚಿತ್ರ

ಉನ್ನತ ಹುದ್ದೆಯಿಂದ ಬ್ರೌನ್ ವಜಾ

ವಾಷಿಂಗ್ಟನ್(ಎಪಿ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವಾಯುಪಡೆಯ ಜನರಲ್ ಚಾರ್ಲ್ಸ್ ಕ್ವಿಂಟನ್ ಬ್ರೌನ್ ಜೂನಿಯರ್ ಅವರನ್ನು ಸೇನೆಯ ಉನ್ನತ ಅಧಿಕಾರಿಗಳ ತಂಡದ (ಜೆಸಿಎಸ್) ಮುಖ್ಯಸ್ಥನ ಸ್ಥಾನದಿಂದ ಶುಕ್ರವಾರ ದಿಢೀರ್ ಆಗಿ ವಜಾಗೊಳಿಸಿದ್ದಾರೆ.

ಜೆಸಿಎಸ್ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ ಎರಡನೇ ಕಪ್ಪುವರ್ಣೀಯ ಎನಿಸಿಕೊಂಡಿದ್ದ ಬ್ರೌನ್ ಅವರ 16 ತಿಂಗಳ ಅಧಿಕಾರಾವಧಿ ಉಕ್ರೇನ್‌ನಲ್ಲಿನ ಯುದ್ಧ ಮತ್ತು ಪಶ್ಚಿಮ ಏಷ್ಯಾದಲ್ಲಿನ ಸುದೀರ್ಘ ಸಂಘರ್ಷದ ನಡುವೆ ಕಳೆದು ಹೋಯಿತು. ವಾಯುಪಡೆಯ ನಿವೃತ್ತ ಲೆಫ್ಟಿನೆಂಟ್ ಜನರಲ್ ಡೇನಿಯಲ್ ಕೇನ್ ಅವರನ್ನು ಮುಂದಿನ ಮುಖ್ಯಸ್ಥರನ್ನಾಗಿ ನಾಮನಿರ್ದೇಶನ ಮಾಡುವುದಾಗಿ ಟ್ರಂಪ್ ಹೇಳಿದ್ದಾರೆ.

6 ಒತ್ತೆಯಾಳು ಬಿಡುಗಡೆ

ರಫಾ (ಎಪಿ/ಎಎಫ್‌ಪಿ): ಕದನ ವಿರಾಮದ ಒಪ್ಪಂದದಂತೆ ಹಮಾಸ್ ಬಂಡುಕೋರ ಸಂಘಟನೆಯು ರಫಾದಲ್ಲಿ ಇಬ್ಬರು, ನುಸ್ಸೈರತ್‌ನಲ್ಲಿ ಮೂವರು ಹಾಗೂ ಗಾಜಾ ಸಿಟಿಯಲ್ಲಿ ಒಬ್ಬರು ಇಸ್ರೇಲಿ ಒತ್ತೆಯಾಳುವನ್ನು ಶನಿವಾರ ಬಿಡುಗಡೆ ಮಾಡಿದೆ. ಕದನ ವಿರಾಮದ ಅಡಿಯಲ್ಲಿ ಒತ್ತೆಯಾಳುಗಳನ್ನು ಬಿಡುಗಡೆ ಮಾಡುವ ಮೊದಲ ಹಂತ ಪೂರ್ಣಗೊಂಡಿದೆ.

ಬಿಡುಗಡೆಗೊಂಡ ಒತ್ತೆಯಾಳುಗಳು ರೆಡ್ ಕ್ರಾಸ್ ಆಂಬುಲೆನ್ಸ್‌ಗಳಲ್ಲಿ ಇಸ್ರೇಲ್ ತಲುಪಿದರು. ಒತ್ತೆಯಾಳುಗಳು ತಲುಪಿದ ಬಗ್ಗೆ ಇಸ್ರೇಲ್ ಸೇನೆ ದೃಢಪಡಿಸಿದೆ.

ಮುತ್ತಿಟ್ಟ ಒತ್ತೆಯಾಳು: 2023ರ ಅ.7ರಂದು ಸಂಗೀತ ಕಚೇರಿಯೊಂದರಿಂದ ಅಪಹರಣಕ್ಕೊಳಗಾದ ಇಸ್ರೇಲ್ ಒತ್ತೆಯಾಳುಯೊಬ್ಬರು ವೇದಿಕೆ ಮೇಲೆ ಬರುತ್ತಿದ್ದಂತೆಯೇ, ಜನರತ್ತ ಕೈಬೀಸಿ ಸಂತಸ ವ್ಯಕ್ತಪಡಿಸಿದರು. ಇದಕ್ಕೂ ಮೊದಲು, ತಮ್ಮ ಅಕ್ಕ-ಪಕ್ಕ ನಿಂತಿದ್ದ ಇಬ್ಬರು ಹಮಾಸ್ ಬಂಡುಕೋರರ ಹಣೆಗೆ ಮುತ್ತಿಕ್ಕಿದರು. ಈ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಕೊರೊನಾ: ಹೊಸ ತಳಿ ಪತ್ತೆ

ಬೀಜಿಂಗ್ (ಪಿಟಿಐ): ವೈರಾಣುಗಳ ಬಗ್ಗೆ ಅಧ್ಯಯನ ನಡೆಸುವ ಚೀನಾದ ವಿಜ್ಞಾನಿಗಳ ತಂಡವು ಬಾವಲಿಗಳಲ್ಲಿ ಕಂಡುಬರುವ ಹೊಸ ವೈರಾಣುವನ್ನು ಪತ್ತೆಹಚ್ಚಿದೆ.

ಕೋವಿಡ್–19 ಸಾಂಕ್ರಾಮಿಕಕ್ಕೆ ಕಾರಣವಾಗಿದ್ದ ವೈರಾಣುವಿನಂತೆಯೇ ಇರುವ ಈ ಕೊರೊನಾ ವೈರಸ್, ಪ್ರಾಣಿಯಿಂದ ಮನುಷ್ಯರಿಗೆ ಹರಡುವ ಅಪಾಯವಿದೆ ಎಂದು ಸೌತ್ ಚೀನಾ ಮಾರ್ನಿಂಗ್ ಪೋಸ್ಟ್ ವರದಿ ಮಾಡಿದೆ. ಕೋವಿಡ್ ಹರಡಿದ್ದ ವೈರಾಣುವಿನಂತೆಯೇ ಇದು ಕೂಡಾ ಮಾನವನ ಜೀವಕೋಶಗಳಿಗೆ ಸುಲಭವಾಗಿ ನುಸುಳಬಹುದು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ವುಹಾನ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ (ಡಬ್ಲ್ಯುಐವಿ) ಪ್ರಯೋಗಾಲಯದ ಷಿ ಝೆಂಗ್‌ಲಿ ನೇತೃತ್ವದ ತಂಡವು ನಡೆಸಿದ ಅಧ್ಯಯನದಲ್ಲಿ ಈ ವೈರಾಣು ಪತ್ತೆಯಾಗಿದೆ.

ಸುಧಾ, ಮಯೂರ ಓದಿರಿ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

REQUIRED: OFFICE Assistant at Malleswaram, Bengaluru. Any Degree Holders having minimum 2 Years Experience with Computer Knowledge is Desirable. Apply: RP Associates, 36, Emami Nest, Flat No. 202, Behind Reliance Smart Point, 16th Cross, Malleswaram, Bengaluru- 560055. Email: hr@rpassociatesblr.com Mobile: 9900098631/ 9845010607

REQUIRED GYM Trainer's for cult franchisee centers at Rajajinagar, Hesaraghatta Road and Yelahanka. Contact:+91 6360291124 or email: ashakashyap1380@gmail.com

REAL ESTATE COMPANY: Requires SALES EXECUTIVES With Customer Service Skills, Experience In Dealing With Real Property Transactions. Good Communication. And Computer Knowledge, Two Wheeler Is Must. 5Kms Radius From Kumara Park. Contact: 8971723178

WANTED LADY RECEPTIONIST, TELECALLERS with computer knowledge. Good Salary, Pick/ Drop. Walk-in V&V GROUP, Behind IIMB, Vijaya Bank Layout. Call 99000-54462

HRD & Admin

URGENT HIRING HR & ADMIN SUPERVISOR B.Com-Graduates Exp`10+years Salary 45000/- Call:7338084555 9030609238 8296037433:Mail glprojects7889@gmail.com Interview Time: 10AM`to`4PM

REMOTE JOB position: Tech. Recruiter for USA job market based out of north Karnataka.Min. 2 years exp. in staffing & software knowledge.excellent communication skills.Send your resume to broockmike@gmail.com

Teachers/ Professors

PHYSICAL EDUCATION teacher for school in BTM Layout. Ph:9845989092

GURUKULA VIDYA KENDRA SCHOOL affiliated To ICSE near Padukone Dravid Centre For Sports Excellence Bettahalasur Bangalore North-562157 Requires Trained and Experienced Lady Principal, Qualified Teachers For Primary, Middle and High School (English, Hindi, Maths, Science, CBZ, Geography, Computer Science, Music, Dance). Apply With Full Details to prashy.r7779@gmail.com Ph: 9945107779

ST.PHILOMENA PUBLIC SCHOOL, Byalakere, Yelahanka, Bangalore required Trained & Experienced TEACHERS all subjects (Primary & High School) 9480091189/ 9845036582/ stphilomenas118@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

GANGA INSTITUTIONS
GANGA INTERNATIONAL SCHOOL
(Affiliated to ICSE: Grade-I to X & State: Grade-VIII to X)
GANGA PU COLLEGE
(Affiliated to ISC & State: PU-I & II - Science & Commerce)
POSITIONS VACANT
1) Principal - M.A/M.Sc with B.Ed having experience of minimum of 5 years in ICSE school.
2) Nursery Teacher - NTT+3 years experience.
3) PRT (Primary Teacher)
4) TGT (Trained Graduate Teacher) Physics, Chemistry, Biology, Maths, English, Computer Science & Physical Education.
5) PGT (Post Graduate Teacher) Physics, Chemistry, Biology, Maths, English, Computer Science, Accountancy & Physical Education.
6) HR: Candidates preferred with MBA-HR qualification.
7) Accountant: Candidates preferred with MBA-Accounts. Remuneration based on experience and efficiency. Freshers can also apply.
Walk-in for Interview & Demo during the working days between 10:30 am to 2:30 pm at the below mentioned address.
GANGA INTERNATIONAL SCHOOL & PU COLLEGE, Nagaraja Farm, Gruhalakshmi Layout, Nelagadaranahalli, Bengaluru-560073.
Mob: 9241147487/9448087026/8277359000
You can also forward your resume to email ID: gangacareers@gmail.com
Scan QR for applying

SIDDAGANGA SREE SHIVAKUMARA SWAMIJI VIDYA PEETHA TRUST #1,1st Stage, 2nd Phase, Chandra Layout, Bengaluru- 560072. Ph:080-23397600 invites application for I.Siddaganga Public School, Chandra Layout & Vijayangara: (1)English Teacher- BA/MA, B.Ed. (2)Sanskrit Teacher- BA/MA.B.Ed (3)Hindi Teacher- BA/MA.B.Ed. (4)EVS Teacher- B.Sc. B.Ed. (5)General Science Teacher- B.Sc/M.Sc, B.Ed. (6)Mathematics Teacher- B.Sc/M.Sc, B.Ed. (7)Social Science Teacher- BA/MA, B.Ed. (8)Computer Science Teacher- B.Sc./BE B.Ed.(CS) (9)Nursery Teacher- Any Degree with NTT/MTT, Trained. (10)Female Physical Instructor- B.P.Ed./M.P.Ed (11)Yoga Teacher- B.Sc./M.Sc. in Yoga (12)Office Assistant- Any degree with Tally ERP-9 & computer knowledge (13)Resident Engineer for Trust- Preferred BE Civil Engineering, who is well versed with maintenance and constructions of buildings. Person who retired recently with experience in the above nature of work may also apply. Diploma can also apply (14)School Van Driver- Heavy Motor Vehicle License, PSV bus & driving experience in school bus (15)Maintenance Asst.- Diploma in Automobile or Mechanical Engineering preferred, ITI can also apply. II.SSK PU College: (1)Lecturer in Computer Science- MCA/BE B.Ed. (CS) (2)Lab. Technician- PUC/any degree (3)PE Instructor- M.P.Ed (4)Receptionist- Any degree with Tally ERP-9 & computer knowledge Interview date will be intimated, Interested candidates may send their resume, service & salary certificates & Testimonials to the Mail: sskvptrust.2001@gmail.com or personally submit the above details to Trust office on or before 08/03/2025 between 9am`to`4pm.

SRI SARASWATHI VIDYANIKETANA SCHOOL
Dommasandra, Anekal Tq, Bengaluru Dist.
E-mail: ssvn1980@gmail.com
REQUIRED
TEACHERS experienced/fresher with fluency in English
Qual.: PUC / D.Ed, B.Sc/M.Sc B.Ed.(PCM and CBZ)
B.A/M.A B.Ed English /History, Hindi B.Ed, BPEd Ladies, BCA/MCA Computer, AM
Contact: Principal- 94480 28933, 84978 55814
Candidates send the resume to the above E-mail within 10 days
Attractive salary with PF, ESI and Health Insurance

REQUIRED HEADMISTRESS
An experienced & dynamic leader required for a reputed State Board School.
A proven track record in educational leadership, along with good team work and communication skills are essential.
Preference to candidates from South Bangalore.
Email resume to lathak17164@gmail.com

HOLY ANGEL'S High School, Hampinagar, Vijayanagar, Bengaluru-560104 Phone: 23404465/23202042 holyangels.highschoolrpclayout@gmail.com Requires Experienced Trained Teachers for the Academic year 2025-26 for Nursery, Primary, High-School, Music Teacher & P.E.Teacher. STATE & ICSE. Qualification: B.A./B.Sc.,B.Ed, M.A./M.Sc.,M.Ed, N.T.T, CP.Ed. Only English Medium Candidates need to apply

REQUIRED EXPERIENCED NURSERY TEACHERS with NTT/MTT. in and around Nagarabhavi & Sir M.Vishveswariaha Layout. 7204464654

TEACHER REQUIRED for Social and Hindi for High school contact Kenmore school whatsapp 9901501185 mail kenmoreschool@gmail.com

Graphic Designers

AD AGENCY requires GRAPHIC DESIGNER 1-2years Experience in CoralDraw, Other Designing Tools, Speed typing in Kannada, English. 9845597155 enquiry@spoorthiads.com

Multiple Vacancy

IMMEDIATELY REQUIRED for Karnataka, Maharashtra and Telangana Lift irrigation and Water Resource Projects Asst Manager Civil Mechanical Engineer, Electrical Engineer. Kindly Contact PVR Projects Ltd pvrplblr@gmail.com hrdpvrpl@pvrpl.co.in adminhyd@pvrpl.co.in Ph: 040 23418080/ 9008826378

ADITYA GROUP OF INSTITUTIONS
Yelahanka
Invites applications from the qualified and experienced candidates for the post of
- ACCOUNTS EXECUTIVES
- ADMIN EXECUTIVES
- IT & NETWORKING
- RECEPTIONIST
- TELE-CALLERS
- HOSTEL WARDENS
- CANTEEN MANAGER
- COOK
- HOUSEKEEPING
- DRIVERS
- LAB ASST.
- ATTENDERS

Interested candidates may send their resumes with photograph to
hrdept.aditya@gmail.com Contact No.: 7090001946

Walk-in

MOUNT
We Hiring
Walk-in-Interview
Position: MARKETING ASSISTANTS
Candidates must have a 2 wheeler as a mandatory requirement.
Location: Magadi Road, Summanahalli Bridge, Bangalore
Gender: Male Candidates only
Date: 24th February 2025
Qualification: 2 PUC / Any Degree
Freshers can apply
Contact / WhatsApp 9606905672
Send you CV and portfolio to hr@mountpeb.com
Web: www.mountroof.com

Engg/ Production Technical

WANTED FRESHER ITI/ fitter/Diploma for manufacturing unit in Bommasandra Bengaluru Email resume reachus@lokitechnologies.com

REAL ESTATE SELLING

Sites

Anjanapura

AVAILABLE FOR Sale 30x40 & 40x60 BDA Sites in Multiple Blocks. Call: 9845589761

Banashankari

MANTRALAYA ENTERPRISES: BUYING And SELLING BDA/A Khatha SITES/ BANASHANKARI 6th Stage, Anjanapura, Vishweswaraiah Layout. 9945724472.

SITE FOR SALE Site no. 167/A, Banashankari 6th stage 4th T block, 40*60, West facing. Ct: 6305185101

Basavanagudi

BASVANAGUDI 37X97, 50x25, 40x80, 75x85, 40x147, 46x40, 50x80. Contact: PRASANNA, 'ESHWARI ENTERPRISES'- PROPERTY CONSULTANTS 98454-97163

Electronic City

30*40 SITE for sale, North Facing, Krishnareddi Layout, Konappana Agrahara, Off: Infosys, Electronic City, Hosur-Road, Broker excuse. 9845527912.

Hebbal

HEBBAL 30X35 House Sale Ground 1 BHK Two Carparking 1st 2 BHK 2nd 2 BHK 9845623970/ 9739400838

Jakkur

JUDICIAL LAYOUT JAKKUR 50x80 BDA Site East Facing 40 Feet Road For Sale Contact: 9341260828

Jayanagar

RESIDENTIAL COMMERCIAL 80x120, 50x80, 40x60, 30x40 BDA Property Available @ Jayanagar, J.P.Nagar, Bannerughatta Road Call:9945699813

Rajarajeshwari Nagar

BEML LAYOUT 3RD Stage, 40x60, South Semi-commercial Full Cheque Payment Contact :9448508410, Brokers Excuse

J P Nagar

J.P.NAGAR 1st Phase Off`Kanakapura Road, Navodaya Layout 40x51 Corner E-Khatha, near Metro Station, 3,77,00000/- 9731775536

J.P.NAGAR 7th Phase, 24th Main near Sobha Tulip 40x60, 80x60, BBMP E-Katha 20,000/- sft. 9731775536

Kengeri

A-KATHA 40X30 Site for Sale, South/ West Corner, Sami Commercial Property and E-Katha also available. Chithrakoota School Road, Nagadevanahalli, Rate:10,500/-. Contact: 7411893279/ 8618507241.

2081 SQ Feet Commercial Plot for Sale in Kempegowda BDA Layout, 5th Block G Sector, Facing to 360 Feet Road, Broker Excuse. Contact 9513122666

40X60 COMMERCIAL Plot for sale in Kempegowda BDA Layout, 6th Block, C Sector, Facing to 80 Feet Road, Broker excuse. Contact 9513122666

Kumarapark

KUMARA-PARK: JAIN TEMPLE MADHAVNAGAR/ RACE-COURSE 60x75`PrimeRESI Commercial Property, ForSale, NRI's/HNI's Ready`Buyers Call- Raghav Bangalore Estates 9845054356, 9880377799

Kanakapura Road

"KANAKA LAYOUT Gubbalalu 40x60 BDA approved Excellent Investment behind ISKCON Temple "Sri Ganesh Estate"- 9845286505"

Kempegowda Layout

21000 SFT Land with Farm House for Sale, Chellaghatta on proposed Ring Road close to Metro and Peripheral Ring Road. 9845440436.

SITE FOR SALE KEMPEGOWDA LAYOUT 7th Block'L' Sector attached(BDA NOC) 30x40.6000/- slightly negotiable. Contact:9008800029

KEMPEGOWDA LAYOUT, Commercial BDA Site for Sale 20x30, 30x40, 40x60, 50x80, Contact: Kumar 9945119449

Mallathalli

SITE FOR Sale Semi commercial Railway layout Mallathahalli 40*60 west facing on 60ft road Ph-9591805278

Mysore Road

"CONTACT FOR Selling/ Buying BMRDA Approved Sites Near Hejjala Bidadi BigBanyan Tree Surrounding Areas. 9845178335"

Mysore

SITES @MYSORE DTCP Facing State Highway `A`Khatha,RERA, 100%Completed Layout, Rs.1700-2050 PerSft, 85%Loan Immediate Registration, Near HD Kote Road, 10Minutes to Airport,Ring Road, 15Minutes to Palace: 9845287802/ 8050001571.

Nagarabhavi

SALE: SITE 30x60 Nagarabhavi 2nd Stage, 'A' Khata, Immediate Registration, Genuine Buyers, Contact:6361819741.

40X60 EAST Facing Near ARUN ICE CREAM, RHCS A-BLOCK 40ft Road Full White Money: 9980409820

R T Nagar

SALE !! R.T.NAGAR 40X50 North Facing BDA Site For Sale. For Details Call:Niti Estates 9900001973

Sarjapur Road

SITE FOR Sale 60x40 East Facing Near Sarjapur Road Astro Green Cascade Contact: 8310093665

Sanjaynagar

SANJAYNAGAR KEB Layout BDA Approved 1050 Sft North West Corner Site Excellent Location For-Sale Call:9341260828

Tumkur



TUDA SITE FOR SALE
A Khata TUDA Approved Layout in Hirehalli, Tumkur Just 1.9 km from Bangalore-Tumkur Highway Road, For Sale at Rs.1800/- Sqft
Contact: Savithri Developers 9900288424, 9964705451

Vishweshwaria Layout

BDA SITE SALE VISHWESHWARIAH LAYOUT 1STBLOCK 30X40 NORTH AND SOUTH FACE DIRECT OWNER MEETING 8892901567

BDA SITE SALE VISHWESHWARIAH LAYOUT 4TH BLOCK 50X80 EF 80FT ROAD PARALLEL 7750 NEGOTIABLE 8892901567

"30X40 EF BDA 1st BLOCK VISHVESHWARIAH LAYOUT, 1550 SQFT APRAMEYA LAYOUT RESIDENTIAL SITES SALE- 9845143579"

VISHWESHWARAIA LAYOUT 40x60 BDA SITE Sale 3rd Block East Facing 40 Feet Road Contact: 9035470616

VISHWESHWARAIAH LAYOUT 40x60 5th Block EF 12500/- Negotiable, 3rd Block EF 30x40 12300/- Owner: 9845793121

"VISHVESHWARAIAH LAYOUT 1st Block 30x40 on 40`feet Road Brand`new 1BHK HOUSE for Sale. 9886294610"

40X60 SITE for sale. South facing Rs. 3.5Cr. Immediate Sale. Brokers Excuse. Contact:- 9448455164.

"VISHVESWARAIAH LAYOUT 30x40 West facing Allottee`Site for Sale Near Saibaba Temple. Contact Genuine Buyers:- 9845268611"

"RAILWAY LAYOUT 1st Stage 40x60 North facing Site 40`feet Road for Sale. 9845500019/ 7019314962"

DIRECT OWNER 30x40 BDA Site Sale @ Vishveswaraiah Layout 2ndBlock, near 100 feet-road. 9886634578

SMV 5TH Block 434 East 40x60 Opposite DGP House SMV 6th Block East 30x40: 9900224071

Udupi

KHB SITE 1725 SQFT HEBRI TOWN AMIDST NATURE WESTERN GHATS 26 LAKHS OWNER 9606866368

House

Basaveshwaranagar

SALE KHB Colony Near Basaveshwara Nagar Old House 45X65 Very Good Location. Contact: 9448045601/ 9535811626

Jakkur

MCECHS LAYOUT, newly built luxurious house G+3 5BHK with lift, east facing, fully furnished ready to move for sale 3.40cr. Call: 9535479091

Jayanagar

SALE 45X90 Jayanagar 4th T Block With 3BHK House on 60feet Road Excellent Location ct: 9844134068 8073859758

SALE 60X90 Jayanagar 8th Block With old House on 60feet Road ct: 9844134068 8073859758

J P Nagar

J.P.NAGAR 3RD near Mini Forest 30x40 Duplex house, 3,60,00000/- 5th Phase`near Nandini Hotel`30x40, 3 unit House, 3,40,00000/- 9731775536

J.P.NAGAR 3RD Phase Near Mini Forest 41x65 North house,8,00,00,000/-, Behind Central Mall 40x60 old house 6,48,00000/- 9731775536

Nagarabhavi

"NAGARABHAVI BDA Complex 30x40 North door Outside Staircase, 30x40 Duplex HOUSE 60 feet Road. 9448432633"

Uttarahalli

60×40 TWO Floor House for Sale at Nandakumar Layout Arehalli, Uttarahalli 12000/- Sqft only Buyers may Contact 8553630007/ 9341335679

Flat

Banashankari

INDEPENDENT FLATS for sale in BHCS next to Poornapragna Layout 3BHK 2 carpark 2240 sqft complete teak wood and marble flooring. Call: 9448063661/ 9611001011

2/3 BHK Flats For Sale in Adarsh Astria BSK 2nd Stage BRAND NEW APARTMENT: 9845039831

Electronic City

ELECTRONIC CITY, Electra Park, Near Infosys 2BHK 1156 sqft III Floor Lift, UDS 522 sqft 65L Negotiable. 8220121589, 9500013347

Jalahalli

FOR SALE 1 BHK, 2 bathrooms, 1 covered car park at Brigade Parkside North Bangalore. Contact owner: 9900648717

Mysore Road

MYSORE ROAD Navami Heights 3 BHK sale. 2500 sqft, carparking, price 2.25 crores. 9060406731/ 9845720810

Mysore

RENT/ SALE Posh 2BHK AC Flat in Yadavgiri. Fully Furnished, Covered Patio, 2 Car Parking, UPS Backup, North Facing, Vastu Compliant. Call: Owner 7349023373

Nagarabhavi

PLATS FOR-SALE Near Nagharbhavi Circle 2 & 3 BHK @ Prime-Location Ready to`Move in`Just`1.km from Metro-Station 9538828808 9845066608

Yelahanka

LIFE @ 21 FLOORS Gated Apartment YELAHANKA. 2BHK-1,12,00,000 3BHK-1,49,00,000. 9353748029

Vidyaranyapura

2 BHK FLATS For Sale BEST COUNTY Ready to Move Behind Sambhram College. 9731374392, 6364588805

Agricultural Land Converted

Mysore

2 ACRE, 20 gunta land Mysore 40 ft Road sale. Price 2500 per sft.contact. 9380586105

Agricultural Land

Chamarajanagar

AGRICULTURE LAND for SALE @ Kollegal Taluk, 50Acres,General property, clear Title,Direct Registration only buyers Contact: 9739627282

Commercial Building

Anjanapura

FOR SALE, NORTH 20/60 BDA, G+3.5 FLOORS, COMMERCIAL BUILDING, ANJANAPURA 11th block 2 lakh rent. 3.25 CR, OWNER SATISH PH 98450 16934

Kengeri

COMMERCIAL BUILDING for SALE, 17.5 x 35 sft Railway Station, Opposite Kengeri. Contact: 9731751079

Whitefield

"COMMERCIAL FLOOR 5000 Sqft with`Rental income`of 2 Lakh+GST undivided Land`share 1828`Sqft 30`years`Lease given`to Reputed Hospital, for`more details`Call "Sri.Ganesh Estates" 9845286505"

Commercial Land

Banashankari

BANASHANKARI 6TH Stage 9th block 50x80 commercial North Facing Site 100feet Road. Contact: 9900097239

Mysore

50X80 SOUTH facing purely Commercial Site for Sale at Dattagalli, Opposite Nalapak Hotel. Contact; Mysore Estates Vishwanath Gowda 9590911111

Commerical

Jayanagar

JAYANAGAR-30X46: NEW2 BHK x3 Units, G+3,Building Prime Area,Nr Metro, ForSale,BUYERS /NRIs Call:Bangalore Estates; 9845054356/ 9880377799

Kanakapura Road

2 WAREHOUSES Available in Jakkasandra 3rd Phase Bangalore Tenant Occupied Genuine buyers Contact- 9606154546/ 9019851332

Vishweshwariah Layout

"VISHVESWARAIAH 6TH-BLOCK 60ft Road 50x80 South facing Commercial Property with 75 Squares Building, 9845500019/ 7019314962"

Industrial & Factory

Nelamangala

NELAMANGALA, 2 Acres Industrial Land NH4 Attached 9cr/Acre, 1.5 Acre Industrial Land 5Cr/Acre, 9611146463/ 9036207777

Farm House/ Land/ Resorts

Mysore

MYSORE PROPERTIES 0% Brokerage10 Guntas each developed farm plots for Sale at HD Kote Road Mysore Contact; Mysore Estates Vishwanath Gowda 9590911111

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

AVAILABLE FOR LEASE 300 Sft.Lalbagh Main`Road East Facing Ideal for Stationary/ Showrooms, Next to CMS`Jain College, 8296947177

2300+2400.GROND,FIRST FLOOR Commercial Space For Rent.Car parking, On Nagarbhavi Main Road, Coconut Garden. Bengaluru. Call:9243403130

COMMERCIAL BUILDING Rent- Palace Guttahalli 3 floors, high & low power available. Contact: 9481113232/ 9481113577.

Flats

NEW 3 BHK for Rent Rs.75,000/- plus maintenance in Malleswaram. Lokapriya- 9845162933

FOR RENT 2BHK Flat, Adarsh Palm Retreat Apartment at Belandur. Rent:47k Prashanth: 9741741575

Industrial And Factory

AVAILABLE OF Industrial Shed of 170000`sqft at Soukya Road, Whitefield, Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

REAL ESTATE BUYING

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT; 9845062822/ 8660751654

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Kanakapura Road

WANTED SITE 30x40, 40x60 Jayanagar Housing Society, Anjanapura BDA, BCC Housing Society Banashankari 6th Stage Agent`Excuse. Call: 9663454878.

Nagarabhavi

WANTED BDA SITE 30x40, 40x60, 50x80 Visweshwarayya Layout, Nagarabhavi RHCS Layout, NGF, Banashankari 6th Stage. 8105688602.


***WANTED* HOUSE,** SITES, FLATS VISHVESHWARAIAH LAYOUT NAGARBHAVI, MALLATHAHALLI ,BSK 6th Stage 20x30,30x40,40x60. ABHILASHA CONSULTANT. 9480565758

Anjanapura

WANTED BDA SITES Anjanapura, Banashankari, 6th Stage, Vishweshwaraiah Layout, any measurement. Contact: 9845298419

Jayanagar

WANTED CORNER site 40 x 30; 40 x 50, 40 x 60 Jayanagar residential/ commercial 9446387993.



ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING

Commerical

Multiple Locations

WANTED Tenented Commercial Building Anywhere in Bangalore for purchase. Budget 20 to 30 Crores- 9740292904.

SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 12.50 CRORES
Call: 96322-37557/ 96065-47557

VSL SRINIDHI DEVELOPERS
VSL SRINIDHI GREEN FIELDS LAYOUT
BEHIND 340 FEET KEMPEGOWDA MAIN ROAD
BDA APPROVED SITES FOR SALE
BDA APPROVED
Near Kempegowda Layout & Vishveshwaraiah Layout
DISTANCE INDICATOR: Nice Road- 1 Km, Jnana Bharathi- 5 mins Kengeri Upanagar- 5 mins, Magadi Road & Nagarbhavi - 10 mins.
AMENITIES: Fully developed gated community with Park, Basket Ball Court & Children's play area
RERA APPROVED 99000 15805/90083 38098



MATRIMONIAL

Matrimonial Bureaus

PARINAYA PARINITA MATRIMONY
INNOVATIVE RESPECTFUL & SECURE APPROACH
Send Whatsapp request to
Ph: +91 86185 83463
and get full details

Grooms Wanted

Brahmin

1989 born bride from Jharkhand, PHD holder working as Sr. Assistant professor in reputed university of Bangalore looking suitable groom from kanyakubj brahmin.
Contact Number- 7763097907



BUSINESS

Business Offers

Business For Sale

SALE WELL-KNOWN Schools in North Bangalore. Price ranging from 20Crores to 120 Crores. State syllabus, ICSE Syllabus and Cambridge syllabus. Hindu trust, Catholic Trust. Call Arun 9945699789.

PERSONAL

Change of Name

I, SEETHALAKSHMI GOVINDARAJAN W/o Govindarajan R have changed my name to SEETHALAKSHMI H A vide affidavit dated: 22/2/2025 Before Notary Shreeshail B.Gobbani Bangalore.


CHANGE OF NAME
I, **Pragya Arvind Salampuria** and **Pragya Yash Gupta,** R/at No.H2-603, Snn Raj Lake View, BTM Layout, 2nd Stage, Bengaluru-76, declare that the above names pertain to me only. I hereby abandon above names Henceforth I shall be known as **ESHANYA SALAMPURIA** vide affidavit dated 18.02.2025 sworn before Notary K.P. Sumangala, Bengaluru.


I, VINAY Kumar Choletti, aged about 45 years S/o. Shri. Brahma Chary Choletti, R/o. No. 3106 Prestige Kensington Gardens, 17, HMT Main Road Jalahalli, Bengaluru, Karnataka-560013, have changed my minor son's name from Siddharth to SIDDHARTH CHOLETTI for all future purposes as per documents.

CHANGE OF NAME
I, YUMNAM SUNITA DEVI W/o. Sumit Sharma R/a #L1501, SNN Raj Lakeview, Dr. B.R Ambedkar Road, Near Jain Temple, Bilekahalli, BTM Layout, Bangalore- 560076 declare that **YUMNAM SUNITA DEVI** and **YUMNAM SUNITA** both name is refer to one and the same person, i.e. myself only. Henceforth, i will be known as **YUMNAM SUNITA DEVI** for all my future purpose. Vide affidavit dated 21.2.2025 before Notary T.R. Raghavendra Rao, Bengaluru.



ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 23 ಫೆಬ್ರುವರಿ 2025


ಮಠಗಳ ಕರ್ಮಠತನವನ್ನು ಸಾರುವ 'ಸತ್ತವರ ನೆರಳು' 11


ಗಂಭೀರ ಶಾಸ್ತ್ರಕ್ಕೂ ಹಾಸ್ಯದ ಅಂಗಿ ಹಾಕಬಲ್ಲ ಅ.ರಾ. ಮಿತ್ರ 12


ದಿ ಕ್ಯಾಪಿಟೋಲ್ ಒಳಗೆ ಹೆಜ್ಜೆ ಹಾಕುತ್ತಾ... 13

ಕೆರೆಗಳಿಗೆ ಮರುಜೀವ ಜನರಿಗೆ ಜಲಜೀವ


ಕೆರೆಯೊಂದರಿಂದ ಹೂಳೆತ್ತುತ್ತಿರುವುದು


ತುಮಕೂರಿನ ಗಾರೆನರಸಯ್ಯನಕಟ್ಟೆ ಕೆರೆ

ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಪ್ರಯತ್ನವಾಗಿ ಆರಂಭಿಸಿದ ರಾಜ್ಯದ ಕೆರೆಗಳ ಹೂಳೆತ್ತುವ ಕಾಯಕಕ್ಕೆ ಇದೀಗ ಎಂಟು ವರ್ಷ ತುಂಬಿದೆ. ಸದ್ದಿಲ್ಲದೆ ನಡೆದ ಈ ಪ್ರಯತ್ನ ಬರೋಬ್ಬರಿ ಎಂಟುನೂರು ಕೆರೆಗಳಿಗೆ ಮರುಜೀವ ನೀಡಿದೆ.

ಚಂದ್ರಹಾಸ ಚಾರ್ಮಾಡಿ

ಕ್ರಿಕೆಟ್ ಪಂದ್ಯಾವಳಿ ನಡೆಯುತ್ತಿದ್ದ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಹರಾತಳು ಗ್ರಾಮದ 'ಪಟ್ಟದ ಕೆರೆ' ಇದೀಗ ನೀರಿನಿಂದ ತುಂಬಿ ತುಳುಕುತ್ತಿದೆ. ಶಿರಾ ತಾಲ್ಲೂಕಿನ 'ಶಿಬಿ ಕೆರೆ' ತುಂಬಿದ ಪರಿಣಾಮ ಒಂದಷ್ಟು ಯುವಕರು ನಗರಗಳಿಂದ ಊರಿಗೆ ಮರಳಿ ಮತ್ತೆ ಕೃಷಿಯಲ್ಲಿ ತೊಡಗಿದ್ದಾರೆ. ಕುಣಿಗಲ್ ತಾಲ್ಲೂಕಿನ 'ಕಾವೇರಮ್ಮ ಕೆರೆ' ಬರೋಬ್ಬರಿ ಎಪ್ಪತ್ತೈದು ವರ್ಷಗಳ ನಂತರ ಮತ್ತೆ ಭರ್ತಿಯಾಗಿದೆ. ಕಸದ ತೊಟ್ಟಿಯಾಗಿದ್ದ ಹಾವೇರಿಯ 'ಕಬ್ಬೂರ ಕೆರೆ' ಮಾದರಿ ಕೆರೆಯಾಗಿ ಕಂಗೊಳಿಸುತ್ತಿದೆ. ಚನ್ನಗಿರಿಯ 'ಹೊಸಕಟ್ಟೆ ಕೆರೆ' ತುಂಬಿದ ಕಾರಣ ಜನರಿಗೆ ಟ್ಯಾಂಕರ್ ನೀರು ಖರೀದಿಸುವ ಖರ್ಚಿನಿಂದ ಮುಕ್ತಿ ದೊರೆತಿದೆ. ಹೊಸನಗರದ 'ಒಟ್ಟೂರು ಕೆರೆ' ಸರ್ವಧರ್ಮಿಯರನ್ನು ಒಗ್ಗೂಡಿಸಿದೆ. ಶಿವಮೊಗ್ಗ-ಚಿತ್ರದುರ್ಗ ರಾಷ್ಟ್ರೀಯ ಹೆದ್ದಾರಿಯಲ್ಲಿರುವ 'ಮಾವಿನಕಟ್ಟೆ ಕೆರೆ' ಒತ್ತುವರಿಯಿಂದ ಮುಕ್ತವಾಗಿ ಮೈದಳೆದು ನಿಂತಿದೆ. ಗಂಗಾವತಿಯ 'ಅದಾಪುರ ಕೆರೆ' ತುಂಬಿದ ಪರಿಣಾಮ ಅಲ್ಲಿನ ಮಂದಿ ವಲಸೆ ಹೋಗುವುದು ಕಡಿಮೆಯಾಗಿದೆ. ಮುಧೋಳ ತಾಲ್ಲೂಕಿನಲ್ಲಿರುವ ಬ್ರಿಟಿಷರ ಕಾಲದ 'ಮೆಟಗುಡ್ಡ ಕೆರೆ' ಭರ್ತಿಯಾಗಿದೆ. ವಿಜಯಪುರದ 'ಹಿಟ್ನಳ್ಳಿ ಕೆರೆ' ಊರ ಮಂದಿಗೆ ಫ್ಲೋರೈಡ್‌ಮುಕ್ತ ನೀರನ್ನು ಒದಗಿಸುತ್ತಿದೆ. ಯಾದಗಿರಿಯ 'ಹುಲಿರಾಯನ ಬೆಟ್ಟದ ಕೆರೆ' ಅಲ್ಲಿನ ಭತ್ತದ ಇಳುವರಿಯನ್ನು ಇಮ್ಮಡಿಗೊಳಿಸಿದೆ.

'ನಮ್ಮೂರು ನಮ್ಮ ಕೆರೆ' ಯೋಜನೆಯಿಂದಾಗಿ ಹೀಗೆ ಪ್ರತಿಯೊಂದು ಕೆರೆಯ ಹಿಂದೆ ಒಂದೊಂದು ಯಶೋಗಾಥೆ ಇದೆ.

ಕೆರೆಗಳ ಕಾಯಕಲ್ಪ ಕೆಲಸಕ್ಕೆ ಧರ್ಮಸ್ಥಳ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ದಂಪತಿ 2016ರಲ್ಲಿ 'ನಮ್ಮೂರು ನಮ್ಮ ಕೆರೆ' ಎಂಬ ಹೆಸರನ್ನಿಟ್ಟರು. ಕೆರೆ ಕೆಲಸಗಳಲ್ಲಿ ಊರಿನ ಜನರನ್ನು ಒಗ್ಗೂಡಿಸಿದರು. ಪ್ರಾಯೋಗಿಕವಾಗಿ ಧಾರವಾಡ ಮತ್ತು ಕಲಬುರಗಿ ಜಿಲ್ಲೆಗಳ ಎಂಟು ಕೆರೆಗಳ ಹೂಳೆತ್ತಲಾಯಿತು. ಇದಕ್ಕೆ ಊರವರಿಂದ ದೊರೆತ ಭರಪೂರ ಸ್ಪಂದನೆಯನ್ನು ಗಮನಿಸಿದ ಅವರು, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಕೆರೆಗಳ ಹೂಳೆತ್ತುವ ಕೆಲಸವನ್ನು ಅಭಿಯಾನವಾಗಿ ರಾಜ್ಯದಾದ್ಯಂತ ವಿಸ್ತರಿಸಿದರು.

ಪ್ರತಿ ವರ್ಷ ಬೇಸಿಗೆ ಆರಂಭವಾಗುತ್ತಿದ್ದಂತೆ ಉತ್ತರ ಕರ್ನಾಟಕದ ಹೆಚ್ಚಿನ ಕಡೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುತ್ತಿತ್ತು. ಆ ದಿನಗಳಲ್ಲಿ ಟ್ಯಾಂಕರ್ ಮೂಲಕ ನೀರು ಒದಗಿಸುವ ಕೆಲಸವನ್ನು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಹಲವಾರು ದಶಕಗಳಿಂದ ಮಾಡುತ್ತಾ ಬರಲಾಗಿದೆ. ರಾಜ್ಯದ ಜನರ ನೀರಿನ ಬವಣೆಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳಬೇಕೆಂದು ಯೋಚಿಸುತ್ತಿದ್ದಾಗ ಹೊಳೆದದ್ದೇ ಕೆರೆಗಳಿಗೆ ಕಾಯಕಲ್ಪ ನೀಡುವ ಯೋಜನೆ. ಪೂರ್ವಜರು, ರಾಜರಿಂದ ನಿರ್ಮಿಸಲ್ಪಟ್ಟ, ಊರ ಮಂದಿಗೆ ನೀರಿನ ಪ್ರಮುಖ ಮೂಲವಾಗಿದ್ದ ಕೆರೆಗಳು ಹೂಳಿನಿಂದ ತುಂಬಿ, ಒತ್ತುವರಿಯ ದವಡೆಗೆ ಸಿಲುಕಿ ಕಣ್ಮರೆಯಾಗಿವೆ. ಅವುಗಳನ್ನು ಹುಡುಕಾಡಿ ಒತ್ತುವರಿ ತೆರವುಗೊಳಿಸಿ ಊರವರ ಸಹಭಾಗಿತ್ವದೊಂದಿಗೆ ಮತ್ತೆ ಅವುಗಳಿಗೆ ಗತವೈಭವವನ್ನು ತಂದುಕೊಟ್ಟು ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುವುದು. ಕೆರೆಯ ಅಗತ್ಯ ಕುರಿತು ಜಾಗೃತಿ ಮೂಡಿಸಿ ಅವುಗಳ ರಕ್ಷಣೆಯ ಜವಾಬ್ದಾರಿಯನ್ನು ಊರಿನ ಮಂದಿಗೆ ವಹಿಸಿಕೊಡುವುದು. ಅಳಿವಿನಂಚಿನಲ್ಲಿದ್ದ ಕೆರೆಗಳಿಗೆ ಮರುಜೀವ ನೀಡುವುದು. ಆಯಾ ಊರಿನ ಕೆರೆಗಳ ಮೂಲಕ ಅಲ್ಲಿನ ನೀರಿನ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವುದು ಯೋಜನೆಯ ಉದ್ದೇಶ.

ಕೆರೆಗಳ ಆಯ್ಕೆ ಹೇಗೆ?

ಒಂದು ಲೆಕ್ಕಾಚಾರದ ಪ್ರಕಾರ ರಾಜ್ಯದಲ್ಲಿ ಸುಮಾರು 39 ಸಾವಿರ ಕೆರೆಗಳಿವೆ. ಅವುಗಳಲ್ಲಿ ಹೆಚ್ಚಿನವು ನಿರುಪಯುಕ್ತವಾಗಿವೆ. ಹಾಗಾದರೆ ಯೋಜನೆಗೆ ಕೆರೆಯ ಆಯ್ಕೆ ಹೇಗೆ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಎಲ್ಲೆಲ್ಲಿ ಬರಿದಾದ ಕೆರೆಗಳಿವೆ ಮತ್ತು ಆ ಊರಿನಲ್ಲಿರುವ ನೀರಿನ ಸಮಸ್ಯೆ ಕುರಿತು ಸಮೀಕ್ಷೆ ನಡೆಸಲಾಯಿತು. ನಂತರ ಪ್ರತಿ ವರ್ಷ ತಾಲ್ಲೂಕಿಗೊಂದರಂತೆ ಕೆರೆಗಳ ಹೂಳೆತ್ತಲು ಆಯ್ಕೆ ಮಾಡಲಾಯಿತು.


ಆಯಾ ಊರಿನ ಮಂದಿ ಆಸಕ್ತಿವಹಿಸಿದರೆ, ಭಾಗಿಗಳಾದರೆ ಮಾತ್ರ ಮುಂದೆ ಅವುಗಳ ರಕ್ಷಣೆ ಸಾಧ್ಯವೆಂಬ ನಿಟ್ಟಿನಲ್ಲಿ ಊರಿನವರನ್ನು ಒಟ್ಟು ಸೇರಿಸಿ 'ಕೆರೆ ಅಭಿವೃದ್ಧಿ ಸಮಿತಿ' ರಚಿಸಲಾಯಿತು. ಕೆರೆ ಅಭಿವೃದ್ಧಿ ಕೆಲಸಗಳಿಗೆ ಅಲ್ಲಿನ ಪಂಚಾಯಿತಿ, ಸರ್ಕಾರದ ಇಲಾಖೆ, ಶಾಸಕ, ಸಂಸದರು, ಗಣ್ಯರು.. ಹೀಗೆ ಎಲ್ಲರೂ ಉತ್ತಮ ರೀತಿಯ ಸಹಕಾರವನ್ನು ನೀಡಿದರು. ಹೆಚ್ಚಿನ ಕೆರೆಗಳ ಒತ್ತುವರಿಯನ್ನು ತೆರವುಗೊಳಿಸುವಲ್ಲಿ ಅಲ್ಲಿನ ಪಂಚಾಯಿತಿ ಅಧಿಕಾರಿಗಳು ನೀಡಿದ ಕೊಡುಗೆ ಅಪೂರ್ವ.

ಕೆರೆಯ ಹೂಳೆತ್ತುವ ಕೆಲಸವನ್ನು ವೈಜ್ಞಾನಿಕವಾಗಿ ನಡೆಸುವ ನಿಟ್ಟಿನಲ್ಲಿ ಏಳು ಮಂದಿ ಅನುಭವಿ ಎಂಜಿನಿಯರ್‌ಗಳನ್ನು ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ನೇಮಕ ಮಾಡಲಾಯಿತು. ಕೆರೆಯ ಗಾತ್ರ, ಮಣ್ಣು, ಬೇಕಾಗುವ ಖರ್ಚು, ಅಲ್ಲಿನ ಸವಾಲು... ಹೀಗೆ ಎಲ್ಲವನ್ನು ಮೊದಲು ಅಧ್ಯಯನ ನಡೆಸಿ ನಂತರ ಕೆಲಸ ಆರಂಭಿಸಲಾಯಿತು. ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ₹2 ಲಕ್ಷದಿಂದ ₹22 ಲಕ್ಷದವರೆಗೆ ಹೂಳೆತ್ತುವ ಯಂತ್ರಗಳ ಬಾಡಿಗೆ ಮೊತ್ತವನ್ನು ನೀಡಲಾಯಿತು. ಇದುವರೆಗೆ 800 ಕೆರೆಗಳ ಹೂಳೆತ್ತಲು ₹62 ಕೋಟಿ ಖರ್ಚು ಮಾಡಲಾಗಿದೆ.

ಕೆರೆ ಆಯ್ಕೆ, ಗುದ್ದಲಿ ಪೂಜೆ, ಕೆಲಸ ಆರಂಭ, ಕೆರೆ ಹಸ್ತಾಂತರ.. ಹೀಗೆ ಕೆರೆ ಪುನಶ್ಚೇತನದ ಪ್ರತಿ ಹಂತದಲ್ಲೂ ಊರಿನವರು ನೀಡಿದ ಸಹಕಾರ ದೊಡ್ಡದು. ಗ್ರಾಮಸ್ಥರು ಕೆರೆ ಕೆಲಸ ಮುಗಿಯುವವರೆಗೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

11ನೇ ಪುಟಕ್ಕೆ...

'ನೀರಿನ ಸಮಸ್ಯೆಗೆ ಪರಿಹಾರ'



ಗ್ರಾಮಗಳಲ್ಲಿರುವ ಕೆರೆಗಳ ಹೂಳೆತ್ತಿ ಅವು ಉಪಯೋಗವಾಗುವಂತಾದರೆ ಆ ಊರಿನಲ್ಲಿರುವ ಬಾವಿಗಳ ಜಲಮಟ್ಟ ಸುಧಾರಿಸುತ್ತದೆ. ಈ ಕಾರಣದಿಂದಾಗಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಕೆರೆಗಳ ಅಭಿವೃದ್ಧಿ ಕಡೆಗೆ ಗಮನ ಹರಿಸಿದೆವು. ಜನರ ಪಾಲುದಾರಿಕೆಯಿಲ್ಲದೆ ಯಾವುದೇ ಕೆಲಸ ಮಾಡಿದರೂ ಅದರ ಮೇಲೆ ಹೆಮ್ಮೆ, ಪ್ರೀತಿ ಇರುವುದಿಲ್ಲ. ಆದ್ದರಿಂದ ಕೆರೆಗಳ ಹೂಳೆತ್ತುವ ಕೆಲಸದಲ್ಲಿ ಊರವರ ಪಾಲುದಾರಿಕೆ ಇರಬೇಕೆಂದು ತೀರ್ಮಾನಿಸಿದೆವು. ಊರವರೇ ಸೇರಿ ಕೆರೆಗಳನ್ನು ಅಭಿವೃದ್ಧಿಪಡಿಸಿದರೆ ಮುಂದೆ ಅದನ್ನು ಉಳಿಸಿ, ಬಳಸಿಕೊಂಡು ಹೋಗುತ್ತಾರೆ.

ಡಿ. ವೀರೇಂದ್ರ ಹೆಗ್ಗಡೆ
ಧರ್ಮಸ್ಥಳದ ಧರ್ಮಾಧಿಕಾರಿ


ಆಲಿವ್ ರಿಡ್ಲೆ ತವರು ಅರಿವಿಗೆ ಬಾರದ ಬದಲು

ಸಂತಾನವೃದ್ಧಿಗೆ ವರ್ಷಕ್ಕೊಮ್ಮೆ ಅಥವಾ ಕೆಲವೊಮ್ಮೆ ಎರಡು, ಮೂರು ಬಾರಿ ಕಡಲತೀರಕ್ಕೆ ಬಂದು ಮೊಟ್ಟೆ ಇಡುವ ಆಲಿವ್ ರಿಡ್ಲೆ ಮತ್ತೆ ಸಮುದ್ರ ಸೇರುತ್ತವೆ. ಆ ಮೊಟ್ಟೆಗಳ ಆರೈಕೆಗೀಗ ತಂಡವೊಂದು ಕೆಲಸ ಮಾಡುತ್ತಿದೆ.


ಕಾರವಾರದ ದೇವಬಾಗ ಕಡಲತೀರದಲ್ಲಿ ಕಡಲು ಸೇರುವ ಉತ್ಸುಕತೆಯಿಂದ ಸಾಗುತ್ತಿರುವ ಆಲಿವ್ ರಿಡ್ಲೆ ಮರಿಗಳು
ಚಿತ್ರಗಳು: ಶಾನವಾಜ್ ಕಡಪಾ

ಗಣಪತಿ ಹೆಗಡೆ

ಅದು 2007-08 ಇರಬಹುದು. ಕಾರವಾರ ತಾಲ್ಲೂಕಿನ ದೇವಬಾಗದಲ್ಲಿರುವ ಕಡಲತೀರದಿಂದ ಆಲಿವ್ ರಿಡ್ಲೆ ಕಡಲಾಮೆ ಮರಿಗಳು ಯಾರ ಅಡೆತಡೆ ಇಲ್ಲದೆ ಸಮುದ್ರ ಸೇರಿದ್ದವು. ಅವುಗಳ ಪೈಕಿ ಬದುಕುಳಿದು, ದಷ್ಟಪುಷ್ಟವಾಗಿ ಬೆಳೆದ ಹೆಣ್ಣು ಆಮೆಯೊಂದು 'ಹೆರಿಗೆ'ಗೆಂದು ತೀರಕ್ಕೆ ಬಂದರೆ ಅದರ ತವರೂರು ಸಂಪೂರ್ಣ ಬದಲಾಗಿತ್ತು. ಸ್ವಚ್ಛಂದವಾಗಿದ್ದ ಕಡಲತೀರ ಈಗ ಕೊರೆದು ಹೋಗಿದೆ. ಎಲ್ಲಿ ನೋಡಿದರಲ್ಲಿ ಪ್ಲಾಸ್ಟಿಕ್ ರಾಶಿ, ದೋಣಿಗಳ ಸಾಲು, ಹರಡಿಕೊಂಡ ಬಲೆಗಳು, ಕಡಲತೀರವನ್ನೇ ನುಂಗಿದಂತೆ ಎದ್ದು ನಿಂತ ತಡೆಗೋಡೆಗಳು!


ಕಡಲತೀರದಲ್ಲಿ ಗುಂಡಿ ತೆಗೆದು, ಮೊಟ್ಟೆ ಇಡುತ್ತಿರುವ ಆಲಿವ್ ರಿಡ್ಲೆ ಕಡಲಾಮೆ

ಇಂಥ ಬದಲಾವಣೆಗಳಿಂದ ಗಲಿಬಿಲಿಗೊಂಡ ಆಲಿವ್ ರಿಡ್ಲೆ ಆಮೆಯು ಪ್ರಸವ ವೇದನೆ ತಾಳಲಾರದೆ ಅಕ್ಕಪಕ್ಕದಲ್ಲೆಲ್ಲ ಸುರಕ್ಷಿತ ಜಾಗ ಅರಸುತ್ತ ಹೊರಟಿತು. ಕೊನೆಗೆ ದೋಣಿ ಸಾಲುಗಳ ಮಧ್ಯದಲ್ಲೇ, ಜನರ ಓಡಾಟ ಇಲ್ಲದ ಜಾಗ ಗುರುತಿಸಿ ಮರಳಿನಲ್ಲಿ ಗುಂಡಿ ತೆಗೆದು ಮೊಟ್ಟೆ ಇಟ್ಟು ಮತ್ತೆ ಕಡಲು ಸೇರಿತು. ತಾನಿಟ್ಟ ಮೊಟ್ಟೆಗಳ ಅಡಿಯಲ್ಲಿ ಪ್ಲಾಸ್ಟಿಕ್ ಹಾಳೆ ಚಾಚಿಕೊಂಡಿದ್ದನ್ನು ಅದು ಗಮನಿಸಿಯೇ ಇರಲಿಲ್ಲ.

ಇದು ಆಲಿವ್ ರಿಡ್ಲೆ ಕಡಲಾಮೆಗಳ ಸುರಕ್ಷಿತ 'ಹೆರಿಗೆ ತಾಣ' ಒಂದೂವರೆ ದಶಕದಿಂದೀಚೆಗೆ ಬದಲಾದ ಭೀಕರ ಚಿತ್ರಣದ ಒಂದು ಉದಾಹರಣೆಯಷ್ಟೆ. ಇಂತಹ ಹತ್ತಾರು ಉದಾಹರಣೆಗಳು ಕರಾವಳಿ ತೀರದುದ್ದಕ್ಕೂ ಸಿಗುತ್ತಲೇ ಇರುತ್ತವೆ. ಅಭಿವೃದ್ಧಿಯ ನೆಪದಲ್ಲಿ ಮನುಷ್ಯ ಕಡಲತೀರದ ಚಿತ್ರಣ ಬದಲಿಸಿದ ಪರಿ, ಆಳ ಸಮುದ್ರದಲ್ಲಿ ಜೀವನ ಕಳೆಯುವ ಕಡಲಾಮೆಗಳ ಅರಿವಿಗೆ ಬರುವುದೇ ಇಲ್ಲ.

ಅದರಲ್ಲಿಯೂ ಮೊಟ್ಟೆಯೊಡೆದ ಬಳಿಕ ಒಮ್ಮೆ ನೀರಿಗೆ ಇಳಿದರೆ ಜೀವಮಾನದಲ್ಲೆಂದೂ ಕಡಲತೀರವನ್ನು ಕಣ್ಣೆತ್ತಿಯೂ ನೋಡದ ಗಂಡು ಆಲಿವ್ ರಿಡ್ಲೆಗೆ ಬದಲಾವಣೆ ಆತಂಕ ಮೂಡಿಸದು. ಆದರೆ, ಹೆಣ್ಣು ಆಮೆಯ ಸ್ಥಿತಿಯೇ ಬೇರೆ. ಮೊಟ್ಟೆ ಇಡಲು ಅವು ಅನುಭವಿಸುವ ವೇದನೆ ಅಷ್ಟಿಷ್ಟಲ್ಲ. ಸಂತಾನವೃದ್ಧಿಗೆ ವರ್ಷಕ್ಕೊಮ್ಮೆಯೋ ಅಥವಾ ಕೆಲವೊಮ್ಮೆ ಎರಡು, ಮೂರು ಬಾರಿ ಕಡಲತೀರಕ್ಕೆ ಧಾವಿಸಿ, ರಾಶಿಗಟ್ಟಲೆ ಮೊಟ್ಟೆ ಇಟ್ಟು ಮರಳಿ ಸಮುದ್ರ ಸೇರಿಬಿಡುತ್ತವೆ. ಇಟ್ಟ ಮೊಟ್ಟೆಗಳತ್ತ ಮತ್ತೆಂದೂ ಅವು ಕಣ್ಣುಹಾಯಿಸುವುದಿಲ್ಲ.

ರಾಜ್ಯದಲ್ಲೇ ಮೊದಲು

ಮರಳಿನಲ್ಲಿ ಹುದುಗಿಕೊಂಡಿದ್ದ ಮೊಟ್ಟೆಗಳಿಗೆ ಅವುಗಳ ತಂದೆ-ತಾಯಿ ಆರೈಕೆ ಸಿಗದು. ಆದರೆ, ಈಚಿನ ವರ್ಷಗಳಲ್ಲಿ ಮೊಟ್ಟೆ ಆರೈಕೆಗೆ ಅರಣ್ಯ ಇಲಾಖೆ 'ಕೋಸ್ಟಲ್ ಮರೈನ್ ವಿಭಾಗ' ರಚಿಸಿದೆ. ಕರ್ನಾಟಕದಲ್ಲೇ ಮೊದಲ ಬಾರಿಗೆ ಕಾರವಾರದಲ್ಲಿ ಈ ವಿಭಾಗ ಆರಂಭಗೊಂಡಿದೆ. ನಾಲ್ಕು ವರ್ಷಗಳಿಂದ ಆಲಿವ್ ರಿಡ್ಲೆ ಮೊಟ್ಟೆಗಳಿಗೆ ಪಾಲಕರಂತೆ ಈ ವಿಭಾಗ ಕೆಲಸ ಮಾಡುತ್ತಿದೆ. ಉತ್ತರ ಕನ್ನಡದ ಹೊನ್ನಾವರ ಭಾಗದಲ್ಲಿ ಕಡಲಾಮೆಗಳ ಮೊಟ್ಟೆಗಳನ್ನು ಸ್ಥಳೀಯರೇ ಹಲವು ವರ್ಷದಿಂದ ಜತನದಿಂದ ಕಾಪಿಡುವ, ಮರಿಗಳನ್ನು ಸಮುದ್ರಕ್ಕೆ ಬಿಡುವ ಕೆಲಸ ಮಾಡುತ್ತಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಟೊಂಕ, ಪಾವಿನಕುರ್ವಾ, ಮಂಕಿ, ಕುಮಟಾ ತಾಲ್ಲೂಕಿನ ಸಸಿಹಿತ್ತಲ, ಅಂಕೋಲಾ ತಾಲ್ಲೂಕಿನ ಮಂಜಗುಣಿ, ಭಾವಿಕೇರಿ, ಕೇಣಿ, ಕಾರವಾರ ತಾಲ್ಲೂಕಿನ ಮುದಗಾ, ದೇವಬಾಗ, ಬಾವಳ, ಮಾಜಾಳಿ.. ಹೀಗೆ ಹಲವು ಕಡೆಗಳಲ್ಲಿ ಆಲಿವ್ ರಿಡ್ಲೆ ಕಡಲಾಮೆಗಳ ಹೆರಿಗೆ ತಾಣವಿದೆ. ಕಾರವಾರದಲ್ಲಿರುವ ನೌಕಾನೆಲೆ ವ್ಯಾಪ್ತಿಯ ಕೆಲವು ಕಡೆಗಳಲ್ಲಿಯೂ ಆಲಿವ್ ರಿಡ್ಲೆ ಮೊಟ್ಟೆ ಇಡುತ್ತಿವೆ.

'ಕಡಲಾಮೆಗಳ ಪೈಕಿ ಆಲಿವ್ ರಿಡ್ಲೆ ಪ್ರಭೇದದ ಆಮೆಗಳು ಮಾತ್ರ ಕಡಲತೀರಕ್ಕೆ ಬಂದು ಸುರಕ್ಷಿತ ಜಾಗ ಹುಡುಕಿ ಮೊಟ್ಟೆ ಇಡುತ್ತವೆ. ಸಮುದ್ರದಲ್ಲಿ ಸಾವಿರಾರು ಕಿ.ಮೀ ದೂರ ಕ್ರಮಿಸುವ ಅವು ಪ್ರೌಢಾವಸ್ಥೆಗೆ ತಲುಪಿದ ಬಳಿಕ ಮರಿಯಾಗಿ ಹೊರಬಿದ್ದ ಸ್ಥಳಕ್ಕೇ ಬಂದು ಮೊಟ್ಟೆ ಇಡುವುದು ವಿಶೇಷ! ಒಂದು ಕಾಲದಲ್ಲಿ ಹೊನ್ನಾವರದ ಟೊಂಕ ಪ್ರದೇಶದಿಂದ ಹೊರಬಿದ್ದ ಮರಿಗಳು ಈಗ ಅಲ್ಲಿಗೆ ಬಂದು ಮೊಟ್ಟೆ ಇಡಲು ಜಾಗ ಹುಡುಕುತ್ತಿವೆ. ಬಂದರು ಯೋಜನೆಗೆ ನಿರ್ಮಿಸಿದ ರಸ್ತೆ, ಇನ್ನಿತರ ಅಭಿವೃದ್ಧಿ ಚಟುವಟಿಕೆಯಿಂದ ಅವುಗಳು ಹೆರಿಗೆ ತಾಣವನ್ನೇ ಕಳೆದುಕೊಂಡಿವೆ' ಎನ್ನುತ್ತಾರೆ ಹೊನ್ನಾವರ ಫೌಂಡೇಶನ್ ಸದಸ್ಯ ಎನ್.ಎಂ.ಗುರುಪ್ರಸಾದ್.

11ನೇ ಪುಟಕ್ಕೆ...



ನಾರಿಶಕ್ತಿ... ನಾವೇ ನೋಡಿ ಈ ರೆಸಾರ್ಟ್ ನಡಿಸ್ತಿರೋರು...

ಮಹಿಳೆಯರೇ ನಡೆಸುವ ರೆಸಾರ್ಟ್!

ಸರೋಜಾ ಪ್ರಕಾಶ

ಸಂಜೆ ಏಳು ಗಂಟೆ. ನಮ್ಮ ಟ್ಯಾಕ್ಸಿ ಹೋಗಿ ನಿಂತಿದ್ದೇ ತಡ, ಗೇಟು ತೆಗೆದಿದ್ದು ಸಮವಸ್ತ್ರ ಧರಿಸಿದ ಮಹಿಳಾ ಸೆಕ್ಯುರಿಟಿ ಗಾರ್ಡ್. ಇಬ್ಬರು ಹದಿಹರೆಯದ ಹುಡುಗಿಯರು ಬಂದು ಇಣುಕಿದರು. ರಿಸೆಪ್ಶನ್ ಕೌಂಟರ್‌ನಲ್ಲಿಯೂ ಇಬ್ಬರು ನಗುಮುಖದ ಹೆಣ್ಣುಮಕ್ಕಳು. ನೆನಪಾಯಿತು, ರೂಮ್ ಬುಕ್ ಮಾಡುವಾಗ ಮಾತನಾಡಿದ್ದೂ ಇವರೇ. ರೂಮಿನ ವಿವರಗಳನ್ನು ಪಡೆದು ಹೊರಟೆವು.



ಮೊದಲು ಎದುರಾದ ಇಬ್ಬರು ಹುಡುಗಿಯರು ಕಾರಿನ ಡಿಕ್ಕಿಯಿಂದ ಸೂಟ್‌ಕೇಸ್, ಬ್ಯಾಗ್‌ಗಳನ್ನು ಎತ್ತಿ 'ಆಯಿಯೇ' ಎನ್ನುತ್ತ ಮುಂದೆ ಸಾಗಿದರು. ಎರಡನೇ ಮಹಡಿಯಲ್ಲಿ ನಮ್ಮ ರೂಮ್ ಇತ್ತು. 'ಲಿಫ್ಟ್ ಇಲ್ಲವೇ?..' ಹೆಜ್ಜೆ ಕಿತ್ತಿಡಲು ಪ್ರಯಾಸಪಡುತ್ತಿದ್ದ ಮೇರಿ ಕೇಳಿದರು. 'ಇಲ್ಲ..' ಎನ್ನುತ್ತ ಅವರಿಬ್ಬರೂ ಭಾರ ಹೊತ್ತು ಸರಸರ ಮೆಟ್ಟಿಲು ಏರಿದರು. ಲಗೇಜ್ ಇಳಿಸಿದವರೇ ರೂಮ್ ಕುರಿತು ತಿಳಿಸಿ ಹೊರಟರು. ಟಿವಿ, ಪುಟ್ಟ ಫ್ರಿಜ್, ಎತ್ತರದ ನಿಲುವುಗನ್ನಡಿ, ಕಪಾಟು, ಡಬಲ್ ಬೆಡ್ ಒಳಗೊಂಡ ಶಿಸ್ತಾದ ರೂಮ್. ಟೇಬಲ್ ಮೇಲೆ ಕಣ್ಣಿಗೆ ರಾಚುವಂತಹ 'ನೋ ರೂಮ್ ಸರ್ವಿಸ್' ಎಂಬ ಫಲಕವಿತ್ತು.

ಬಾತ್‌ರೂಮ್‌ನ ಒಳಹೊಕ್ಕ ಮೇರಿ ಅದೇ ವೇಗದಲ್ಲಿ ಹೊರಬಂದರು. 'ಇಲ್ಲೆಂತದೂ ಸರಿ ಇಲ್ಲ, ಇಲ್ನೋಡಿ..' ಎನ್ನುತ್ತ ನಲ್ಲಿಯ ಹಿಡಿಕೆ ಕೈಗಿತ್ತರು. ದೂರು ಸಲ್ಲಿಸಿದ ನಂತರ ರಾತ್ರಿ ಹತ್ತು ಗಂಟೆಗೆ ಒಬ್ಬಾಕೆ ಸ್ಪಾನರ್ ಹಿಡಿದು ಬಂದಳು. ಆದರೆ ಎಷ್ಟು ಪ್ರಯತ್ನ ಪಟ್ಟರೂ ಬಿರಡೆ ತಿರುಗಿಸುವುದಕ್ಕಾಗಲಿಲ್ಲ. 'ಸಾರಿ ಮೇಡಂ, ನಾಳೆ ಎಕ್ಸ್‌ಪರ್ಟ್ ಕರೆಸಿ ರಿಪೇರಿ ಮಾಡಿಸ್ತೀವಿ...' ಎಂದು ಹೊರಟಳು.

ಊಟಕ್ಕೆ ಕೆಳಗೆ ರೆಸ್ಟೋರೆಂಟ್ ತಲುಪಿದೆವು. ಉದ್ದ ಮೆನು ಹಿಡಿದಾಕೆ ಕಂಚಲ್. ಬಗ್ಗಿ ಒಳಗೆ ಅಡುಗೆಮನೆಯತ್ತ ಇಣುಕಿದರೆ ಮೂರ್‍ನಾಲ್ಕು ಹೆಣ್ಣುಮಕ್ಕಳು ಅಡುಗೆ ಮಾಡುತ್ತಿದ್ದರು. ಊಟ ಮುಗಿದ ನಂತರ ಟೇಬಲ್ ಒರೆಸಲು ಬಂದಿದ್ದೂ ಹೆಣ್ಣುಮಗಳೇ.

ಅದು ಮಹಾರಾಷ್ಟ್ರ ಪ್ರವಾಸೋದ್ಯಮ ನಿಗಮದ ಮಹಿಳೆಯರೇ ನಡೆಸುವ ಔರಂಗಾಬಾದ್‌ನ 'ಔರಂಗಾಬಾದ್ ರೆಸಾರ್ಟ್'. ಇದು ರಾಜ್ಯದ 'ಆಯಿ' ಯೋಜನೆಯ ಭಾಗ. ಪ್ರವಾಸೀ ವಲಯದಲ್ಲೂ ಲಿಂಗ ಸಮಾನತೆ ತೋರಹೊರಟಿರುವ ಸರ್ಕಾರದ ಹೊಸ ಹೆಜ್ಜೆ. ಐದಾರು ಕಟ್ಟಡಗಳ ಆ ಸಮುಚ್ಚಯದಲ್ಲಿ ಸ್ವಾಗತ ಕೌಂಟರ್‌ನಿಂದ ಹಿಡಿದು ರಾತ್ರಿಯ ಸೆಕ್ಯುರಿಟಿಯವರೆಗೆ ಎಲ್ಲವೂ ಮಹಿಳೆಯರ ಸುಪರ್ದಿಯಲ್ಲಿ ನಡೆಯುತ್ತವೆ. ಮ್ಯಾನೇಜರ್, ಹೌಸ್ ಕೀಪರ್ಸ್, ರಿಸೆಪ್ಶನಿಸ್ಟ್, ಅಡುಗೆ ಸಿಬ್ಬಂದಿ, ಬಡಿಸುವವರು, ಉದ್ಯಾನದ ಮೇಲ್ವಿಚಾರಕರು ಹಾಗೂ ಸೆಕ್ಯುರಿಟಿ ಗಾರ್ಡ್ಸ್ ಎಲ್ಲರೂ ಸೇರಿ ಸುಮಾರು ಇಪ್ಪತ್ತು ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಪ್ರವಾಸೋದ್ಯಮ ಕೋರ್ಸ್ ಮಾಡಿ ಬಂದವರಿಗೆ ಆದ್ಯತೆ.

ಎರಡು ದಿನಗಳ ನಂತರ ಔರಂಗಾಬಾದ್‌ನ ಸುತ್ತಮುತ್ತಲ ಅಜಂತಾ, ಎಲ್ಲೋರಾ, ಲೋಣಾರ್ ಸರೋವರಗಳ ಪ್ರವಾಸ ಮುಗಿಸಿ ಹೊರಟುನಿಂತಿದ್ದೆವು. ಪ್ರತಿದಿನ ಸೊಗಸಾದ ಬೆಳಗಿನ ತಿಂಡಿ ಒದಗಿಸಿದ ಅಡುಗೆಮನೆಯ ಸಿಬ್ಬಂದಿ ಮುಖ ನೋಡಿ ನಗುವಷ್ಟು ಪರಿಚಯಸ್ಥರಾಗಿದ್ದರು. ಶೋಭಾಳದ್ದು ಮುಂಜಾನೆ ಆರರಿಂದ ಮಧ್ಯಾಹ್ನ ಮೂರರವರೆಗೆ ಮತ್ತೂ ಮೂವರು ಸಹೋದ್ಯೋಗಿಗಳೊಂದಿಗೆ ಅಡುಗೆಯ ಜವಾಬ್ದಾರಿ. ಎಂ.ಎ ಓದುತ್ತಿರುವ ಕಂಚಲ್ ಬೆಳಿಗ್ಗೆ ಮೂರು ತಾಸು ಇಲ್ಲಿ ಕೆಲಸ ಮಾಡುತ್ತಾಳೆ. 'ಪುರುಷಯಾತ್ರಿಗಳಿಂದ ಏನೂ ತೊಂದರೆಯಾಗಿಲ್ಲವೆ?' ಮೆಲುಧ್ವನಿಯಲ್ಲಿ ಕಂಚಲ್‌ಳನ್ನು ಕೇಳಿದೆ. 'ಐಸೀ ಬಾತ್ ನಹೀ...' ಎನ್ನುತ್ತ ಆಕೆಯೂ ಟೇಬಲ್ ಒರೆಸುತ್ತಲೇ ಪಿಸುಮಾತಿನಲ್ಲಿ ಗುಟ್ಟು ಬಿಚ್ಚಿಟ್ಟಳು. ಒಂದೆರಡು ಬಾರಿ ಗಂಡಸರು ಅನುಚಿತವಾಗಿ ನಡೆದುಕೊಂಡಿದ್ದರಿಂದಲೇ ರೂಮ್ ಸರ್ವಿಸ್ ಸ್ಥಗಿತಗೊಳಿಸಲಾಗಿದೆ. ಈಗ ಕೂಲಂಕಶವಾಗಿ ವಿಚಾರಣೆ ಮಾಡಿಯೇ, ಕುಟುಂಬದವರ ಜೊತೆಗೆ ಬರುವವರಿಗಷ್ಟೇ ಒಳಗೆ ಪ್ರವೇಶ ನೀಡಲಾಗುತ್ತದೆ. ಮುನ್ನೆಚ್ಚರಿಕೆಯಾಗಿ ರಾತ್ರಿ ಮೂರನೇ ಪಾಳಿಗೆಂದು ಪುರುಷ ಸಿಬ್ಬಂದಿಯನ್ನು ನೇಮಿಸಲಾಗಿದೆ.

ಬದಲಾವಣೆಯ ಗಾಳಿ ಬೀಸಿದೆಯಾದರೂ ಅದು ಪಸರಿಸಿ ಸ್ಥಿರವಾಗಲು ಇನ್ನೂ ಸಮಯ ಬೇಕಿದೆ.

ಮಠಗಳ ಕರ್ಮಠತನ ಸಾರುವ ಸತ್ತವರ ನೆರಳು





ಡಿ.ಎಸ್.ಚೌಗಲೆ

ಸ್ಥಾವರಗೊಂಡ ಬೃಂದಾವನ ಸುತ್ತ ಒಂದು ಮಠದ ವ್ಯವಸ್ಥೆಯನ್ನು ಮುಖ್ಯತಃ ಮುನ್ನಡೆಸುವ ಎಳೆಯೊಂದನ್ನು ನಾಟಕ ತನ್ನೊಡಲೊಳಗೆ ಇಟ್ಟುಕೊಂಡಿದೆ. ಅದನ್ನು ಆಳವಾಗಿ ಜಿಜ್ಞಾಸೆಗೆ ಹಚ್ಚುವ ಜಡಭರತರ 'ಸತ್ತವರ ನೆರಳು' ನಾಟಕವು ಧರ್ಮ ಮತ್ತು ಅದಕ್ಕೆ ಜೋತು ಬಿದ್ದ ಮನುಷ್ಯ ಸಂಬಂಧವನ್ನು ಮರು ಆಲೋಚನೆಗೆ ತೊಡಗಿಸುವಂತೆ ಪ್ರೇರೇಪಿಸುತ್ತದೆ. ಮಠದ ದಿವಾನ ಕೃಷ್ಣಾಚಾರ್ಯರು ವಿದ್ಯಾನಿಧಿ ತೀರ್ಥರ ತರುವಾಯ ತನ್ನ ಹಿಡಿತದಲ್ಲಿಯೇ ಮಠವು ಉಳಿಯಬೇಕೆಂದು ಬಯಸಿದವರು. ಹಾಗೆ ಅದನ್ನು ಇಟ್ಟುಕೊಳ್ಳಲು ಹವಣಿಸುವರು. ದಿವಾನರು ಆ ದಿಸೆಯಲ್ಲಿ ಇಹದ ಸಂಸಾರವಂದಿತನಾದ ಒಬ್ಬನನ್ನು ಶೋಧಿಸಿ ತಂದು ಬಲವಂತ(?)ದಿಂದ ಮಠದ ಉತ್ತರಾಧಿಕಾರಿಯಾಗಿಸುವಲ್ಲಿ ಯಶಸ್ಸು ಕಾಣುವರು. ನಾಟಕದುದ್ದಕ್ಕೂ ಇಹ ಪರದ ಸಂಘರ್ಷಗೊಳ್ಳುವ ಇವೆರಡು ತುದಿಗಳ ಹೊಯ್ದಾಟವು ವರ್ತಮಾನದಲ್ಲಿ ಧರ್ಮಕಾರಣವು ಸಮಾಜಕಾರಣ ಮತ್ತು ರಾಜಕಾರಣದತ್ತ ಹೊರಳುದಾರಿಗೆ ತಿರುಗಿದುದನ್ನೂ ನಾಟಕ ಮತ್ತೆ ಮತ್ತೆ ಹೇಳುತ್ತದೆ. ಮಠಗಳು ಮತ್ತು ಅದರ ಪೀಠಗಳ ಸ್ವಾಮಿಗಳ ಬಹು ಚರ್ಚೆಗಳ ನುಡಿಮುತ್ತುಗಳನ್ನು ಜ್ಞಾಪಿಸುತ್ತದೆ. ಆ ಮಟ್ಟದಲ್ಲಿ 'ಸತ್ತವರ ನೆರಳು' ರಂಗ ಪಠ್ಯವು ಸಮಕಾಲೀನಗೊಂಡಿದೆ. ಹಾಗೆಯೇ ಈ ಹಿನ್ನೆಲೆಯಲ್ಲಿ ರಂಗ ಪ್ರಯೋಗವು ಯಶಸ್ಸನ್ನು ಕಂಡಿದೆ.

ಕಠೋರವಾದ ಪುರೋಹಿತರ ಬ್ರಾಹ್ಮಣ್ಯದ ವಾದಗಳನ್ನು ಯಾವುದೇ ಮುಲಾಜಿಲ್ಲದೇ ನಾಟಕಕಾರರು ಎತ್ತಿದ್ದಾರೆ. ಜಿ.ಬಿ.ಜೋಶಿಯವರು ಉತ್ತರ ಕರ್ನಾಟಕದ ದೇಸಿ ಕನ್ನಡದ ತಮ್ಮ ತೀಕ್ಷ್ಣನುಡಿಗಟ್ಟುಗಳ ಮೂಲಕ ಸಂವಾದಗಳಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹೆಣೆದು ಕೊಟ್ಟಿದ್ದಾರೆ. ಅದನ್ನು ಹುಲುಗಪ್ಪ ಕಟ್ಟೀಮನಿ ವಿನ್ಯಾಸಗೊಳಿಸಿ ನಿರ್ದೇಶನ ಮೂಲಕ ಕಟ್ಟಿಕೊಟ್ಟಿರುವರು.

ನಾಲ್ಕು ಮಠದ ಕಂಬಗಳು. ರಂಗದ ನಡುವೆ ಸಾಂಕೇತಿಕ ರೂಪದ ಬೃಂದಾವನ. ಅದರೆದುರು ಎರಡು ದೀಪ ಹಚ್ಚಿದ ಸಮಯ. ಅದರ ಸುತ್ತಲೂ ನಾಟಕವು ಬಿಚ್ಚಿಕೊಳ್ಳುತ್ತ ಸಾಗುತ್ತದೆ. ಹೆಣ್ಣು ಗಂಡು ಪಾತ್ರಗಳ ಕೋರಸ್‌ನ ಮೂವ್‌ಮೆಂಟಿನಲ್ಲಿ ಹಾಡೊಂದಿಗೆ ಬಿಗುವು ಪಡೆದು ನಾಟಕ ಆರಂಭಗೊಳ್ಳುತ್ತದೆ. ಅದು ಪ್ರಯೋಗದುದ್ದಕ್ಕೂ ಎದ್ದು ಕಾಣುವ ಅಂಶ. ಇಲ್ಲಿ ಗೃಹಿಣಿಯರ ಪಾತ್ರಗಳಲ್ಲಿ ಪ್ರಿಯಾಂಕಾ ಸಿದ್ಧಾರ್ಥ, ಅಕ್ಷತಾ, ಅಂಬಿಕಾ ಮತ್ತು ಕ್ಷಮಾ ಹೊಸಕೇರಿ ಅವುಗಳ ಸ್ವಭಾವಗಳನ್ವಯ ಅಭಿನಯ ನೀಡಿದರು. ಆದರೆ ಅದು ಎದ್ದು ಕಾಣುವ ಅಂಶವಾಗಿಲ್ಲ. ಇಲ್ಲಿ ಭಿನ್ನ ಸ್ವಭಾವಗಳ ಅಭಿವ್ಯಕ್ತಿಗೆ ಕೊಂಚ ಅವಕಾಶವಿದೆ. ಅದನ್ನು ಬಳಸುವುದನ್ನು ಈ ಮಹಿಳಾ ಪಾತ್ರಧಾರಿಗಳು ಮೈಗೂಡಿಸಿಕೊಳ್ಳಬೇಕು.

ಜರ್ಮನ್ ತರುಣಿ ಪಾತ್ರದ ಪ್ರಿಯಾಂಕಾ ಸಿದ್ಧಾರ್ಥ ಸಂಸ್ಕೃತ ಸಂಭಾಷಣೆಯನ್ನು ನುಡಿಸುವರು. ಅದು ಅಸ್ಖಲಿತವಾಗಿ ಬಂದಿದೆ. ಚಂದವೂ ಉಂಟು. ಆದರೆ ಅದಷ್ಟೇ ಸಾಲದು. ಅದಕ್ಕೊಂದು ಅದರದ್ದೇ ಆದ ವಿಶಿಷ್ಟ ಪಾತ್ರತ್ವವನ್ನು ನೀಡಿದರೆ ಇನ್ನಷ್ಟು ಪಾತ್ರಕ್ಕೆ ಸೊಬಗು ಹೆಚ್ಚುವುದು. ದೊರೆತ ಪುಟ್ಟ ಪ್ರಸಂಗದಲ್ಲೂ ಹಿರಿಯ ಕಲಾವಿದ ಪ್ರಮೋದ ಅಂಬೇಕರ ವಿದ್ಯಾನಿಧಿ ತೀರ್ಥರ ತಳಮಳತನದ ಪಾತ್ರವನ್ನು ಅಚ್ಚುಕಟ್ಟಾಗಿ ನಿಭಾಯಿಸಿರುವರು. ಅವರು ಬಯ್ಯುವ ಟಿಪಿಕಲ್ 'ಲೌಡೀ ಮಗನ... ಬೋಳಿಮಗನ...' ಬೈಗುಳವು ಹೆಚ್ಚಾಯಿತೇನೋ? ಮತ್ತೊಬ್ಬ ಹಿರಿಯ ಕಲಾವಿದ ಗೋಪಾಲ ಉಣಕಲ್ಲ ದಿವಾನ ಕೃಷ್ಣಾಚಾರ್ಯರ ಕರ್ಮಠತನಗಳನ್ನು ಅಗತ್ಯಕ್ಕೆ ತಕ್ಕುದಾಗಿ ಜೀವಿಸಿರುವರು. ಮೈಯಲ್ಲಿ ತಣ್ಣಗೆ ವಿಷವು ಹರಡಿದಂತೆ ದಿವಾನ ವರ್ತನೆಯು ಮಠದ ಬಗೆಗಿನ ಅವರ ವ್ಯಾಮೋಹವನ್ನು ಹೇಳುತ್ತಿತ್ತು. ದಿವಾನರ ಒತ್ತಡಕ್ಕೆ ಮಣಿದು ಮದುವೆಯಾದ ಬ್ರಾಹ್ಮಣ ಯುವಕನು ಒಲ್ಲದ ಮನಸ್ಸಿನಿಂದ ಸಂಸಾರ ತ್ಯಾಗ ಮಾಡುವನು. ದಿವಾನರ ಕೈಗೊಂಬೆಯಾಗಿ ಮಠದ ಉತ್ತರಾಧಿಪತಿಯಾಗಿ ನೇಮಕಗೊಳ್ಳುವನು. ಆತ ಸನ್ಯಾಸತ್ವವನ್ನು ತ್ಯಜಿಸಿ ಮರಳಿ ಸಂಸಾರಕ್ಕೆ ಸಾಗಲು ಹವಣಿಸಿದರೂ ದಿವಾನರ ಕಪಿಮುಷ್ಟಿಯಿಂದ ತಪ್ಪಿಸಿಕೊಳ್ಳಲಾಗದೇ ಚಡಪಡಿಸುವನು. ಆ ನೇಮಕವೂ ಸಹ ಒಂದು ದಿವಾನರ ತಂತ್ರವೇ ಸರಿ. 'ಮೋಹ ಈ ದೇಹದೊಟ್ಟಿಗೇ ಬಂದದ... ಈ ಚರ್ಮ ಸುಲಿದರ ಸಾವಿರ ನಾಯಿಗಳು ಹೊರಬಂದು ಬೊಗಳತಾವ... ಅದಕ್ಕ ಅವನ್ನ ಹೊರಗೋಗಿ ಬಿಟ್ಟು ಬರತೀನಿ...' ಎಂಬ ಆತನ ಆಕ್ರಂದನ ಯಾರಿಗೂ ಕೇಳಿಸುವುದೇ ಇಲ್ಲ.

ನಾಟಕದ ಮಧ್ಯಂತರದಲ್ಲಿ ಅಳಪುಡಿ ಶೀನನಾಗಿ ಹುಲುಗಪ್ಪ ಕಟ್ಟೀಮನಿ ಪ್ರವೇಶವು ರಂಗಮಂಚದಲ್ಲಿ ಮಿಂಚು ಝಳಪಿಸಿದಂತೆ ಸಂಚಲನ ಉಂಟು ಮಾಡುತ್ತದೆ. ಅವರ 'ನೀ ಸುಳ್ಳು, ನಾ ಸುಳ್ಳು, ಈ ಮಠ ಸುಳ್ಳು, ಈ ವೃಂದಾವನ ಸುಳ್ಳು, ವಾದ ಸುಳ್ಳು, ವಾಕ್ಯಾರ್ಥ ಸುಳ್ಳು, ಎಲ್ಲಾ ಸುಳ್ಳು... ಯುಗ ಯುಗಗಳಿಂದ ಬ್ರಾಹ್ಮಣ ಆಸೆ ಬುರುಕತನದಿಂದ ಸಂಗ್ರಹಿಸಿಟ್ಟ ತಪಶ್ಶಕ್ತಿಯನ್ನ ಬಿತ್ತಿ ಬೆಳೆಯೋದಾಗಲಿಲ್ಲ... ನೂರು ಮಠ ಕಟ್ಟಿ , ಸಾವಿರ ವೃಂದಾವನ ಕಟ್ಟಿ ಉರಿಯನ್ನ ದಮನ ಮಾಡೋದಾಗಲಿಲ್ಲ. ನಾರಾಯಣ ನಿನ್ನ ಅಂಗೈ ಏನು ತಡದೀತೋ ಈ ಉರಿಗೇ..' ಈ ವಿಭಿನ್ನ ಶೈಲಿಯ ಮಾತುಗಳ ಏರಿಳಿತದಲ್ಲಿ, ಆ ಶೀನನ ನಡೆದಾಟವು ಹುರುಪಿಂದ ಕೂಡಿ ಪ್ರೇಕ್ಷಕನನ್ನು ಬಿಗಿದು ಹಿಡಿದಿತ್ತು.

ಹಿರೇ ಆಚಾರ್ಯರಾಗಿ ವಿಜಯೇಂದ್ರ ಅರ್ಚಕ, ಗುಣನಿಧಿ ತೀರ್ಥ ಮತ್ತು ಶ್ರೀಪಾದರಾಗಿ ರಾಜು, ನಾರಾಯಣರಾಗಿ ಹರೀಶ ದೊಡಮನಿ, ಅಡವಿ ಆಗಿ ಪ್ರಸಾದ ಕಂಬಳಿ, ಬಂಡಿನರಸಿಂಹನಾಗಿ ಸಂತುಕೊಪ್ಪಳ, ಕೀರ್ತನಕಾರನಾಗಿ ಆನಂದ ಕುಲಕರ್ಣಿ, ನಿರೂಪಕರಾಗಿ ಹರೀಶ ಜಿಂಕೆ, ಭಾಗ್ಯಪಾಲ ಅಭಿನಯಿಸಿರುವರು. ರಾಘವ ಕಮ್ಮಾರ ಹಾಡುಗಾರಿಕೆ ಮತ್ತು ಸಂಗೀತ ನಾಟಕಕ್ಕೆ ಕಳೆತಂದಿದೆ.

ಧಾರವಾಡ ರಂಗಾಯಣದ ತಾತ್ಕಾಲಿಕ ಕಲಾವಿದರು ಅಭಿನಯಿಸಿದ ಈ ನಾಟಕ ಸೃಜನಾ ರಂಗಮಂದಿರದಲ್ಲಿ ಈಚೆಗೆ ಪ್ರಯೋಗ ಕಂಡಿತು.



ಬಸವನ ಬಾಗೇವಾಡಿಯ ಭೈರವಾಡಗಿ ಕೆರೆಯಿಂದ ನೀರು ತರುತ್ತಿರುವ ಮಹಿಳೆಯರು

ಕೆರೆಗಳಿಗೆ ಮರುಜೀವ ಜನರಿಗೆ ಜಲಜೀವ

10ನೇ ಪುಟದಿಂದ...

ಹೂಳು ಸಾಗಿಸಲು ಟ್ರ್ಯಾಕ್ಟರ್, ಟಿಪ್ಪರ್‌ಗಳನ್ನು ಉಚಿತವಾಗಿ ನೀಡಿದ್ದಾರೆ.

ಸಾಮಾನ್ಯವಾಗಿ ಒಂದು ಕೆರೆ ಹಿಂದಿನ ಗಾತ್ರ ತಲುಪಬೇಕಾದರೆ ಒಂದು ವರ್ಷವಾದರೂ ಬೇಕಾಗುತ್ತದೆ. ಆದರೆ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯನಿರ್ವಾಹಕ ನಿರ್ದೇಶಕ ಅನಿಲ್ ಕುಮಾರ್ ಎಸ್.ಎಸ್. ಅವರ ಮಾರ್ಗದರ್ಶನದಂತೆ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯಕರ್ತರು ಕೆರೆ ಕೆಲಸದ ಸಂಪೂರ್ಣ ಮೇಲುಸ್ತುವಾರಿಯನ್ನು ವಹಿಸಿಕೊಂಡ ಕಾರಣ ಒಂದರಿಂದ ಎರಡು ತಿಂಗಳಲ್ಲಿ ಪೂರ್ಣಗೊಂಡಿದೆ. ಧರ್ಮಸ್ಥಳದವರು ಕೆರೆಯ ಹೂಳೆತ್ತುತ್ತಿದ್ದಾರೆ ಎಂದಾಗ, ಹೆಚ್ಚಿನವರು ಒತ್ತುವರಿ ಮಾಡಿಕೊಂಡಿದ್ದ ಜಮೀನನ್ನು ಬಿಟ್ಟುಕೊಟ್ಟಿದ್ದಾರೆ. ಇನ್ನು ಕೆಲವು ಕಡೆಗಳಲ್ಲಿ ಕೆರೆ ಅಭಿವೃದ್ಧಿ ಸಮಿತಿಯವರು ಮನವೊಲಿಸಿ ಒತ್ತುವರಿಯನ್ನು ತೆರವುಗೊಳಿಸಿದ್ದಾರೆ.

ಸವಾಲುಗಳು ಹಲವು

ಹೆಚ್ಚಿನ ಕೆರೆಗಳ ಹೂಳೆತ್ತುತ್ತಿದ್ದಂತೆ ಜಲ ಉಕ್ಕಿದೆ. ಇನ್ನು ಕೆಸರುಯುಕ್ತ ಹೂಳಿನಿಂದ ತುಂಬಿದ್ದ ಕೆರೆಗಳಲ್ಲಿ ಹಿಟಾಚಿ ಹೂತು ಹೋದದ್ದು, ಪಾಯಸದಂತಹ ಹೂಳನ್ನು ಸಾಗಿಸಲು ಪ್ರಯಾಸಪಟ್ಟದ್ದು.. ಸವಾಲುಗಳ ಪಟ್ಟಿಯೂ ಬಲುದೊಡ್ಡದಿದೆ. ಹೂಳಿಗಾಗಿ ಕಿಲೋಮೀಟರ್‌ವರೆಗೆ ಟ್ರ್ಯಾಕ್ಟರ್‌ಗಳು ಸಾಲಾಗಿ ನಿಂತ ದೃಶ್ಯ ಸಾಮಾನ್ಯವಾಗಿತ್ತು. ಕೆರೆಯಲ್ಲಿ ಪಾಚಿಯಂತಹ ಕಳೆಗಳಿದ್ದು, ಕೆಸರಿನಿಂದ ಕೂಡಿದ ಹೂಳಿದ್ದರೆ ಅವುಗಳನ್ನು ತೆಗೆಯುವುದೇ ದೊಡ್ಡ ಸವಾಲಿನ ಕೆಲಸ ಎನ್ನುತ್ತಾರೆ ಕೆರೆ ಅಭಿವೃದ್ಧಿ ಸಮಿತಿಯ ಸದಸ್ಯರು.

ಒಂದಷ್ಟು ಕೆರೆಗಳು ಹೂಳೆತ್ತುತ್ತಿದ್ದಂತೆ ಭರ್ತಿಯಾದರೆ, ಇತರ ಕೆರೆಗಳು ಮಳೆಗಾಲದಲ್ಲಿ ಭರ್ತಿಗೊಂಡಿವೆ. ಸಾಮಾನ್ಯವಾಗಿ ಕೆರೆ ಒಮ್ಮೆ ಭರ್ತಿಯಾದರೆ ಮತ್ತೆ ಅದು ಬರಿದಾಗಲಾರದು.

ಕೆರೆ ಸುಂದರವಾಗಿ ಕಾಣುವಂತೆ ಹೂಳೆತ್ತಲಾಗಿದೆ. ಸಾಮಾನ್ಯವಾಗಿ ಮೂರರಿಂದ ಐದು ಅಡಿ ಆಳವಾಗಿ ಹೂಳೆತ್ತಲಾಗಿದ್ದು, ಕೆರೆ ಸುತ್ತ ಹೂಳು ಹಾಕಿ ರಸ್ತೆ ನಿರ್ಮಿಸಲಾಗಿದೆ. ಕೆರೆ ಏರಿ ರಿಪೇರಿ, ರಾಜಕಾಲುವೆ ನಿರ್ಮಾಣ ಮುಂತಾದ ಕೆಲಸಗಳನ್ನು ಮಾಡಲಾಗಿದೆ. ಕೆರೆ ದಡದಲ್ಲಿ ಗಿಡಗಳನ್ನು ಬೆಳೆಸಲಾಗಿದೆ. ಜಾನುವಾರುಗಳು ಕೆರೆಗೆ ಇಳಿಯದಂತೆ ಸುತ್ತ ಬೇಲಿ ನಿರ್ಮಿಸಲಾಗಿದೆ. ಕಸಕಡ್ಡಿ ಬಿಸಾಡಲು, ಕೆರೆಗೆ ಪಂಪ್ ಅಳವಡಿಸಲು, ಬಟ್ಟೆ ಒಗೆಯಲು ಅವಕಾಶವಿಲ್ಲ. ಹೆಚ್ಚಿನ ಕಡೆಗಳಲ್ಲಿ ಜಾನುವಾರುಗಳಿಗೆ ನೀರು ಕುಡಿಯಲು ಅನುಕೂಲವಾಗುವಂತೆ ನೀರಿನ ತೊಟ್ಟಿಯನ್ನು ಕಟ್ಟಲಾಗಿದೆ. ಕೆಲವೊಂದೆಡೆ ಕೆರೆಗೆ ಕಾವಲುಗಾರರನ್ನು ನೇಮಿಸಲಾಗಿದೆ. ಇದೀಗ ಹೆಚ್ಚಿನ ಕೆರೆಗಳು ಪ್ರವಾಸಿಗರನ್ನು ಕೈಬೀಸಿ ಕರೆಯುವಲ್ಲಿ ಯಶಸ್ವಿಯಾಗಿವೆ.

ಜಲ ಜಾಗೃತಿಗೆ ಮುನ್ನುಡಿ

ಕೆರೆಗಳ ಹೂಳೆತ್ತಿದ ಪರಿಣಾಮವಾಗಿ ರಾಜ್ಯದಲ್ಲಿ ಸುಮಾರು 2,836 ಕೋಟಿ ಲೀಟರ್ ನೀರಿನ ಮಟ್ಟ ಹೆಚ್ಚಳವಾಗಿದೆ. ಸಾವಿರಾರು ಕೊಳವೆಬಾವಿಗಳು ಮರುಪೂರಣಗೊಂಡಿವೆ. ಕೆರೆ ಆಸುಪಾಸಿನಲ್ಲಿ ಮತ್ತೆ ಭತ್ತ ಕೃಷಿಯನ್ನು ಆರಂಭಿಸಿದ ಯಶಸ್ಸಿನ ಕಥೆಗಳಿವೆ. ಒಟ್ಟಾರೆ ಕೃಷಿಕರಿಗೆ ಆದ ಪ್ರಯೋಜನ ಅಷ್ಟಿಷ್ಟಲ್ಲ. ಊರಿನ ನೀರಿನ ಕಷ್ಟ ಪರಿಹಾರವಾಗುವುದರೊಂದಿಗೆ ತಮ್ಮ ಊರಿನ ಕೆರೆಯನ್ನು ತಾವೇ ರಕ್ಷಿಸಬೇಕೆಂಬ ಜಾಗೃತಿ ಮೂಡಿದೆ. ಕೆರೆ ಹಸ್ತಾಂತರದ ದಿನ ಪ್ರತಿವರ್ಷ ಊರವರ ಜೊತೆ ಸೇರಿ 'ಕೆರೆ ಹಬ್ಬ' ಎಂಬ ಹೆಸರಿನಲ್ಲಿ ಊರಿನ ಕೆರೆಯನ್ನು ಸ್ವಚ್ಛಗೊಳಿಸುವ ಕೆಲಸ ಕೆಲವೆಡೆ ನಡೆಯುತ್ತಿದೆ. ನೀರಿನ ಮಿತ ಬಳಕೆಯ ಅರಿವು ಒಡಮೂಡಿದೆ.

800 ನೇ ಕೆರೆ ಹಸ್ತಾಂತರ

ಹಾಸನ ಜಿಲ್ಲೆಯ ಬೇಲೂರಿನ ಕೂಶಾವರದ ಚೌಡನಹಳ್ಳಿಯ 'ಊರ ಮುಂದಿನ ಕೆರೆ' ಎಂಟುನೂರನೇ ಕೆರೆಯನ್ನು ಹೆಗ್ಗಡೆ ದಂಪತಿ ಡಿಸೆಂಬರ್ 17, 2024 ರಂದು ಆನ್‌ಲೈನ್ ಮೂಲಕ ಹಸ್ತಾಂತರಿಸಿದರು. ಕೆರೆಯ ಹೂಳೆತ್ತುವಷ್ಟೇ ಪ್ರಮುಖ ಕೆಲಸ ಅವುಗಳ ರಕ್ಷಣೆ. ಈ ನಿಟ್ಟಿನಲ್ಲಿ ರಾಜ್ಯದ ಐವತ್ತುರಿಂದ ಅರವತ್ತು ಕೆರೆ ಅಭಿವೃದ್ಧಿ ಸಮಿತಿಯ ಸದಸ್ಯರನ್ನು ಒಟ್ಟು ಸೇರಿಸಿ ಹೂಳೆತ್ತಲಾದ ಕೆರೆಗಳನ್ನು ಮುಂದೆ ಹೇಗೆ ಜೋಪಾನವಾಗಿ ಕಾಪಾಡಬೇಕೆಂಬ ಮಾರ್ಗದರ್ಶನ ನೀಡಲಾಗಿದೆ.

ಎಲ್ಲಾ ಕೆಲಸವನ್ನು ಸರ್ಕಾರವೇ ಮಾಡಲಿ ಎಂದು ಅರ್ಜಿ, ಮನವಿಪತ್ರಗಳನ್ನು ಕೊಡುತ್ತಾ ಕುಳಿತರೆ ಕೆಲಸ ಆಗದು. ಹೀಗೆ ಸಂಘಸಂಸ್ಥೆಗಳು ಸ್ವಯಂ ಮುಂದೆ ಬಂದು ಕಾರ್ಯಪ್ರವೃತ್ತವಾದರೆ ಒಂದಿಷ್ಟು ಸಮಾಜಮುಖಿ ಕೆಲಸಗಳು ಸಾಧ್ಯ.

'ಚಿನ್ನದ ಬೆಲೆ ಬಂದಿದೆ'

ಹಿಂದೆ ನಮ್ಮ ಹೊಲಕ್ಕೆ ಬೇರೆಯವರ ಹೊಲದ ಮೇಲೆ ಹೋಗಬೇಕಿತ್ತು. ಟ್ರ್ಯಾಕ್ಟರ್ ಮೂಲಕ ಗೊಬ್ಬರ ಸಾಗಿಸಲು ಅವರು ಬಿಡುತ್ತಿರಲಿಲ್ಲ. ಇದರಿಂದಾಗಿ ತಲೆ ಮೇಲೆ ಗೊಬ್ಬರ ಹೊತ್ತು ಪ್ರತಿವರ್ಷ ಬೆಳೆ ಬೆಳೆಯುತ್ತಿದ್ದೆ. ಕಳೆದೆರಡು ವರ್ಷಗಳಿಂದ ಆರೋಗ್ಯ ಕೈಕೊಟ್ಟ ಕಾರಣ ಕೃಷಿ ಮಾಡುವುದನ್ನೇ ಬಿಟ್ಟಿದ್ದೆ. ನಮ್ಮೂರಿನ 'ಬಿದಿರಗಡ್ಡಿ ಕೆರೆ' ಅಭಿವೃದ್ಧಿಯಿಂದ ರಸ್ತೆ ನಿರ್ಮಾಣದ ಕನಸು ಈಡೇರಿದೆ. ಈ ವರ್ಷ ಟ್ರ್ಯಾಕ್ಟರ್ ಮೂಲಕ ಹೊಲಕ್ಕೆ ಮಣ್ಣು ಹಾಕಿಸಿ ಸೊಯಾಬಿನ್ ಬೆಳೆದೆ. ಉತ್ತಮ ಆದಾಯ ಸಿಕ್ಕಿತು. ರಸ್ತೆ ನಿರ್ಮಾಣವಾಗದಿದ್ದರೆ ನಾನು ಈ ಬಾರಿ ಕೃಷಿ ಮಾಡುತ್ತಿರಲಿಲ್ಲ. ಇದೀಗ ನಮ್ಮ ಭೂಮಿಗೆ ಚಿನ್ನದ ಬೆಲೆ ಬಂದಿದೆ.

ಚೆನ್ನಪ್ಪ ಬಿದರಗಡ್ಡಿ, ಬೈಲಹೊಂಗಲ ತಾಲ್ಲೂಕು, ಬೆಳಗಾವಿ ಜಿಲ್ಲೆ

ಆಲಿವ್ ರಿಡ್ಲೆ ತವರು...

10ನೇ ಪುಟದಿಂದ...

'ಕಡಲಾಮೆಗಳು ಮೊಟ್ಟೆ ಇಡಲು ಸಡಿಲವಾದ ಮರಳಿರುವ ಪ್ರದೇಶ ಹುಡುಕುತ್ತವೆ. ಅಳಿವೆ ಪ್ರದೇಶ ಹೆಚ್ಚಿರುವ ಉತ್ತರ ಕನ್ನಡದ ಕಡಲತೀರಗಳು ಕಡಲಾಮೆಗೆ ಮೊಟ್ಟೆ ಇಡಲು ಸುರಕ್ಷಿತ ತಾಣ ಎನಿಸಿವೆ. ಹೀಗಾಗಿಯೇ ಹೊನ್ನಾವರದಿಂದ ಕಾರವಾರದವರೆಗೆ ಕಡಲಾಮೆಗಳು ಮೊಟ್ಟೆ ಇಡುತ್ತಿರುವ ಪ್ರಮಾಣ ಈಚಿನ ವರ್ಷದಲ್ಲಿ ಹೆಚ್ಚುತ್ತಿದೆ' ಎಂದು ಕಾರವಾರದ ಸಾಗರ ವಿಜ್ಞಾನ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಸಂಶೋಧನಾರ್ಥಿ ಶಾನವಾಜ್ ರಫೀಕ ಕಡಪಾ ಹೇಳುತ್ತಾರೆ.

ನವೆಂಬರ್ ತಿಂಗಳಿನ ಕೊನೆಯಲ್ಲಿ ಆರಂಭವಾಗುವ ಆಲಿವ್ ರಿಡ್ಲೆ ಹೆರಿಗೆಯು ಏಪ್ರಿಲ್‌ವರೆಗೂ ಸಾಗುತ್ತದೆ. ಕಡಲಾಮೆಯೊಂದು ಕನಿಷ್ಠ 50 ರಿಂದ ಗರಿಷ್ಠ 170 ಮೊಟ್ಟೆಗಳನ್ನು ಏಕಕಾಲಕ್ಕೆ ಇರಿಸುತ್ತದೆ. ಹೀಗೆ ಮೊಟ್ಟೆ ಇಡುವ ಮುನ್ನ ಕಡಲತೀರದಲ್ಲಿ ಎರಡು ಅಡಿಯಷ್ಟು ಆಳದ ಗುಂಡಿ ತೆಗೆಯುತ್ತದೆ. ಮೊಟ್ಟೆಗಳ ಮೇಲೆ ಮರಳು ಬಾಚಿಟ್ಟು ಹೋಗುತ್ತದೆ. ಜನ, ಪ್ರಾಣಿಗಳ ದಿಕ್ಕು ತಪ್ಪಿಸಲು ಅಕ್ಕಪಕ್ಕದಲ್ಲಿ ಎರಡು ಅಥವಾ ಮೂರು ಗುಂಡಿಗಳನ್ನು ನಿರ್ಮಿಸಿ, ಸಮುದ್ರ ಸೇರುತ್ತವೆ.

'ಕಡಲಾಮೆಗಳು ಬೆಳಕಿನೆಡೆಗೆ ಆಕರ್ಷಿತಗೊಳ್ಳುತ್ತವೆ. ಬೆಳಕು ಕಂಡ ಕಡೆಗೆ ಅವು ಸಾಗುತ್ತವೆ. ಈಚಿನ ವರ್ಷಗಳಲ್ಲಿ ಬೆಳಕಿನ ಮೀನುಗಾರಿಕೆ ಹೆಚ್ಚಿರುವುದರಿಂದ ಅವು ಬಲೆಗಳಿಗೆ ಸಿಕ್ಕಿ ಸಾಯುವುದು ಹೆಚ್ಚುತ್ತಿದೆ. ಸಮುದ್ರ ಸೇರುವ ಸಾವಿರ ಮರಿಗಳ ಪೈಕಿ ಕೆಲವು ಮಾತ್ರ ಬದುಕುಳಿಯುತ್ತವೆ ಎಂಬುದಾಗಿ ಅಧ್ಯಯನ ವರದಿಗಳು ಹೇಳುತ್ತವೆ. ಮೊಟ್ಟೆ ಇಡಲು ತಾಯಿ ಕಷ್ಟಪಟ್ಟರೆ, ಜೀವ ತಳೆದು ಸಮುದ್ರ ಸೇರುವ ಮರಿಗಳು ಬದುಕಲು ಹೆಣಗಾಡುತ್ತವೆ. ಈ ಕಾರಣಕ್ಕಾಗಿ ಆಲಿವ್ ರಿಡ್ಲೆ ಸಂತತಿ ಉಳಿಸಲು ಕಾಳಜಿ ವಹಿಸಬೇಕು' ಎಂದು ಕಾರವಾರದ ಸಾಗರ ಜೀವಶಾಸ್ತ್ರ ಸ್ನಾತಕೋತ್ತರ ಅಧ್ಯಯನ ಕೇಂದ್ರದ ಪ್ರಾಧ್ಯಾಪಕ ಶಿವಕುಮಾರ ಹರಗಿ ಹೇಳುತ್ತಾರೆ.

ಅಭಿವೃದ್ಧಿ ಎನ್ನುವುದು ಪ್ರಾಣಿ ಸಂಕುಲಕ್ಕೆ ದುಬಾರಿಯಾಗಬಾರದು. ಅವುಗಳಿಗೂ ಬದುಕುವ, ಸಂತಾನ ವೃದ್ಧಿಸಲು ಅವಕಾಶ ಕೊಡಬೇಕು. ಇದು ಮನುಷ್ಯರ ಜವಾಬ್ದಾರಿಯೂ ಹೌದು.

ಮೊಟ್ಟೆ ಮಾಹಿತಿ ಕೊಟ್ಟವರಿಗೆ ಬಹುಮಾನ

'ಆಲಿವ್ ರಿಡ್ಲೆ ಕಡಲಾಮೆಗಳು ರಾತ್ರಿ ವೇಳೆ ಮೊಟ್ಟೆ ಇಡುವುದು ಹೆಚ್ಚು. ಬೀದಿನಾಯಿಗಳು, ನರಿಗಳು ಮೊಟ್ಟೆಗಳನ್ನು ತಿನ್ನುವ ಅಪಾಯ ಇದ್ದೇ ಇರುತ್ತದೆ. ಹೀಗಾಗಿ ಆಮೆಗಳು ಮೊಟ್ಟೆ ಇಡುವ ನವೆಂಬರ್‌ನಿಂದ ಏಪ್ರಿಲ್‌ವರೆಗೆ ರಾತ್ರಿ ಗಸ್ತು ಹೆಚ್ಚಿಸುತ್ತೇವೆ. ಮೊಟ್ಟೆ ಇಟ್ಟ ಬಗ್ಗೆ ಈಚಿನ ವರ್ಷಗಳಲ್ಲಿ ಮೀನುಗಾರರು ಮಾಹಿತಿ ನೀಡುವ ಪ್ರಮಾಣವೂ ಹೆಚ್ಚಿದೆ. ಮಾಹಿತಿ ನೀಡುವವರಿಗೆ ₹1,000 ಬಹುಮಾನ ನೀಡುತ್ತೇವೆ' ಎಂದು ಕಾರವಾರದ ಅರಣ್ಯ ಇಲಾಖೆಯ ಕೋಸ್ಟಲ್ ಮರೈನ್ ವಿಭಾಗದ ಆರ್‌ಎಫ್‌ಒ ಕಿರಣ್ ಮನವಾಚಾರಿ ಹೇಳುತ್ತಾರೆ.

'ಪ್ರತಿ ಆಮೆ ಇಟ್ಟ ಮೊಟ್ಟೆಗಳನ್ನು ಪ್ರತ್ಯೇಕ ಗೂಡುಗಳಲ್ಲಿ ಸಂರಕ್ಷಣೆ ಮಾಡಲಾಗುತ್ತದೆ. ಕಡಲತೀರದಲ್ಲೇ ಬೇಲಿ ಕಟ್ಟಿ ಅವುಗಳ ನಡುವೆ ಮರಳಿನಲ್ಲೇ ಮೊಟ್ಟೆಗಳನ್ನಿಡುತ್ತೇವೆ. ಸರಾಸರಿ 45 ದಿನಗಳ ಬಳಿಕ ಮರಿಗಳು ಹೊರಬಂದ ಕೂಡಲೇ ಅವುಗಳನ್ನು ಸಮುದ್ರಕ್ಕೆ ಬಿಡುತ್ತೇವೆ. ಆ ವೇಳೆ ಸ್ಥಳೀಯರು, ವಿದ್ಯಾರ್ಥಿಗಳನ್ನು ಕರೆಯಿಸಿ ಅವರ ಸಮ್ಮುಖದಲ್ಲಿ ಬಿಡುತ್ತೇವೆ. ಮರಿಗಳನ್ನು ಬಿಡುವ ವೇಳೆ ಜನರು ಸಂತಸದೊಂದಿಗೆ ಭಾವುಕರೂ ಆಗುತ್ತಾರೆ. ಅವುಗಳ ಮಹತ್ವ ಅರಿತಿದ್ದರಿಂದ ಈಚಿನ ವರ್ಷದಲ್ಲಿ ಕಡಲಾಮೆಯ ಸಂರಕ್ಷಣೆ ಜಾಗೃತಿ ಹೆಚ್ಚಿದೆ' ಎಂದು ವಿವರಿಸುತ್ತಾರೆ.

'ಕಡಲಾಮೆ ಸಂತತಿ ಹೆಚ್ಚಿದರೆ ಸಮುದ್ರದಲ್ಲಿ ಮೀನುಗಳಿಗೆ ಕಂಟಕವಾದ ಜೆಲ್ಲಿ ಫಿಶ್ ಅನ್ನು ನುಂಗುತ್ತವೆ. ಇದರಿಂದ ಮೀನುಗಾರರಿಗೆ ಮತ್ಸ್ಯ ಸಂಪತ್ತು ಹೆಚ್ಚು ಸಿಗುತ್ತದೆ. ಹೀಗಾಗಿ ಕಡಲಾಮೆ ಉಳಿಸಲು ಕೈಜೋಡಿಸುತ್ತೇವೆ' ಎಂದು ಮೀನುಗಾರ ದೇವರಾಯ ಸೈಲ್ ಹೇಳುತ್ತಾರೆ.



ಆಲಿವ್ ರಿಡ್ಲೆ ಕಡಲಾಮೆಗಳು



ಕಾರವಾರ ತಾಲ್ಲೂಕಿನ ಬಾವಳದಲ್ಲಿ ಅರಣ್ಯ ಇಲಾಖೆಯ ಕೋಸ್ಟಲ್ ಮರೈನ್ ವಿಭಾಗವು ಆಲಿವ್ ರಿಡ್ಲೆ ಕಡಲಾಮೆಯ ಮೊಟ್ಟೆಗಳನ್ನು ಗೂಡು ಮಾಡಿ ಸಂರಕ್ಷಿಸಿರುವುದು.

ಮುನ್ನೋಟ 23-02-2025 ರಿಂದ 01-03-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ನಿಮ್ಮ ಕೆಲಸ ಕಾರ್ಯಗಳಲ್ಲಿ ಸಾಕಷ್ಟು ಚುರುಕುತನವನ್ನು ಕಾಣಬಹುದು. ವ್ಯವಹಾರಗಳಲ್ಲಿ ಅಂತಹ ಪ್ರಗತಿ ಇರುವುದಿಲ್ಲ. ವೃತ್ತಿಯಲ್ಲಿ ಕೊಂಚ ಅಭಿವೃದ್ಧಿಯನ್ನು ಕಾಣಬಹುದು. ವಿದೇಶಕ್ಕೆ ಹೋಗುವವರು ನಿಮ್ಮ ದಾಖಲಾತಿಗಳ ಬಗ್ಗೆ ಸರಿಯಾಗಿ ಗಮನ ವಹಿಸಿ. ವ್ಯಾಪಾರ, ವ್ಯವಹಾರಗಳಲ್ಲಿ ಅನಿರೀಕ್ಷಿತ ಏರಿಳಿತಗಳಾಗಬಹುದು. ವಿದೇಶಿ ವ್ಯವಹಾರ ಮಾಡುವವರಿಗೆ ಸ್ವಲ್ಪ ಹಿನ್ನಡೆಯಾಗುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಹಿರಿಯರಿಂದ ಗೌರವ ದೊರೆಯುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಕಾರ್ಯಚಟುವಟಿಕೆಗಳಲ್ಲಿ ಸ್ವಲ್ಪ ಆಲಸಿತನವನ್ನು ಕಾಣಬಹುದು. ಕೃಷಿಭೂಮಿ ಅಭಿವೃದ್ಧಿಯನ್ನು ಮಾಡುವವರಿಗೆ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಸಾಮಾನ್ಯ ಫಲಿತಾಂಶವಿರುತ್ತದೆ. ಔಷಧಿ ವ್ಯಾಪಾರಿಗಳಿಗೆ ಲಾಭ ಹೆಚ್ಚುತ್ತದೆ. ಕೃಷಿಯಿಂದ ಆದಾಯವನ್ನು ನಿರೀಕ್ಷೆ ಮಾಡಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಬರುತ್ತದೆ. ಸಾಂಪ್ರದಾಯಿಕ ಕೃಷಿಯಿಂದ ಲಾಭವಿರುತ್ತದೆ. ಉದ್ಯೋಗದಲ್ಲಿ ಉನ್ನತ ಸ್ಥಾನ ದೊರೆತು ವಿದೇಶಯಾನ ಮಾಡುವ ಯೋಗವಿದೆ. ಉದ್ಯೋಗ ಸ್ಥಳದಲ್ಲಿ ಮಹಿಳಾ ಮೇಲಧಿಕಾರಿಗಳಿಂದ ಹೆಚ್ಚು ಅನುಕೂಲವಾಗುತ್ತದೆ. ಸಂಗಾತಿಯು ನಿಮ್ಮ ಕಷ್ಟ ಸುಖಗಳಿಗೆ ಸಾಕಷ್ಟು ಸ್ಪಂದಿಸುವರು. ಕಟ್ಟಡ ನಿರ್ಮಾಣಕಾರರಿಗೆ ಆದಾಯ ಹೆಚ್ಚುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ನೀವು ನಿಮ್ಮ ಕೆಲಸಗಳನ್ನು ಮುಂದೂಡುವುದರಿಂದ ಹಲವಾರು ಕೆಲಸಗಳು ನಿಲ್ಲಬಹುದು. ಆದಾಯವು ಕಡಿಮೆ ಇರುತ್ತದೆ. ಧಾರ್ಮಿಕ ಕೆಲಸಗಳಲ್ಲಿ ಹೆಚ್ಚು ಆಸಕ್ತಿಯನ್ನು ತೋರುವಿರಿ. ನಿಮ್ಮ ಹಿರಿಯರಿಗೆ ಸ್ವಲ್ಪ ಧನಸಹಾಯ ಮಾಡಬೇಕಾಗುತ್ತದೆ. ಶ್ರಮಪಟ್ಟು ಕೆಲಸಮಾಡುವವರು ಎಚ್ಚರದಿಂದ ಮಾಡಿ. ಮೂಳೆ ತೊಂದರೆ ಅಥವಾ ಗಾಯಗಳಾಗುವ ಸಾಧ್ಯತೆಗಳಿವೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ನಿಮ್ಮ ಪ್ರಮುಖ ನಿರ್ಧಾರಗಳನ್ನು ಶೀಘ್ರವಾಗಿ ಮತ್ತು ದೃಢವಾಗಿ ತೆಗೆದುಕೊಳ್ಳಿ. ಆದಾಯವು ಕಡಿಮೆ ಇರುತ್ತದೆ. ಕೃಷಿಯಿಂದ ಸಾಕಷ್ಟುಲಾಭವನ್ನು ನಿರೀಕ್ಷೆ ಮಾಡಬಹುದು. ಮಕ್ಕಳ ಅಭಿವೃದ್ಧಿಯಲ್ಲಿ ಸಲ್ಪ ಪ್ರಗತಿಯನ್ನು ಕಾಣಬಹುದು. ಕೆಲವರಿಗೆ ವಾತಭಾದೆ ಕಾಡುತ್ತದೆ. ಸಂಗಾತಿಯ ಜೊತೆ ಘರ್ಷಣೆಗಳಿದ್ದರೂ ಅವರು ನಿಮಗೆ ಸಹಕಾರ ನೀಡುವವರು. ಪಾಲುದಾರಿಕೆಯ ವ್ಯವಹಾರಗಳಲ್ಲಿ ಸಾಕಷ್ಟು ಲಾಭವಿರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ವಾರದ ಆರಂಭ ಬಹಳ ಆಲಸ್ಯದಿಂದ ಕೂಡಿರುತ್ತದೆ. ಆದಾಯವು ಸಾಮಾನ್ಯ ಗತಿಯಲ್ಲಿ ಇರುತ್ತದೆ. ವೃತ್ತಿಯಲ್ಲಿ ಬಹಳ ಚುರುಕಾಗಿ ಕೆಲಸ ಮಾಡುವಿರಿ. ಹೈನುಗಾರಿಕೆಯನ್ನು ಮಾಡುವವರಿಗೆ ಹೆಚ್ಚಿನ ಆದಾಯವಿರುತ್ತದೆ. ಮಕ್ಕಳ ಬಗ್ಗೆ ಸ್ವಲ್ಪ ಚಿಂತಿಸುವ ಕಾಲವಿದು. ರಕ್ತ ಸಂಬಂಧಿ ದೋಷಗಳಿರುವವರು ಹೆಚ್ಚು ಎಚ್ಚರ ವಹಿಸಿ. ವಿದೇಶದಲ್ಲಿರುವ ಸಂಗಾತಿಯಿಂದ ಹೆಚ್ಚಿನ ಹಣ ದೊರೆಯುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ವಿದೇಶಿ ವ್ಯಾಮೋಹಕ್ಕೆ ಒಳಗಾಗುವಿರಿ. ಹಿರಿಯರ ಆಸ್ತಿಯಿಂದ ಆದಾಯವನ್ನು ಮಾಡಿಕೊಳ್ಳಬಹುದು. ಕೃಷಿಭೂಮಿ ಮಾರಾಟ ಮಾಡುವವರಿಗೆ ಈಗ ಲಾಭವಿದೆ. ವಿದೇಶದಲ್ಲಿರುವ ವೈದ್ಯರುಗಳಿಗೆ ಬೇಡಿಕೆ ಹೆಚ್ಚಾಗುತ್ತದೆ. ಸಂಗಾತಿ ಕಡೆಯ ಹಿರಿಯರಿಂದ ನಿಮ್ಮ ಕೃಷಿಕಾರ್ಯಗಳು ಸುಗಮವಾಗಿ ನಡೆಯುತ್ತವೆ. ಹಿರಿಯರಿಂದ ದೊರೆಯುತ್ತಿದ್ದ ಆರ್ಥಿಕ ಸಹಾಯ ನಿಲ್ಲುವ ಸಾಧ್ಯತೆಗಳಿವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಶಕ್ತಿ ಸಾಮರ್ಥ್ಯದ ಕಡೆಗೆ ಹೆಚ್ಚು ಗಮನ ಕೊಡುವಿರಿ. ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಬರುತ್ತದೆ. ಸರ್ಕಾರಿ ಮೂಲದಿಂದ ಬರ ಬೇಕಾಗಿದ್ದ ಹಣಕಾಸುಗಳು ಈಗ ಬರುತ್ತವೆ. ನಿಮ್ಮ ಕುಟುಂಬಕ್ಕೆ ತೊಂದರೆ ಕೊಡುತ್ತಿದ್ದ ಶತ್ರುಗಳನ್ನು ನಿವಾರಣೆ ಮಾಡುವಿರಿ. ಈಗ ಸರ್ಕಾರಿ ಸಂಬಂಧಿತ ವ್ಯವಹಾರಗಳಲ್ಲಿ ಮಧ್ಯಮ ಫಲಿತಾಂಶವಿರುತ್ತದೆ. ವಿದೇಶದಲ್ಲಿ ಓದಬೇಕೆನ್ನುವವರಿಗೆ ಸೂಕ್ತಾವಕಾಶಗಳು ದೊರೆಯುತ್ತವೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ವಾರದ ಆರಂಭ ಬಹಳ ಸಂತೋಷದಾಯಕವಾಗಿರುತ್ತದೆ. ಆದಾಯವು ಕಡಿಮೆ ಇದ್ದರೂ ನಿಮ್ಮ ಚಟುವಟಿಕೆಗಳಿಂದ ಈಗ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು. ಹೊರದೇಶದಲ್ಲಿರುವವರು ಈಗ ಅಲ್ಲಿ ಸ್ಥಿರಾಸ್ತಿಯನ್ನು ಮಾಡಿಕೊಳ್ಳಬಹುದು. ಅಧ್ಯಾಪಕರಿಗೆ ಸ್ವಲ್ಪ ಹಿನ್ನಡೆಯಾಗುತ್ತದೆ. ಉದರ ಸಂಬಂಧಿ ದೋಷಗಳು ಕೆಲವರನ್ನು ಕಾಡಬಹುದು. ಸಂಗಾತಿಗೆ ಸಿರಾಸ್ತಿ ಲಭಿಸುವ ಯೋಗವಿದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಬಹಳ ಸ್ಥಿತಪ್ರಜ್ಞರಂತೆ ಇರುವಿರಿ. ನಿಮ್ಮ ಬುದ್ಧಿವಂತಿಕೆಯನ್ನು ಬಳಸಿ ಸಂಪಾದನೆ ಮಾಡುವಿರಿ. ಆದಾಯವು ನಿಮ್ಮ ಖರ್ಚು ವೆಚ್ಚಗಳನ್ನು ತೂಗಿಸುವಷ್ಟು ಇರುತ್ತದೆ. ಆಸ್ತಿ ವ್ಯವಹಾರ ಮಾಡುವವರಿಗೆ ಹಣದ ಒಳ ಹರಿವು ಕಡಿಮೆ ಇರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಫಲಿತಾಂಶ ಪಡೆಯುವ ಯೋಗವಿದೆ. ಹರಿತವಾದ ವಸ್ತುಗಳ ಜೊತೆ ಕೆಲಸ ಮಾಡುವಾಗ ಎಚ್ಚರದಿಂದಿರಿ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಹಿರಿಯರು ಸಮಾಜದ ಮೇಲೆ ಸಾಕಷ್ಟು ಪ್ರಭಾವವನ್ನು ಬೀರುವರು. ಆದಾಯವು ಈಗ ಚೇತರಿಕೆಯ ಹಾದಿಯಲ್ಲಿರುತ್ತದೆ. ನಿಮ್ಮ ಚಟುವಟಿಕೆಗಳಿಂದ ಹಿರಿಯರ ಗಮನ ಸೆಳೆಯುವಿರಿ. ಆಸ್ತಿ ಖರೀದಿ ಮಾಡಬೇಕೆನ್ನುವವರು ಈಗ ಮಾಡಬಹುದು. ಕೃಷಿ ವಿದ್ಯಾರ್ಥಿಗಳಿಗೆ ನಿರೀಕ್ಷೆಗೆ ಮೀರಿ ಅಭಿವೃದ್ಧಿ ಇರುತ್ತದೆ. ಪಶು ವೈದ್ಯರಿಗೆ ಸಾಕಷ್ಟು ಬೇಡಿಕೆ ಇರುತ್ತದೆ. ತಾಯಿಯ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಅಲಂಕಾರಕ್ಕೆ ಹೆಚ್ಚು ಬೆಲೆ ಕೊಡುವಿರಿ. ಆದಾಯವು ಸಾಮಾನ್ಯ ಮಟ್ಟದಲ್ಲಿ ಇರುತ್ತದೆ. ಗುರು ಹಿರಿಯರನ್ನು ಅನುಸರಿಸಿ ನಡೆಯಲು ಪ್ರಯತ್ನ ಪಡುವಿರಿ. ಕೃಷಿಭೂಮಿಯನ್ನು ಖರೀದಿ ಮಾಡುವವರು ಈಗ ಮಾಡಬಹುದು. ನಿಂತಿದ್ದ ವಿದ್ಯೆಗಳನ್ನು ಈಗ ಮುಂದುವರಿಸಬಹುದು. ವೃತ್ತಿ ಸಂಬಂಧಿತ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಅಭಿವೃದ್ಧಿ ಇದೆ. ನೇತ್ರ ಸಂಬಂಧಿ ದೋಷಗಳಿರುವವರು ಹೆಚ್ಚು ಎಚ್ಚರ ವಹಿಸಿ.

ಪದಬಂಧ 2880



ಮೇಲಿನಿಂದ ಕೆಳಕ್ಕೆ

1. ನಿತ್ಯ ಪಂಚಾಂಗದಲ್ಲಿ ಹಳ್ಳ ಹತ್ತಿಸುವ ಸಮಯ 5
2. ಇರುಳಿನಲ್ಲಿ ಘಮಘಮಿಸುವ ಅರಸಿ 4
3. ಅಕ್ಕನ ಗಂಡನ ಅಂತರ್ಯದ ಕೂಡಲು 5
4. ಇವನು ಭಕ್ಷಕನಲ್ಲ ಬದಲಾಗಿ ಎಲ್ಲರನ್ನೂ ಕಾಪಾಡುವವ 3
8. ಆಯುರ್ವೇದದಲ್ಲಿ ಉಣಿಸುವಿಕೆ 3
10. ಶ್ರೇಷ್ಠವಾದುದನ್ನು ಕಾಂಬ ವಿರಳವಾದ ಭಾಗ್ಯ 4
12. ಯಾವ ಕೆಲಸವನ್ನು ಮಾಡಬೇಕನಿಸದ ಕುಂದಿದ ಲವಲವಿಕೆ 4
13. ಬಿಹಾರ, ಜಾರಕಂಡ ಮೂಲದ ಯಾದವ ವಂಶ 5
14. ಗುಣತ್ರಯಗಳಲ್ಲಿ ಮಧ್ಯಮ, ಕ್ಷಾತ್ರಕ್ಕೆ ಸಂಬಂಧಿಸಿದ್ದು 3
15. ಮಾನ ಸಹಿತ ಮರ್ಯಾದೆ 5
16. ನಸುಕಿನಂತೆ ಮಬ್ಬು 3
17. ಕಂಸನ ಸೋದರಳಿಯ ಕೃಷ್ಣರೂಪಿ 4

ಎಡದಿಂದ ಬಲಕ್ಕೆ

1. ಮಾರ್ಗದರ್ಶಕ ಬಾಗಿಲು ತೋರಿಸುವ ಸಿಖ್ ಪೂಜಾಮಂದಿರ 4
3. ಒಂದು ನುಡಿಯಿಂದ ಮತ್ತೊಂದಕ್ಕೆ ಇರುವ ಅಂತರವನ್ನು ಬಿಂಬಿಸುವ ತರ್ಜುಮೆ 4
5. ಹೀಗೆ ನೋಡಿದರು ಇದು ಕುಟುಕುವ ಚೇಳಿನ ರಾಶಿ 3
6. ರಘುವ ವಂಶದಲ್ಲಿ ಹುಟ್ಟಿದ ರಾಮ 3
7. ಯಾವ ಭಯವಿಲ್ಲದೆ ಅರಣ್ಯದಲ್ಲಿ ಅಲೆದಾಡುವ ಮೃಗ 4
9. ಸುದ್ದಿಯನ್ನು ಓದುಗರಿಗೆ ಬೇಕಾದಂತೆ ಸಿದ್ಧಪಡಿಸುವ ಪತ್ರಕರ್ತ 4
11. ಅಡುಗೆಗೂ ಆಗಿಬರುವ ದ್ರವರೂಪಿ ವಾಯು 3
13. ಜನಕನ ಮಗಳ ಹೆಸರನ್ನೊಳಗೊಂಡ ದಶರಥಾತ್ಮಜ 5
15. ಮಾಸದ ನಡುವೆ ಸರೋವರದ ಮನಸ್ಸುಳ್ಳವಳು 3
16. ಶ್ರೇಷ್ಠವಾದ ಶಿವನ ಪರಮಾತ್ಮ ಸ್ವರೂಪ 4
17. ಬದುಕು ದೂಡಲು ನಾವು ನಿಂತ ಸ್ಥಳ 4
18. ನರ್ತಿಸುವಂತೆ ಮಾಡು 3
19. ಜೊತೆಯಲ್ಲಿ ಕೂಡಿದ ಹಿತ 3
20. ಏನಾಯಿತು ಹೇಗಾಯಿತು ಎಂದು ತಿಳಿದುಕೊಳ್ಳಬೇಕೆನ್ನುವ ಆಸಕ್ತಿ 4
21. ಮದುಮಗ ನೀಡಿದ ಕೊಡುಗೆ 4

ಪದಬಂಧ ಉತ್ತರ -2879

ಮೇಲಿಂದ ಕೆಳಕ್ಕೆ

1.ಸರಸ 2.ವ್ಯಸನ 3.ಉಯ್ಯಾಲೆ 5.ಮಹತಿ 7.ಕಾತರ 9.ಗತ್ತುಗಮ್ಮತ್ತು 10.ಪ್ರಭಾವಶಾಲಿ 11.ಸವಿಪ್ರ 12.ಕುಲಾವಿ 16. ಭಾರತಿ 17. ವಿನಾಶ 19.ತನ್ಮಯ 20.ಪ್ರತಿಮಾ 21.ರಸಿಕ

ಎಡದಿಂದ ಬಲಕ್ಕೆ


1.ಸಮಗ್ರಕಾವ್ಯ 3.ಉಡದಾರ 4.ಸತ್ಯಕಾಮ 6.ಸಮಕಾಲೀನ 8.ಲೆಕ್ಕಿಗ 10.ಪ್ರಸೂತಿ 11.ಸರಕು 13.ಗರುವಿ 14.ಲಾಘವ 15.ಪ್ರಭಾವಿ 17.ವಿಪತ್ತು 18.ಲಿಖಿತ 20.ಪ್ರಗತಿಪರ 22.ಶರಾವತಿ 23.ಸಿನಿಮೀಯ 24.ಮಾರ್ಗದರ್ಶಕ

ಪ್ರೊ.ಅ.ರಾ.ಮಿತ್ರರ ಕೃತಿ ಅವಲೋಕನ, ಅನಾವರಣ ಅಭಿನಂದನ ಸಮಾರಂಭ ಫೆಬ್ರುವರಿ 23 ರ ಭಾನುವಾರ ಬೆಂಗಳೂರಿನ ಭಾರತೀಯ ವಿದ್ಯಾಭವನದ ಖಿಂಚ ಸಭಾಂಗಣದಲ್ಲಿ ನಡೆಯಲಿದೆ.

ಗಂಭೀರ ಶಾಸ್ತ್ರಕ್ಕೂ ಹಾಸ್ಯದ ಅಂಗಿ ಹಾಕಬಲ್ಲ ಅ.ರಾ. ಮಿತ್ರ

ಎಸ್.ಆರ್. ವಿಜಯಶಂಕರ

ಕೈಲಾಸಂ ಬಗ್ಗೆ ಬರೆದೊಂದು ಪುಸ್ತಕದಲ್ಲಿ ಅ.ರಾ. ಮಿತ್ರರು, 'ನಿಂತಕಡೆ ಸಂತೆ ಸೇರಿಸಬಲ್ಲ ವ್ಯಕ್ತಿ' ಕೈಲಾಸಂ ಎನ್ನುತ್ತಾರೆ. ಈ ಮಾತು ಅಕ್ಕಿಹೆಬ್ಬಾಳು ರಾಮಣ್ಣ ಮಿತ್ರ (ಅ.ರಾ.ಮಿತ್ರ) ಅವರ ಬಗೆಗೂ ಅಷ್ಟೇ ಸತ್ಯ. ಅವರು ಮಾತನಾಡುತ್ತಾರೆ ಎಂದರೆ ಸಭೆ ಕಿಕ್ಕಿರಿದು ತುಂಬಿರುತ್ತದೆ. ಅವರು ನಿಂತಲ್ಲಿ ನಾಲ್ಕಾರು ಜನ ಸುತ್ತಲೂ ಇರುತ್ತಾರೆ. ಸದಾ ನಗುಮುಖ ಮಾತ್ರವಲ್ಲ, ಮಿತ್ರರು ಮಾತನಾಡಿದರೆ ಕೇಳುವವರನ್ನು ನಗಿಸುವಂತಹ ಮನೋಭಾವ.



ಅ.ರಾ. ಮಿತ್ರ

ಅವರನ್ನು ನಾನು ಮೊದಲು ನೋಡಿದ್ದು 1971ರಲ್ಲಿ. ಆಗ ಮಿತ್ರರು ಮಂಗಳೂರು ಸರ್ಕಾರಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. ಪುತ್ತೂರಿನಲ್ಲಿ ಸುಮನಸಾ ವಿಚಾರ ವೇದಿಕೆ ಏರ್ಪಡಿಸಿದ ಪುಸ್ತಕ ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಅಂದು ಬಿಡುಗಡೆಯಾದ ನಾ. ಮೊಗಸಾಲೆ, ಯು.ಕೆ.ವಿ. ಆಚಾರ್ಯ ಹಾಗೂ ಜಿ.ಎಸ್. ಉಬರಡ್ಕ ಅವರ ಕವನ ಸಂಕಲನಗಳ ಕುರಿತಾಗಿ, ಬನ್ನಂಜೆ ಗೋವಿಂದಾಚಾರ್ಯರು ಮಾತನಾಡಿದರು. ಕವಿ ಸುಬ್ರಾಯ ಚೊಕ್ಕಾಡಿ ಸುಮನಸಾ ವೇದಿಕೆಯ ಪರವಾಗಿ ಕಾರ್ಯಕ್ರಮ ಏರ್ಪಡಿಸಿದ್ದರು. ಆಗ ಅ.ರಾ. ಮಿತ್ರರೂ ಸೇರಿ ಆ ಇಡೀ ಕೂಟ ನವ್ಯ ಸಾಹಿತಿಗಳು ಎಂದೇ ಪ್ರಸಿದ್ಧರಾಗಿದ್ದರು. ಆಗ ನಾನು ವಿಟ್ಲದಲ್ಲಿ ಹೈಸ್ಕೂಲು ಓದುತ್ತಿದ್ದೆ. ಮಿತ್ರ ಹಾಗೂ ಬನ್ನಂಜೆಯವರನ್ನು ಸಭೆಯಲ್ಲಿ ಕುಳಿತು ನೋಡಿ, ಅವರ ಮಾತುಗಳನ್ನು ಕೇಳಿ ಬರುವುದಕ್ಕಾಗಿ ಹೋಗಿದ್ದೆ.

ಅಂದು ಪುಸ್ತಕಗಳ ಬಗ್ಗೆ, ಸಾಹಿತ್ಯದ ಬಗ್ಗೆ ಮಿತ್ರ ಬಹಳ ಗಂಭೀರವಾಗಿಯೇ ಮಾತನಾಡಿದ್ದರು. ಆದರೆ ಆ ದಿನ ಅವರು ಹೇಳಿದ ಒಂದು ಜೋಕು ಇಂದಿಗೂ ನೆನಪಿದೆ. ಬದುಕಲ್ಲಿ ಒಂದು ಹೋಗಿ ಇನ್ನೊಂದಾಗುವ ವಿಚಿತ್ರಗಳಿಗೆ, ಅನಿರೀಕ್ಷಿತ ತಿರುವುಗಳಿಗೆ ಸಂಬಂಧಿಸಿದಂತೆ ('ಹುಟ್ಟು ಅವಘಡ ನನಗೆ' ಎಂಬ ಜಿ.ಎಸ್. ಉಬರಡ್ಕರ ಕವನದ ಒಂದು ಸಾಲನ್ನು ಎತ್ತಿಕೊಂಡು ಮಾತನಾಡುತ್ತಿದ್ದಾಗ ಹೇಳಿದ್ದು ಎಂದು ನೆನಪು.) ಹೇಳಿದ ಒಂದು ಮಾತಿಗೆ ಗಂಭೀರವಾಗಿದ್ದ ಸಭೆಯಲ್ಲಿ ನಗು ಆಸ್ಫೋಟಿಸಿದ ಪ್ರಸಂಗ: 'ಯಾಕೋ ಅಳ್ತಾ ಇದ್ದೀ ಮಗೂ?' ಎಂದು ಕೇಳಿದರಂತೆ. 'ನಮ್ಮಪ್ಪ ಗೋಡೆಗೆ ಮೊಳೆ ಹೊಡೀತಾ ಸುತ್ತಿಗೆ ಏಟು ತಪ್ಪಿ ಕೈಗೆ ಬಿತ್ತು ಅದಕ್ಕೇ... ಊ್ಞ ಊ್ಞ ಊ್ಞ' ಎಂದಿತ್ತು. 'ಅಲ್ಲವೊ! ಮೊಳೆಗೆ ಹೊಡೆದೇಟು ಗುರಿ ತಪ್ಪಿ ನಿಮ್ಮಪ್ಪನ ಕೈಗೆ ಬಿದ್ದರೆ ನಗೋದು ಬಿಟ್ಟು ಅಳತಾರೇನೋ?' 'ನಕ್ಕೆ ಮೊದ್ಲು, ನಕ್ಕೆ ಮಾಮ, ನಕ್ಕೆ. ಗಟ್ಟಿಯಾಗೇ ನಕ್ಕೆ! ಅದಕ್ಕೆ ಈಗ ಅಳ್ತಾ ಇರೋದು.'

ಸಭೆಯಲ್ಲಿ ನಗೆ ಬಡಲ್ಲನೆ ಚಿಮ್ಮಿದಾಗ, ಮಿತ್ರರು 'ಇದು ನಾನು ಹೇಳಿದ್ದಲ್ಲ, ಬೇರೆಯವರು ಹೇಳಿದ್ದು' ಎಂದರು. ಆ ನಗೆಯಲ್ಲಿ ಅದು ಯಾರು ಹೇಳಿದ್ದೆಂದು ಮಿತ್ರರು ಹೇಳಿದ್ದೆಂದು ನನಗೆ ಕೇಳಲಿಲ್ಲ. ಆ ಮೂಡ್‌ನಲ್ಲಿ ಅದು ಯಾರು ಹೇಳಿದ್ದೆಂದು ತಿಳಿದುಕೊಳ್ಳಬೇಕೆಂದೂ ಅನಿಸಲಿಲ್ಲ. ಆ ಮೇಲೆ ದಶಕಗಳ ನಂತರ ತಿಳಿಯಿತು. ಅ.ರಾ. ಮಿತ್ರರು ಬರೆದ 'ಕೈಲಾಸಂ' ಪುಸ್ತಕದಲ್ಲಿ (ಬೆಂಗಳೂರು ವಿ.ವಿ. ಪ್ರಕಟಣೆ) ಕೊನೆಗೆ 'ಕೈಲಾಸಂ ಜೋಕುಗಳು' ಎಂಬೊಂದು ವಿಭಾಗದಲ್ಲಿ ಮೊದಲನೆಯದಾಗಿ ಮೇಲೆ ಹೇಳಿದ ಜೋಕನ್ನು 'ನಗಬೇಕೋ ಅಳಬೇಕೋ!' ಎಂಬ ತಲೆಕಟ್ಟು ಕೊಟ್ಟು ಹಾಕಿದ್ದರು.

ಮಿತ್ರರು ಹೇಳುವ ಅನೇಕ ಜೋಕುಗಳನ್ನು ಅವರು ಇದರ ಒರಿಜಿನಲ್ ರೈಟ್ಸ್ ನನ್ನದಲ್ಲ ಎನ್ನುತ್ತಿರುತ್ತಾರೆ. ಅವರ ಹಾಸ್ಯ ಎಷ್ಟೇ ಇರಲಿ, ಮೂಲತಃ ಅವರು ಶಾಸ್ತ್ರಜ್ಞರು. ಸ್ಕಾಲರ್ ಅನ್ನುತ್ತಾರಲ್ಲ, ಆ ರೀತಿಯ ಪಂಡಿತರು. ಅವರ 'ಛಂದೋಮಿತ್ರ' ಅಥವಾ 'ವಚನಕಾರರು ಮತ್ತು ಶಬ್ದಕಲ್ಪ' ಮೊದಲಾದ ಕೃತಿಗಳನ್ನಾಗಲಿ, 'ಪ್ರೇಮನದಿಯ ದಡಗಳಲ್ಲಿ' ಎಂಬ ಪೌರಾಣಿಕ, ಚಾರಿತ್ರಿಕ ಪ್ರೇಮಿಗಳ ಬಗೆಗಿನ ಪುಸ್ತಕವನ್ನಾಗಲಿ (ಉದಾ: ಕಾದಂಬರಿ-ಚಂದ್ರಾಪೀಡ, ಯಮ-ಯಮಿ, ಸಂವರಣ-ತಪತಿ, ಈರಾಸ್-ಸೈಕಿ, ರೋಮಿಯೋ-ಜೂಲಿಯಟ್ ಇತ್ಯಾದಿ); 'ಮಹಾಭಾರತದ ಪಾತ್ರ ಸಂಗತಿಗಳು' ಸಂಪುಟಗಳನ್ನಾಗಲಿ ಓದಿದವರಿಗೆ, ಅವರ ಪಾಂಡಿತ್ಯದ ಅರಿವಾಗದಿರದು. ಮೀಮಾಂಸಾಗ್ರಹಿಕೆ ಪಾಂಡಿತ್ಯದ ಮುಖ್ಯ ಲಕ್ಷಣಗಳಲ್ಲೊಂದು. ಒಂದು ಜ್ಞಾನಶಾಖೆಯ ತಲಸ್ಪರ್ಶಿ ತಾತ್ವಿಕ ಗ್ರಹಿಕೆಯನ್ನೂ ಸೂಚಿಸುವುದು ಸಾಹಿತ್ಯ ಮೀಮಾಂಸೆಯ ಕೆಲಸಗಳಲ್ಲೊಂದು. ಭರತ ಮುನಿಯೇ ಹಾಸ್ಯವನ್ನು ಶೃಂಗಾರವಾದೊಡನೆ ಉಲ್ಲೇಖಿಸುತ್ತಾನೆ. ಹಾಗಾಗಿ ಒಂದು ರೀತಿಯಲ್ಲಿ ಹಾಸ್ಯ ಶೃಂಗಾರದ ತಮ್ಮನೋ, ತಂಗಿಯೋ ಆಗಬೇಕು. ಹಾಸ್ಯ ಗಂಭೀರ ಶೃಂಗಾರದ ಬೆನ್ನನ್ನು ತೋರಿಸುತ್ತದೆ.

ಮಿತ್ರರ ಹಾಸ್ಯಕಲ್ಪನೆ ಬಹಳ ದೊಡ್ಡದು. ಅದೊಂದು ರಸಪ್ರಜ್ಞೆ; ಕಾರಂತರು, ಮಾಸ್ತಿ, ಕುವೆಂಪು, ಬೇಂದ್ರೆ ಮೊದಲಾದವರಿಗೆ ಇದ್ದ ಹಾಗೆ. ಆದರೆ ಜನರು ಬಿಡದೆ ಕಾಡಿ, ಹಾಸ್ಯೋತ್ಸವಗಳಲ್ಲಿ ಮಾತನಾಡಿಸಿ ಅವರ ಹಾಸ್ಯ ರಸಪ್ರಜ್ಞೆಯನ್ನು ಕೇವಲ ಹಾಸ್ಯಕ್ಕೆ ಅನೇಕ ಸಲ ಸೀಮಿತಗೊಳಿಸಿಬಿಟ್ಟರು.

ಕುಮಾರವ್ಯಾಸ ಪ್ರೊ. ಅ.ರಾ. ಮಿತ್ರರ ಅತಿ ಪ್ರೀತಿಪಾತ್ರ ಕವಿಗಳಲ್ಲೊಬ್ಬ. ಅವರು ಮಾಡಿದ ಗದುಗಿನ ಭಾರತದ ಗದ್ಯಾನುವಾದಕ್ಕೆ 'ಕುಮಾರವ್ಯಾಸನ ಭಾರತ ಕಥಾಮಿತ್ರ' ಎಂದು ಹೆಸರು. ಕವಿಗಳಾದ ಎಚ್.ಎಸ್.ವಿ., ಎಲ್. ಗುಂಡಪ್ಪ ಸೇರಿ ಕೆಲವರು ಗದುಗಿನ ಭಾರತವನ್ನು ಕನ್ನಡ ಗದ್ಯಕ್ಕೆ ಪರಿವರ್ತಿಸಿದ್ದಾರೆ. ಎ.ಆರ್.ಕೃ. ಅವರ ಮೂಲಭಾರತ ಸಂಗ್ರಹವಾದ 'ವಚನಭಾರತ'ವಂತೂ ಪ್ರಸಿದ್ಧವಾದುದೇ ಆಗಿದೆ. ಆದರೆ, ಕಥಾಮಿತ್ರಕ್ಕೆ ಅದರದ್ದೇ ಆದ ಭಾಷಾ ಸೊಗಸಿದೆ. ಕುಮಾರವ್ಯಾಸನ ಕಾವ್ಯದ ಮೂಲಪದಗಳೇ ಕನ್ನಡ ಗದ್ಯಕ್ಕೆ ಹೊಂದಿಕೊಳ್ಳುವಲ್ಲೆಲ್ಲಾ ಅದನ್ನೇ ಬಳಸಿ, ಕಥಾ ಸಂಚಾರಕ್ಕೆ ತಡೆಯಾಗುವಲ್ಲಿ ಮಾತ್ರ ಕಥಾಮಿತ್ರದಲ್ಲಿ ಸೊಗಸಾದ ಕನ್ನಡವನ್ನು ಬಳಸಿದ್ದಾರೆ. ವಿದ್ವಾನ್ ರಂಗನಾಥ ಶರ್ಮರು ಕೃತಿಯ ಪ್ರಸ್ತಾವನೆಯಲ್ಲಿ ಹೇಳಿದಂತೆ ಅ.ರಾ. ಮಿತ್ರರ ಕನ್ನಡ ವಾಕ್ಯರಚನೆ ಕನ್ನಡ ಜಾಯಮಾನಕ್ಕೆ ಅನುಗುಣವಾಗಿ ಬಂದಿದೆ. ಕಠಿಣ ಶಬ್ದಗಳ ಬಳಕೆ ಇಲ್ಲ. ತಮ್ಮ ಪ್ರೌಢಿಮೆಯನ್ನು ಮೆರೆಸಬೇಕೆಂಬ ಹಂಬಲವೂ ಇಲ್ಲ. ಮಹಾಭಾರತಕ್ಕೆ ಸಂಬಂಧಿಸಿದ ಕತೆಯನ್ನು ಎಷ್ಟು ಹೇಳಬೇಕೊ ಅಷ್ಟನ್ನೆ ಹಿತಮಿತ ವಾಕ್ಯಗಳಲ್ಲಿ ಎಲ್ಲ ದರ್ಜೆಯ ಓದುಗರಿಗೂ ಪ್ರಿಯವಾಗುವಂತೆ ತಿಳಿಸಿಕೊಡಬೇಕೆಂಬುದೇ ಅವರ ಧ್ಯೇಯವಾಗಿ ತೋರುತ್ತದೆ ಎಂದು ವಿದ್ವಾನ್ ರಂಗನಾಥ ಶರ್ಮರು ಅಡಕವಾಗಿ ಹೇಳಿದ್ದಾರೆ.

ಅ.ರಾ. ಮಿತ್ರರೊಳಗೆ ಬಹಳ ಗಂಭೀರವಾದ ಸಾಹಿತ್ಯ ಅಧ್ಯಯನಕಾರ, ಶಾಸ್ತ್ರ ಪಂಡಿತ, ಕನ್ನಡ, ತೆಲುಗು, ಸಂಸ್ಕೃತ, ಇಂಗ್ಲೀಷ್ ಭಾಷೆ-ಸಾಹಿತ್ಯ ಬಲ್ಲ ಕೋವಿದನೊಬ್ಬನಿದ್ದಾನೆ. ಅವರ ಹಾಸ್ಯ ಕೇವಲ ಒಂದು ಮುಖವಾಡ ಮಾತ್ರ ಅನಿಸುತ್ತದೆ. ಅವರ ಹಾಸ್ಯ ಪ್ರವೃತ್ತಿಯ ನೆರಳು ವಿದ್ವಾಂಸ ಅ.ರಾ. ಮಿತ್ರರ ಮೇಲೆ ಬಿದ್ದು ಅವರ ಮುಖವಾಡವನ್ನೇ ಹಲವರು ತಪ್ಪಾಗಿ ಅವರ ನಿಜಮುಖ ಎಂದು ತಿಳಿದಿರಬಹುದು.

ಈಗಲೂ ತಮ್ಮ ಇಳಿವಯಸ್ಸಲ್ಲೂ ಅವರ ಜೀವನೋತ್ಸಾಹ ಸದಾ ಸಕಾರಾತ್ಮಕ. ಅವರ ಬೆಲ್ಲ ಲೇಪನದ ಔಷಧ ಕನ್ನಡಕ್ಕೆ ಇನ್ನಷ್ಟು ಸಿಗುತ್ತಿರಲಿ.

ಮೊದಲ ಓದು

ಕುಕ್ಕರಹಳ್ಳಿ ಕೆರೆಯ ಆಪ್ತಯಾನ


ಮೈಸೂರು ಸಾಂಸ್ಕೃತಿಕ ನಗರವಾದರೂ ಇಲ್ಲಿನ ಪ್ರಕೃತಿ ಸೌಂದರ್ಯ ದೇಶ ವಿದೇಶದವರನ್ನು ಬಹುವಾಗಿ ಸೆಳೆಯುತ್ತದೆ. ಈ ಸುಂದರ ನಗರದ ಪ್ರಮುಖ ಆಕರ್ಷಣೆಗಳಲ್ಲಿ ಕುಕ್ಕರಹಳ್ಳಿ ಕೆರೆಯೂ ಒಂದು. ಪ್ರಸ್ತುತ ಪ್ರಬಂಧ ಸಂಕಲನದಲ್ಲಿ ಕುಕ್ಕರಹಳ್ಳಿ ಕೆರೆ ಬಗ್ಗೆ ಲೇಖಕರು, ತಮಗೂ ಮತ್ತು ಕುಕ್ಕರಹಳ್ಳಿ ಕೆರೆಗೂ ಇರುವ ಅವಿನಾಭಾವ ಸಂಬಂಧವನ್ನು ರಸವತ್ತಾಗಿ, ಅಷ್ಟೇ ರೋಚಕವಾಗಿ ಕಟ್ಟಿಕೊಟ್ಟಿದ್ದಾರೆ. ಜೀವನದಲ್ಲಿ ಒಬ್ಬೊಬ್ಬರಿಗೆ ಒಂದೊಂದು ಪ್ರಿಯವಾದ, ಆಪ್ತವಾದ ಸ್ಥಳವಿರುತ್ತದೆ ಎನ್ನುತ್ತಲೇ ಈ 'ಜಲರಾಶಿ' ಬಗ್ಗೆ ಆಸಕ್ತಿದಾಯ ವಾಸ್ತವಾಂಶಗಳನ್ನು ಅಕ್ಷರ ರೂಪದಲ್ಲಿ ನೀಡಿದ್ದಾರೆ.

ಕುಕ್ಕರಹಳ್ಳಿ ಕೆರೆಯ ಬಗ್ಗೆ ಬರೆಯುತ್ತಲೇ ಜಾತಿ, ಇಂದಿನ ಜೀವನಶೈಲಿ, ಸಾಲ, ಚಟ್ನಿ, ಕೊಡೆ, ಪುಸ್ತಕ ಬಿಡುಗಡೆ, ಕಣಿ, ಚೌಕ, ಎಕ್ಕಡ... ಹೀಗೆ ಬೇರೆ ಬೇರೆ ವಿಚಾರಗಳ ಬಗ್ಗೆಯೂ ಬೆಳಕು ಚೆಲ್ಲಿದ್ದಾರೆ. ಓದುಗ ಒಂದು ವಿಚಾರದ ಬಗ್ಗೆ ಓದಿ ಮುಗಿಸುವಷ್ಟರಲ್ಲಿ ಮತ್ತೊಂದು ವಿಚಾರ ತೆರೆದುಕೊಳ್ಳುತ್ತದೆ. ಬರಹಗಳೆಲ್ಲವೂ ನಿರಂತರವಾಗಿ ಓದಿಸುತ್ತಾ ಹೋಗುವ ಓಘವನ್ನು ಲೇಖಕರು ಸೃಷ್ಟಿಸಿಕೊಟ್ಟಿದ್ದಾರೆ.

ಹಾಗೆ ನೋಡಿದರೆ ಲೇಖಕರು ಕುಕ್ಕರಹಳ್ಳಿ ಕೆರೆಯನ್ನು ಮೊದಲ ಬಾರಿಗೆ ನೋಡಿದ ಸನ್ನಿವೇಶವನ್ನು ವಿವರಿಸಿದ ಪರಿ ಓದಿದರೆ ಒಮ್ಮೆ ಈ ಕೆರೆಯನ್ನು ನೋಡಬೇಕು ಎನಿಸುತ್ತದೆ. ಏಕೆಂದರೆ ತಮ್ಮ ಆರನೇ ವಯಸ್ಸಿನಲ್ಲಿ ಅಪ್ಪನ ಜೊತೆಗೆ ಬೈಸಿಕಲ್‌ನಲ್ಲಿ ಡಬಲ್ ರೈಡಿಂಗ್ ಮಾಡುತ್ತಾ 18 ಕಿ.ಮೀ ದೂರದಲ್ಲಿರುವ ನೆಂಟರ ಮನೆಗೆ ಹೋಗುವ ಸಂದರ್ಭದಲ್ಲಿ ಬೈಸಿಕಲ್ಲನ್ನು ನಿಲ್ಲಿಸಿ ಕೆರೆಯಲ್ಲಿ ಇಬ್ಬರೂ ಕೈಕಾಲು ಮುಖ ತೊಳೆದುಕೊಂಡು ಒಂದೆರಡು ಬೊಗಸೆ ನೀರನ್ನು ಕುಡಿದು ತೃಪ್ತಿಪಟ್ಟಿದ್ದನ್ನು ನೆನಪಿಸಿಕೊಂಡಿದ್ದಾರೆ.

ಈ ಕೆರೆಗೆ ಕುಕ್ಕರಹಳ್ಳಿ ಕೆರೆ ಎಂಬ ಹೆಸರು ಬಂದದ್ದು ಹೇಗೆ? ಎಂಬುದನ್ನೂ ರಸವತ್ತಾಗಿ ವಿವರಿಸಿದ್ದಾರೆ. ಎಲ್ಲ ಹದಿನೆಂಟು ಪ್ರಬಂಧಗಳೂ ತೂಕಬದ್ಧವಾಗಿ ನಿರೂಪಿತವಾಗಿವೆ.

ಪು: 164 ₹200



ಕುಕ್ಕರಹಳ್ಳಿ ಕೆರೆ
ಲೇ: ಹೊರೆಯಾಲ ದೊರೆಸ್ವಾಮಿ
ಪ್ರ: ಸಮಾನತಾ ಪ್ರಕಾಶನ, ಮೈಸೂರು
ಸಂ: 9482808474

ಕಥೆ

ಪ್ರೇಮಕುಮಾರ್ ಹರಿಯಬ್ಬೆ ಅವರ **ಬಿಡುಗಡೆ**

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ

ರವೀಂದ್ರ ಭಟ್ಟ ಕುಳಿಬೀಡು ಅವರ **ಅಕ್ಷರಗಳಿಗೂ ಆಯಾಸವಾಗಿದೆ...**

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ bhanuvara@prajavani.co.in

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಉಲ್ಲೋಲಿಸು

ಉಲ್ಲೋಲಿಸು (ಕ್ರಿ). ಒಲೆದಾಡು; ಹೊಯ್ದಾಡು

ರಾವಣನು ಪುಷ್ಪಕ ವಿಮಾನದಲ್ಲಿ ಸೀತೆಯನ್ನು ಹೊತ್ತೊಯ್ಯುವಾಗ ಜಟಾಯು ಪಕ್ಷಿಯು ಅವನ ರಥದ ಮೇಲೆ ಆಕ್ರಮಿಸಿತು. ಅದನ್ನು ಕವಿಯು 'ಎರಗಿದುರುಬೆಗೆ ತೇರ್ ತತ್ತರಿಸಿ ಉಲ್ಲೋಲಿಸಿತು, (2.2 : 550) ಎಂದು ಚಿತ್ರಿಸಿದ್ದಾರೆ. ಜಟಾಯು ಎರಗಿದ ಉರುಬೆ-ರಭಸಕ್ಕೆ ತೇರು ತತ್ತರಿಸಿ ಹೊಯ್ದಾಡಿತು ಎಂಬುದನ್ನು 'ಉಲ್ಲೋಲಿಸು' ಪದದಿಂದ ಬಣ್ಣಿಸಿದ್ದಾರೆ. ಆ 'ಉಲ್ಲೋಲ' ಪದವು ಆಗಸದಲ್ಲಿ ಅದು ದೊಡ್ಡ ಅಲೆಯ ಬಡಿತಕ್ಕೆ ಒಳಗಾದಂತೆ ಒಲೆದಾಡಿದ್ದನ್ನು ವ್ಯಂಜಿಸುತ್ತದೆ.

ಎಡೆಸೋಲು

ಎಡೆಸೋಲು (ಕ್ರಿ). ಮಧ್ಯದಲ್ಲಿ ಸೋತುಹೋಗು

[ಎಡೆ + ಸೊಲು (< ಸೋಲ್)

ರಾಮಚಂದ್ರನ ವಾನರ ಸೇನೆ ಲಂಕೆಗೆ ನುಗ್ಗಲು ಬೀಡು ಬಿಟ್ಟಿರುವುದನ್ನು ರಾವಣನು ತಿಳಿಯುವನು. ಅವನು ಸಚಿವರು, ಸೇನಾಪತಿಗಳು, ಸತ್ತ್ರ ಜೆಗಳ ಸಭೆ ಕರೆಯುವನು. ಅವರನ್ನುದ್ದೇಶಿಸಿ ಮಾತನಾಡುವಾಗ 'ಸ್ವತಂತ್ರವಾದ ನಮ್ಮನ್ನು ಗೆದ್ದು ದಾಸ ದೀಕ್ಷೆಯನ್ನು ಕೊಡಲು ಪ್ರತಿಜ್ಞಾ ಬದ್ಧರಾಗಿ ಬಂದು ಅಲ್ಲಿ ಬೀಡು ಬಿಟ್ಟಿದ್ದಾರೆ. ಅವರು ಆ ದೂರದ ಅಪಾರ ಸಮುದ್ರದ ಮಧ್ಯೆಯೇ ಸೋತು ಹೋಗುತ್ತಾರೆ' ಎಂದು ಹೇಳುವನು.

ಕುವೆಂಪು ಅವರು 'ಮಧ್ಯದಲ್ಲಿ ಸೋತು ಹೋಗುತ್ತಾರೆ' ಎಂದು ಹೇಳಲು 'ಎಡೆಸೋಲು' ಪದ ನಿರ್ಮಿಸಿ ಹೀಗೆ ಪ್ರಯೋಗಿಸಿದ್ದಾರೆ.

ಸ್ವತಂತ್ರರೆಮ್ಮಂ ಗೆಲ್ದು
ದಾಸದೀಕ್ಷೆಯನೀಯೆ
ಪೂಣ್ದು ತರಿಸಂದು ಬೀಡು
ಬಿಟ್ಟಿಹರಲ್ಲಿ, ಆ
ದೂರಪಾರದಪಾರತೆಯು
ಮೆಡೆಸೋಲುವೋಲ್. (3.7 : 96-98)

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಹಸ	+	ಲವ	+	ಕ್ಕಿ	=	
2	ಹರ	+	ದುಬ್ಬ	+	ಣ	=	
3	ರಣ	+	ಕಸ	+	ಮೀ	=	
4	ಶರ	+	ನಾಣ್ಯ	+	ಅ	=	
5	ಗತಿ	+	ರಣ	+	ದಾ	=	

ಜಾಣಪದ ಆಟ

ಇಲ್ಲಿ ಕೊಟ್ಟಿರುವ ದೀರ್ಘಸ್ವರದ ಚಿಹ್ನೆಯ ಆಚೀಚೆ ಅಕ್ಷರಪಟ್ಟಿಯಿಂದ ಎರಡಕ್ಷರ ಆರಿಸಿ ತುಂಬಿ ಅರ್ಥಬದ್ಧ ಪದ ಮಾಡಿ..

ಅಕ್ಷರ ಪಟ್ಟಿ				
ಸೆ	ಗ	ರ	ಖು	ವೀ
ಬಿ	ನೆ	ಳಿ	ಳೆ	ವೆ
ಲಿ	ಕೊ	ಬೆ	ಸೆ	ರು
ಹೊ	ನಿ	ವೆ	ಳೆ	ರ

1		ಽ	
2		ಽ	
3		ಽ	
4		ಽ	
5		ಽ	
6		ಽ	
7		ಽ	
8		ಽ	
9		ಽ	
10		ಽ	

ಕೊಂಚತಂತ್ರ

KGS(ಕನ್ನಡ ಗರ್ಲ್ಸ್ ಸ್ಕೂಲ್)ಎನ್ನುವುದನ್ನು ನೆನಪಿಡುವ ಮೂಲಕ 'ರಾಷ್ಟ್ರಕವಿ' ಎಂಬ ಗೌರವಕ್ಕೆ ಪಾತ್ರರಾದ ಮೂವರು ಕವಿಗಳ ಹೆಸರನ್ನು ನೆನಪಿಡಬಹುದು.

K = ಕುವೆಂಪು G = ಗೋವಿಂದಪೈ S = ಶಿವರುದ್ರಪ್ಪ

ಮೋ G ನ / E N G L I S H

ಇಲ್ಲಿ ಕೊಟ್ಟಿರುವ ಕೊನೆಯ ಅಕ್ಷರಕ್ಕೆ ಹಿಂದೆ ಎರಡಕ್ಷರ ತುಂಬಿ ಒಂದೇ ಅಕ್ಷರದ ಉಚ್ಚಾರ ಪದವಾಗುವಂತೆ ರಚಿಸಿ. ಯಾವ ಅಕ್ಷರ ತುಂಬುವಿರಿ?

1			E
2			Y
3			E
4			Y
5			Y
6			A
7			Y
8			Y
9			O
10			A

ಡಣ್ಣ ಚಿಕ್ಕ ಕೀಲ್ರಷ್ಟು ಕಥೆಯ — ಚಮಚವಲ್ಲ...ಸಕ್ಕರೆ!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಗುಂಡ ಕಾಫಿ ಕುಡಿಯಲೆಂದು ಹೋಟೆಲ್‌ಗೆ ಹೋಗಿದ್ದ. ಗುಂಡನಿದ್ದಲ್ಲಿಗೆ ಕಾಫಿ ಹಿಡಿದುಕೊಂಡು ಬಂದ ವೇಟರ್ ಎಷ್ಟು ಚಮಚ ಎಂದು ಕೇಳಿದ. ವೇಟರ್ ಕೈಯಲ್ಲಿ ಸಕ್ಕರೆಯೂ ಇದ್ದಿದ್ದನ್ನು ಕಂಡ ಗುಂಡ ಮೂರು ಚಮಚ ಎಂದ. ಅದಕ್ಕೆ ಆ ವೇಟರ್ ತಮಾಷೆಗೆ ಮೂರು ಚಮಚಗಳನ್ನು ಗುಂಡನ ಟೇಬಲ್ ಮೇಲೆ ಇಟ್ಟು ಹೊರಟ. ಇದನ್ನು ಕಂಡ ಗುಂಡ ಅವಾಕ್ಕಾದ.



ಶಿಕ್ಷಣ: ಹಿತನುಡಿಗಳು

1. ಶಿಕ್ಷಣವೆಂದರೆ ಬರೀ ಅಕ್ಷರ ಜ್ಞಾನವಲ್ಲ; ಅಕ್ಷಯ ನಿಧಿ
2. ಲಕ್ಷ ಲಕ್ಷ ಕೊಟ್ಟು ಕಲಿಯುವುದಕ್ಕಿಂತ ಲಕ್ಷ್ಯ ಕೊಟ್ಟು ಕಲಿಯುವುದು ಲೇಸು
3. ಸಂಸ್ಕಾರವಿಲ್ಲದ ಶಿಕ್ಷಣ ಉಪ್ಪಿಲ್ಲದ ಉಪ್ಪಿಟ್ಟಿನಂತೆ!
4. ಶಿಕ್ಷಣ ಭವ್ಯವಾದ ಕಲ್ಲಿನ ಕಟ್ಟಡದಲ್ಲಿ ಇಲ್ಲ. ಅಲ್ಲಿನ ಬೋಧನೆಯಲ್ಲಿದೆ.
5. ವಿದ್ಯಾರ್ಥಿ ಪರೀಕ್ಷಾ ಗುಣಗಳಿಗಿಂತ ತನ್ನ ವ್ಯಕ್ತಿತ್ವ ವಿಕಸನದ ಗುಣಗಳಿಗೆ ಹೆಚ್ಚು ಮಹತ್ವ ಕೊಡಬೇಕು.
6. ಮಕ್ಕಳಲ್ಲಿ ಅಡಗಿರುವ ಸುಪ್ತಾವಸ್ಥೆಯ ಅಂತರ್ಗತ ಶಕ್ತಿಯನ್ನು ಹೊರಗೆ ಹಾಕುವುದೇ ಶಿಕ್ಷಣ



ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು


ಪದಸಂಕಲನ:
1.ಸಹಗಮನ
2.ಗರಡಿಮನೆ 3.ಕಸಬರಿಗೆ
4.ಮರಗೆಣಸು
5.ಗರತಿಹಾಡು

ಜಾಣಪದ ಆಟ:
1.ಕೊಕ್ಕೆ 2.ಗುಗ್ಗು 3.ಚುಚ್ಚು
4.ಜಜ್ಜು 5.ತುತ್ತು 6.ದದ್ದು
7.ನನ್ನ 8.ಬೊಬ್ಬೆ
9.ಮಮ್ಮು
10.ಲಲ್ಲೆ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಕವಿತಾ ಕಲ್ಲಿಕರೆಣ್ಣನವರ
ಹಾನಗಲ್



ದಿಶಾ ಆರ್.ಜಿ.
ಉತ್ತರಕನ್ನಡ



ಮೋಹಿತ್ ಎಂ.ಡಿ.
ಸೊರಬ



ಪ್ರತೀಕ್ಷಾ ಜೋಯ್ಸ್
ಶಿವಮೊಗ್ಗ



ಭುವನ್ ಗಿರಡ್ಡಿ
ಬೆಂಗಳೂರು



ಸಂಸ್ಕೃತಿ ಎಂ.ಎಸ್.
ಮೈಸೂರು

ದಿ ಕ್ಯಾಪಿಟೋಲ್ ಒಳಗೆ ಹೆಜ್ಜೆ ಹಾಕುತ್ತಾ...

ಎ.ಎಸ್. ನಾರಾಯಣರಾವ್

ಬೆಂಗಳೂರಿನ ವಿಧಾನಸೌಧ ಅಥವಾ ದೆಹಲಿಯ ಸಂಸತ್ ಭವನದ ಒಳಗೆ ಹೋಗಬೇಕು, ಅದರ ಸೌಂದರ್ಯ ಸವಿಯಬೇಕು ಎಂದರೆ ಸುಲಭಕ್ಕೆ ಸಾಧ್ಯವೇ ಇಲ್ಲ. ಹತ್ತಾರು ಕಟ್ಟುಪಾಡುಗಳು, ನಿರ್ಬಂಧಗಳು. ಜನಸಾಮಾನ್ಯರ ಪಾಲಿಗೆ ಇವುಗಳ ಪ್ರವೇಶ ಗಗನ ಕುಸುಮವೇ ಸರಿ. ವಶೀಲಿಬಾಜಿ ಮಾಡಿ, ರಾಜಕಾರಣಿಗಳ ಮರ್ಜಿಯಲ್ಲಿ ಹಾಗೂಹೀಗೂ ಕಷ್ಟಪಟ್ಟು ಪ್ರವೇಶ ಗಿಟ್ಟಿಸಿಕೊಂಡರೆ 'ಅಲ್ಲಿ ಹೋಗಬೇಡಿ, ಇಲ್ಲಿ ನಿಲ್ಲಬೇಡಿ, ಕಾಲ ಮೇಲೆ ಕಾಲು ಹಾಕಿ ಕುಳಿತುಕೊಳ್ಳಬೇಡಿ, ಫೋಟೊ ತೆಗೆಯಬೇಡಿ..' ಅಂತ ಹೆಜ್ಜೆಹೆಜ್ಜೆಗೂ ಎಚ್ಚರಿಕೆ ನೀಡುವ, ಗದರಿಸುವ, ಕಡಿವಾಣ ಹಾಕುವ ಭದ್ರತಾ ಸಿಬ್ಬಂದಿಯ ಏರುದನಿ...

> ಅಮೆರಿಕದ ಸಂಸತ್ ಭವನ 'ದಿ ಕ್ಯಾಪಿಟೋಲ್' ರಾಜಧಾನಿ ವಾಷಿಂಗ್ಟನ್‌ನ ಪ್ರಮುಖ ಆಕರ್ಷಣೆಗಳಲ್ಲಿ ಒಂದು. ಹಾಲಿನಂತಹ ಬಿಳಿಬಣ್ಣದ ಈ ಕಟ್ಟಡದ ಒಳಗೆ ವಿದೇಶಿಯರೂ ಸಲೀಸಾಗಿ ಹೋಗಬಹುದು. ತುಂಬ ಕಟ್ಟುನಿಟ್ಟಿನ ಭದ್ರತಾ ತಪಾಸಣೆ ಇದ್ದರೂ ಕಿರಿಕಿರಿ ಎಂದು ಅನಿಸುವುದೇ ಇಲ್ಲ.


ಅಮೆರಿಕದ ಸಂಸತ್ ಭವನ

ಆದರೆ ವಿಶ್ವದ ಅತ್ಯಂತ ಬಲಾಢ್ಯ ದೇಶ ಎಂದೇ ಪರಿಗಣಿಸಲಾಗುವ ಅಮೆರಿಕದಲ್ಲಿ ಇದು ತದ್ವಿರುದ್ಧ. ಅಲ್ಲಿನ ಪ್ರಜೆಗಳು ಮಾತ್ರವಲ್ಲ ವಿದೇಶಿಯರು ಕೂಡ ಸಲೀಸಾಗಿ ಅಮೆರಿಕದ ಸಂಸತ್ (THE CAPITOL) ಅಥವಾ ಅಲ್ಲಿನ ರಾಜ್ಯಗಳ ಶಾಸನ ಸಭೆಗಳ ಕಟ್ಟಡಗಳ ಒಳಗೆ ಹೋಗಬಹುದು, ಸುತ್ತಾಡಬಹುದು, ಚಿತ್ರ ತೆಗೆದುಕೊಳ್ಳಬಹುದು, ವೀಕ್ಷಕರ ಗ್ಯಾಲರಿಗಳಲ್ಲಿ ಕುಳಿತು ಕಲಾಪ ವೀಕ್ಷಿಸಬಹುದು. ಅನಗತ್ಯ ಕಿರುಕುಳದ ಮಾತೇ ಇಲ್ಲ. ಸಿಬ್ಬಂದಿ ಬಹಳ ಸೌಜನ್ಯದಿಂದಲೇ ವ್ಯವಹರಿಸುತ್ತಾರೆ.

ವಾಷಿಂಗ್ಟನ್‌ನ ಎತ್ತರದ ಕ್ಯಾಪಿಟಲ್ ಹಿಲ್ ಪ್ರದೇಶದಲ್ಲಿ ಹಚ್ಚಹಸಿರು ಉದ್ಯಾನಗಳ ಮಧ್ಯೆ ತಲೆ ಎತ್ತಿ ನಿಂತಿರುವ, ಬಿಳಿಬಣ್ಣದಲ್ಲಿ ಮಿರುಗುವ ಈ ಬೃಹತ್ ಕಟ್ಟಡದಲ್ಲಿ ಅಮೆರಿಕದ ಶಾಸಕಾಂಗ ಕಾರ್ಯನಿರ್ವಹಿಸುತ್ತದೆ. ಕಟ್ಟಡದ ಒಂದು ಭಾಗದಲ್ಲಿ ಸೆನೆಟ್ ಮತ್ತು ಇನ್ನೊಂದು ಭಾಗದಲ್ಲಿ ಕಾಂಗ್ರೆಸ್ (ನಮ್ಮಲ್ಲಿ ಲೋಕಸಭೆ ಮತ್ತು ರಾಜ್ಯಸಭೆ ಇದ್ದಂತೆ) ಇವೆ. ಪ್ರತೀ ನಾಲ್ಕು ವರ್ಷಗಳಿಗೆ ಒಮ್ಮೆ ಜನವರಿ 20ರಂದು ಅಮೆರಿಕದ ಹೊಸ ಅಧ್ಯಕ್ಷರ ಪ್ರಮಾಣ ವಚನ ಸ್ವೀಕಾರ ಸಮಾರಂಭ ಕೂಡ ಇದೇ ಕಟ್ಟಡದ ಪಶ್ಚಿಮ ಭಾಗದ ಮೆಟ್ಟಿಲುಗಳ ಮೇಲೆ ನಡೆಯುತ್ತದೆ. ಆದರೆ ಈ ಸಲ ವಿಪರೀತ ಚಳಿಯ ಕಾರಣ ಒಳಭಾಗದ ಗುಮ್ಮಟದ (ರೊಟಂಡಾ) ಕೆಳಗೆ ನಡೆದಿತ್ತು.

ಈ ರೊಟಂಡಾ ಅಥವಾ ಗುಮ್ಮಟದ ಕೆಳಭಾಗ ಇಡೀ ಕಟ್ಟಡದ ಹೃದಯ ಇದ್ದಂತೆ. ಸುಂದರ ತೈಲ ಚಿತ್ರಗಳು, ಚಿತ್ತಾರಗಳು, ಅಮೆರಿಕದ ಸ್ವಾತಂತ್ರ್ಯ ಚಳವಳಿ ಮತ್ತು ಪ್ರಮುಖ ಘಟ್ಟಗಳನ್ನು ಬಿಂಬಿಸುವ ದೊಡ್ಡ ದೊಡ್ಡ ಕಲಾಕೃತಿಗಳು, ಅಮೆರಿಕದ ಎಲ್ಲ 50 ರಾಜ್ಯಗಳನ್ನು ಪ್ರತಿನಿಧಿಸುವ 50 ವಿಶಿಷ್ಟ ಸ್ಮರಣಿಕೆಗಳು, ವಿವಿಧ ಅಧ್ಯಕ್ಷರುಗಳ ಪ್ರತಿಮೆಗಳು ಇಲ್ಲಿವೆ.


ದಿ ಕ್ಯಾಪಿಟೋಲ್‌ನ ಗುಮ್ಮಟದ ಒಳಭಾಗದಲ್ಲಿ ಅಮೆರಿಕದ ಅಧ್ಯಕ್ಷರುಗಳ ಪ್ರತಿಮೆಗಳು

ಈ ಕಟ್ಟಡದ ನಿರ್ಮಾಣದ ಚರಿತ್ರೆಯೇ ಅತ್ಯಂತ ರೋಚಕ. ನಿರ್ಮಾಣ ಶುರುವಾಗಿದ್ದು 1793ರಲ್ಲಿ. ಇದಾದ ಏಳು ವರ್ಷಗಳ ನಂತರ ಕಾಂಗ್ರೆಸ್, ಸುಪ್ರೀಂ ಕೋರ್ಟ್ ಮತ್ತು ಇತಿಹಾಸ ಪ್ರಸಿದ್ಧ ದಿ ಲೈಬ್ರರಿ ಆಫ್ ಕಾಂಗ್ರೆಸ್ (ಗ್ರಂಥಾಲಯ) ಇಲ್ಲಿ ಕಾರ್ಯಾರಂಭ ಮಾಡಿದವು. ಆದರೆ 1814ರಲ್ಲಿ ಬ್ರಿಟಿಷ್ ಸೇನೆ ಈ ಕಟ್ಟಡವನ್ನು ಸಂಪೂರ್ಣ ಸುಟ್ಟು ಹಾಕಿತು. ಈಗ ಕಾಣುತ್ತಿರುವ ಗುಮ್ಮಟದ ಭಾಗ ನಿರ್ಮಾಣವಾಗಿದ್ದು 1826ರಲ್ಲಿ. ಅವಶ್ಯಕತೆಗೆ ಅನುಗುಣವಾಗಿ ಕಾಲಕಾಲಕ್ಕೆ ಇದರ ವಿಸ್ತರಣೆ ನಡೆಯುತ್ತಲೇ ಬಂದಿದೆ. ಈಗ ಅಮೆರಿಕದ ಪ್ರಜಾಪ್ರಭುತ್ವದ ಸಂಕೇತವಾಗಿ ರಾರಾಜಿಸುತ್ತಿದೆ.

ಪ್ರವೇಶ ಹೇಗೆ?

ಕ್ಯಾಪಿಟೋಲ್‌ನ ಪೂರ್ವ ಪ್ರವೇಶ ದ್ವಾರದ ಕಡೆಯ ಮೆಟ್ಟಿಲುಗಳ ಕೆಳಗೆ ನೆಲದಡಿಯ ಅಂತಸ್ತಿನಲ್ಲಿ ಸಂದರ್ಶಕರ ಕೇಂದ್ರ ಇದೆ. ಅಲ್ಲಿಗೆ ಹೋಗಿ ಹೆಸರು ನೋಂದಾಯಿಸಬೇಕು. ಅದನ್ನು ಪ್ರವೇಶಿಸುವ ಮೊದಲೇ ಭದ್ರತಾ ತಪಾಸಣೆ ನಡೆಯುತ್ತದೆ. ಸಂದರ್ಶಕರ ಕೇಂದ್ರದಲ್ಲಿ ಸಂದರ್ಶಕರನ್ನು ತಂಡಗಳಾಗಿ ವಿಂಗಡಿಸುತ್ತಾರೆ. ಪ್ರತಿ ತಂಡಕ್ಕೂ ಒಬ್ಬ ಗೈಡ್ ಇರುತ್ತಾರೆ. ಅವರು ರೊಟಂಡಾವರೆಗೂ ಕರೆದುಕೊಂಡು ಹೋಗುತ್ತಾರೆ. ಹಾದಿಯುದ್ದಕ್ಕೂ ವಿವರಣೆ ಇರುತ್ತದೆ. ಪ್ರಶ್ನೆ ಕೇಳಬಹುದು. ಅನುಮಾನ ಪರಿಹರಿಸಿಕೊಳ್ಳಬಹುದು. ಸಂದರ್ಶಕರ ಕೇಂದ್ರದಲ್ಲಿ ಈ ಕಟ್ಟಡದ ಬಗ್ಗೆ ಸಮಗ್ರ ಮಾಹಿತಿ ನೀಡುವ ವಿವರಣಾ ಪುಸ್ತಿಕೆಗಳನ್ನು ಉಚಿತವಾಗಿ ಒದಗಿಸುವ ವ್ಯವಸ್ಥೆಯೂ ಇದೆ. ಹಿಂದಿಯಲ್ಲೂ ಈ ಪುಸ್ತಕಗಳನ್ನು ಮುದ್ರಿಸಿರುವುದು ವಿಶೇಷ.


ಗುಮ್ಮಟದ ಒಳಭಾಗದಲ್ಲಿ ತೈಲಚಿತ್ರಗಳು

ಆನ್‌ಲೈನ್‌ನಲ್ಲಾದರೆ https://www.visitthecapitol.gov ವೆಬ್‌ಸೈಟ್‌ಗೆ ಹೋಗಿ ನೋಂದಾಯಿಸಿಕೊಂಡು ಭೇಟಿ ಕೊಡಬಹುದು. ಅದು ಸಾಧ್ಯವಾಗದಿದ್ದರೂ ನೇರವಾಗಿ ಹೋಗಿ ನೋಂದಾಯಿಸಬಹುದು. ಆದರೆ ಇದಕ್ಕಾಗಿ ಮಧ್ಯಾಹ್ನ 2.30ರ ಒಳಗೆಯೇ ಅಲ್ಲಿರಬೇಕು.

ಸೆನೆಟ್ ಮತ್ತು ಕಾಂಗ್ರೆಸ್ ಸಭಾಂಗಣಗಳ ಸಂದರ್ಶಕರ ಗ್ಯಾಲರಿಗಳಿಗೆ ಹೋಗುವುದಾದರೆ ಬೇರೆಯೇ ಅನುಮತಿ ಪತ್ರ ಪಡೆದುಕೊಳ್ಳಬೇಕು. ಅದಕ್ಕೇನೂ ಉದ್ದುದ್ದ ಫಾರಂ ಭರ್ತಿ ಮಾಡುವ, ಹತ್ತಾರು ಪ್ರಶ್ನೆಗಳನ್ನು ಎದುರಿಸುವ ಪ್ರಮೇಯ ಇಲ್ಲವೇ ಇಲ್ಲ. ನಿಮ್ಮ ಗುರುತಿನ ಚೀಟಿ ಅಥವಾ ಪಾಸ್‌ಪೋರ್ಟ್ ತೋರಿಸಿದರೆ ಸಾಕು.

ದಿ ಕ್ಯಾಪಿಟೋಲ್ ಸುತ್ತಾಡಿ ಬರುವುದೆಂದರೆ ಇತಿಹಾಸದೊಂದಿಗೆ ಸಂವಾದ ನಡೆಸಿದಂತೆಯೂ, ವಾಸ್ತುಶಿಲ್ಪದ ಮೋಡಿಯಲ್ಲಿ ಕಳೆದುಹೋದ ಅನುಭವ. ❖


ಆಫ್ರಿಕಾ ಅಮೆರಿಕ ಇತಿಹಾಸ ಮತ್ತು ಸಂಸ್ಕೃತಿ ಬಿಂಬಿಸುವ ರಾಷ್ಟ್ರೀಯ ಮ್ಯೂಸಿಯಂ

ಮ್ಯೂಸಿಯಂಗಳ ನಗರ!

ವಾಷಿಂಗ್ಟನ್ ನಗರವನ್ನು ಒಂದು ಅರ್ಥದಲ್ಲಿ ಮ್ಯೂಸಿಯಂಗಳ ನಗರ ಎಂದೇ ಕರೆಯಬಹುದು. ಒಂದಕ್ಕಿಂತ ಒಂದು ಭವ್ಯ, ಮಾಹಿತಿಪೂರ್ಣ ಮ್ಯೂಸಿಯಂಗಳು. ಹೆಚ್ಚಿನವು ಕ್ಯಾಪಿಟಲ್ ಹಿಲ್ ಪ್ರದೇಶದ ಸುತ್ತಮುತ್ತ ಇವೆ. ವಿಶೇಷ ಎಂದರೆ ಬಹುತೇಕ ಮ್ಯೂಸಿಯಂಗಳಲ್ಲಿ ಪ್ರವೇಶ ಉಚಿತ. ನೀವು ಕಾಲ್ನಡಿಗೆ ಪ್ರಿಯರಾದರೆ ಇನ್ನೂ ಒಳ್ಳೆಯದು. ಒಂದು ಕಡೆಯಿಂದ ಇನ್ನೊಂದು ಕಡೆ ಓಡಾಡಿಕೊಂಡು ಹೋಗಿ ನೋಡಬಹುದು. ಆದರೆ ಒಂದೆರಡು ದಿನದಲ್ಲೇ ಇವನ್ನೆಲ್ಲ ನೋಡಲು ಆಗುವುದಿಲ್ಲ. ಒಂದೊಂದೂ ಅಷ್ಟೊಂದು ವಿಶಾಲ.

ವಿಶ್ವದ ವಿವಿಧ ಭಾಗಗಳಿಂದ ಸಂಗ್ರಹಿಸಿ ಬೆಳೆಸಲಾದ ಅಪರೂಪದ ಸಸ್ಯ ಸಂಪತ್ತಿನ ಯುಎಸ್ ಬೊಟಾನಿಕ್ ಗಾರ್ಡನ್, ಆಫ್ರಿಕನ್ ಅಮೆರಿಕನ್ ಸಿವಿಲ್ ವಾರ್ ಮೆಮೋರಿಯಲ್, ಡೈನೋಸಾರ್‌ಗಳು ಮತ್ತು ಆಫ್ರಿಕಾದ ಆನೆಗಳ ಬದುಕಿನ ಮೇಲೆ ಬೆಳಕು ಚೆಲ್ಲುವ ನ್ಯಾಷನಲ್ ಮ್ಯೂಸಿಯಂ ಆಫ್ ನ್ಯಾಚುರಲ್ ಹಿಸ್ಟರಿ, ರಾಷ್ಟ್ರೀಯ ಪ್ರಾರ್ಥನಾ ಸ್ಥಳ ನ್ಯಾಷನಲ್ ಕ್ಯಾಥೆಡ್ರಲ್, ಯುಎಸ್ ಹಾಲೊಕಾಸ್ಟ್ ಮ್ಯೂಸಿಯಂ, ಬೋನ್ಸಾಯ್ ಸಸ್ಯಗಳನ್ನು ಒಳಗೊಂಡ ಯುಎಸ್ ನ್ಯಾಷನಲ್ ಆರ್ಬೊರೆಟಮ್, ಅಮೆರಿಕದಲ್ಲಿ ಬಹಳಷ್ಟು ವರ್ಷ ದಾಸ್ಯಕ್ಕೆ ಒಳಗಾಗಿದ್ದ ಆಫ್ರಿಕಾ ಮೂಲದ ಕಪ್ಪುವರ್ಣೀಯ ಅಮೆರಿಕನ್ನರ ಸಾಧನೆಗಳನ್ನು ಮತ್ತು ಅವರು ಅನುಭವಿಸಿದ ಕಷ್ಟಗಳನ್ನು ಕಣ್ಣಿಗೆ ಕಟ್ಟುವಂತೆ ತೋರಿಸುವ ಆಕರ್ಷಕ ಹೊರಾಂಗಣ ವಿನ್ಯಾಸದ ನ್ಯಾಷನಲ್ ಮ್ಯೂಸಿಯಂ ಆಫ್ ದಿ ಅಮೆರಿಕನ್ ಇಂಡಿಯನ್, ಆಫ್ರಿಕನ್ ಅಮೆರಿಕನ್ನರ ಕಲೆ-ಪರಂಪರೆ ಬಿಂಬಿಸುವ ನ್ಯಾಷನಲ್ ಮ್ಯೂಸಿಯಂ ಆಫ್ ಆಫ್ರಿಕನ್ ಆರ್ಟ್‌ಗಳನ್ನು ನೋಡುವುದೇ ಒಂದು ಸಂಭ್ರಮ.

ದಿ ಕ್ಯಾಪಿಟೋಲ್‌ದಿಂದ ಕೇವಲ ಒಂದೂವರೆ ಕಿ.ಮೀ ದೂರದಲ್ಲಿನ ಸ್ಮಿತ್‌ಸೋನಿಯನ್ ನ್ಯಾಷನಲ್ ಏರ್ ಆ್ಯಂಡ್ ಸ್ಪೇಸ್ ಮ್ಯೂಸಿಯಂ ಒಂದು ರೀತಿ ವಾಷಿಂಗ್ಟನ್‌ನಲ್ಲಿರುವ ಮ್ಯೂಸಿಯಂಗಳಿಗೆ ಕಿರೀಟ ಇದ್ದಂತೆ. ವೈಮಾನಿಕ ಮತ್ತು ಅಂತರಿಕ್ಷ ಕ್ಷೇತ್ರದಲ್ಲಿನ ಬೆಳವಣಿಗೆಗಳನ್ನು ಇಲ್ಲಿ ಅನುಭವಿಸಬಹುದು.

ವಾಷಿಂಗ್ಟನ್ ಯೂನಿಯನ್ ಸ್ಟೇಷನ್ ರೈಲು ನಿಲ್ದಾಣದ ಬದಿಯಲ್ಲೇ ಇರುವ ಪೋಸ್ಟಲ್ ಮ್ಯೂಸಿಯಂ, ಇಂಡಿಪೆಂಡೆನ್ಸ್ ಅವೆನ್ಯೂದ ಹಿರೋಷಿಮಾ ಮ್ಯೂಸಿಯಂ, ಏಷಿಯನ್ ಆರ್ಟ್ ಮ್ಯೂಸಿಯಂ, ಅಮೆರಿಕನ್ ಆರ್ಟ್ ಆ್ಯಂಡ್ ಹಿಸ್ಟರಿ ಮ್ಯೂಸಿಯಂ... ಹೀಗೆ ಹೆಚ್ಚೂ ಕಡಿಮೆ ಒಂದೂವರೆ ಡಜನ್‌ಗಳಷ್ಟು ಮ್ಯೂಸಿಯಂಗಳು ಪ್ರವಾಸಿಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತವೆ.

ಇದರ ಹೊರತಾಗಿ ಎರಡು ಗಂಟೆ ಕಾಲ್ನಡಿಗೆಗೆ ನೀವು ತಯಾರಿದ್ದರೆ ಎಂಟು ಮುಖ್ಯ ಸ್ಮಾರಕಗಳನ್ನು ನೋಡಬಹುದು. ಅದಕ್ಕಾಗಿ ನಿಮ್ಮ ನಡಿಗೆ ಥಾಮಸ್ ಜೆಫರ್ಸನ್ ಸ್ಮಾರಕದಿಂದ ಶುರು ಆಗಬೇಕು. ಹಾಗೇ ಸಾಗುತ್ತ ಫ್ರಾಂಕ್ಲಿನ್ ರೂಸ್‌ವೆಲ್ಟ್, ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್, ಕೊರಿಯನ್ ವಾರ್ ವೆಟರನ್ಸ್, ಅಬ್ರಹಾಂ ಲಿಂಕನ್, ವಿಯೆಟ್ನಾಂ ವಾರ್, ವರ್ಲ್ಡ್ ವಾರ್ 2 ಮತ್ತು ಜಾರ್ಜ್ ವಾಷಿಂಗ್ಟನ್ ಸ್ಮಾರಕ ನೋಡಬಹುದು.

ಐಸಿಸಿ ಚಾಂಪಿಯನ್ಸ್ ಟ್ರೋಫಿ 2025

ಫೆಬ್ರುವರಿ 19ರಿಂದ ಮಾರ್ಚ್ 9

(ಪಾಕಿಸ್ತಾನ–ದುಬೈ)

2017ರ ಸೋಲಿಗೆ ಮುಯ್ಯಿ ತೀರಿಸಿಕೊಳ್ಳುವ ತವಕದಲ್ಲಿ ರೋಹಿತ್ ಪಡೆ • ಪಾಕಿಸ್ತಾನಕ್ಕೆ ನಿರ್ಣಾಯಕ ಪಂದ್ಯ

ಮರಳುಗಾಡಿನಲ್ಲಿ ಭಾರತ–ಪಾಕ್ ಹಣಾಹಣಿ

• ಆರ್. ಕೌಶಿಕ್

ದುಬೈ: ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿ ನಡೆಯುವ ಭಾರತ ಮತ್ತು ಪಾಕಿಸ್ತಾನ ಕ್ರಿಕೆಟ್ ಪಂದ್ಯವು ಚಿತ್ರ ದರ್ಶಕವಿದ್ದಂತೆ. ಅಳಿಸಲಾಗದ ನೆನಪುಗಳು ಸಾಲುಗಟ್ಟುತ್ತವೆ.

1985ರಲ್ಲಿ ಇಲ್ಲಿ 125 ರನ್‌ಗಳನ್ನು ಭಾರತ ತಂಡವು ರಕ್ಷಿಸಿ ಕೊಂಡಿತ್ತು. ನಂತರದ ವರ್ಷದಲ್ಲಿ ಜಾವೇದ್ ಮಿಯಾಂದಾದ್ ಅವರು ಚೇತನ್ ಶರ್ಮಾ ಅವರ ಕೊನೆಯ ಎಸೆತದಲ್ಲಿ ಸಿಕ್ಸರ್ ಹೊಡೆದು ತಮ್ಮ ತಂಡಕ್ಕೆ ಜಯದ ಕಾಣಿಕೆ ನೀಡಿದ್ದರು. 1991ರಲ್ಲಿ ಅಕೀಬ್ ಜಾವೇದ್ ಮಾಡಿದ ಲೆಗ್ ಬಿಫೋರ್ ವಿಕೆಟ್‌ಗಳ ಹ್ಯಾಟ್ರಿಕ್. 1996ರಲ್ಲಿ ಮೊಹಮ್ಮದ್ ಅಜರುದ್ದೀನ್ ಅವರು ಅತಾವುರ್ ರೆಹಮಾನ್ ಅವರನ್ನು ಕೊನೆಯ ಓವರ್‌ನಲ್ಲಿ ದಂಡಿಸಿದ್ದು. 2021ರ ಅಕ್ಟೋಬರ್‌ನಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಲೀಗ್ ಪಂದ್ಯದಲ್ಲಿ ಶಾಹೀನ್ ಶಾ ಅಫ್ರಿದಿ ಅವರು ಇನಿಂಗ್ಸ್‌ನ ಮೊದಲ 13 ಎಸೆತಗಳ ಅಂತರದಲ್ಲಿ ರೋಹಿತ್ ಶರ್ಮಾ ಮತ್ತು ಕೆ.ಎಲ್. ರಾಹುಲ್ ಅವರ ವಿಕೆಟ್ ಉರುಳಿಸಿದ್ದು ಪ್ರಮುಖವಾದವು. ಅವತ್ತು ರೋಹಿತ್ ಮೊದಲ ಓವರ್‌ನಲ್ಲಿಯೇ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದಿದ್ದರು.

ಅಲ್ಲಿಂದ ಇಲ್ಲಿಯವರೆಗೆ ಎಡಗೈ ವೇಗಿ ಅಫ್ರಿದಿ ತಮ್ಮ ವೃತ್ತಿ ಜೀವನದಲ್ಲಿ ಏಳು,ಬೀಳು ಕಂಡಿದ್ದಾರೆ. ಒಮ್ಮೆ ಅವರಿಗೆ ನಾಯಕತ್ವ ನೀಡಿ ಕಿತ್ತು ಕೊಳ್ಳಲಾಯಿತು. ಇಂತಹ ಎಡವಟ್ಟುಗಳು ಪಾಕಿಸ್ತಾನ ಕ್ರಿಕೆಟ್ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿಬಿಟ್ಟಿವೆ. ಈಗ ಅವರ ಬೌಲಿಂಗ್ ಕೂಡ ಮೊದಲಿನಷ್ಟು ಹರಿತವಾಗಿಲ್ಲ. ಪಾಕಿಸ್ತಾನ ತಂಡದ ಆಟಗಾರರ ಆಯ್ಕೆಯು ಅಲ್ಲಿಯ ಅಭಿಮಾನಿಗಳಲ್ಲಿ ವಿಶ್ವಾಸ ಮೂಡಿಸುವಲ್ಲಿ ಯಶಸ್ವಿಯಾಗಿಲ್ಲ. ಇದೀಗ ಆ ವಿಶ್ವಾಸ ಗಳಿಸಿಕೊಳ್ಳಲು ಪಾಕ್ ತಂಡಕ್ಕೊಂದು ಅವಕಾಶ ಇದೆ.

ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಭಾನುವಾರ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಹೈವೋಲ್ಟೇಜ್ ಪಂದ್ಯದಲ್ಲಿ ರೋಹಿತ್ ನಾಯಕತ್ವದ ಬಳಗದ ಸವಾಲನ್ನು ಆತಿಥೇಯ ಪಾಕ್ ಮೆಟ್ಟಿ ನಿಂತರೆ ಅಭಿಮಾನಿಗಳ ಒಲವು ಗಳಿಸಬಹುದು.

2017ರ ಚಾಂಪಿಯನ್ಸ್ ಟ್ರೋಫಿ ಫೈನಲ್‌ನಲ್ಲಿ ಭಾರತ ತಂಡವನ್ನು ಸೋಲಿಸಿದ್ದ ನೆನಪು ಪಾಕ್ ಬಳಗಕ್ಕೆ ಇದೆ. ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದ್ದ ಆಗಿನ ನಾಯಕ ವಿರಾಟ್ ಕೊಹ್ಲಿಯ ನಿರ್ಧಾರ ಹಾಗೂ ಫಕರ್ ಜಮಾನ್ (114ರನ್) ಶತಕ ಭಾರತ ತಂಡ ಸೋಲಿಗೆ ಕಾರಣವಾಗಿದ್ದವು. ಆದರೆ ಕಳೆದ ಬುಧವಾರ ನಡೆದಿದ್ದ ನ್ಯೂಜಿಲೆಂಡ್ ಪಂದ್ಯದಲ್ಲಿ ಪಾಕ್ ತಂಡವು ಸೋತಿತ್ತು. ಅದಾದ ನಂತರ ಜಮಾನ್ ಅವರು ಗಾಯದಿಂದಾಗಿ ಇಡೀ ಟೂರ್ನಿಗೆ ಅಲಭ್ಯರಾಗಿದ್ದಾರೆ.

ಕಿವೀಸ್ ಎದುರಿನ 60 ರನ್‌ಗಳ ಸೋಲು ಪಾಕ್ ತಂಡವನ್ನು ಸಂಕಷ್ಟದ ಪ್ರಪಾತಕ್ಕೆ ತಳ್ಳಿರುವುದು ಸುಳ್ಳಲ್ಲ. ಅದರಿಂದಾಗಿ ಭಾರತ ತಂಡದ ಎದುರು ಗೆದ್ದರೆ ಮಾತ್ರ ಮೊಹಮ್ಮದ್ ರಿಜ್ವಾನ್ ಪಡೆಗೆ ಸೆಮಿಫೈನಲ್ ಅವಕಾಶ ಸಿಗಲಿದೆ. ಹಾಲಿ ಚಾಂಪಿಯನ್ ಕೂಡ ಆಗಿರುವ ಪಾಕ್ ತಂಡಕ್ಕೆ ಇದು ಪ್ರತಿಷ್ಠೆಯ ಪಂದ್ಯವೂ ಹೌದು.

ಇತ್ತ ಭಾರತ ತಂಡವು ತನ್ನ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶ ಎದುರು ಜಯಿಸಿದೆ. ಆದರೆ ಆ ಪಂದ್ಯವು ತಂಡದ ಕೆಲವು ಗಂಭೀರ ಲೋಪಗಳಿಗೆ ಕನ್ನಡಿಯನ್ನೂ ಹಿಡಿದಿತ್ತು. ಒಂದು ಹಂತದಲ್ಲಿ ಸುಲಭವಾಗಿ ಜಯಿಸಬಹುದಾಗಿದ್ದ ಪಂದ್ಯವನ್ನು ರೋಹಿತ್ ಬಳಗವೇ ಜಟಿಲಗೊಳಿಸಿಕೊಂಡಿತ್ತು. ಆ ಪಂದ್ಯದಲ್ಲಿ ಬಾಂಗ್ಲಾ ತಂಡವು 35 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿತ್ತು. ಅಲ್ಲಿಂದ ಚೇತರಿಸಿಕೊಂಡ 228 ರನ್‌ಗಳ ಮೊತ್ತವನ್ನು ಬಾಂಗ್ಲಾ ಗಳಿಸಿತ್ತು.

ಗುರಿ ಬೆನ್ನತ್ತಿದ ತಂಡಕ್ಕೆ ರೋಹಿತ್ ಆಕ್ರಮಣಕಾರಿ ಆರಂಭ ನೀಡಿದರು. ಶುಭಮನ್ ಗಿಲ್ ಪರಿಪಕ್ವವಾದ ಆಟವಾಡಿದರು. ಆದರೆ ಮಧ್ಯದಲ್ಲಿ ಬ್ಯಾಟರ್‌ಗಳು ಕುಸಿದರು. ಗಿಲ್ ತಾಳ್ಮೆಯ ಆಟದ ಮೂಲಕ ಶತಕ ಹೊಡೆದು ಗೆಲುವಿನ ಕಾಣಿಕೆ ನೀಡಿದರು. ಅದರಿಂದಾಗಿ ಮೊಹಮ್ಮದ್ ಶಮಿ ಅವರು 5 ವಿಕೆಟ್ ಗೊಂಚಲು ಪಡೆದ ಸಾಧನೆ ವ್ಯರ್ಥವಾಗಲಿಲ್ಲ.

ಆದರೆ ಮಾಜಿ ಅಗ್ರ ಶ್ರೇಯಾಂಕದ ಆಟಗಾರ ವಿರಾಟ್ ಕೊಹ್ಲಿ ಲಯಕ್ಕೆ ಮರಳುವ ಸವಾಲು ಎದುರಿಸುತ್ತಿದ್ದಾರೆ. ಈ ಹಿಂದೆಯೂ ಹಲವು ಬಾರಿ ಪಾಕ್ ಪಾಲಿಗೆ ಕೊಹ್ಲಿ ಗುಮ್ಮನಂತೆ ಕಾಡಿದ್ದಾರೆ. ಈ ಪಂದ್ಯದಲ್ಲಿ ಅವರು ಯಶಸ್ವಿಯಾದರೆ, ಅಭಿಮಾನಿಗಳ ಮನದಲ್ಲಿರುವ ಹಳೆಯ ಕಹಿಯನ್ನು ಮರೆಸಬಹುದು.

ಐಸಿಸಿ ಟ್ರೋಫಿ ಟೂರ್ನಿಗಳಲ್ಲಿ ಬಲಾಬಲ

ಮಾದರಿ / ಪಂದ್ಯ	ಭಾರತ ಜಯ	ಪಾಕ್ ಜಯ	ಡ್ರಾ/ಫಲಿತಾಂಶವಿಲ್ಲ
ಏಕದಿನ ವಿಶ್ವಕಪ್ 8	8		
ಟಿ20 ವಿಶ್ವಕಪ್ 8	6	1	1
ಚಾಂಪಿಯನ್ಸ್ 5	2	3	

ಚಾಂಪಿಯನ್ಸ್ ಟ್ರೋಫಿ ಸಾಧನೆ

ಭಾರತ ಜಯ		ಪಾಕ್ ಜಯ
1 ವಿಜೇತ	1 ರನ್ನರ್ಸ್ ಅಪ್	1 ವಿಜೇತ



ಪಾಕಿಸ್ತಾನ ತಂಡದ ನಾಯಕ ಮೊಹಮ್ಮದ್ ರಿಜ್ವಾನ್ ವಿಕೆಟ್ ಕೀಪಿಂಗ್ ಅಭ್ಯಾಸ –ಪಿಟಿಐ ಚಿತ್ರ

ಸ್ಪಿನ್ ಎಸೆತ ಅಭ್ಯಾಸ ಮಾಡಿದ ವಿರಾಟ್ ಕೊಹ್ಲಿ

ಪಂದ್ಯ ಆರಂಭ: ಮಧ್ಯಾಹ್ನ 2.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ದುಬೈ (ಪಿಟಿಐ): ಭಾರತ ತಂಡದ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಶನಿವಾರ ನೆಟ್ಸ್‌ನಲ್ಲಿ ಸ್ಪಿನ್ನರ್‌ಗಳ ಎಸೆತಗಳನ್ನು ಎದುರಿಸಲು ಹೆಚ್ಚು ಆದ್ಯತೆ ನೀಡಿದರು.

ಭಾನುವಾರ ಭಾರತ ಮತ್ತು ಪಾಕಿಸ್ತಾನ ಪಂದ್ಯ ನಡೆಯಲಿರುವ ಪಿಚ್ ನಿಧಾನಗತಿಯ ಎಸೆತಗಳಿಗೆ ನೆರವಾಗುವ ಸಾಧ್ಯತೆ ಹೆಚ್ಚಿದೆ. ಆದ್ದರಿಂದ ಸ್ಪಿನ್ನರ್‌ಗಳು ಪರಿಣಾಮಕಾರಿಯಾಗಬಹುದು.

ಅಲ್ಲದೇ ಕೊಹ್ಲಿ ಅವರು ಇತ್ತೀಚೆಗೆ ಬಾಂಗ್ಲಾ ಎದುರಿನಪಂದ್ಯದಲ್ಲಿ ಲೆಗ್‌ಸ್ಪಿನ್ನರ್ ರಿಷದ್ ಹುಸೇನ್ ಎದುರು ಔಟಾಗಿದ್ದರು. ಇದೂ ಸೇರಿದಂತೆ ಕಳೆದ 6 ಪಂದ್ಯಗಳಲ್ಲಿ ಸ್ಪಿನ್ನರ್‌ಗಳ ಎದುರು ಔಟಾಗಿದ್ದರು. ಪಾಕ್ ತಂಡದಲ್ಲಿ ಲೆಗ್‌ಸ್ಪಿನ್ನರ್ ಅಬ್ರಾರ್ ಅಹಮದ್, ಸಾಂದರ್ಭಿಕ ಸ್ಪಿನ್ನರ್ ಖುಷದಿಲ್ ಶಾ ಮತ್ತು ಸಲ್ಮಾನ್ ಆಘಾ ಅವರು ಕೊಹ್ಲಿಗೆ ಸವಾಲೊಡ್ಡಬಹುದು.

ಭಾರತ ತಂಡದಲ್ಲಿಯೂ ಐದು ಸ್ಪಿನ್ನರ್‌ಗಳಿದ್ದಾರೆ. ಅದರಲ್ಲಿ ರವೀಂದ್ರ ಜಡೇಜ, ಅಕ್ಷರ್ ಪಟೇಲ್ ಮತ್ತು ವಾಷಿಂಗ್ಟನ್ ಸುಂದರ್ ಅವರು ಆಲ್‌ರೌಂಡರ್‌ಗಳು. ಕುಲದೀಪ್ ಯಾದವ್ ಹಾಗೂ ವರುಣ ಚಕ್ರವರ್ತಿ ಅವರು ಪರಿಣತ ಸ್ಪಿನ್ ಬೌಲರ್‌ಗಳು.



ಭಾರತದ ವಿರಾಟ್ ಕೊಹ್ಲಿ ಬ್ಯಾಟಿಂಗ್ ಅಭ್ಯಾಸ –ಎಎಫ್‌ಪಿ ಚಿತ್ರ



ಭರ್ಜರಿ ಶತಕ ಬಾರಿಸಿದ ಜೋಶ್ ಇಂಗ್ಲಿಸ್ ಚೆಂಡನ್ನು ಬೌಂಡರಿಗಟ್ಟಿದರು. ಎಎಫ್‌ಪಿ ಚಿತ್ರ

ದಾಖಲೆ ಮೊತ್ತ ಬೆನ್ನಟ್ಟಿ ಗೆದ್ದ ಆಸ್ಟ್ರೇಲಿಯಾ

ಲಾಹೋರ್ (ಎಎಫ್‌ಪಿ): ದಾಖಲೆ ಮೊತ್ತ ಕಂಡ ಪಂದ್ಯದಲ್ಲಿ ಬೆನ್ ಡಕೆಟ್ ಅವರ 165 ರನ್‌ಗಳ (143 ಎಸೆತ) ಭರ್ಜರಿ ಶತಕದ ಆಟವು, ಜೋಶ್ ಇಂಗ್ಲಿಸ್ ಅವರ ಬಿರುಸಿನ ಶತಕದ (ಔಟಾಗದೇ 120, 86 ಎಸೆತ) ಮುಂದೆ ಕಳೆಗುಂದಿತು. ಸೇರಿಗೆ ಸವ್ವಾಸೇರು ಎನ್ನುವಂತೆ ಆಡಿದ ಆಸ್ಟ್ರೇಲಿಯಾ ತಂಡ ಚಾಂಪಿಯನ್ಸ್ ಟ್ರೋಫಿ 'ಬಿ' ಗುಂಪಿನ ಪಂದ್ಯದಲ್ಲಿ ಶನಿವಾರ ಇಂಗ್ಲೆಂಡ್ ತಂಡವನ್ನು 5 ವಿಕೆಟ್‌ಗಳಿಂದ ಸೋಲಿಸಿತು.



ಶತಕ ಸಂಭ್ರಮದಲ್ಲಿ ಬೆನ್ ಡಕೆಟ್

ಇಲ್ಲಿನ ಗಡಾಫಿ ಕ್ರೀಡಾಂಗಣದಲ್ಲಿ ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಇಂಗ್ಲೆಂಡ್ ತಂಡ 8 ವಿಕೆಟ್‌ಗೆ 351 ರನ್ ಗಳಿಸಿ ಚಾಂಪಿಯನ್ಸ್ ಟ್ರೋಫಿ ಇತಿಹಾಸದಲ್ಲೇ ಅತ್ಯಧಿಕ ಮೊತ್ತ ದಾಖಲಿಸಿತ್ತು. ಆದರೆ ವಿಕೆಟ್ ಕೀಪರ್ ಇಂಗ್ಲಿಸ್ ಅವರ ಶತಕದ ಅಬ್ಬರದಲ್ಲಿ ಈ ಮೊತ್ತ ಆಸ್ಟ್ರೇಲಿಯಾಕ್ಕೆ ಸವಾಲೇ ಆಗಲಿಲ್ಲ. ಇನ್ನೂ 15 ಎಸೆತಗಳಿರುವಂತೆ ಸ್ಟೀವ್ ಸ್ಮಿತ್ ಬಳಗ 5 ವಿಕೆಟ್‌ಗೆ 356 ರನ್ ಹೊಡೆದು ಈ ಟೂರ್ನಿ ಮಾತ್ರವಲ್ಲ, ಐಸಿಸಿಯ ಯಾವುದೇ ಟೂರ್ನಿಯಲ್ಲಿ ಮೊತ್ತ ಬೆನ್ನಟ್ಟುವಿಕೆಯ ದಾಖಲೆ ನಿರ್ಮಿಸಿತು.

ಆರಂಭ ಆಟಗಾರ ಮ್ಯಾಥ್ಯೂ ಶಾರ್ಟ್ (63), ಅಲೆಕ್ಸ್ ಕ್ಯಾರಿ (69) ಮತ್ತು ಮಾರ್ನಸ್ ಲಾಬುಷೇನ್ (47) ಅವರೂ ಆಸ್ಟ್ರೇಲಿಯಾದ ಯಶಸ್ಸಿಗೆ ತಮ್ಮ ಕಾಣಿಕೆ ನೀಡಿದರು. ಅದರಲ್ಲೂ ಮೊತ್ತ 4 ವಿಕೆಟ್‌ಗೆ 136 ಆಗಿದ್ದಾಗ ಜೊತೆಗೂಡಿದ ಡಕೆಟ್ ಮತ್ತು ಅಲೆಕ್ಸ್ ಕ್ಯಾರಿ ನಡುವಣ ಐದನೇ ವಿಕೆಟ್‌ಗೆ 110 ಎಸೆತಗಳಲ್ಲಿ 146 ರನ್ ಹರಿದುಬಂದಿದ್ದು ಪಂದ್ಯದ ಗತಿಯನ್ನು ಬದಲಾಯಿಸಿತು.

30 ವರ್ಷ ವಯಸ್ಸಿನ ಇಂಗ್ಲಿಸ್, ವೇಗದ ಬೌಲರ್ ಮಾರ್ಕ್ ವುಡ್ ಬೌಲಿಂಗ್‌ನಲ್ಲಿ ಡೀಪ್ ಮಿಡ್‌ವಿಕೆಟ್‌ಗೆ ಸಿಕ್ಸರ್ ಎತ್ತಿ ಅರ್ಹವಾಗಿ ಗೆಲುವಿನ ರನ್ ಹೊಡೆದರು. ಅವರ ಆಟದಲ್ಲಿ ಎಂಟು ಬೌಂಡರಿಗಳ ಜೊತೆ ಆರು ಸಿಕ್ಸರ್ ಗಳಿದ್ದವು. ಪ್ರಮುಖ ಬೌಲರ್‌ಗಳ ಅನುಪಸ್ಥಿತಿಯಲ್ಲಿ ಕಣಕ್ಕಿಳಿದಿರುವ ಆಸ್ಟ್ರೇಲಿಯಾಕ್ಕೆ ಆ ಕೊರತೆಯನ್ನು ಈ ಪಂದ್ಯದಲ್ಲಿ ಬ್ಯಾಟರ್‌ಗಳ ಆಟ ಸರಿದೂಗಿಸಿತು.

ಡಕೆಟ್ ಅಬ್ಬರ:

ಇದಕ್ಕೆ ಮೊದಲು, ಆರಂಭ ಆಟಗಾರ ಬೆನ್ ಡಕೆಟ್ ಅವರ ಮೂರನೇ ಶತಕದ ಹಾಗೂ ಜೀವನ ಶ್ರೇಷ್ಠ ಶತಕದ ನೆರವಿನಿಂದ ಇಂಗ್ಲೆಂಡ್ ತಂಡ ದೊಡ್ಡ ಮೊತ್ತ ಕಲೆಹಾಕಿತ್ತು. ಎಡಗೈ ಬ್ಯಾಟರ್ ಡಕೆಟ್, 17 ಬೌಂಡರಿಗಳ ಜೊತೆ ಮೂರು ಭರ್ಜರಿ ಸಿಕ್ಸರ್‌ಗಳನ್ನೂ ಸಿಡಿಸಿ ಇಂಗ್ಲೆಂಡ್ ಇನಿಂಗ್ಸ್‌ಗೆ ಆಧಾರವಾದರು.

ಈ ಟೂರ್ನಿಯಲ್ಲಿ ಇದು ಆಟಗಾರನೊಬ್ಬನ ಗರಿಷ್ಠ ವೈಯಕ್ತಿಕ ಮೊತ್ತ. ಈ ಹಿಂದೆ ನ್ಯೂಜಿಲೆಂಡ್‌ನ ನೇಥನ್ ಆ್ಯಸ್ಟಲ್ (2004ರಲ್ಲಿ) ಮತ್ತು ಜಿಂಬಾಬ್ವೆಯ ಆ್ಯಂಡಿ ಫ್ಲವರ್ (2002ರಲ್ಲಿ) ಅವರು 145 ರನ್ ಹೊಡೆದಿದ್ದು ಚಾಂಪಿಯನ್ಸ್ ಟ್ರೋಫಿಯಲ್ಲಿ ಈ ಹಿಂದಿನ ಗರಿಷ್ಠ ರನ್‌ಗಳ ದಾಖಲೆ ಹಂಚಿಕೊಂಡಿದ್ದರು.

2004ರಲ್ಲಿ ಓವಲ್‌ನಲ್ಲಿ ನಡೆದ ಪಂದ್ಯದಲ್ಲಿ ನ್ಯೂಜಿಲೆಂಡ್ 4 ವಿಕೆಟ್‌ಗೆ 347 ರನ್ ಗಳಿಸಿದ್ದು, ಈ ಟೂರ್ನಿಯಲ್ಲಿ ತಂಡವೊಂದರ ಗರಿಷ್ಠ ಮೊತ್ತವಾಗಿತ್ತು. ಡಕೆಟ್ ಮೂರನೇ ವಿಕೆಟ್‌ಗೆ ಜೋ ರೂಟ್ (68, 78 ಎಸೆತ) ಜೊತೆ 158 ರನ್ ಸೇರಿಸಿದರು.

ಸ್ಕೋರುಗಳು: ಇಂಗ್ಲೆಂಡ್: 50 ಓವರುಗಳಲ್ಲಿ 8 ವಿಕೆಟ್‌ಗೆ 351 (ಬೆನ್ ಡಕೆಟ್ 165, ಜೋ ರೂಟ್ 68, ಜೋಸ್ ಬಟ್ಲರ್ 23, ಜೋಫ್ರಾ ಆರ್ಚರ್ ಔಟಾಗದೇ 21; ಬೆನ್ ದ್ವಾರ್ಶುಯಿಸ್ 66ಕ್ಕೆ3, ಜಂಪಾ 64ಕ್ಕೆ2, ಮಾರ್ನಸ್ ಲಾಬುಷೇನ್ 41ಕ್ಕೆ2); ಆಸ್ಟ್ರೇಲಿಯಾ: 47.3 ಓವರುಗಳಲ್ಲಿ 5 ವಿಕೆಟ್‌ಗೆ 356 (ಮ್ಯಾಥ್ಯೂ ಶಾರ್ಟ್ 63, ಮಾರ್ನಸ್ ಲಾಬುಷೇನ್ 47, ಜೋಶ್ ಇಂಗ್ಲಿಸ್ ಔಟಾಗದೇ 120, ಅಲೆಕ್ಸ್ ಕ್ಯಾರಿ 69, ಗ್ಲೆನ್ ಮ್ಯಾಕ್ಸ್‌ವೆಲ್ ಔಟಾಗದೇ 32).
ಪಂದ್ಯದ ಆಟಗಾರ: ಜೋಶ್ ಇಂಗ್ಲಿಸ್

ವಿಶ್ವ ಚಾಂಪಿಯನ್‌ಷಿಪ್‌ಗೆ ಗುಲ್ವೀರ್ ಅರ್ಹತೆ

ನವದೆಹಲಿ (ಪಿಟಿಐ): ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತ ಗುಲ್ವೀರ್ ಸಿಂಗ್ ಅವರು ಒಳಾಂಗಣ 5,000 ಮೀ. ಓಟದ ಏಷ್ಯನ್ ದಾಖಲೆಯನ್ನು ಮುರಿದರು. ಜೊತೆಗೆ ವರ್ಷದ ಕೊನೆಯಲ್ಲಿ ನಡೆಯುವ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ಗೂ ಅರ್ಹತೆ ಪಡೆದರು.



ಗುಲ್ವೀರ್ ಸಿಂಗ್

ಅಮೆರಿಕದ ಬಾಸ್ಟನ್‌ನಲ್ಲಿ ಶುಕ್ರವಾರ ನಡೆದ ಡಿಎಂಆರ್ ಚಾಲೆಂಜ್ ಒಳಾಂಗಣ ಕೂಟದಲ್ಲಿ ಗುಲ್ವೀರ್ ಈ ದೂರವನ್ನು 12 ನಿಮಿಷ 59.77 ಸೆ.ಗಳಲ್ಲಿ ಪೂರೈಸಿ ಈ ಸಾಧನೆಗೆ ಪಾತ್ರರಾದರು. 5000 ಮೀ. ಓಟವನ್ನು 13 ನಿಮಿಷಗಳ ಒಳಗೆ ಕ್ರಮಿಸಿದ ಭಾರತದ ಮೊದಲ ಓಟಗಾರನೆಂಬ ಹಿರಿಮೆಯೂ 26 ವರ್ಷ ವಯಸ್ಸಿನ ಸೇನಾಪಡೆಯ ಗುಲ್ವೀರ್ ಅವರದ್ದಾಯಿತು.

ಥಾಯ್ಲೆಂಡ್‌ನ ಕೀರನ್ ತುಂಟಿವೇಟ್ ಅವರು 2022ರಲ್ಲಿ ಸ್ಥಾಪಿಸಿದ ಏಷ್ಯನ್ ಒಳಾಂಗಣ ಓಟದ ದಾಖಲೆಯನ್ನು (13ನಿ.08.41 ಸೆ.) ಅವರು ಮುರಿದರು. ಅವರು 5000 ಮೀ. ಒಳಾಂಗಣ ಓಟದಲ್ಲಿ ರಾಷ್ಟ್ರೀಯ ದಾಖಲೆಯನ್ನು (13ನಿ.11.82 ಸೆ.) 12 ಸೆಕೆಂಡುಗಳಿಂದ ಉತ್ತಮಪಡಿಸಿದರು.ಒಲಿಂಪಿಕ್ 1500 ಮೀ. ಓಟದ ಚಾಂಪಿಯನ್ ಕೋಲ್ ಹೋಕರ್ (ಅಮೆರಿಕ) 12ನಿ.57.82 ಸೆ.ಗಳಲ್ಲಿ ದೂರ ಕ್ರಮಿಸಿ ಚಿನ್ನ ಗೆದ್ದರು. ಅಮೆರಿಕದ ಕೂಪರ್ ಟಿಯರೆ (12:57.97 ಸೆ.) ಬೆಳ್ಳಿ ಹಾಗೂ ಆಸ್ಟ್ರೇಲಿಯಾದ ಜಾಕ್ ರೇನರ್ (12:59.43ಸೆ.) ಕಂಚಿನ ಪದಕ ತಮ್ಮದಾಗಿಸಿಕೊಂಡರುರಾಷ್ಟ್ರೀಯ 10000 ಮೀ. ಓಟದ ದಾಖಲೆಯೂ (28:14.88 ಸೆ.) ಗುಲ್ವೀರ್ ಹೆಸರಿನಲ್ಲಿದೆ.

ಮಗನೊಂದಿಗೆ ಕ್ರಿಕೆಟ್ ಕಣಕ್ಕಿಳಿದ ದ್ರಾವಿಡ್

ಬೆಂಗಳೂರು: ನಗರದಿಂದ 15 ಕಿಲೋಮೀಟರ್ಸ್ ದೂರದಲ್ಲಿರುವ ಬಂಡೆ ಬೊಮ್ಮಸಂದ್ರದ ಎಸ್‌ಎಲ್‌ಎಸ್ ಕ್ರೀಡಾಂಗಣದಲ್ಲಿ ಶನಿವಾರ ಹಬ್ಬದ ವಾತಾವರಣ ಮನೆ ಮಾಡಿತ್ತು. ಅಲ್ಲಿದ್ದವರು ರಾಜ್ಯ ಕ್ರಿಕೆಟ್‌ನ ಅಪರೂಪದ ಕ್ಷಣವೊಂದಕ್ಕೆ ಸಾಕ್ಷಿಯಾದರು.

ಭಾರತ ಕ್ರಿಕೆಟ್ ಕ್ಷೇತ್ರದ ದಿಗ್ಗಜ, 'ಗೋಡೆ' ಖ್ಯಾತಿಯ ರಾಹುಲ್ ದ್ರಾವಿಡ್ ಮತ್ತು ಅವರ ಮಗ ಅನ್ವಯ್ ಜೊತೆಗೂಡಿ ಪಂದ್ಯವಾಡಿದರು. ಇಲ್ಲಿ ನಡೆದ ಕೆಎಸ್‌ಸಿಎ ಮೂರನೇ ಡಿವಿಷನ್ (ಗುಂಪು 1) ನಾಸೂರ್ ಮೆಮೊರಿಯಲ್ ಶೀಲ್ಡ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ (ಏಕದಿನ) ಅವರು ಆಡಿದರು. ಅಪ್ಪ–ಮಗ ವಿಜಯಾ ಕ್ರಿಕೆಟ್ ಕ್ಲಬ್ (ಮಾಲೂರು) ತಂಡದಲ್ಲಿ ಆಡಿದರು. ಯಂಗ್ ಲಯನ್ಸ್ ಕ್ಲಬ್ ವಿರುದ್ಧ ಆಡಿದರು.

ರಾಹುಲ್ ಅವರು ಐಪಿಎಲ್‌ನಲ್ಲಿ ಆಡುವ ರಾಜಸ್ಥಾನ್ ರಾಯಲ್ಸ್ ತಂಡದ ಮೆಂಟರ್ ಆಗಿದ್ದಾರೆ. ಅವರು ಶುಕ್ರವಾರ ರಾತ್ರಿ ಗುವಾಹಟಿಯಿಂದ ಬೆಂಗಳೂರಿಗೆ ಬಂದಿಳಿದಿದ್ದರು. ಶನಿವಾರ ಬೆಳಿಗ್ಗೆ ವಿಜಯ ಸಿಸಿ ತಂಡದೊಂದಿಗೆ ಪಂದ್ಯದ ಸ್ಥಳಕ್ಕೆ ಹಾಜರಾದರು.

ಭಾರತ ತಂಡದ ಮಾಜಿ ನಾಯಕ ಮತ್ತು ಮುಖ್ಯ ಕೋಚ್ ಆಗಿದ್ದ ರಾಹುಲ್ ಅವರ ಆಗಮನದಿಂದ ಸ್ಥಳೀಯ ಕ್ರಿಕೆಟ್ ಪ್ರೇಮಿಗಳು ಪುಳಕಿತರಾದರು. ಸಾಮಾಜಿಕ ಜಾಲತಾಣಗಳಲ್ಲಿ ದ್ರಾವಿಡ್ ಅವರ ಚಿತ್ರಗಳು ಹರಿದಾಡಿದವು.

ದ್ರಾವಿಡ್ ಅವರು 6ನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದರು. 8 ಎಸೆತಗಳಲ್ಲಿ 10 ರನ್ ಗಳಿಸಿದರು. ಎದುರಾಳಿ ತಂಡದ ಆಫ್‌ಸ್ಪಿನ್ನರ್ ಆರ್. ಉಲ್ಲಾಸ್ ಅವರ ಬೌಲಿಂಗ್‌ನಲ್ಲಿ ರಾಹುಲ್ ಔಟಾದರು. ಉಲ್ಲಾಸ್ ಅವರ ಖುಷಿಗೆ ಪಾರವೇ ಇರಲಿಲ್ಲ.



ರಾಹುಲ್ ದ್ರಾವಿಡ್ ಮತ್ತು ಅವರ ವಿಕೆಟ್ ಗಳಿಸಿದ ಎ.ಆರ್. ಉಲ್ಲಾಸ್

'ನಾನು ಬಾಲ್ಯದಿಂದಲೂ ರಾಹುಲ್ ಸರ್ ಅಭಿಮಾನಿ. ಇವತ್ತು ಅವರ ವಿಕೆಟ್ ಪಡೆದಿದ್ದು ನನ್ನ ಜೀವನದ ಅತ್ಯಂತ ಸ್ಮರಣೀಯ ಸಂಗತಿಯಾಗಿದೆ. ಅವರಿಗೆ ಬೌಲಿಂಗ್ ಮಾಡುವ ಬಹುಕಾಲದ ಕನಸು ಕೂಡ ಈಡೇರಿದೆ' ಎಂದು 33 ವರ್ಷದ ಉಲ್ಲಾಸ್ ಭಾವುಕರಾಗಿ ನುಡಿದರು.

ಪಂದ್ಯದಲ್ಲಿ ಅನ್ವಯ್ ಅವರು ತಮ್ಮ ತಂದೆಯನ್ನು ಮೀರಿಸಿ ಬ್ಯಾಟಿಂಗ್ ಮಾಡಿದರು. ಅವರು 60 ಎಸೆತಗಳಲ್ಲಿ 68 ರನ್ ಗಳಿಸಿದರು. ಇದರಿಂದಾಗಿ ವಿಜಯ ಸಿಸಿ ತಂಡವು 7ಕ್ಕೆ 345 ರನ್ ಗಳಿಸಿತು. ತಂಡದ ಸ್ವಪ್ನಿಲ್ ಶತಕ (107; 50ಎ, 12ಬೌಂಡರಿ, 4 ಸಿಕ್ಸರ್) ಹೊಡದರು. ಯಂಗ್ ಲಯನ್ಸ್ ತಂಡದ ಎಜಿ ಆದಿತ್ಯ 4 ವಿಕೆಟ್ ಗಳಿಸಿದರು.

ಈ ಹಿಂದೆ ಹಲವು ಅಂತರರಾಷ್ಟ್ರೀಯ ಕ್ರಿಕೆಟಿಗರು ತಮ್ಮ ಮಕ್ಕಳೊಂದಿಗೆ ಕ್ರಿಕೆಟ್ ಆಡಿದ ನಿದರ್ಶನಗಳಿವೆ. ಡಬ್ಲುಜಿ ಗ್ರೇಸ್–ಗ್ರೇಸ್ ಜೂನಿಯರ್, ಲಾಲಾ ಅಮರನಾಥ್ ಸುರೀಂದರ್ ಅಮರನಾಥ್, ಡೆನಿಸ್ ಆ್ಯಡಂ ಲಿಲ್ಲಿ, ಡೆನಿಸ್– ಹೀತ್ ಸ್ಟ್ರೀಕ್, ಶಿವನಾರಾಯಣ–ತೇಜನಾರಾಯಣ್ ಚಂದ್ರಪಾಲ್ ಮತ್ತು ಇಯಾನ್ ಬಾಥಂ ಅವರು ಆಡಿದ್ದರು.

ಎಂಟು ಸಿಕ್ಸರ್ ಸಿಡಿಸಿದ ವಿಂಡೀಸ್ ಆಟಗಾರ್ತಿ

ಹೆನ್ರಿ ಮಿಂಚಿನಾಟಕ್ಕೆ ಒಲಿದ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಟು ಸಿಕ್ಸರ್ ಸಿಡಿಸಿದ ಚೈನೆಲ್ ಹೆನ್ರಿ ಅವರು ಗಳಿಸಿದ ದಾಖಲೆ ವೇಗದ ಅರ್ಧಶತಕದ ಬಲದಿಂದ ಯು.ಪಿ ವಾರಿಯರ್ಸ್ ತಂಡವು ಶನಿವಾರ ಇಲ್ಲಿ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ಜಯಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ನಡೆದ ಪಂದ್ಯದಲ್ಲಿ ವಾರಿಯರ್ಸ್ ತಂಡವು 33 ರನ್‌ಗಳಿಂದ ಜಯಿಸಿತು.

ಪಂದ್ಯದಲ್ಲಿ ಟಾಸ್ ಗೆದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕಿ ಮೆಗ್ ಲ್ಯಾನಿಂಗ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಎಂಟನೇ ಕ್ರಮಾಂಕದ ಬ್ಯಾಟರ್ ಹೆನ್ರಿ (62; 23ಎಸೆತ) ಹೊಡೆದ ಅರ್ಧಶತಕದ ಬಲದಿಂದ ವಾರಿಯರ್ಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 177 ರನ್ ಗಳಿಸಿತು. ಹೆನ್ರಿ ಅವರು ಕೇವಲ 18 ಎಸೆತಗಳಲ್ಲಿ 50 ರನ್ ಗಳಿಸಿದರು. ಇದರೊಂದಿಗೆ 2023ರಲ್ಲಿ ಗುಜರಾತ್ ಜೈಂಟ್ಸ್ ತಂಡದ ಸೋಫಿಯಾ ಡಂಕ್ಲಿ ಅವರು ಹೊಡೆದಿದ್ದ ಅರ್ಧಶತಕವನ್ನು ಸರಿಗಟ್ಟಿದರು.



ಹೆನ್ರಿ ಅವರು ಕ್ರೀಸ್‌ಗೆ ಬರುವ ಮುನ್ನ ವಾರಿಯರ್ಸ್ ತಂಡವು ಅಲ್ಪ ಮೊತ್ತಕ್ಕೆ ಕುಸಿಯುವ ಆತಂಕದಲ್ಲಿತ್ತು. ಡೆಲ್ಲಿ ತಂಡದ ಜೆಸ್ ಜೊನಾಸೆನ್ (31ಕ್ಕೆ4) ಅವರ ಬೌಲಿಂಗ್ ಬಲದಿಂದ 89 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡಿತ್ತು. ತಂಡದ ಮೊತ್ತ ಶತಕದ ಗಡಿ ದಾಟುವುದೂ ಅನುಮಾನವಾಗಿತ್ತು. ಆಗ ಕ್ರೀಸ್‌ಗೆ ಬಂದ ವೆಸ್ಟ್ ಇಂಡೀಸ್‌ನ ವೇಗದ ಬೌಲರ್ ಹೆನ್ರಿ ಬೌಲರ್‌ಗಳ ಬೆವರಳಿಸಿದರು. ಅದುವರೆಗೂ ಉತ್ತಮ ಲೈನ್, ಲೆಂಗ್ತ್ ಮೂಲಕ ಮೆರೆದಾಡಿದ್ದ ಬೌಲರ್‌ಗಳು ಹೆನ್ರಿ ಆಟಕ್ಕೆ ಬಸವಳಿದರು. 269.57ರ ಸ್ಟ್ರೈಕ್ ರೇಟ್‌ನಲ್ಲಿ ಅವರು ರನ್ ಸೂರೆ ಮಾಡಿದರು. ಅವರಿಗೆ ಸೋಫಿ ಎಕ್ಲೆಸ್ಟೋನ್ (12; 8ಎ) ಜೊತೆ ನೀಡಿದರು. 8ನೇ ವಿಕೆಟ್ ಜೊತೆಯಾಟದಲ್ಲಿ 57 ರನ್ ಸೇರಿಸಿದರು.

ಇದರಿಂದಾಗಿ ವಾರಿಯರ್ಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 177 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಡೆಲ್ಲಿ ತಂಡಕ್ಕೆ ಜೆಮಿಮಾ ರಾಡ್ರಿಗಸ್ (56; 35ಎ, 4X8, 6X1) ಅವರು ಗೆಲುವಿನ ಭರವಸೆ ಮೂಡಿಸಿದ್ದರು. ಆದರೆ, ವಾರಿಯರ್ಸ್ ತಂಡದ ಕ್ರಾಂತಿ ಗೌಡ್ ಮತ್ತು ಗ್ರೇಸ್ ಹ್ಯಾರಿಸ್ ಅವರು ತಲಾ 4 ವಿಕೆಟ್ ಗಳಿಸಿದರು. ಇದರಿಂದಾಗಿ ಡೆಲ್ಲಿ ತಂಡವು 19.3 ಓರ್‌ಗಳಲ್ಲಿ 144 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಸಂಕ್ಷಿಪ್ತ ಸ್ಕೋರು: ಯುಪಿ ವಾರಿಯರ್ಸ್: 20 ಓವರ್‌ಗಳಲ್ಲಿ 9ಕ್ಕೆ177 (ತಹಿಲಿಯಾ ಮೆಕ್‌ಗ್ರಾ 24, ಚೈನೆಲ್ ಹೆನ್ರಿ 62, ಸೋಫಿ ಎಕ್ಲೆಸ್ಟೋನ್ 12, ಕಿರಣ್ ನವಿಗೆರೆ 17, ಮೆರಿಝ್ಯಾನ್ ಕಾಪ್ 18ಕ್ಕೆ2, ಅರುಂಧತಿ ರೆಡ್ಡಿ 52ಕ್ಕೆ2, ಜೆಸ್ ಜೊನಾಸೆನ್ 31ಕ್ಕೆ4) **ಡೆಲ್ಲಿ ಕ್ಯಾಪಿಟಲ್ಸ್:** 19.3 ಓವರ್‌ಗಳಲ್ಲಿ 144 (ಶಫಾಲಿ ವರ್ಮಾ 24, ಜೆಮಿಮಾ ರಾಡ್ರಿಗಸ್ 56, ನಿಕಿ ಪ್ರಸಾದ್ 18, ಶಿಖಾ ಪಾಂಡೆ ಔಟಾಗದೆ 15, ಕ್ರಾಂತಿ ಗೌಡ್ 25ಕ್ಕೆ4, ಗ್ರೇಸ್ ಹ್ಯಾರಿಸ್ 15ಕ್ಕೆ4)
ಫಲಿತಾಂಶ: ಯು.ಪಿ. ವಾರಿಯರ್ಸ್‌ಗೆ 33 ರನ್ ಜಯ.



ಯು.ಪಿ ವಾರಿಯರ್ಸ್ ತಂಡದ ಬ್ಯಾಟರ್ ಚೈನೆಲ್ ಹೆನ್ರಿ ಅವರ ಬ್ಯಾಟಿಂಗ್ –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

ಕಬಡ್ಡಿ: ಕರ್ನಾಟಕ ತಂಡ ನಿರ್ಗಮನ

ಕಟಕ್ (ಪಿಟಿಐ): ಕರ್ನಾಟಕ ತಂಡ, ಇಲ್ಲಿ ನಡೆಯುತ್ತಿರುವ 71ನೇ ಸೀನಿಯರ್ ರಾಷ್ಟ್ರೀಯ ಕಬಡ್ಡಿ ಚಾಂಪಿಯನ್‌ಷಿಪ್‌ನ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಶನಿವಾರ ರೈಲ್ವೇಸ್ ತಂಡದ ಎದುರು 28–47 ಅಂತರದಲ್ಲಿ ಸೋಲನುಭವಿಸಿತು.

'ಜಿ' ಗುಂಪಿನಲ್ಲಿದ್ದ ಕರ್ನಾಟಕ ಆಡಿದ ಮೂರು ಪಂದ್ಯಗಳಲ್ಲಿ ಎರಡು ಗೆದ್ದು (ಉತ್ತರಾಖಂಡ ಮತ್ತು ಪಶ್ಚಿಮ ಬಂಗಾಳ ವಿರುದ್ಧ) ಎರಡನೇ ಸ್ಥಾನದೊಡನೆ 16ರ ಘಟ್ಟಕ್ಕೆ ತಲುಪಿತ್ತು. ಪಂಜಾಬ್ ಆಡಿದ ಮೂರೂ ಪಂದ್ಯ ಗೆದ್ದು ಗುಂಪಿನಲ್ಲಿ ಅಗ್ರಸ್ಥಾನ ಪಡೆದಿತ್ತು.

ಐಪಿಎಲ್ ಸ್ಟಾರ್‌ಗಳಾದ ಯೋಗೇಶ್ ಕಥುನಿಯಾ ಮತ್ತು ರೇಡರ್ ಆಶು ಮಲಿಕ್ ಅವರನ್ನು ಒಳಗೊಂಡ ಹಾಲಿ ಚಾಂಪಿಯನ್ ಹರಿಯಾಣ 48–41ರಲ್ಲಿ ತಮಿಳುನಾಡು ತಂಡವನ್ನು ಪ್ರಯಾಸದಿಂದ ಸೋಲಿಸಿ ಕ್ವಾರ್ಟರ್‌ಫೈನಲ್ ತಲುಪಿತು. ಮುಂದಿನ ಪಂದ್ಯದಲ್ಲಿ ಸರ್ವಿಸಸ್ ತಂಡವನ್ನು ಎದುರಿಸಲಿದೆ.

ಪ್ರಶಸ್ತಿಗೆ ನೆಚ್ಚಿನ ತಂಡಗಳಲ್ಲಿ ಒಂದಾಗಿರುವ ಸರ್ವಿಸಸ್ ತಂಡ ಇನ್ನೊಂದು ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 57–22 ರಿಂದ ಮಧ್ಯಪ್ರದೇಶ ತಂಡವನ್ನು ಸುಲಭವಾಗಿ ಸೋಲಿಸಿತು.

ಐರ್ಲೆಂಡ್ ವಿರುದ್ಧ ಮತ್ತೆ ಗೆದ್ದ ಭಾರತ

ಭುವನೇಶ್ವರ (ಪಿಟಿಐ): ಅಮೋಘ ಪ್ರದರ್ಶನ ಮುಂದುವರಿಸಿದ ಭಾರತ ಪುರುಷರ ತಂಡ, ಪ್ರೊ ಲೀಗ್ ಹಾಕಿ ಟೂರ್ನಿ ಪಂದ್ಯದಲ್ಲಿ ಶನಿವಾರ ಐರ್ಲೆಂಡ್ ತಂಡವನ್ನು 4–0 ಗೋಲುಗಳಿಂದ ಸೋಲಿಸಿತು.

ಇದು ಐರ್ಲೆಂಡ್ ವಿರುದ್ಧ ಭಾರತಕ್ಕೆ ಸತತ ಎರಡನೇ ಜಯ. ಶುಕ್ರವಾರ ಇದೇ ಎದುರಾಳಿ ವಿರುದ್ಧ ಮೊದಲ ಲೆಗ್ ಪಂದ್ಯದಲ್ಲಿ 3–1 ರಿಂದ ಜಯಗಳಿಸಿತ್ತು.

ಭಾರತ ಆರಂಭದಿಂದ ಕೊನೆಯವರೆಗೆ ಉತ್ತಮ ಪ್ರದರ್ಶನ ನೀಡಿತು. ನೀಲಮ್ ಸಂಜೀಪ್ ಕ್ಸೆಸ್ (14ನೇ ನಿಮಿಷ), ಮನ್‌ದೀಪ್ ಸಿಂಗ್ (24ನೇ ನಿಮಿಷ), ಅಭಿಷೇಕ್ (28ನೇ ನಿಮಿಷ) ಮತ್ತು ಶಂಷೇರ್ ಸಿಂಗ್ (34ನೇ ನಿಮಿಷ) ಅವರು ಆತಿಥೇಯ ತಂಡದ ಗೋಲುಗಳನ್ನು ಗಳಿಸಿದರು. ಭಾರತ ತಂಡ ಗೆಲುವಿನ ಅಂತರ ಹೆಚ್ಚಿಸುವ ಅವಕಾಶ ಹೊಂದಿತ್ತು. ಆದರೆ ಕೊನೆಯ ಕ್ವಾರ್ಟರ್‌ನಲ್ಲಿ ಎರಡು ಉತ್ತಮ ಅವಕಾಶಗಳಲ್ಲಿ ಎಡವಿತು.

ಭಾರತ ತಂಡ ಇದೇ 24ರಂದು ನಡೆಯುವ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು ಎದುರಿಸಲಿದೆ.

ಪ್ರೊ ಹಾಕಿ: ಜರ್ಮನಿ ವನಿತೆಯರನ್ನು ಮಣಿಸಿದ ಭಾರತ

ದೀಪಿಕಾ ಗೋಲು ತಂದ ಜಯ

ಭುವನೇಶ್ವರ್ (ಪಿಟಿಐ): ಡ್ರ್ಯಾಗ್ ಫ್ಲಿಕರ್ ದೀಪಿಕಾ ಅವರು ಗಳಿಸಿದ ಏಕೈಕ ಗೋಲಿನ ನೆರವಿನಿಂದ ಭಾರತ ಮಹಿಳಾ ಹಾಕಿ ತಂಡವು ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯಲ್ಲಿ ಶನಿವಾರ ಜರ್ಮನಿಯ ವಿರುದ್ಧ ಜಯಿಸಿತು.

ಇಲ್ಲಿ ನಡೆದ ರಿಟರ್ನ್ ಲೆಗ್ ಪಂದ್ಯದ 12ನೇ ನಿಮಿಷದಲ್ಲಿ ದೊರಕಿದ ಪೆನಾಲ್ಟಿ ಕಾರ್ನರ್‌ನಲ್ಲಿ ದೀಪಿಕಾ ಫ್ಲಿಕ್ ಮಾಡಿದ ರಭಸಕ್ಕೆ ಗೋಲು ಒಲಿಯಿತು. ತಂಡವು 1–0ಯಿಂದ ಜರ್ಮನಿಯನ್ನು ಮಣಿಸಿತು.

ಶುಕ್ರವಾರ ನಡೆದಿದ್ದ ಮೊದಲ ಲೆಗ್‌ನಲ್ಲಿ ಭಾರತವು 0–4ರಿಂದ ಜರ್ಮನಿಯ ವಿರುದ್ಧ ಭಾರತ ತಂಡವು ಸೋತಿತ್ತು. ಇದೇ 24ರಂದು ನಡೆಯುವ ಪಂದ್ಯದಲ್ಲಿ ಆತಿಥೇಯರು ನೆದರ್ಲೆಂಡ್ಸ್ ಎದುರು ಆಡಲಿದೆ.

ಜರ್ಮನಿಯ ಎದುರಿನ ಪಂದ್ಯದಲ್ಲಿ ಭಾರತದ ವನಿತೆಯರು ಆರಂಭದಿಂದಲೇ ಜರ್ಮನಿ ಪಡೆಯ ರಕ್ಷಣಾ ವಿಭಾಗಕ್ಕೆ ಕಠಿಣ ಸವಾಲೊಡ್ಡಿದರು. ನಾಯಕಿ ಸಲೀಮಾ ಟೆಟೆ ಆರಂಭಿಕ ಹಂತದಲ್ಲಿಯೇ ಸುನಿಲಿಟಾ ಟೊಪ್ಪೊ ಅವರಿಂದ ಪಾಸ್ ಪಡೆದು ಸ್ನ್ಯಾಪ್ ಶಾಟ್ ಪ್ರಯೋಗಿಸಿದರು. ಆದರೆ ಅದು ಗೋಲುಪೆಟ್ಟಿಗೆಯ ಎಡದಿಂದ ಹಾದು ಹೋಯಿತು. ಜರ್ಮನಿ ಗೋಲ್‌ಕೀಪರ್ ಫೀಂಜಾ ಸ್ಟಾರ್ಕ್ ಅವರು ಕೂಡ ಹೆಚ್ಚು ಶ್ರಮವಹಿಸದೇ ನಿಂತರು.



ಭಾರತ ಮಹಿಳಾ ಹಾಕಿ ತಂಡದ ಆಟಗಾರ್ತಿ ದೀಪಿಕಾ –ಪಿಟಿಐ ಚಿತ್ರ

ಆದರೆ 12ನೇ ನಿಮಿಷದಲ್ಲಿ ಜರ್ಮನಿ ತಂಡದವರ ಚಿತ್ತ ಕಲಕುವಲ್ಲಿ ದೀಪಿಕಾ ಯಶಸ್ವಿಯಾದರು. ಅಮೋಘ ಡ್ರಿಬ್ಲಿಂಗ್ ಕೌಶಲ ತೋರಿದ ನೇಹಾ ಅವರಿಂದಾಗಿ ಭಾರತಕ್ಕೆ ಪೆನಾಲ್ಟಿ ಕಾರ್ನರ್ ಲಭಿಸಿತು. ದೀಪಿಕಾ ಅವರು ಡ್ರ್ಯಾಗ್ ಫ್ಲಿಕ್ ಮೂಲಕ ಚೆಂಡನ್ನು ಗುರಿಮುಟ್ಟಿಸುವಲ್ಲಿ ಯಾವುದೇ ತಪ್ಪೆಸಗಲಿಲ್ಲ. ಅಂತರರಾಷ್ಟ್ರೀಯ ಹಾಕಿ ಯಲ್ಲಿ ತಮ್ಮ 26ನೇ ಗೋಲು ಹೊಡೆದ ದೀಪಿಕಾ ಜೊತೆಗೆ ತಂಡದ ಆಟಗಾರ್ತಿಯರು ಸಂಭ್ರಮಿಸಿದರು. ನಂತರದ ಆಟದಲ್ಲಿ ಉಭಯ ತಂಡಗಳ ಆಟಗಾರ್ತಿಯರು ಜಿದ್ದಾಜಿದ್ದಿಯ ಆಟವಾಡಿದರು. ಆದರೆ ಉಭಯ ತಂಡಗಳಿಗೂ ಗೋಲು ಒಲಿಯಲಿಲ್ಲ.

53ನೇ ನಿಇಷದಲ್ಲಿ ಜರ್ಮನಿಯ ಆಟಗಾರ್ತಿ ಲಿನಾ ಮಿಚೀಲ್ ಅವರು ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಿನಲ್ಲಿ ಪರಿವರ್ತಿಸುವಲ್ಲಿ ವಿಫಲರಾದರು.

ವರ್ಷಕ್ಕೆರಡು ಬಾರಿ 'ಟಾಪ್ಸ್' ಅಥ್ಲೀಟುಗಳ ಮೌಲ್ಯಮಾಪನ

ನವದೆಹಲಿ (ಪಿಟಿಐ): ಕ್ರೀಡಾ ಸಚಿವಾಲಯದ ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಸ್ಕೀಮ್ ('ಟಾಪ್ಸ್') ಯೋಜನೆಯಡಿ ಆಯ್ಕೆಯಾದ ಅಥ್ಲೀಟುಗಳು ವಿದೇಶದಲ್ಲಿ ತರಬೇತಿ ಮತ್ತು ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ವೇಳೆ ಹೆಚ್ಚಿನ ಭತ್ಯೆಗೆ ಅರ್ಹರಿರುತ್ತಾರೆ. ಆದರೆ ಅವರು ಮೌಲ್ಯಮಾಪನ ಪ್ರಕ್ರಿಯೆ ಅಂಗವಾಗಿ ಆರು ತಿಂಗಳಿಗೊಮ್ಮೆ 'ದೈಹಿಕ ಮತ್ತು ಮನೋಬಲ' ಪರೀಕ್ಷೆಗೆ ಒಳಪಡಬೇಕಾಗುತ್ತದೆ.

ಟಾಪ್ಸ್ ಯೋಜನೆಯಡಿ ಆಯ್ಕೆಯಾದ 'ಕೋರ್' (ಅತಿ ಪ್ರಮುಖ) ಅಥ್ಲೀಟುಗಳ ಸಂಖ್ಯೆಯನ್ನು 179 ರಿಂದ 94ಕ್ಕೆ ಇಳಿಸಲಾಗಿದೆ. ಪ್ರಗತಿ ಕಾಣುತ್ತಿರುವ (ಡೆವಲಪ್‌ಮೆಂಟಲ್) ಅಥ್ಲೀಟುಗಳ ಸಂಖ್ಯೆಯನ್ನು 112ಕ್ಕೆ ಪರಿಷ್ಕರಿಸಲಾಗಿದೆ. ಒಲಿಂಪಿಕ್ ಕ್ರೀಡೆಗಳ ನಂತರ ಪರಿಷ್ಕರಣೆ ಆಗುವುದು ಸಾಮಾನ್ಯ ಪ್ರಕ್ರಿಯೆ. ಆದರೆ ಈ ಬಾರಿ 'ಕೋರ್ ಗುಂಪಿನಲ್ಲಿ' ಈಜು, ಸ್ಕ್ವಾಷ್, ಗಾಲ್ಫ್ ಮತ್ತು ಟೆನಿಸ್ ಆಟಗಾರರ ಪ್ರಾತಿನಿಧ್ಯ ಇಲ್ಲದಿರುವುದು ಎದ್ದು ಕಾಣಿಸುತ್ತಿದೆ.

ಕೋರ್ ಗುಂಪಿನ 94 ಅಥ್ಲೀಟಗಳಲ್ಲಿ 42 ಮಂದಿ ಬಿಟ್ಟರೆ ಉಳಿದ 52 ಮಂದಿ ಪ್ಯಾರಾ ಅಥ್ಲೀಟುಗಳಾಗಿದ್ದಾರೆ. ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತದ ಗಮನಾರ್ಹ ಸಾಧನೆಯ ಕಾರಣ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. 2024ರ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ ಏಳು ಚಿನ್ನ ಸಹಿತ 29 ಪದಕಗಳನ್ನು ಗೆದ್ದುಕೊಂಡಿತ್ತು.

'ಕೋರ್' ಗುಂಪಿನ ಅಥ್ಲೀಟುಗಳು ತಿಂಗಳಿಗೆ 50,000 ಸ್ಟೈಪಂಡ್ ಜೊತೆ ₹25 ಡಾಲರ್ ಹೆಚ್ಚುವರಿಯಾಗಿ ಪಡೆಯಲಿದ್ದಾರೆ. ಡೆವಲಪ್‌ಮೆಂಟ್ ಗ್ರೂಪ್ ನಲ್ಲಿರುವ ಅಥ್ಲೀಟುಗಳು ತಿಂಗಳಿಗೆ ₹25,000 ಪಡೆಯಲಿದ್ದಾರೆ. ಜೊತೆಗೆ ತರಬೇತಿ ಮತ್ತು ಸ್ಪರ್ಧೆಗಳ ವೇಳೆ ಹೆಚ್ಚುವರಿ ಭತ್ಯೆಗೆ ಅರ್ಹರಿರುತ್ತಾರೆ' ಎಂದು ಭಾರತ ಕ್ರೀಡಾ ಪ್ರಾಧಿಕಾರ (ಸಾಯ್)ದ ಮಿಷನ್ ಒಲಿಂಪಿಕ್ ಸೆಲ್‌ನ (ಎಂಒಸಿ) ಸದಸ್ಯರೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದರು.

ಕೋರ್ ಗ್ರೂಪ್ ಪುನರ್ರಚನೆಯ ನಂತರ ಒಬ್ಬರೂ ಬಾಕ್ಸರ್ ಅಲ್ಲಿ ಸ್ಥಾನ ಪಡೆದಿಲ್ಲ. ಅಥ್ಲೆಟಿಕ್ಸ್‌ನಿಂದ ಕೇವಲ ಮೂವರು ಸ್ಥಾನ ಪಡೆದಿದ್ದಾರೆ.